₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಗುರುವಾರ 25.09.2025 ಸಂಪುಟ: 10 ಸಂಚಿಕೆ: 254 ಪುಟಗಳು: 12+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

- ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ ಇನ್ನು ನೆನಪು ಮಾತ್ರ
- ಬೆಂಗಳೂರಿನ ಆಸ್ಪತ್ರೆಯಲ್ಲಿ ಯಾನ ಮುಗಿಸಿದ ಸಾಹಿತ್ಯ ರತ್ನ
- ಪ್ರಧಾನಿ ಸೇರಿ ಗಣ್ಯರ ಸಂತಾಪ, ಸಾರಸ್ವತ ಲೋಕದ ಕಂಬನಿ
- ಬೆಂಗಳೂರು, ಮೈಸೂರಿನಲ್ಲಿಂದು ಅಂತಿಮದರ್ಶನಕ್ಕೆ ಅವಕಾಶ
- ನಾಳೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ

ಭೈರಪ್ಪ ಅವರ ನಿಧನದಿಂದ, ನಮ್ಮ ಆತ್ಮಸಾಕ್ಷಿಯನ್ನು ಕದಲಿಸಿದ, ಭಾರತದ ಆತ್ಮವನ್ನು ಆಳವಾಗಿ ಅಧ್ಯಯನ ಮಾಡಿದ ಒಬ್ಬ ಮಹಾನ್ ಧೀಮಂತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಭಾರತೀಯ ಸಾಹಿತ್ಯಕ್ಕೆ , ವಿಶೇಷವಾಗಿ ಕನ್ನಡದಲ್ಲಿ ಭೈರಪ್ಪ ಅವರ ಕೊಡುಗೆಗಳು ರಾಷ್ಟ್ರದ ಬೌದ್ಧಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಮೇಲೆ ಅಳಿಸಲಾಗದ ಗುರುತನ್ನು ಮೂಡಿಸಿವೆ. ನಿರ್ಭೀತ ಮತ್ತು ಕಾಲಾತೀತ ಚಿಂತಕರಾಗಿದ್ದ ಅವರು ತಮ್ಮ ಚಿಂತನಶೀಲ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಅವರ ಬರಹಗಳು ಪೀಳಿಗೆಗಳನ್ನು ಪ್ರತಿಬಿಂಬಿಸಲು, ಪ್ರಶ್ನಿಸಲು ಮತ್ತು ಸಮಾಜದೊಂದಿಗೆ ಹೆಚ್ಚು ಆಳವಾಗಿ ತೊಡಗಿಸಿಕೊಳ್ಳಲು ಪ್ರೇರೇಪಿಸಿದವು. ನಮ್ಮ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಅವರ ಅಚಲವಾದ ಉತ್ಸಾಹ ಮುಂಬರುವ ವರ್ಷಗಳಲ್ಲಿ ಮನಸ್ಸುಗಳನ್ನು ಪ್ರೇರೇಪಿಸುತ್ತಲೇ ಇರುತ್ತದೆ. ಈ ದುಃಖದ ಸಮಯದಲ್ಲಿ ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ನನ್ನ ಸಂತಾಪಗಳು.

-ನರೇಂದ್ರ ಮೋದಿ, ಪ್ರಧಾನಿ

ಯಾನ ಅಂತ್ಯ ಭಿತ್ತಿ ಶಾಶ್ವತ

ಸಂಗೀತದಲ್ಲಿ ನಿರತ ಭೈರಪ್ಪನವರು.

ಗೃಹಭಂಗವೆಂಬ ಜನಪದ ಮಹಾಕಾವ್ಯ

ಪಾರ್ವತಿ ಜಿ.ಐತಾಳ್

ಗೃಹಭಂಗ ಎಸ್.ಎಲ್.ಭೈರಪ್ಪನವರ ಎಂಟನೆಯ ಕಾದಂಬರಿ. ಭೈರಪ್ಪನವರ ಒಟ್ಟು ಕಾದಂಬರಿಗಳನ್ನು ಅವಲೋಕಿಸಿದಾಗ ಅವರ ಬಹು ಚರ್ಚಿತ ಪರ್ವ, ನೆಲೆ, ವಂಶವೃಕ್ಷ, ಸಾರ್ಥ, ಮಂದ್ರ, ತಂತು, ಆವರಣ, ಕವಲು, ಯಾನಗಳಿಗಿಂತಲೂ ಭಾರತದ ಹಳ್ಳಿಗಳ ಜನಸಾಮಾನ್ಯರ ಬದುಕು ಮತ್ತು ಜೀವನಶೈಲಿಗಳನ್ನು ಯಥಾವತ್ತಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಗೃಹಭಂಗ. ಅವರು ಇದುವರೆಗೆ ಬರೆದ ಕಾದಂಬರಿಗಳ ಸಾಲಿನಲ್ಲೇ ತನ್ನ ಹಲವಾರು ವೈಶಿಷ್ಟ್ಯಗಳ ಕಾರಣದಿಂದ ಭಿನ್ನವಾಗಿ ನಿಲ್ಲುವ ಕಾದಂಬರಿ. ಯಾವುದೇ ರೀತಿಯ ಬೌದ್ಧಿಕ ಜಿಜ್ಞಾಸೆ ಅಥವಾ ವೈಚಾರಿಕ ವಿಶ್ಲೇಷಣೆಯ ಹಂಗಿಲ್ಲದೆ ಭಾವಗ್ರಾಹ್ಯವಾಗಿ ತನಗೆ ತಾನೇ ಬೆಳೆಯುತ್ತ ಹೋಗಿದೆ.

ಬಹಳವಾಗಿ ಬಡಜನರಿಂದ ತುಂಬಿದ ಭಾರತದ ಗ್ರಾಮೀಣರ ಬದುಕನ್ನು ಪ್ರತಿನಿಧಿಸುವ ಹಳ್ಳಿಗಳನ್ನೇ ಕೇಂದ್ರವಾಗಿಟ್ಟುಕೊಂಡು ಬರೆದ ಈ ಕಾದಂಬರಿಯಲ್ಲಿ ಅದ್ಭುತವೆನ್ನಿಸುವಂಥ ನೈಜತೆಯಿದೆ, ಸಶಕ್ತ ಪಾತ್ರ ಚಿತ್ರಣವಿದೆ, ಜೀವನದ ಸಮಗ್ರ ನೋಟವಿದೆ, ಬದುಕಿನ ಏಳು-ಬೀಳುಗಳ ಸಂದರ್ಭ-ಸನ್ನಿವೇಶಗಳಿವೆ. ಜನಸಾಮಾನ್ಯರ ಬಡತನದ ಕಷ್ಟ-ನಷ್ಟಗಳು, ಅವರ ಅಜ್ಞಾನ-ಮೂಢ ನಂಬಿಕೆಗಳು, ಅವರು ಎದುರಿಸುವ ಅಗ್ನಿಪರೀಕ್ಷೆಗಳು, ಅಗ್ನಿ ದಿವ್ಯವನ್ನು ಧೈರ್ಯದಿಂದ ಹಾದು ಮತ್ತೆ ತಲೆಯೆತ್ತಿ ನಿಂತು ಬದುಕನ್ನೆದುರಿಸುವ ಅವರ ಜೀವನಪ್ರೀತಿಗಳ ವಸ್ತುನಿಷ್ಠ ಚಿತ್ರಣವಿದೆ. ಒಟ್ಟಿನಲ್ಲಿ ಒಮ್ಮೆ ಓದಿದರೆ ಇನ್ನಷ್ಟು ಬಾರಿ ಓದಬೇಕೆಂಬ ಅಂತಃಸ್ಫೂರ್ತಿಯನ್ನು ಜಾಗೃತಗೊಳಿಸುವ ಕಾದಂಬರಿಯಿದು. ನಿರೂಪಣೆಗೆ ಬಳಸಿದ ಭಾಷೆಯ ಶೈಲಿಯಲ್ಲಿ ಅಲಂಕಾರಿಕತೆಯಿಲ್ಲದಿದ್ದರೂ ನೇರವಾದ ತನ್ನ ಕಥನಶೈಲಿಯಿಂದ ಒಂದು ಮಹಾಕಾವ್ಯವನ್ನೇ ಓದಿದ ರೋಮಾಂಚಕ ಅನುಭವ ನೀಡುವ ಕೃತಿಯಿದು.

ರಾಮಸಂದ್ರವೆಂಬ ಹಳ್ಳಿ ಈ ಕಾದಂಬರಿಯ ಕೇಂದ್ರ ಬಿಂದುವಾಗಿದ್ದು, ಅದರ ಸುತ್ತುಮುತ್ತಲಿರುವ ನಾಲ್ಕಾರು ಹಳ್ಳಿಗಳೂ ಕಥಾ ಹಂದರದೊಳಗೆ ಸೇರಿಕೊಂಡಿವೆ. ರಾಮಸಂದ್ರದ ಶ್ಯಾನುಭೋಗ ರಾಮಣ್ಣ ಸಾತ್ವಿಕ ಸ್ವಭಾವದ ಸುಸಂಸ್ಕೃತ ವ್ಯಕ್ತಿ. ಸದಾ ತನ್ನ ಕೊಳಕು ನಾಲಿಗೆಯನ್ನು ಎಲ್ಲರ ಮೇಲೆ ಎಲ್ಲೆಂದರಲ್ಲಿ ಹರಿಯ ಬಿಡುವ ಗಂಗಮ್ಮ ಅವನ ಹೆಂಡತಿ. ಅವರ ಮಕ್ಕಳಾದ ಚನ್ನಿಗರಾಯ ಮತ್ತು ಅಪ್ಪಣ್ಣ ತಾಯಿ ಗಂಗಮ್ಮನ ಬೇಜವಾಬ್ದಾರಿ ಧೋರಣೆಯಿಂದಾಗಿ ಅತ್ಯಂತ ಸೋಮಾರಿಗಳೂ ಅಪ್ರಯೋಜಕರೂ ಆಗಿ ಬೆಳೆಯುತ್ತಾರೆ. ಆದರೆ ಚನ್ನಿಗರಾಯನಿಗೆ ಹೆಂಡತಿಯಾಗಿ ಬರುವ ನಂಜಮ್ಮ ಬಹಳ ಸುಸಂಸ್ಕೃತಳೂ ಬುದ್ಧಿವಂತೆಯೂ ಗುಣವಂತಳೂ ಆದ ಹೆಣ್ಣು. ಕಾದಂಬರಿಯ ಕೇಂದ್ರ ಪಾತ್ರ ಅವಳೇ. ಅತ್ತೆಯ ದರ್ಪ-ದಬ್ಬಾಳಿಕೆ, ಗಂಡನ ದುರ್ವರ್ತನೆ, ಮನೆಯ ಬಡತನಗಳಿಂದ ನಂಜಮ್ಮ ಸದಾ ನಂಜು ನುಂಗುತ್ತಲೇ ಬದುಕುತ್ತಾಳೆ. ಆದರೆ ಆಕೆ ಎಂದೂ ಸೋಲೊಪ್ಪಿಕೊಳ್ಳುವವಳಲ್ಲ.

ರಾಮಣ್ಣನ ಕಾಲದ ನಂತರ ಶ್ಯಾನುಭೋಗಿಕೆಯ ಹೊಣೆ ಚನ್ನಿಗರಾಯನ ಮೇಲೆ ಬೀಳುತ್ತದಾದರೂ ಅವನ ನಿರ್ಲಕ್ಷ್ಯ ಧೋರಣೆಯಿಂದ ಆ ಕೆಲಸವನ್ನೇ ಕಳೆದುಕೊಳ್ಳುವ ಸನ್ನಿವೇಶ ಸೃಷ್ಟಿಯಾದಾಗ ನಂಜಮ್ಮ ಅದನ್ನು ಸ್ವತಃ ತಾನೇ ವಹಿಸಿಕೊಂಡು, ತನ್ನ ಬುದ್ಧಿವಂತಿಕೆಯಿಂದ ಅದನ್ನು ಯಶಸ್ವಿಯಾಗಿ ನಿರ್ವಹಿಸುತ್ತಾಳೆ. ಎಲ್ಲ ಪ್ರತಿಕೂಲ ಪರಿಸ್ಥಿತಿಗಳನ್ನು ತನ್ನ ಅಪ್ರತಿಮ ಸಹನೆ ಮತ್ತು ಧೈರ್ಯಗಳಿಂದ ಎದುರಿಸಿ ಹಂತ ಹಂತವಾಗಿ ಗೆಲುವು ಸಾಧಿಸುವ ನಂಜಮ್ಮನ ಪಾತ್ರ ತುಂಬ ಇಷ್ಟವಾಗುತ್ತದೆ.

ಕಾದಂಬರಿಯಲ್ಲಿ ನಾಲ್ಕಾರು ವಿಷಮ ದಾಂಪತ್ಯಗಳು ಪ್ರಧಾನ ಭೂಮಿಕೆಯಲ್ಲಿವೆ. ಚನ್ನಿಗರಾಯ-ನಂಜಮ್ಮ, ಅಪ್ಪಣ್ಣ-ಸಾತು, ಕಲ್ಲೇಶಿ-ಕಮಲು, ಗಿರಿಯಣ್ಣ-ನರಸಿ, ರೇವಣ ಶೆಟ್ಟಿ-ಸರ್ವಕ್ಕರ ನಡುವಣ ಸಂಬಂಧಗಳು ದಾಂಪತ್ಯದ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. ಸಾತುವಿನ ಗಂಡ ಅಪ್ಪಣ್ಣ ಚನ್ನಿಗರಾಯನಂತೆಯೇ ಹೊಣೆಗೇಡಿಯಾಗಿದ್ದರೂ ಸಾತು ನಂಜಮ್ಮನಂತೆ ಸಹನಾಮಯಿಯಲ್ಲ. ಮನೆಯಿಂದ ಹೊರಗೆ ಬೇರೆ ಹೆಣ್ಣುಮಕ್ಕಳ ಜತೆ ಸಂಬಂಧ ಬೆಳೆಸಿಕೊಳ್ಳುವ ಗಂಡ, ಮನೆಯೊಳಗೆ ಅತ್ತೆಯ ಕಾಟಗಳಿಂದ ರೋಸಿ ಹೋಗಿ ಅವಳು ದಾಂಪತ್ಯದಿಂದ ಹೊರ ನಡೆದು ಬೇರೊಬ್ಬನನ್ನು ಕೂಡಿಕೊಳ್ಳುತ್ತಾಳೆ. ಕಲ್ಲೇಶಿ ಮಹಾ ಕಾಮುಕ. ಅವನ ಹೆಂಡತಿ ಕಮಲು ಪಟ್ಟಣದಿಂದ ಬಂದವಳು. ಹಳ್ಳಿಯ ಬದುಕಿನ ಬಗ್ಗೆ, ಕಲ್ಲೇಶಿಯಂತಹ ಗಂಡನ ಬಗ್ಗೆ, ದಾಂಪತ್ಯದ ಬಗ್ಗೆಯೇ ಅವಳಿಗೆ ತಿರಸ್ಕಾರ. ಮಹಾ ಹಠಮಾರಿ ಬೇರೆ. ಅದರಿಂದಾಗಿ ಕಲ್ಲೇಶಿಯ ಹೊರಚಾಳಿ ಇನ್ನಷ್ಟು ಹೆಚ್ಚಾಗಿ ಅವರ ದಾಂಪತ್ಯ ಬದುಕು ಮಹಾನರಕವಾಗಿಯೇ ಉಳಿಯುತ್ತದೆ. ಗಿರಿಯಣ್ಣ ನರಸಿಯ ಮೇಲೆ ಅನೈತಿಕತೆಯ ಆರೋಪ



> **ಇದು ಒಂದು ದುರಂತ ಕತೆಯನ್ನು ಹೇಳುವ ಕೃತಿಯಾದರೂ ಅದು ಒಂದು ಮನೆ ಒಡೆದು ಛಿದ್ರವಾಗುವುದಕ್ಕೆ ಸೀಮಿತವಾಗದೆ ಕಾಲ-ದೇಶಗಳನ್ನು ಮೀರಿ ನಿಲ್ಲುತ್ತದೆ. ಆದ್ದರಿಂದ ಇದು ಭೈರಪ್ಪನವರ ಇತರ ಕಾದಂಬರಿಗಳಂತೆ ಇನ್ನಷ್ಟು ಚರ್ಚೆಗೆ ಒಳಗಾಗಬೇಕಾಗಿದೆ.**

ಪಂಚಾಯ್ತಿ ಕಟ್ಟೆಯನ್ನೇರುತ್ತಾನೆ. ಪರಿಸ್ಥಿತಿ ನರಸಿಯನ್ನು ವೇಶ್ಯಾವೃತ್ತಿಗಿಳಿಸುತ್ತದೆ. ರೇವಣ್ಣ ಶೆಟ್ಟಿ ತನ್ನ ಇಸ್ಪೀಟು ಚಟವನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ತನ್ನ ಮಗಳನ್ನೇ ಮಾರುತ್ತಾನೆ. (ಹೀಗೆ ಹೆಣ್ಣುಮಕ್ಕಳನ್ನು ಮಾರಲು ಹಳ್ಳಿಯನ್ನು ಪ್ಲೇಗಿನಂತಹ ಇನ್ನೊಂದು ಭಯಂಕರ ಮಾರಿಯಾಗಿ ಪ್ರವೇಶಿಸುವ ಬಡ್ಡೀಮಗ ಕಾಶಿಂಬಡ್ಡಿಯೂ ಕಾರಣನಾಗುತ್ತಾನೆ.)

ಗಂಡನನ್ನು ವಿರೋಧಿಸಲಾಗದೆ ಸರ್ವಕ್ಕ ಎಲ್ಲವನ್ನೂ ಸಹಿಸಿಕೊಂಡು ಕುಳಿತುಕೊಳ್ಳುತ್ತಾಳೆ. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕಾಣುವಂತೆ ಗೃಹಭಂಗವೂ ದಾಂಪತ್ಯದ ಕುರಿತಾದ ಕುರಿತಾದ ನೇರ ಸಂವಾದ ನಡೆಸುತ್ತದೆ. ವಿವಾಹ ಮತ್ತು ದಾಂಪತ್ಯ ವ್ಯವಸ್ಥೆಗಳನ್ನು ಉಳಿಸಿಕೊಳ್ಳಲು ಗಂಡ-ಹೆಂಡತಿಯರು ತಮ್ಮಿಂದಾದ ಪ್ರಯತ್ನ ಮಾಡಬೇಕು.ಆದರೆ ಒಬ್ಬರ ಅಸಹಕಾರದಿಂದಾಗಿ ಬದುಕು ತೀರಾ ಅಸಹಯನೀಯವೆನ್ನಿಸಿದರೆ ಬಿಟ್ಟು ಹೋಗುವುದರಲ್ಲಿ ತಪ್ಪಿಲ್ಲ ಎನ್ನುವ ಕಾರಂತರ ಮಾತು ನೆನಪಾಗುತ್ತದೆ. ಮರಳಿ ಮಣ್ಣಿಗೆಯ ನಾಗವೇಣಿ, ನಂಜಮ್ಮನಂತೆ ತನ್ನ ದಾಂಪತ್ಯವನ್ನು ಉಳಿಸಿಕೊಳ್ಳುತ್ತಾಳೆ. ಸಾತು ಧರ್ಮರಾಯನ ಸಾಂಸಾರದ ಸರಸ್ವತಿಯಂತೆ ಪ್ರತಿಭಟನೆ ತೋರುತ್ತಾಳೆ.

ಜನರನ್ನು ಕಾಡುವ ರೋಗಗಳು

ಕಾದಂಬರಿಯಲ್ಲಿ ಹಳ್ಳಿಗಳನ್ನು ಆಗಾಗ ಪೆಡಂಭೂತವಾಗಿ ಕಾಡುವ ಪ್ಲೇಗ್-ಕಾಲರಾ ಮಾರಿಗಳಂತಹ ಮಾರಣಾಂತಿಕ ರೋಗಗಳಿಂದ ಸಂಭವಿಸುವ ಸಾವು-ನೋವುಗಳ ಸಂಕಟದ ಚಿತ್ರಣವಿದೆ. ಇಂಥ ರೋಗಗಳು ಕಾಡಿದಾಗ ಹಳ್ಳಿಯ ಮುಗ್ಧ ಮಂದಿ ಮೂಢ ನಂಬಿಕೆಗಳ ಆಚರಣೆಗೆ ಬಲಿಯಾಗಿ ಇನ್ನಷ್ಟು ಜೀವಹಾನಿಗೆ ಕಾರಣವಾಗುವ ಭಯಾನಕ ಚಿತ್ರಣವೂ ಇದೆ. ಗ್ರಾಮದ ಸಾತ್ವಿಕ ಪ್ರಜೆಗಳಾಗಿ ಬೆಳೆಯುವ ಎಲ್ಲ ಲಕ್ಷಣಗಳನ್ನೂ ಮೈಗೂಡಿಸಿಕೊಂಡಿರುವ ನಂಜಮ್ಮನ ಮಕ್ಕಳಾದ ರಾಮಣ್ಣ-ಪಾರ್ವತಿಯರು ಸಾವಿಗೀಡಾಗುವ ದುರಂತ ಕರುಣಾಜನಕವಾಗಿದೆ.

ಕೊನೆಯಲ್ಲಿ ಉಳಿಯುವ ಚಿಕ್ಕ ಮಗ ವಿಶ್ವನನ್ನು ನಂಜಮ್ಮ ತನ್ನ ಸಾವಿಗೆ ಮೊದಲೇ ಸಾಧು ಸ್ವಭಾವದ ಜಂಗಮ ಮಹಾದೇವಯ್ಯನ ಕೈಗೊಪ್ಪಿಸುವುದರಿಂದ ಪುಟ್ಟ ಹುಡುಗ ನವ ಚೈತನ್ಯ ಪಡೆದುಕೊಂಡು ಸ್ವಾತಂತ್ರ್ಯ ಚಳುವಳಿಯಲ್ಲಿ ಚುರುಕಾಗಿ ಭಾಗವಹಿಸುವಷ್ಟರ ಮಟ್ಟಿಗೆ ಉನ್ನತಿಗೇರುವುದು, ಗೃಹವು ಅಪ್ಪಂದಿರ ಬೇಜವಾಬ್ದಾರಿ ನಿರ್ವಹಣೆಯಿಂದ ಒಂದೊಮ್ಮೆ ಭಂಗಗೊಂಡರೂ ಭವಿಷ್ಯದಲ್ಲಿ ವಿಶ್ವನಂಥವರ ಕೈಯಿಂದ ಅದರ ಪುನರ್ನಿರ್ಮಾಣ ಸಾಧ್ಯವಿದೆ ಎಂಬ ಭರವಸೆ ಹುಟ್ಟಿಸುತ್ತದೆ. ಹಾಗೆಯೇ ಇಡೀ ಕಾದಂಬರಿಯಲ್ಲಿ ನಾಲ್ಕು ಬಾರಿ ಹಳ್ಳಿಯ ಜನತೆಯ ಬದುಕನ್ನು ಚಿಂದಿ ಚಿಂದಿ ಮಾಡುವ ಸಾಂಕ್ರಾಮಿಕ ರೋಗದ ವಿರುದ್ಧ ಕೊನೆ ಕೊನೆಗೆ ಜನರು ವ್ಯಾಕ್ಸಿನೇಷನ್‌ಗೆ ಮೊರೆ ಹೊಗುವುದು ಮೂಢನಂಬಿಕೆಯ ಕತ್ತಲೆಯಿಂದ ಜನರು ವಿಜ್ಞಾನದ ಬೆಳಕಿನತ್ತ ಸಾಗುವ ಆಶಾಭಾವವನ್ನು ಪ್ರಕಟಿಸುತ್ತದೆ.

ಪರಸ್ಪರ ಅಸೂಯೆ, ಒಡಕು, ವೈಷಮ್ಯ, ಭಿನ್ನಾಭಿಪ್ರಾಯಗಳ ನಡುವೆಯೂ ಗ್ರಾಮೀಣ ಜನತೆಯ ನಡುವೆ ಕಾಣುವ ಪರಸ್ಪರ ಸಹಕಾರ, ಅನ್ಯೋನ್ಯತೆ, ಪ್ರೀತಿಗಳಂತಹ ಮೌಲ್ಯಪ್ರಜ್ಞೆಗಳು, ಕರಾಳ ಸಂಘರ್ಷಗಳ ನಡುವೆಯೂ ತಲೆಯೆತ್ತಿ ನಿಲ್ಲುವ ದಿಟ್ಟತನ, ಬದುಕಿನಲ್ಲಿ ಎದುರಾಗುವ ಅಗ್ನಿದಿವ್ಯಗಳನ್ನು ಮೆಟ್ಟಿ ನಿಂತು ಸಾಧನೆಯ ಹಾದಿಯಲ್ಲಿ ಸಾಗುವ ಅದಮ್ಯ ಶಕ್ತಿಯುಳ್ಳ ಚೇತನಗಳು, ತಮ್ಮ ಸ್ವಂತ ಸಂಕಟಗಳನ್ನು ಬದಿಗೊತ್ತಿ ಪರರ ಸಂಕಷ್ಟಗಳಿಗೆ ನೆರವಾಗುವ ಹತ್ತಾರು ಪಾತ್ರಗಳ ಚಿತ್ರಣವು ಕಾದಂಬರಿಗೆ ಜೀವ ತುಂಬಿವೆ.

ನಿರ್ಲಿಪ್ತ ಬರಹ

ಈ ಪಾತ್ರಗಳನ್ನು ಕಡೆದು ನಮ್ಮ ಮುಂದೆ ನಿಲ್ಲಿಸುವಾಗ ಲೇಖಕರು ಎಷ್ಟೊಂದು ನಿರ್ಲಿಪ್ತರಾಗಿರುತ್ತಾರೆಂದರೆ ಯಾವುದೇ ಗುಣಗಳನ್ನು ಅವರು ಪಾತ್ರಗಳ ಮೇಲೆ ಹೇರುವುದಿಲ್ಲ. ಯಾವುದೇ ಪಾತ್ರವನ್ನು ಆದರ್ಶೀಕರಿಸುವುದಿಲ್ಲ. ಪ್ರತಿ ಪಾತ್ರದೊಳಗಿನ ಒಳಿತು-ಕೆಡುಕುಗಳನ್ನು ಇದ್ದದ್ದಿದ್ದ ಹಾಗೆಯೇ ಒಪ್ಪಿಕೊಂಡು ಅತ್ಯಂತ ಸಹಜವಾಗಿ ನಿರುದ್ವೇಗದಿಂದ ಚಿತ್ರಿಸುತ್ತಾರೆ. ನಂಜಮ್ಮ ಎಂಥ ಹಿಂಸೆಯನ್ನೂ ಮೌನವಾಗಿ ಸಹಿಸಿಕೊಳ್ಳುವಾಗ ಅವಳೇಕೆ ಹಾಗಿರಬೇಕೆಂದು ಅವರು ಕೇಳುವುದಿಲ್ಲ. ನರಸಿ ವೇಶ್ಯೆಯಾದರೂ ವಿಶ್ವನ ಮೇಲೆ ತಾಯಿಯ ಪ್ರೀತಿಯನ್ನು ತೋರಿಸುವ ಹೃದಯವಂತಳಾಗುತ್ತಾಳೆ. ಚನ್ನಿಗರಾಯ ಹೆಂಡತಿ ಹಾಗೂ ಮನೆಯ ಜವಾಬ್ದಾರಿಯ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಾನಾದರೂ ಅವನು ಕೆಟ್ಟವನಲ್ಲ. ಬೇರೆ ಹೆಣ್ಣುಗಳ ಸಂಪರ್ಕ ಅವನು ಮಾಡುವುದಿಲ್ಲ. ಅವನು ಸಂವೇದನಾಶೂನ್ಯ ವ್ಯಕ್ತಿ ಅಷ್ಟೆ. ಹಣಕ್ಕಾಗಿ ತನ್ನ ಮಗಳನ್ನೇ ಮಾರುವ ರೇವಣ್ಣ ಶೆಟ್ಟಿ, ಹೆಂಡತಿ ಕಮಲುವಿನ ಜತೆಗೆ ಎಂದೂ ಸರಿಯಾಗಿ ಬಾಳಲಾರದ ಕಲ್ಲೇಶಿ, ತನ್ನ ನಿರ್ಲಕ್ಷ್ಯ ಧೋರಣೆಯಿಂದ ಹೆಂಡತಿಯನ್ನೇ ಕಳೆದುಕೊಳ್ಳುವ ಅಪ್ಪಣ್ಣ-ಎಲ್ಲರೂ ಓದುಗರನ್ನು ಸದಾ ಕಾಡುವ ಪಾತ್ರಗಳಾಗುತ್ತವೆ.

ಹಳ್ಳಿಯ ಜನರ ಆಡುಭಾಷೆಯ ಯಥಾವತ್ ಬಳಕೆ, ಸಮರ್ಥ ಕಥನ ಕಲೆ, ಪ್ರಗತಿ ಪರ ಚಿಂತನೆಗಳು, ಮಾನವೀಯ ಮೌಲ್ಯಗಳ ಪ್ರತಿಪಾದನೆ-ಇವೇ ಮೊದಲಾದ ಧನಾತ್ಮಕ ಗುಣಗಳಿಂದ ಗೃಹಭಂಗವು ಒಂದು ಸಮೃದ್ಧ ಕಲಾಕೃತಿಯಾಗಿದೆ. ಬದುಕನ್ನು ಬದುಕಾಗಿ ನೋಡುವ ಈ ಕಾದಂಬರಿಯಲ್ಲಿ ಯಾವುದೇ ತರ್ಕ-ವಿತರ್ಕಗಳಿಗಾಗಲಿ, ದ್ವಂದ್ವಗಳಿಗಾಗಲಿ ಅವಕಾಶವಿಲ್ಲ.

ಕಾದಂಬರಿಯುದ್ದಕ್ಕೂ ಲೇಖಕರು ನಿರ್ಲಿಪ್ತರಾಗಿದ್ದು ಸಾಕ್ಷಿಪ್ರಜ್ಞೆಯಿಂದ ಒಂದು ಹಳ್ಳಿಯ ಶ್ಯಾನುಬೋಗ ವೃತ್ತಿಯ ಕುಟುಂಬದ ಜೀವನಕ್ರಮವನ್ನೂ, ಆ ಕುಟುಂಬವು ಎದುರಿಸುವ ಸಮಸ್ಯೆಗಳನ್ನು ಮತ್ತು ತನ್ಮೂಲಕ ಗ್ರಾಮೀಣ ಜೀವನದ ಚಿತ್ರಣವನ್ನು ನೀಡುತ್ತ ಹೋಗಿದ್ದಾರೆ. ಒಂದು ದುರಂತ ಕತೆಯನ್ನು ಹೇಳುವ ಕೃತಿಯಾದರೂ ಅದು ಒಂದು ಮನೆ ಒಡೆದು ಛಿದ್ರವಾಗುವುದಕ್ಕೆ ಸೀಮಿತವಾಗದೆ ಕಾಲ-ದೇಶಗಳನ್ನು ಮೀರಿ ನಿಲ್ಲುತ್ತದೆ. ಆದ್ದರಿಂದ ಇದು ಭೈರಪ್ಪನವರ ಇತರ ಕಾದಂಬರಿಗಳಂತೆ ಇನ್ನಷ್ಟು ಚರ್ಚೆಗೊಳಗಾಗಬೇಕಾಗಿದೆ.

ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಬರೆಯುವವರನ್ನು ಸವ್ಯಸಾಚಿ ಎಂದು ವರ್ಣಿಸುವ ಪರಿಪಾಠ ನಮ್ಮಲ್ಲಿ ಬೆಳೆದಿದೆ. ಕವನ, ನಾಟಕ, ಕಾದಂಬರಿ, ಸಣ್ಣಕಥೆ, ಲಲಿತ ಪ್ರಬಂಧ ಹೀಗೆ ಹಲವು ಪ್ರಕಾರಗಳ ಬಾಹ್ಯಾಕಾರವನ್ನು ಹಿಡಿದು ಎಲ್ಲತರಲ್ಲೂ ಅಷ್ಟಿಷ್ಟು ಬರೆಯುವುದು ಯಾವ ಸಾಹಿತಿಗೂ ಕಷ್ಟವಲ್ಲ. ಪ್ರತಿಯೊಬ್ಬ ಸಾಹಿತಿಯೂ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ತಕ್ಕಮಟ್ಟಿಗೆ ಓದಿಕೊಂಡಿರುತ್ತಾನೆ, ಓದಲೇಬೇಕು. ಆದರೆ ಒಂದೊಂದು ಪ್ರಕಾರದಲ್ಲೂ ಸೃಜನಶೀಲನಾಗಬೇಕಾದರೆ ಅದರದೇ ಆದ ಅಧ್ಯಯನ, ವ್ಯವಸಾಯಗಳು ಬೇಕು. ಅದಕ್ಕಿಂತ ಹೆಚ್ಚಾಗಿ ಅವನ ಮನೋಭಾವವು ಅವನ ಪ್ರಕಾರವನ್ನು ನಿರ್ಧರಿಸಬೇಕು. ಕವಿತೆ ಬರೆಯುವ ಮನೋಭಾವದವನು ಉತ್ತಮ ಗದ್ಯ ಲೇಖಕನಾಗುವುದು ಕಷ್ಟ. ಒಂದು ಇನ್ನೊಂದನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ವಿಮರ್ಶೆಯಲ್ಲೇ ಕೃಷಿ ಮಾಡುವಾತನಿಗೆ ಒಂದು ಪುಟ ಕಥನಾತ್ಮಕ ಗದ್ಯ ಬರೆಯುವುದು ಸುಲಭವಲ್ಲ. ನಾಟಕಕಾರನ ಪೂರ್ವಗ್ರಹಿಕೆಗಳೇ ಬೇರೆ. ಕಾದಂಬರಿಯ ಪ್ರಪಂಚಸೃಷ್ಟಿ ಹಾಗೂ ಸಾಧ್ಯತೆಗಳೇ ಬೇರೆ. ಒಂದರಲ್ಲಿ ಇನ್ನೊಂದರ ಗುಣ ಇರುವುದಿಲ್ಲವೆಂದಲ್ಲ. ಪ್ರಕಾರ ಬೇರೆಯಾದರೂ ಸಾಹಿತ್ಯದ ಸಮಾನಗುಣಗಳಿರುತ್ತವೆ. ಗದ್ಯವು ಕಾವ್ಯಗುಣವನ್ನು ಮುಟ್ಟುವುದು, ಕಾವ್ಯವು ನಾಟಕೀಯತೆಯನ್ನು ತಾಳುವುದು, ಸಣ್ಣಕಥೆಯು ಲಲಿತಪ್ರಬಂಧದ ರೂಪ ತಾಳುವುದು ಮುಂತಾಗಿ ಯಾವಾಗಲೂ ಇರುತ್ತವೆ. ಆದರೆ ಗುಣ ಮತ್ತು ಸ್ವರೂಪಗಳನ್ನು ನಾವು ಬೆರೆಸಿ ಗೊಂದಲಕ್ಕೊಳಗಾಗಬಾರದು. ರವೀಂದ್ರನಾಥ ಠಾಕೂರರಂಥವರು ಕವಿತೆಯ ಜೊತೆಗೆ ಕಥೆ, ಕಾದಂಬರಿ, ನಾಟಕ, ನಿಬಂಧಗಳನ್ನೂ ಬರೆದಿದ್ದಾರೆ ನಿಜ. ಆದರೆ ಅವರ ಇತರ ಪ್ರಕಾರಗಳು ಅವರ ಕಾವ್ಯ ಎತ್ತರವನ್ನು ಮುಟ್ಟಿವೆಯೆ? ಸಾಹಿತ್ಯ ಪ್ರಕಾರವು ಅಂತಿಮವಾಗಿ ಸಾಹಿತ್ಯ ಮನೋಧರ್ಮದ ಅಭಿವ್ಯಕ್ತಿಯಾಗಿರುತ್ತದೆ. ನೀನು ಒಂದೇ ಪ್ರಕಾರದಲ್ಲಿ ಬರೆಯಬೇಕು, ಬೇರೆಯದರಲ್ಲಿ ಪ್ರಯತ್ನಿಸಬಾರದು ಎಂಬ ಬಾಹ್ಯಾದೇಶ ಮಾಡುವ ಅಧಿಕಾರ ಯಾರಿಗೂ ಇಲ್ಲ. ಆದರೆ ತನ್ನ ಮನೋಧರ್ಮವನ್ನರಿತು ಅದಕ್ಕೆ ತಕ್ಕ ಪ್ರಕಾರವನ್ನು ಹಿಡಿಯುವ ಅಥವಾ ಆವಿಷ್ಕರಿಸಿಕೊಳ್ಳುವ ವಿವೇಚನೆ ಇರುವುದು ಲೇಖಕನ ಬೆಳವಣಿಗೆಯ ದೃಷ್ಟಿಯಿಂದಲೇ ಒಳ್ಳೆಯದು. -ಎಸ್. ಎಲ್.ಭೈರಪ್ಪ (ಭಿತ್ತಿ ಪುಟ 506-507)



ಭೈರಪ್ಪನವರ ಕಾದಂಬರಿಗಳಲ್ಲಿ ವೈದ್ಯಪಾತ್ರಗಳು

ಡಾ. ಗೋವಿಂದ ಹೆಗಡೆ

ಉತ್ತರ ಕನ್ನಡದ ಶಿರಸಿ-ಯಲ್ಲಾಪುರ ಹೆದ್ದಾರಿಯಲ್ಲಿ ಸುಮಾರು ಇವೆರಡರ ಮಧ್ಯದಲ್ಲಿನ ಪುಟ್ಟ ಊರು ಉಮ್ಮಚಗಿ. ಭರತನಹಳ್ಳಿ ರಸ್ತೆ ಇಲ್ಲಿಗೆ ಸೇರುವುದರಿಂದ ಭರತನಹಳ್ಳಿ ಕತ್ರಿ ಎಂಬ ಹೆಸರೂ ಇದೆ. ಇಲ್ಲಿಂದ ಸುಮಾರು ಒಂದೂವರೆ ಮೈಲು ದೂರದ ಪುಟ್ಟ ಹಳ್ಳಿ, ಕನೇನಹಳ್ಳಿ. ಊರಿನ ಉತ್ತರಭಾಗದಲ್ಲಿ ಗದ್ದೆಯ ಸಾಲು, ಉಳಿದ ಮೂರು ದಿಕ್ಕುಗಳಲ್ಲಿ ಕಾಡು. ಟಾರುರಸ್ತೆ, ವಿದ್ಯುತ್ ದೂರವಾಣಿ ಸಂಪರ್ಕ, ಈಗ ಇವೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇಲ್ಲ. ಐದು ದಶಕಗಳ ಹಿಂದೆ ನಾನು ಹುಟ್ಟಿದಾಗ ಮಣ್ಣುರಸ್ತೆ ಮಾತ್ರ.

ಅಕ್ಷರ ಲೋಕಕ್ಕೆ ಸುಮಾರು 4-5 ನೇ ವಯಸ್ಸಿಗೇ ಬಂದವ ನಾನು. ಅದು ಕಥೆಗಳ ಪ್ರಪಂಚಕ್ಕೆ ಬಾಗಿಲು ತೆರೆದ ಕಾರಣವಾಗಿ ಹೊತ್ತು ಗೊತ್ತಿನ ಪರಿವೆಯೇ ಇಲ್ಲದೆ, ಸಿಕ್ಕಸಿಕ್ಕ ಹರಕು ಪುಸ್ತಕಗಳನ್ನೂ ಓದುವ ಗೀಳು ಬೆಳೆದದ್ದು. ನೆರೆಯವರೊಬ್ಬರ ಮನೆಯ ಮಾಳಿಗೆ ಮೇಲೆ ಕತ್ತಲ ಮೂಲೆಯಲ್ಲಿ ಪೇರಿಸಿದ ಹಳೆಯ 'ಸುಧಾ' ಪತ್ರಿಕೆಯ ರಾಶಿ... ಅವರಿವರ ಮನೆಗಳಲ್ಲಿ ಸಿಗುತ್ತಿದ್ದ ಮಯೂರ, ತುಷಾರ, ಪ್ರಜಾಮತ, ಮಲ್ಲಿಗೆ ನನ್ನ ಓದಿನ ಹಸಿವಿಗೆ ಉಣಿಸು.

ನನ್ನ ಈ ಜಗತ್ತಿಗೆ ಎಸ್. ಎಲ್. ಭೈರಪ್ಪ ಯಾವಾಗ ಬಂದರೋ, ನನಗೆ ನೆನಪಿಲ್ಲ. ಹೈಸ್ಕೂಲ್ ದಿನಗಳಲ್ಲಿ ನಾನು 'ಧರ್ಮಶ್ರೀ', 'ದೂರಸರಿದರು', 'ಗೃಹಭಂಗ', 'ವಂಶವೃಕ್ಷ' ಗಳನ್ನು ಓದಿದ್ದೆ. ಅವುಗಳಲ್ಲಿ ನಿರೂಪಿತವಾದ ಬದುಕು ಆ ದರ್ಶನ ಎಷ್ಟರಮಟ್ಟಿಗೆ ನನಗೆ ಅರಿವಾಯಿತು ಎಂಬುದು ಬೇರೆ ಪ್ರಶ್ನೆ. 'ಮತದಾನ', 'ಜಲಪಾತ', 'ನಿರಾಕರಣ', 'ನಾಯಿ-ನೆರಳು'ಗಳನ್ನು ಓದಿದ್ದು ತುಸು ತಡವಾಗಿ ಎನಿಸುತ್ತದೆ. ಪಿಯುಸಿ ದಿನಗಳಲ್ಲಿ ಹೆಚ್ಚಾಗಿ ಓದಿದ ನೆನಪಿಲ್ಲ.ಮುಂದೆ ಮೈಸೂರಿನಲ್ಲಿ ಎಂ ಬಿ ಬಿ ಎಸ್ ಓದುವಾಗ ಆಸಕ್ತಿ ಗರಿಯೊಡೆದ ಪರಿಣಾಮ ಓದು-ಬರಹ ಸಾಗಿದ್ದು.

ಭೈರಪ್ಪ ಅವರನ್ನು ಕಂಡೆ!

ಈ ವೇಳೆಯಲ್ಲಿ ಭೈರಪ್ಪನವರನ್ನು ಭೇಟಿಯಾದ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವು 1988ರ ಆರಂಭದ ದಿನಗಳು. ನಾನು ವಾಸವಿದ್ದ ತಾತಯ್ಯನವರ ಅನಾಥಾಲಯ ವಿದ್ಯಾರ್ಥಿನಿಲಯದ ಸಾಹಿತ್ಯ ಸಂಘದ ವಾರ್ಷಿಕ ಸಮಾರಂಭಕ್ಕೆ ಅತಿಥಿಯನ್ನು ಹುಡುಕುವ ನೆಪದಲ್ಲಿ ಹಿರಿಯ ಸಾಹಿತಿಗಳನ್ನು ಭೇಟಿಮಾಡಿದ್ದೆ. ಈ ಉಪಕ್ರಮದಲ್ಲಿ ನನಗೆ ಜೊತೆಯಾದವನು ಅನಾಥಾಲಯದ ನಿವಾಸಿಯಲ್ಲದ, ಆಗ ಶಾರದಾ ವಿಲಾಸ ಕಾಲೇಜಿನಲ್ಲಿ ಬಿಎಸ್ಸಿ ಪದವಿ ತರಗತಿಯಲ್ಲಿ ಓದುತ್ತಿದ್ದ, ಅಸೀಮ ಸಾಹಿತ್ಯ ಪ್ರೀತಿಯ ಚ ಶ್ರೀ ಸುದರ್ಶನ.

ಸರಿ, ಒಂದು ಸಂಜೆ ಸುದರ್ಶನ್ ಕೂರಿಸಿಕೊಂಡು ಸೈಕಲ್ ತುಳಿದೆ, ಭೈರಪ್ಪನವರ ಭೇಟಿಗಾಗಿ. ಮನೆಯಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ, ಇದ್ದರೂ 'ಇಲ್ಲ' ಎಂದು ಕಳಿಸಿ ಬಿಡ್ತಾರೆ ಅಂತಲೂ ಕೇಳಿದ್ದೆ. ಹೇಗಾದರೂ ಸರಿ ಎಂದು ಕತ್ತಲಿನಲ್ಲಿ ಕವಣೆ ಹಿಡಿದು ಕಲ್ಲು ಬೀರಿದ್ದು!

ಬಾಗಿಲು ತೆರೆದ ಶ್ರೀಮತಿ ಸರಸ್ವತಿ ಭೈರಪ್ಪ ನವರಿಗೆ ನಮ್ಮ ಪರಿಚಯ, ಬಂದ ಉದ್ದೇಶ ಹೇಳಿ ದೆವು. ಒಂದು ಕ್ಷಣ ತಡೆದ ಅವರು 'ಕೂತ್ಕೊಳ್ಳಿ, ಅವರಿಗೆ ತಿಳಿಸ್ತೀನಿ' ಎಂದು ಹೋದರು. ಆತಂಕದಲ್ಲೇ ಕಾದೆವು. ಎರಡು ನಿಮಿಷ ಬಿಟ್ಟುಬಂದು 'ಕೂತ್ಕೊಳ್ಳಿ, ಬರ್ತಾರೆ' ಎಂದರು!

ಐದು ನಿಮಿಷಗಳಲ್ಲಿ ಬಂದರು ಭೈರಪ್ಪ. ನಮಸ್ಕಾರ ಹೇಳಿ ಪರಿಚಯ ಮಾಡಿಕೊಂಡೆವು. ಮೂರು-ನಾಲ್ಕು ತಿಂಗಳ ಮೊದಲು 'ಪರ್ವ' ಓದಿದ್ದೆ. ಮಾತಿನ ಆರಂಭದಲ್ಲೇ ನಾನು ಅದನ್ನು ಪ್ರಸ್ತಾಪಿಸಿ, ಪರ್ವದ ಬಗ್ಗೆ ನನ್ನ ಅನಿಸಿಕೆಯ ಒಂದು ಮಾತನ್ನು ಹೇಳಿದೆ. ಅದು ಅವರಿಗೆ ಇಷ್ಟವಾಯಿತು ಅಂತ ಕಾಣುತ್ತದೆ. ಮುಂದೆ ಸುಮಾರು ಮುಕ್ಕಾಲು ಗಂಟೆಗಳ ಕಾಲ ಹಲವಾರು ವಿಷಯಗಳನ್ನು ಮಾತನಾಡಿದರು. ಕಾಫಿಯ ಸತ್ಕಾರವೂ ಆಯ್ತು.

ಕಾರ್ಯಕ್ರಮಕ್ಕೆ ಬರಲು ಅವರಿಗೆ ಅನುಕೂಲವಿರಲಿಲ್ಲ. ಆದರೆ ಒಂದು ರೀತಿಯಲ್ಲಿ ನಾವು ಹೋದ ಕೆಲಸ ಆಗಿತ್ತು! ಹೊರಬಂದು ಸೈಕಲ್ ಹತ್ತುತ್ತಿದ್ದಂತೆ ಗೆಳೆಯ ಸುದೀ ಪುಣ್ಯ ಮಾಡಿದ್ವಿ, ಬಿಡಪ್ಪ ಎಂದ!

ಈಗ, ಮೂವತ್ತಕ್ಕೂ ಹೆಚ್ಚು ವರ್ಷಗಳ ಹಿಂದಿನ ಈ ಭೇಟಿಯನ್ನು ನೆನಪಿಸಿಕೊಂಡರೆ ವಿಶೇಷ ಅನಿಸುತ್ತದೆ. ಆಗ ಅವರಿಗೆ ಸುಮಾರು ಐವತ್ತೈದು ವಯಸ್ಸು. ನಮಗೋ 20-22. ಇದಿರಿಗೆ ಕೂತವರು ತನಗಿಂತ ತುಂಬ ಚಿಕ್ಕವರು ಎಂಬ ದೂರವನ್ನು ಇಟ್ಟುಕೊಳ್ಳದೆ ಆರಾಮಾಗಿ ಮಾತನಾಡಿದರು ಭೈರಪ್ಪ. ಅನಾಥಾಲಯದ ಹಳೆಯ ವಿದ್ಯಾರ್ಥಿಯಾದ ಅವರು ಅಲ್ಲಿನ ತಮ್ಮ ನೆನಪುಗಳನ್ನು ಹಂಚಿಕೊಳ್ಳುವಾಗ, ಕೆಲವು ಸೂಕ್ಷ್ಮವಾದ, ಅಹಿತಕರ ಘಟನೆಗಳನ್ನು ಕೂಡ ಹೇಳಲು ಹಿಂಜರಿಯಲಿಲ್ಲ.

ಮತ್ತೆ ಅವರನ್ನು ಕಂಡಿದ್ದು ಹುಬ್ಬಳ್ಳಿಯಲ್ಲಿ. 'ಆವರಣ' ಬಿಡುಗಡೆಯಾಗಿ ತುಂಬ ವಿವಾದವನ್ನು ಎಬ್ಬಿಸಿದ ಕಾಲ. ಪ್ರಕಾಶಕರಾದ ಎಮ್ ಎ ಸುಬ್ರಹ್ಮಣ್ಯ, ಕೆಲವು ಪುಸ್ತಕಗಳ ಬಿಡುಗಡೆ ಹಾಗೂ ಭೈರಪ್ಪ ನವರೊಂದಿಗೆ ಸಂವಾದ ಆಯೋಜಿಸಿದ್ದರು. ಆ ಕಾರ್ಯಕ್ರಮದಲ್ಲಿ ಆಗಿನ ಪತ್ರಕರ್ತ, ಈಗ ಸಂಸದರಾದ ಪ್ರತಾಪಸಿಂಹರು 'ಭೈರಪ್ಪನವರು ನನ್ನ ಪಾಲಿನ ಸೂರ್ಯ' ಎಂದಿದ್ದು ನೆನಪಿದೆ.

ಮರುದಿನ ಬೆಳಿಗ್ಗೆ ನನ್ನ ಕೆಲಸ- ಅರಿವಳಿಕೆಯ ನಿರ್ವಹಣೆಗಾಗಿ ಎಂ ಎಂ ಜೋಶಿ ಕಣ್ಣಿನ ಆಸ್ಪತ್ರೆಗೆ ತೆರಳಿದೆ. ಕೆಲಹೊತ್ತಿನಲ್ಲಿಯೇ ಅಲ್ಲಿಗೆ ಬಂದರು ಭೈರಪ್ಪ! ಜತೆಗಿದ್ದ ನೇತ್ರತಜ್ಞ ಡಾ ಕೃಷ್ಣಪ್ರಸಾದ್ ಅವರಿಗೆ ನನ್ನನ್ನು ಪರಿಚಯಿಸುತ್ತಾ 'ಇವರೂ ಬರೀತಾರೆ' ಎಂದಾಗ ಸಂಕೋಚದಿಂದ ಹಿಡಿಯಾಗಿದ್ದೆ.

ಸರಸ್ವತಿ ಸಮ್ಮಾನ್

ಆಮೇಲಿನ ಕಾರ್ಯಕ್ರಮವೆಂದರೆ 'ಮಂದ್ರ'ಕ್ಕೆ ಸರಸ್ವತಿ ಸಮ್ಮಾನ್ ಬಂದ ಸಂದರ್ಭ.'ಆವರಣ' ಕಾರ್ಯಕ್ರಮ ನಡೆದ ಅದೇ ಸವಾಯಿ ಗಂಧರ್ವ ಸಭಾಗೃಹ. ಸನ್ಮಾನಕ್ಕೆ ಉತ್ತರಿಸಿ ಮಾತನಾಡಿದ ಭೈರಪ್ಪ 'ಉತ್ಸವಮೂರ್ತಿ ಊರಾಡ್ತಾ ಹೋದಷ್ಟೂ, ಮೂಲಮೂರ್ತಿಯ ಕಳೆ ಕಡಿಮೆಯಾಗುತ್ತದೆ' ಎನ್ನುವ ಮಾತನ್ನು ತಮ್ಮ ಬಾಲ್ಯದ ನೆನಪುಗಳೊಂದಿಗೆ ಬಿಚ್ಚಿಟ್ಟಿದ್ದರು.ಈ ಸಂವಾದಗಳಲ್ಲಿ ಸಿಕ್ಕಿಕೊಂಡು ತಮ್ಮ ಪ್ರೀತಿಯ ಕೆಲಸಗಳಾದ ಓದು-ಬರಹ ಸಾಗುತ್ತಿಲ್ಲ ಎಂದರು.ತಮ್ಮ ದೊಡ್ಡ ಸಾಧನೆಯ ವಿಷಯದಲ್ಲಿ ಅವರ ನಿರ್ಲಿಪ್ತತೆ ಅಚ್ಚರಿ ಹುಟ್ಟಿಸುವಂಥದ್ದು ಮತ್ತು ಅದೊಂದು ಮಾದರಿ.

ಮರುದಿನ ಮತ್ತೆ ಅದೇ ಎಂ ಎಂ ಜೋಶಿ ಆಸ್ಪತ್ರೆಯಲ್ಲಿ ಭೈರಪ್ಪನವರ ಭೇಟಿ. ಊರು ಯಾವುದು ಎಂದು ಕೇಳಿದ ಅವರಿಗೆ, ಹಾಸಣಗಿ ಸಮೀಪ ಎಂದು ಉತ್ತರಿಸಿದೆ.'ಮಂದ್ರ' ಬರೆಯುವ ತಯಾರಿಯ ಅಂಗವಾಗಿ ಹಾಸಣಗಿಯಲ್ಲಿ ಪಂ. ಗಣಪತಿ ಭಟ್ ಅವರ ಗುರುಕುಲದಲ್ಲಿ ಕೆಲವು ಕಾಲ ಕಳೆದಿದ್ದರು ಅವರು.

ಅದರ ನಂತರ ಎಂದು ನೆನಪು: 'ವಂಶವೃಕ್ಷ-40' ಕಾರ್ಯಕ್ರಮ ಬಿ ವಿ ಬಿ ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ತುಂಬಾ ಅದ್ದೂರಿಯಾಗಿ ಏರ್ಪಾಡಾಗಿತ್ತು. ಅಲ್ಲಿ ಮಾತನಾಡಿದ ಭೈರಪ್ಪ 'ಮತ್ತೆ ವಂಶವೃಕ್ಷವನ್ನು ಓದಿ ನೋಡಿದೆ. ಈಗ ನಾನು ಅದನ್ನು ಬರೆದಿದ್ದರೆ ಇನ್ನಷ್ಟು ಕ್ರಿಸ್ಪ್ ಆಗಿ ಬರೆಯುತ್ತಿದ್ದೆ. ಉಳಿದಂತೆ ಆಶಯದಲ್ಲಿ, ಆಕೃತಿಯಲ್ಲಿ ಬದಲಾವಣೆ ಇರುತ್ತಿರಲಿಲ್ಲ' ಎಂದರು.

ಈ ನಡುವೆ ಅವರ ಇನ್ನೊಂದಿಷ್ಟು ಪುಸ್ತಕಗಳನ್ನು ಓದಿದ್ದೇನೆ. ಸಾಕ್ಷಿ, ಅಂಚು, ತಂತು, ಸಾರ್ಥ, ಆವರಣ, ಮಂದ್ರ, ಕವಲು, ಹೀಗೆ. ಹಾಮಾನಾ ಬಗ್ಗೆ, ಗಂಗೂಬಾಯಿ ಹಾನಗಲ್ ಅವರ ಬಗ್ಗೆ ಬರೆದ ಲೇಖನಗಳನ್ನು ಓದಿದ್ದೇನೆ. ಕನಕಪುರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ, ಆವರಣದ ನಂತರದ ದಿನಗಳಲ್ಲಿ ಮತಾಂತರದ ಬಗ್ಗೆ ಬಹಳ ಚರ್ಚೆಗೊಳಗಾದ ಅವರ ಲೇಖನ-ಹೀಗೆ ಅವರೊಂದಿಗೆ ನನ್ನ ಅನುಸಂಧಾನ ಸಾಗಿದೆ.



ವೈದ್ಯ ಪಾತ್ರಗಳು

ಒಬ್ಬ ವೃತ್ತಿನಿರತ ವೈದ್ಯನಾಗಿ, ಅರಿವಳಿಕೆ ತಜ್ಞನಾಗಿ ಅಷ್ಟಿಷ್ಟು ಬರೆಯುವವನಾದ ನನಗೆ ಭೈರಪ್ಪ ಹೇಗೆ ಸಲ್ಲುತ್ತಾರೆ?

ಅವರ ಮೂರು ಕಾದಂಬರಿಗಳಲ್ಲಿ ವೈದ್ಯ, ವೈದ್ಯಕೀಯ ಪ್ರಸ್ತಾಪ ಬಂದಿದೆ. 'ಮತದಾನ'ದಲ್ಲಿ ಕೇಂದ್ರಪಾತ್ರವಾದ ಡಾ. ಶಿವಪ್ಪ ರಾಜಕಾರಣ ಪಟುಗಳ ಚದುರಂಗದ ದಾಳವಾಗಿ ಉಪಯೋಗಿಸಲ್ಪಡುತ್ತಾನೆ. ಅದು ಅವನ ವೃತ್ತಿಯ ಜೊತೆಗೆ ವೈಯಕ್ತಿಕ ಬದುಕಿನಲ್ಲಿಯೂ ಸಾಕಷ್ಟು ಸ್ಥಿತ್ಯಂತರಗಳನ್ನು, ಭ್ರಮನಿರಸನಗಳನ್ನು ಉಂಟುಮಾಡುತ್ತದೆ. ಈ ಕಾದಂಬರಿ ಚಲನಚಿತ್ರವಾಗಿದೆ.

'ಜಲಪಾತ'ದಲ್ಲಿ ವೆಟರಿನರಿ ಸರ್ಜನ್ ಡಾ.ನಾಡಗೌಡ,ಅವರ ಪತ್ನಿ, ದಂಪತಿಯ ಸಂತಾನಹೀನತೆ, ಕೃತಕ ವೀರ್ಯದಾನದ ಮೂಲಕ ಮಗುವನ್ನು ಪಡೆಯುವ ಅವರ ಯೋಚನೆ ಪತ್ನಿಗೆ ರುಚಿಸದೆ ಕೊನೆಯಲ್ಲಿ ಇಬ್ಬರೂ ದುರಂತಕ್ಕೆ ಈಡಾಗುವುದು... ಈ ಕುರಿತು ಕಥೆ ಬೆಳೆಯುತ್ತದೆ.ಈ ಕಾದಂಬರಿಯನ್ನು ಬರೆದ ಇಪ್ಪತ್ತು- ಮೂವತ್ತು ವರ್ಷಗಳ ನಂತರ ಬಂದ 'ಸಾಕ್ಷಿ', 'ತಂತು', 'ಕವಲು'ಗಳಲ್ಲಿ ನಿರೂಪಿತವಾದ ಸಂಸಾರದ ವಿಘಟನೆಯನ್ನು, ವಿವಾಹಬಾಹಿರ ಸಂಬಂಧಗಳನ್ನು ನೆನಪಿಸಿಕೊಂಡರೆ ಭೈರಪ್ಪ ಈಗ ಈ ಕಾದಂಬರಿ ಬರೆದಿದ್ದರೆ ಹೇಗೆ ಬರೆಯುತ್ತಿದ್ದಿರಬಹುದು ಎಂಬ ಕುತೂಹಲದ ಪ್ರಶ್ನೆ ಎದುರಾಗುತ್ತದೆ. ಕೃತಕ ಗರ್ಭಧಾರಣೆಗೆ ಸಂಬಂಧಪಟ್ಟಂತೆ ಮಾಡಲಾಗುವ, ಕೆಲವು ಚಿಕಿತ್ಸೆಗಳಲ್ಲಿ, ಅರಿವಳಿಕೆತಜ್ಞನಾಗಿ ನನ್ನ ಪಾತ್ರವೂ ಇದೆ. ಈ ಹಿನ್ನೆಲೆಯಲ್ಲಿ ಜಲಪಾತದಲ್ಲಿ ಬಂದ ಪ್ರಶ್ನೆಯಾಗಲೀ ಕುಟುಂಬ ಯೋಜನೆಯ ಬಗ್ಗೆ, ಸೆಕ್ಸ್ ಬಗೆಗಿನ ದ್ವಂದ್ವಗಳಾಗಲೀ ಈಗ ಕಣ್ಮರೆಯಾಗಿವೆ ಎನಿಸುತ್ತದೆ. ಸಮಾಜದ ಚಲನಶೀಲತೆ ಇದು. ತುಂಬ ಹಿಂದೆ ಓದಿದ ಕಾದಂಬರಿ. ನನ್ನ ನೆನಪು ಮತ್ತು ಗ್ರಹಿಕೆಗಳಲ್ಲಿ ಶೈಥಿಲ್ಯ, ದೋಷಗಳು ಇರಲು ಸಾಧ್ಯ.

ಗ್ರಹಣದಲ್ಲಿ ಮಹಿಳಾ ಡಾಕ್ಟರ್ ಒಬ್ಬರ ಕಥೆಯಿದೆ. ಮಿಥ್ಯಾಗರ್ಭ (pseudocyesis) ಹೊತ್ತ ಹೆಣ್ಣೊಬ್ಬಳ ಕಥೆಯನ್ನು, ಮತ್ತು ಈ ವೈದ್ಯೆ, ತನ್ನ ಸಂನ್ಯಾಸವನ್ನು ತಿರಸ್ಕರಿಸಿ ಸಂಸಾರಿಯಾಗಲು ಬಯಸುವ, ವ್ಯಕ್ತಿಯೊಬ್ಬರ ಸಂಬಂಧ ಬೆಳೆಸಿ (ವಿವಾಹ ಪೂರ್ವದಲ್ಲಿ) ಗರ್ಭ ಧರಿಸುವುದನ್ನು ಮುಖಾಮುಖಿಯಾಗಿಸಿದ್ದಾರೆ ಎಂದು ನೆನಪು.

ಇವು ಅವರ ಬರಹಗಳ ಬಗ್ಗೆ ನನ್ನ ನೆನಪುಗಳ ತುಣುಕು, ವೈದ್ಯನಾಗಿ ನನ್ನ ಪ್ರತಿಕ್ರಿಯೆ ಎನ್ನಬಹುದು. ಆದರೆ ಭೈರಪ್ಪನವರಿಂದ ಕಲಿಯಲು ಸಿಗುವ ಪಾಠಗಳು ಬೇರೆ. ಮೊದಲನೆಯದಾಗಿ ತುಂಬ ಕಷ್ಟಕಾರ್ಪಣ್ಯಗಳ ಅವರ ಬಾಲ್ಯದ ಬಗ್ಗೆ ನನಗೆ ಓದಿ, ಕೇಳಿ ಗೊತ್ತಿದೆ. ನಾನು ಅವರಷ್ಟು ಕಷ್ಟವನ್ನು ಬಡತನವನ್ನು ಅನುಭವಿಸಿಲ್ಲವಾದರೂ, ಕೆಳಮಧ್ಯಮ ವರ್ಗದ ಕುಟುಂಬದಿಂದ ಬಂದವನು. ನನಗೆ, ನನ್ನಂತಹ ಸಹಸ್ರಾರು ವಿದ್ಯಾರ್ಥಿಗಳಿಗೆ, ಅವರು ತಮ್ಮನ್ನು ತಾವು ಕಟ್ಟಿಕೊಂಡ ರೀತಿ, ಬೆಳೆದ ಎತ್ತರ ಒಂದು ಮಾದರಿಯಾಗಿ ಕಾಣುತ್ತದೆ. ಅದನ್ನು ಕಂಡು ಬೆರಗಾಗಿ ವಿಭೂತಿ ಪೂಜೆಯಲ್ಲಿ ತೊಡಗುವುದು ನನ್ನ ಉದ್ದೇಶವಲ್ಲ.

ಎರಡನೆಯದಾಗಿ ಹಲವಾರು ಸಂದರ್ಭಗಳಲ್ಲಿ ಅವರು ಆಚರಿಸಿ, ನಿರೂಪಿಸಿದ 'ನಿಜದ ನೇರಕೆ ನಡೆವ ನಿಶ್ಚಲತೆ.

ಅನ್ಯಾಯಕೆಂದೆಂದು ಬಾಗದೆಚ್ಚರವೊಂದು ಮರುಕಕ್ಕೆ ಪ್ರೇಮಕ್ಕೆ ಚಿರ ತೆರೆದ ಎದೆಯೊಂದು' ಈ ಸಾಲುಗಳಲ್ಲಿ ಕೂಡ ನಾನು ಭೈರಪ್ಪನವರನ್ನು ಕಾಣುತ್ತೇನೆ.

ಮೂರನೆಯದು ಅವರು ತಮ್ಮ ನಿಲುವಿಗೆ, ಧ್ಯೇಯಕ್ಕೆ ತೋರಿಸುವ ಬದ್ಧತೆ. ಸ್ವಲಾಭಕ್ಕಾಗಿ ರಾಜಕಾರಣಿಗಳನ್ನು ಓಲೈಸುತ್ತ, ದಿನಕ್ಕೊಮ್ಮೆ ಬಣ, ಬಣ್ಣ ಬದಲಿಸುವ ಅನುಕೂಲಸಿಂಧು ಸಾಹಿತಿಕಾರಣಿಗಳ ನಡುವೆ ಭೈರಪ್ಪ ತುಂಬ ಎತ್ತರದವರಾಗಿ ಕಾಣುತ್ತಾರೆ.

ನಾಲ್ಕನೆಯದು ತಮ್ಮ ಬರಹಗಳಿಗಾಗಿ ಅವರು ನಡೆಸುವ ಸಿದ್ಧತೆ. ಪರ್ವವನ್ನು ಬರೆಯುವ ಮೊದಲು ಅವರು ಒಂದು ವರ್ಷ ಸಂಬಳ ರಹಿತ ರಜೆ ತೆಗೆದುಕೊಂಡಿದ್ದರು.ಇದು ಅವರ ವಾರ್ಷಿಕ ಇನ್ಕ್ರಿಮೆಂಟ್ ಮತ್ತಿತರ ಸೇವಾ ಸಂಬಂಧಿ ವಿಷಯಗಳ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಹಾಗಿದ್ದೂ ಅವರು ನಡೆಸಿದ ಸಿದ್ಧತೆ ಕಿರಿಯರಿಗೆ ಒಂದು ಮಾದರಿ.

ನಾನು ವ್ಯಕ್ತಿಯಾಗಿ ಅಥವಾ ಲೇಖಕರಾಗಿ ಭೈರಪ್ಪನವರ ಮೌಲ್ಯಮಾಪನಕ್ಕೆ ತೊಡಗುವ ಸಾಹಸ ಮಾಡಲಾರೆ. ತಮ್ಮ ಮಾತು ನಡವಳಿಕೆಗಳಲ್ಲಿ ದ್ವಂದ್ವ ಇಲ್ಲದಂತೆ ಬದುಕಿದ ಅವರೊಂದಿಗೆ ಕೆಲವು ಸಮಯವನ್ನು ಕಳೆದಿದ್ದೇನೆ, ಅವರ ಮಾತುಗಳನ್ನು ಕೇಳಿದ್ದೇನೆ ಎಂಬ ಧನ್ಯತೆ ನನಗೆ ಸಾಕು.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 25.09.2025 ಸಂಪುಟ: 68 ಸಂಚಿಕೆ: 143 ಪುಟಗಳು: 12+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

'ನಾನೊಬ್ಬ ಸಾಹಿತಿಯಾಗಿ ನನಗೆ ಸಿಕ್ಕಿರುವ ಈ ಬೌದ್ಧಿಕ ಸ್ವಾತಂತ್ರ್ಯ 1950ರ ಸಂವಿಧಾನದಿಂದ ದೊರೆತಿದ್ದಲ್ಲ. ಐದು ಸಾವಿರ ವರ್ಷದ ಇತಿಹಾಸದ ಈ ಸಂಸ್ಕೃತಿ ಅವಕಾಶ ಮಾಡಿಕೊಟ್ಟಿದ್ದು.'

-ಎಸ್.ಎಲ್. ಭೈರಪ್ಪ

ಅಕ್ಷರವಾದರು ಭೈರಪ್ಪ

ಬರಹದಲ್ಲಿ ನೆಲೆಯಾಗಿ ಇಹಲೋಕ ತ್ಯಜಿಸಿದ ಕನ್ನಡದ ಅಕ್ಷರ ಬ್ರಹ್ಮ
ರಾಷ್ಟ್ರಪತಿ ಮುರ್ಮು, ಪ್ರಧಾನಿ ಮೋದಿ ಸೇರಿ ಗಣ್ಯರಿಂದ ಅಶ್ರುತರ್ಪಣ
ಸಂಸ ರಂಗಮಂದಿರದಲ್ಲಿ ಇಂದು ಬೆಳಗ್ಗೆ 8ರಿಂದ ಸಾರ್ವಜನಿಕ ದರ್ಶನ
ಶುಕ್ರವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂತ್ಯಸಂಸ್ಕಾರ
ಭೈರಪ್ಪನವರ ಇಚ್ಛೆಯಂತೆ ಸಂತೇಶಿವರದ ಕೆರೆಯಲ್ಲಿ ಚಿತಾಭಸ್ಮ ವಿಸರ್ಜನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡದ ಅಸ್ಮಿತೆಯಾಗಿದ್ದ ಹಿರಿಯ ಕಾದಂಬರಿಕಾರ, ಚಿಂತಕ, ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ ಎಸ್.ಎಲ್. ಭೈರಪ್ಪ ಅವರು ಬುಧವಾರ ಮಧ್ಯಾಹ್ನ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಎಸ್.ಎಲ್.ಭೈರಪ್ಪ (94) ಅವರು ಹಲವು ದಿನಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಿಸದೆ ನಿಧನರಾಗಿದ್ದಾರೆ. ಅವರಿಗೆ ಪತ್ನಿ ಸರಸ್ವತಿ, ಪುತ್ರರಾದ ರವಿಶಂಕರ್ ಹಾಗೂ ಉದಯ್ ಶಂಕರ್ ಇದ್ದಾರೆ.

ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಅನೇಕ ಗಣ್ಯರು ಮತ್ತು ಕನ್ನಡ ಸಾರಸ್ವತ ಲೋಕದ ಪ್ರಮುಖರು ಸಂತಾಪ ಸೂಚಿಸಿದ್ದಾರೆ.

ಬೆಂಗಳೂರಿನ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿದ ಸಾಹಿತಿಗಳು, ರಾಜಕೀಯ ಮುಖಂಡರು, ಅಭಿಮಾನಿಗಳು ಪದ್ಮಭೂಷಣ, ಸರಸ್ವತಿ ಸಮ್ಮಾನ್ ಪುರಸ್ಕೃತ ಡಾ.ಎಸ್.ಎಲ್.ಭೈರಪ್ಪ ರವರ ಪಾರ್ಥಿವ ಶರೀರದ ದರ್ಶನ ಪಡೆದು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ರಾಜ್ಯಸಭಾ ಸದಸ್ಯೆ ಹಾಗೂ ಲೇಖಕಿ ಸುಧಾಮೂರ್ತಿ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಅನೇಕ ಗಣ್ಯರು ಎಸ್.ಎಲ್.ಭೈರಪ್ಪ ಅವರ ಪಾರ್ಥಿವ ಶರೀರದ ದರ್ಶನ ಪಡೆದರು.

ಮೈಸೂರು ಮತ್ತು ಇತರ ಕಡೆಯಲ್ಲಿರುವ ಕುಟುಂಬ ಸದಸ್ಯರು ರಾಜರಾಜೇಶ್ವರಿ ನಗರದಲ್ಲಿರುವ ರಾಷ್ಟ್ರೋತ್ಥಾನ ಆಸ್ಪತ್ರೆಗೆ ಧಾವಿಸಿದರು. ವಿದೇಶದಲ್ಲಿರುವ ಕುಟುಂಬ ಸದಸ್ಯರು ಬಂದರ ನಂತರ ಮೈಸೂರಿನಲ್ಲಿ ಅಂತ್ಯಸಂಸ್ಕಾರ ನಡೆಸಲು ಕುಟುಂಬದವರು ತೀರ್ಮಾನಿಸಿದ್ದಾರೆ.

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಾಳೆ ಅಂತ್ಯಕ್ರಿಯೆ

ಶುಕ್ರವಾರ ಮಧ್ಯಾಹ್ನ ಬ್ರಾಹ್ಮಣ ಸಂಪ್ರದಾಯದಂತೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಎಸ್.ಎಲ್. ಭೈರಪ್ಪ ಅವರ ಅಂತ್ಯಕ್ರಿಯೆ ನಡೆಯಲಿದೆ. ಗುರುವಾರ ಬೆಳಗ್ಗೆ 8ಗಂಟೆವರೆಗೂ ಸಾರ್ವಜನಿಕ ದರ್ಶನಕ್ಕೆ ಅವಕಾಶವಿಲ್ಲ. ಎಂಟು ಗಂಟೆ ನಂತರ ಆಸ್ಪತ್ರೆಯಿಂದ ರವೀಂದ್ರ ಕಲಾಕ್ಷೇತ್ರಕ್ಕೆ ಪಾರ್ಥಿವ ಶರೀರವನ್ನು ರವಾನಿಸಿ, ಸಾರ್ವಜನಿಕರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ಗುರುವಾರ ಮಧ್ಯಾಹ್ನದ ನಂತರ ಎಸ್.ಎಲ್. ಭೈರಪ್ಪ ಅವರ ಪಾರ್ಥಿವ ಶರೀರವನ್ನು ಬೆಂಗಳೂರಿನಿಂದ ಮೈಸೂರಿಗೆ ಕೊಂಡೊಯ್ದು ಸಂಜೆ ಮೈಸೂರಿನ ಕಲಾಮಂದಿರದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಬಳಿಕ ಶುಕ್ರವಾರ ಮಧ್ಯಾಹ್ನ ಸಕಲ ಸರಕಾರಿ ಗೌರವದೊಂದಿಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಎಸ್.ಎಲ್.ಭೈರಪ್ಪ ಅವರ ಕಿರು ಪರಿಚಯ

- ಹೆಸರು: ಎಸ್.ಎಲ್.ಭೈರಪ್ಪ
- ಜನನ: 20-08-1931
- (ಭಿತ್ತಿಯಲ್ಲಿ ಬರೆದ ಪ್ರಕಾರ 26-7-1934)
- ಪೋಷಕರು: ತಂದೆ ಲಿಂಗಣ್ಣಯ್ಯ, ತಾಯಿ ಗೌರಮ್ಮ
- ಜನ್ಮ ಸ್ಥಳ: ಸಂತೇಶಿವರ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ
- ನಿಧನ: 24-09-2025



1931-2025

ರಾಷ್ಟ್ರೀಯ ಪ್ರಶಸ್ತಿಗಳು

ಪದ್ಮಭೂಷಣ
2023



ಪದ್ಮಶ್ರೀ ಪ್ರಶಸ್ತಿ
2016

ಸಾಹಿತ್ಯ ಅಕಾಡೆಮಿ ಫೆಲೋಶಿಪ್ 2015	ಸರಸ್ವತಿ ಸಮ್ಮಾನ್ 2010	ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1975

ರಾಜ್ಯ ಪ್ರಶಸ್ತಿಗಳು

- ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ (2020)
- ನೃಪತುಂಗ ಪ್ರಶಸ್ತಿ (2017)
- ಶ್ರೀ ಕೃಷ್ಣ ದೇವರಾಯ ಪ್ರಶಸ್ತಿ (2017)
- ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ (2015)
- ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ (2014)
- ವಾಗ್ವಿಲಾಸಿನಿ ಪುರಸ್ಕಾರ (2012)
- ನಾಡೋಜ ಪ್ರಶಸ್ತಿ (2011)
- ಎನ್‌ಟಿಆರ್ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ (2007)
- ಕಲಬುರಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ (2007)
- ಪಂಪ ಪ್ರಶಸ್ತಿ (2005)
- ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1966)

ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಆಘಾತಕರವಾದ ಸುದ್ದಿ. ನವರಾತ್ರಿ ಪರ್ವ ನಮಗೆ ಕಾಳರಾತ್ರಿಯಾಗಿದೆ. ನಮ್ಮೆಲ್ಲರಿಗೂ ಆದರಣೀಯರಾದ, ಕಾದಂಬರಿ ಸಾರ್ವಭೌಮ ಡಾ.ಎಸ್.ಎಲ್.ಭೈರಪ್ಪನವರು ಭೌತಿಕವಾಗಿ ಇಲ್ಲವಾಗಿದ್ದಾರೆ. ಅವರ ವ್ಯಕ್ತಿತ್ವ, ಅದಕ್ಕೂ ಮಿಗಿಲಾಗಿ ಅವರ ಕೃತಿತ್ವ ಶಾಶ್ವತವಾಗಿ ನಿಲ್ಲುವಂಥದ್ದು. ಸುಮಾರು 60 ವರ್ಷಗಳ ಕಾಲ ಸತತವಾಗಿ ಸಾರಸ್ವತ ಪ್ರಪಂಚವನ್ನು ಅವರು ಉದ್ಧರಿಸುತ್ತಾ ಬಂದರು. ತಮ್ಮ ಕಾದಂಬರಿಗಳಿಂದ ಸಾಹಿತ್ಯ ನಿರ್ಮಾಣದ ಮೂಲಕ ಕನ್ನಡ ಸಾಹಿತ್ಯಕ್ಕೆ, ತನ್ಮೂಲಕ ಭಾರತೀಯ ವಾಙ್ಮಯಕ್ಕೆ ದೊಡ್ಡ ಕೊಡುಗೆ ಕೊಟ್ಟಿದ್ದಾರೆ.

-ಶತಾವಧಾನಿ ರಾ. ಗಣೇಶ್

ಕನ್ನಡ ಸಾರಸ್ವತ ಲೋಕದ ಹಿರಿಯ ಬರಹಗಾರ ಎಸ್.ಎಲ್ .ಭೈರಪ್ಪನವರ ನಿಧನವಾರ್ತೆ ನೋವು ತಂದಿದೆ. ಭೈರಪ್ಪನವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ತಮ್ಮ ಆಪ್ತವೆನಿಸುವ ಬರಹ ಶೈಲಿಯಿಂದಾಗಿ ಅಪಾರ ಓದುಗರನ್ನು ಹೊಂದಿದ್ದ ಭೈರಪ್ಪನವರ ನಿಧನದಿಂದ ಸಾಹಿತ್ಯಲೋಕ ಬಡವಾಗಿದೆ. ಅವರ ಕುಟುಂಬವರ್ಗ ಮತ್ತು ಓದುಗ ಬಳಗಕ್ಕೆ ನನ್ನ ಸಂತಾಪಗಳು.

-ಸಿದ್ದರಾಮಯ್ಯ, ಮುಖ್ಯಮಂತ್ರಿ



ಡಾ.ಎಸ್.ಎಲ್.ಭೈರಪ್ಪ ತಮ್ಮ ಪಾಂಡಿತ್ಯಪೂರ್ಣ ಕಾದಂಬರಿಗಳ ಮೂಲಕ ಭಾರತೀಯ ಸಂಸ್ಕೃತಿ, ಇತಿಹಾಸ, ತತ್ವಶಾಸ್ತ್ರ ಮತ್ತು ಮಾನವ ಸಂಬಂಧಗಳನ್ನು ಅತ್ಯಂತ ಆಳವಾಗಿ ವಿಶ್ಲೇಷಿಸುವ ಅಪೂರ್ವ ಕೃತಿಗಳನ್ನು ರಚಿಸಿ, ನಾಡಿನ ಸಾರಸ್ವತ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಮೆರೆಸಿದ ಸಾಹಿತಿಯನ್ನು ಕಳೆದುಕೊಂಡು ಕನ್ನಡ ನಾಡು, ನುಡಿ ಅನಾಥವಾಗಿದೆ. ಅವರ ದಿವ್ಯಚೇತನಕ್ಕೆ ದೇವರು ಸದ್ಗತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

-ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಬಾಲ್ಯದಿಂದಲೂ ಭೈರಪ್ಪನವರ ಕೃತಿಗಳನ್ನು ಓದಿಕೊಂಡು ಬೆಳೆದ ನನಗೆ, ಅವರ ಕೊನೆ ಕ್ಷಣದವರೆಗೂ ಜತೆಗಿರಲು ಅವಕಾಶ ಸಿಕ್ಕಿದ್ದು ನನ್ನ ಪೂರ್ವಜನ್ಮದ ಪುಣ್ಯ. ಅವರ ಬಗ್ಗೆ ಪುಸ್ತಕ ಬರೆಯುವಷ್ಟು ಮಾಹಿತಿಯಿದ್ದರೂ, ಇಂದು ಪತ್ರಕರ್ತನಾಗಿ ನಾನು ಮೌನಿಯಾದೆ.

-ವಿಶ್ವೇಶ್ವರ ಭಟ್, ಪ್ರಧಾನ ಸಂಪಾದಕ, ವಿಶ್ವವಾಣಿ



ಕನ್ನಡ ಸಾಹಿತ್ಯ ಲೋಕದ ಮೇರು ಲೇಖಕ, ಸರಸ್ವತಿ ಸಮ್ಮಾನ್ ಪುರಸ್ಕೃತ ಪದ್ಮಭೂಷಣ ಡಾ. ಎಸ್.ಎಲ್. ಭೈರಪ್ಪರ ನಿಧನ ಸುದ್ದಿ ತಿಳಿದು ಅತೀವ ದುಃಖವಾಯಿತು. ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಉತ್ಕೃಷ್ಟ ಕಾದಂಬರಿಗಳ ನೀಡಿ, ಲಕ್ಷಾಂತರ ಓದುಗರ ಮನಗೆದ್ದಿದ್ದ, ಭೈರಪ್ಪನವರ ಅಗಲಿಕೆ ಕನ್ನಡ ಸಾರಸ್ವತ ಲೋಕಕ್ಕೆ ಭರಿಸಲಾಗದ ನಷ್ಟವಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ.

-ಎಚ್.ಡಿ. ದೇವೇಗೌಡ, ಮಾಜಿ ಪ್ರಧಾನಿ

ಕನ್ನಡ ಸಾಹಿತ್ಯ ಲೋಕಕ್ಕೆ ಭೈರಪ್ಪನವರು ಕೊಟ್ಟ ಕೊಡುಗೆ ಅಪಾರ. ನಾನು 11 ವರ್ಷದವಳಿದ್ದಾಗ ಭೈರಪ್ಪನವರನ್ನು ಪರಿಚಯ ಮಾಡಿಕೊಂಡೆ. 1960-61ರಲ್ಲಿ ಅವರು ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಬಂದಿದ್ದಾಗ ನಮ್ಮ ಮನೆಯ ಹತ್ತಿರವೇ ವಾಸಿಸುತ್ತಿದ್ದರು. ಧರ್ಮಶ್ರೀ ನನ್ನ ಮೆಚ್ಚಿನ ಕಾದಂಬರಿಗಳಲ್ಲೊಂದು. ಅವರು ನಿರ್ಭೀತ, ನೇರ ನಡೆನುಡಿಯ ವ್ಯಕ್ತಿತ್ವದವರು. ಇನ್ನೊಬ್ಬರ ಮನಸ್ಸಿನೊಳಗೆ ಪ್ರವೇಶಿಸಿದಂತೆ ಸಾಹಿತ್ಯ ರಚಿಸಿದವರು ಅಪರೂಪ. ಅವರ ಅಗಲಿಕೆಯಿಂದ ಒಂದು ಯುಗದ ಅಂತ್ಯವಾಗಿದೆ.

-ಸುಧಾಮೂರ್ತಿ, ಇನ್ಫೋಸಿಸ್ ಫೌಂಡೇಶನ್

1931-2025

ಸರಸ್ವತಿ ಪುತ್ರನ ಪರ್ವಾಂತ್ಯ

ವಿಶ್ವವಾಣಿ 25.09.2025 ಗುರುವಾರ
vishwavani.news

ಭೈರಪ್ಪ ಅವರೊಂದಿಗೆ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ.

ನಮ್ಮೂರಿಗೆ ನೀರು ಕೊಡಿಸಿ ಎಂದು ಸಿಎಂ ಮುಂದೆ ಮನವಿ | ಹುಟ್ಟೂರು ಸೇರಿದಂತೆ ಸುತ್ತಮುತ್ತಲಿನ 20 ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ

ಹುಟ್ಟೂರಿನ ಜಲಕ್ಷಾಮ ನೀಗಿಸಿದ ಭಗೀರಥ

ರಾಜಕಾರಣಿಗಳ ಬಳಿ ಅನೇಕ ಸಾಹಿತಿಗಳು ತಮಗೊಂದು ಸೈಟು ಬೇಕೆಂದೋ, ಅಧ್ಯಕ್ಷ ಸ್ಥಾನ ಬೇಕೆಂದು ಅರ್ಜಿ ಹಿಡಿದು ಹೋಗುವುದು ಇಂದಿನ ದಿನದ ನಗ್ನ ಸತ್ಯ. ಆದರೆ ತಾವು ಹುಟ್ಟಿದ ಊರಿಗೆ ನೀರು ಕೊಡಿಸಬೇಕೆಂದು 'ಅಂಜುತ್ತಲೇ' ಮುಖ್ಯ ಮಂತ್ರಿಗಳ ಮುಂದೆ ಅರ್ಜಿ ಸಲ್ಲಿಸಿದ ಸಾಹಿತಿ ಇದ್ದರೆ ಅದು ಎಸ್.ಎಲ್. ಭೈರಪ್ಪ ಅವರೆಂದರೆ ಅತಿಶಯೋಕ್ತಿಯಲ್ಲ.

ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇಯಾದ ಛಾಪು ಮೂಡಿಸಿದ್ದ ಭೈರಪ್ಪ ಅವರು, ತಮಗಾಗಿ ಎಂದಿಗೂ ಅರ್ಜಿ ಹಿಡಿದು ರಾಜಕಾರಣಿಗಳ ಮನೆ ಮುಂದೆ ಸುಳಿದವರಲ್ಲ. ಆದರೆ ತಮ್ಮ ಹುಟ್ಟೂರಾದ ಸಂತೇಶಿವರದಲ್ಲಿ ನೀರಿನ ಸಮಸ್ಯೆಗೆ ಪದೇಪದೆ ಸ್ಥಳೀಯರು ಗಮನಕ್ಕೆ ತಂದಾಗ ಅದನ್ನು ಸರಿಪಡಿಸಲು ಹಲವು ದಾರಿ ಗಳಲ್ಲಿ ಪ್ರಯತ್ನಿಸಿದ್ದರು. ಆದರೆ ಅಧಿಕಾರಿಗಳು ಪ್ರತಿಬಾರಿಯೂ ಒಂದೊಂದು ನೆಪ ಹೇಳಿ ಯೋಜನೆ ಆರಂಭಕ್ಕೆ ಕ್ರಮವಹಿಸುತ್ತಿರಲಿಲ್ಲ. ಹುಟ್ಟೂರಿಗೆ ಕುಡಿಯುವ ನೀರಿನ ಕೊರತೆಯಿದೆ ಎನ್ನುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದ ಭೈರಪ್ಪನವರು, ತಮ್ಮ ತಾಯಿಯ ಹೆಸರಿನ ಗೌರಮ್ಮ ಪ್ರತಿಷ್ಠಾನದ ಮೂಲಕ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದರು. ಆದರೆ ಎಷ್ಟೇ ಪ್ರಯತ್ನಿಸಿದರೂ, ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿರಲಿಲ್ಲ.

ದಿನದಿಂದ ದಿನಕ್ಕೆ ನೀರಿನ ಸಮಸ್ಯೆ ಉಲ್ಬಣಗೊಂಡಾಗ, ಭೈರಪ್ಪನವರು ಕೊನೆಗೆ ವಿಶ್ವೇಶ್ವರ ಭಟ್ಟರ ಬಳಿ ಸಂತೇಶಿವರ ನೀರಿನ ಸಮಸ್ಯೆಯ ಬಗ್ಗೆ ಹೇಳಿಕೊಂಡು, ಈ ಸಮಸ್ಯೆಗೊಂದು ಪರಿಹಾರ ಕೊಡಿ ಎಂದಿದ್ದರು. ಕೂಡಲೇ ವಿಶ್ವೇಶ್ವರ ಭಟ್ಟರು, ಅಂದಿನ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರನ್ನು ಖುದ್ದಾಗಿ ಭೇಟಿ ಮಾಡಿಸಿದರು. ಕುಡಿಯುವ ನೀರಿನ ಸಮಸ್ಯೆಯ ವಿಷಯವನ್ನು ಪ್ರಸ್ತಾಪಿಸಿದರು. ಈ ಕೋರಿಕೆಯನ್ನು ಇಡುತ್ತಿದ್ದಂತೆ ಬೊಮ್ಮಾಯಿ ಅವರು, ನೀರಿನ ಸಮಸ್ಯೆಯನ್ನು ಬಗೆಹರಿಸುವ ಭರವಸೆ ನೀಡಿ, ಸಕಾರಾತ್ಮಕವಾಗಿ ಸ್ಪಂದಿಸಿದರು. ಆದರೂ ಅಧಿಕಾರಿಗಳ ನಿರ್ಲಕ್ಷ್ಯ ಕಾಣಿಸಿಕೊಂಡಾಗ ಸ್ವತಃ

ಬೊಮ್ಮಾಯಿ ಅವರೇ ಗದರಿಸಿ, ಅನುದಾನ ಕೊಡಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದರು. ಈ ಹೋರಾಟದ ಬಳಿಕ ಭೈರಪ್ಪ ಅವರ ಹುಟ್ಟೂರು ಸೇರಿದಂತೆ ಸುತ್ತ ಮುತ್ತಲಿನ 20 ಗ್ರಾಮಗಳಿಗೆ ಕುಡಿಯುವ ನೀರು ಸಿಗುವಂತಾಗಿದೆ.

ಕುಡಿಯುವ ನೀರಿ ಯಶಸ್ವಿಯಾಗಿ ಬಂದಿದ್ದರಿಂದ ತವರೂರಿನಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಭೈರಪ್ಪನವರು ಮಗುವಂತಾಗಿದ್ದರು. ಇದೇ ವರ್ಷ ಮಾರ್ಚ್ 9ರಂದು ನಡೆದ ಕಾರ್ಯಕ್ರಮದ ಅಂಗವಾಗಿ ಚಿಕ್ಕೋನಹಳ್ಳಿ ಗೇಟ್ ಬಳಿಯಿಂದ ಸಂತೇಶಿವರ ಗ್ರಾಮದವರೆಗೆ ಬೆಳ್ಳಿ ಸಾರೋಟಿನಲ್ಲಿ ಅದ್ಧೂರಿ ಮೆರವಣಿಗೆ ನಡೆಸಲಾಯಿತು. ಅದಕ್ಕೂ ಮೊದಲು ಪೂರ್ಣಕುಂಭ ಮೆರವಣಿಗೆಯಲ್ಲಿ ಗ್ರಾಮದ ಮಹಿಳೆಯರು ಊರಿನ ಕೆರೆಯಿಂದ ಗಂಗೆಯನ್ನು ಹೊತ್ತು ತಂದರು. ಭೈರಪ್ಪ ವಿರಚಿತ 27 ಕಾದಂಬರಿಗಳ ಸ್ತಬ್ಧಚಿತ್ರಗಳ ಮೆರವಣಿಗೆ ನಡೆಯಿತು. ಭೈರಪ್ಪ ಅವರ ಅಭಿನಂದನಾ ಸಮಾರಂಭ ಅಂಗವಾಗಿ ಸಂತೇಶಿವರ ಗ್ರಾಮ ಮದುವಣಗಿತ್ತಿಯಂತೆ ಸಿಂಗಾರಗೊಂಡಿತ್ತು.

ದೇಗುಲ ಜೀರ್ಣೋದ್ಧಾರಕ್ಕೆ ದೇಣಿಗೆ ನೀಡಿದ್ದರು: ಅಂದು ನಡೆದಿದ್ದ ಕಾರ್ಯಕ್ರಮದ ವೇಳೆ ಗಂಗಾಧರೇಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ ದೇಣಿಗೆ ನೀಡಿರುವುದನು ತಿಳಿಸಿದ್ದರು. ದೇವಸ್ಥಾನವಿರುವ ಊರು ಸ್ವರ್ಗದಂತೆ ಇರಲಿದೆ. ಗ್ರಾಮದ ದೇಗುಲ ಜೀರ್ಣೋದ್ಧಾರಕ್ಕೆ ಸಹಕಾರ ನೀಡಿದ್ದೇನೆ. ಯಾವುದೇ ಗ್ರಾಮವಾಗಲಿ ದೇಗುಲ ನಿರ್ಮಾಣ ಇಲ್ಲವೇ ಜೀರ್ಣೋದ್ಧಾರ ಕಾರ್ಯಕ್ಕೆ ಎಲ್ಲರೂ ಕೈಲಾದಷ್ಟು ದೇಣಿಗೆ ನೀಡಬೇಕು. ಊರಿನ ಗಂಗಾಧರೇಶ್ವರ ದೇವಾಲಯ 800 ವರ್ಷಗಳಷ್ಟು ಹಳೆಯದಾಗಿದ್ದು, ಅದರ ಜೀರ್ಣೋದ್ಧಾರಕ್ಕೆ ಒಂದು ಲಕ್ಷ ರು. ನೀಡಿದ್ದೇನೆ. ನೀವೆಲ್ಲರೂ ಹೆಚ್ಚು ನೆರವು ನೀಡಿ ಈ ಕಾರ್ಯ ಶೀಘ್ರ ಪೂರ್ಣಗೊಳಿಸಬೇಕು ಎಂದು ಅವರು ಮನವಿ ಮಾಡಿದ್ದರು.

ಹುಟ್ಟೂರಲ್ಲಿ ಖುಷಿಗಿಂತ ಸಂಕಟವೇ ಹೆಚ್ಚು: ಭೈರಪ್ಪನವರು ಹುಟ್ಟೂರಿಗೆ ನೀರು ತರಲು ಭಗೀರಥನಂತೆ ಹೋರಾಡಿದಾಗ, ಅವರಿಗೆ ಅಲ್ಲಿ ಸಿಹಿ ನೆನಪುಗಳೇ ಹೆಚ್ಚಿರಬಹುದು ಎಂದು ಅನೇಕರು ಎನಿಸಿದ್ದರು. ಆದರೆ 'ವಿಶ್ವವಾಣಿ'ಗೆ ನೀಡಿದ್ದ ಸಂದರ್ಶನದಲ್ಲಿ, 'ಹುಟ್ಟೂರು ಅಂದರೆ ಎಲ್ಲರಿಗೂ ಪ್ರೀತಿಯೇ. ಆದರೆ ನನಗೆ ಸಂತೇಶಿವರದ ಬದುಕು ಸುಖಕರವಾಗೇನೂ ಇರಲಿಲ್ಲ. ಅದು ಸಂಕಟವಾಗಿಯೇ ಇತ್ತು. ಕಾರಣ ಮನೆಯಲ್ಲಿದ್ದ ಬಡತ, ಎಷ್ಟೋ ದಿವಸ ಒಂದಿಷ್ಟು ಊಟ ಮಾಡುವುದಕ್ಕೆ ರಾಗಿ ಕೂಡ ಇರುತ್ತಿರಲಿಲ್ಲ. ಅದಕ್ಕೆ ಕಾರಣ ನನ್ನ ಅಜ್ಜಿ ಮತ್ತು ತಂದೆ. ಚಿಕ್ಕಂದಿನಲ್ಲಿ ನಾನು ಸಾಹಸಿಯಾಗಿದ್ದೆ. ಮುಖ್ಯವಾಗಿ ಈಜು. ನನ್ನಮ್ಮನಿಗೆ ಅದರ ಬಗ್ಗೆ ಹೆದರಿಕೆ ಇತ್ತು. ಈಜಕೂಡದು ಎನ್ನುತ್ತಿದ್ದರು. ಆದರೆ ನಾನು ಕೇಳುತ್ತಿರಲಿಲ್ಲ. ಆಮೇಲೆ ನಾಟಕ ಗಳು ಆಗ ಬಹಳ. ಗುಬ್ಬಿ ವೀರಣ್ಣನವರ ಕಂಪನಿಯ ಪ್ರದರ್ಶನಗಳು ಆಗುತ್ತಿದ್ದವು. ನಾಟಕದ ಹಾಡುಗಳು ಬಾಯಿಪಾಠ ಬರುತ್ತಿ ದ್ದವು. ಮನೆಯಲ್ಲಿ ತಾಯಿಗೆ ಹೇಳದೆ ನಾಟಕ ಕಂಪನಿ ಹಿಂದೆ ಹೊರಟುಬಿಡುತ್ತಿದ್ದೆ. ಒಮ್ಮೆ ಹೀಗೆ ಬೇರೆ ಹಳ್ಳಿಗೆ ಹೋಗಿ ರಾತ್ರಿಯಿಡೀ ಅಲ್ಲಿದ್ದು ಮರುದಿನ ಮಧ್ಯಾಹ್ನ ಮನೆಗೆ ಬಂದೆ. ಅಷ್ಟರಲ್ಲಾಗಲೇ ಮನೆಯಲ್ಲಿ ತಾಯಿ ಭಯದಿಂದ ಊರೆಲ್ಲಾ ನನ್ನನ್ನು ಹುಡುಕಿಸಿ, ಕೆರೆಯಲ್ಲೂ ಹುಡುಕಿಸಿದ್ದರು' ಎಂದು ಮೆಲುಕು ಹಾಕಿದ್ದನ್ನು ನೆನಪಿಸಿಕೊಳ್ಳಬಹುದು.

ಸಾಧನೆಗೆ ತಾಯಿಯೇ ಸ್ಫೂರ್ತಿ: ಭೈರಪ್ಪ

ಅಂದು ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಎಸ್.ಎಲ್. ಭೈರಪ್ಪ ಅವರು, ನನಗೆ ನನ್ನ ತಾಯಿಯೇ ಸರ್ವಸ್ವ. ನನ್ನೂರು ನನಗೆ ಸ್ವರ್ಗವಿದ್ದಂತೆ. ನನಗೆ ಬರವಣಿಗೆ ಹುಟ್ಟಿನಿಂದಲೇ ಬಂದದ್ದು. ಇದಕ್ಕೆ ತಾಯಿಯೇ ಸ್ಫೂರ್ತಿ. ಬಾಲ್ಯದಲ್ಲಿ ತುಂಟನಾಗಿದ್ದ ನಾನು ಒಮ್ಮೆ ಪಕ್ಕದ ಹಿರೀಸಾವೆಗೆ ನಾಟಕ ನೋಡಲು ಹೋಗಿ ಮನೆಗೆ ಬರುವುದು ತಡವಾದಾಗ ನನ್ನ ತಾಯಿ ಊರಿನ ಕೆರೆಗಳಲ್ಲಿ ನನ್ನನ್ನು ಹುಡುಕಿಸಿದ್ದರು ಎಂದು ಬಾಲ್ಯದ ದಿನಗಳ ಮೆಲುಕು ಹಾಕಿದ್ದರು. ತಾಯಿ ನನಗೆ ದೇವರ ಸಮಾನ ಎಂದು ಹೇಳಿದ್ದರು. ನಾನು ಬರೆಯುವ ಕಥೆ, ಕಾದಂಬರಿ ಹಾಗೂ ಎಲ್ಲವನ್ನೂ ತಾಯಿ ಒಪ್ಪಿಕೊಂಡು ಕೊಂಡಾಡುತ್ತಿದ್ದಳು. ಆಕೆ ಪ್ರೋತ್ಸಾಹ ನೀಡುತ್ತಿದ್ದರಿಂದ ನಾನು ಉತ್ಸುಕನಾಗಿ ಬರೆಯುವುದನ್ನು ಮುಂದುವರಿಸಿದೆ. ಅದರ ಫಲವಾಗಿ ಇಂದು ಹುಟ್ಟೂರಿನಲ್ಲಿ ಪುರಸ್ಕಾರ ಸಿಕ್ಕಿದ್ದು ಇದನ್ನು ನನ್ನ ತಾಯಿಗೆ ಅರ್ಪಿಸುತ್ತೇನೆ ಎಂದು ತಾಯಿಯನ್ನು ನೆನಪಿಸಿಕೊಂಡಿದ್ದರು.

ರೈಲು ಟಿಕೆಟ್ ಇಲ್ಲದೇ ಪ್ರಯಾಣಿಸಿದ್ದ ಭೈರಪ್ಪ

ಭೈರಪ್ಪನವರ ಬಾಲ್ಯ ಹುಲ್ಲಿನ ಹಾಸಿಗೆಯಾಗಿರಲಿಲ್ಲ. ಸಾಕಷ್ಟು ಕಷ್ಟದ ಜೀವನ ಅನುಭವಿಸಿದ್ದರು. ಈ ವೇಳೆ, ಮುಂಬೈಗೆ ಹೋದರೆ ಹಣಗಳಿಸಬಹುದು ಎಂದು ಸಲಹೆ ನೀಡಿದ್ದರಂತೆ. ಈ ಹಿನ್ನೆಲೆಯಲ್ಲಿ ಅವರು ಮೈಸೂರಿಂದ ಮುಂಬೈಗೆ ರೈಲಿನಲ್ಲಿ ಹೊರಟಿದ್ದರಂತೆ. ಅವರಿಗೆ ಟಿಕೆಟ್ ಇಲ್ಲದ ಕಾರಣ ರಾಣೆಬೆನ್ನೂರು ರೈಲು ನಿಲ್ದಾಣದಲ್ಲಿ ಟಿಸಿ ಇಳಿಸಿ ಮುಂದೆ ಹೋಗಿದ್ದರಂತೆ.



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕನ್ನಡದ ಹಿರಿಯ ಸಾಹಿತಿ ಎಸ್.ಎಲ್ ಭೈರಪ್ಪ ಅವರ ನಿಧನ ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ. ತಮ್ಮ ಅದ್ಭುತ ಕೃತಿಗಳ ಮತ್ತು ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯ ಅಭಿಮಾನಿಗಳ ಮನಸ್ಸಿನಲ್ಲಿ ಅವರು ಸದಾ ಅಜರಾಮರ. ಭಾವಪೂರ್ಣ ಶ್ರದ್ಧಾಂಜಲಿ ಓಂ ಶಾಂತಿ

ಅರವಿಂದ ಲಿಂಬಾವಳಿ, ಮಾಜಿ ಸಚಿವ

'ಪರ್ವ' ಮತ್ತು 'ಉತ್ತರಕಾಂಡ' ಕಾದಂಬರಿಗಳ ಮೂಲಕ ಮಹಾಭಾರತ ಹಾಗೂ ರಾಮಾಯಣವನ್ನು ನೋಡುವ ಮತ್ತು ಓದುವ ಕ್ರಮವನ್ನೇ ಬದಲಿಸಿದ ಅಭಿಜಾತ ಕಾದಂಬರಿಕಾರ ಪದ್ಮಭೂಷಣ ಎಸ್.ಎಲ್. ಭೈರಪ್ಪರ ನಿಧನ ಸುದ್ದಿ ಕೇಳಿ ತೀವ್ರ ಆಘಾತವಾಗಿದೆ. ಅವರ ಕಾದಂಬರಿಗಳನ್ನು ನಾನು ನಿಕಟವಾಗಿ ಓದಿದ್ದೇನೆ. ಅವರ ನಿಧನ ವೈಯಕ್ತಿಕವಾಗಿ ನನಗೆ ಬಹಳ ದುಃಖ ಉಂಟು ಮಾಡಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬಸ್ಥರು, ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಎಚ್.ಡಿ.ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿ

ಕನ್ನಡ ಸಾಹಿತ್ಯಕ್ಕೆ ವಿಶ್ವಮಾನ್ಯತೆ ತಂದು ಕೊಟ್ಟು ರಾಷ್ಟ್ರ ಹಿತಾಸಕ್ತಿಯ ವಿಚಾರಗಳಿಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ನಾಡಿನ ಮಹಾನ್ ಚೇತನ ಡಾ.ಎಸ್. ಎಲ್. ಭೈರಪ್ಪರ ನಿಧನದ ಸುದ್ದಿ ತಿಳಿದು ಆಘಾತವಾಯಿತು. ತಮ್ಮ ಕಾದಂಬರಿಗಳಿಂದ ಸಾಮಾನ್ಯ ಓದುಗರನ್ನು ಆಕರ್ಷಿಸಿದ ಅವರು, ಈ ನೆಲದ ಸೊಬಗು ಹಾಗೂ ಸಂಸ್ಕೃತಿಯನ್ನು ವಿಶ್ವಕ್ಕೆ ಪಸರಿಸಿ ಕನ್ನಡಿಗರ ಹೆಗ್ಗಳಿಕೆಯಾಗಿದ್ದರು. ರಾಷ್ಟ್ರೀಯ ಚಿಂತನೆ ಅವರ ಆದ್ಯತೆಯಾಗಿದ್ದರೆ, ಕನ್ನಡ ನಾಡು, ನುಡಿ, ಜನರ ಪರವಾದ ಚಿಂತನೆ ಅವರ ಬದ್ಧತೆಯಾಗಿತ್ತು. ಕನ್ನಡ ಸಾಹಿತ್ಯ ಲೋಕದ ಅತ್ಯಂತ ಸೃಜನಶೀಲ ಕಾದಂಬರಿಕಾರರಾಗಿ ಪದ್ಮಭೂಷಣ ಗೌರವಕ್ಕೂ ಪಾತ್ರರಾಗಿದ್ದ ಎಸ್.ಎಲ್.ಭೈರಪ್ಪರ ಅಗಲಿಕೆಯಿಂದ ಕನ್ನಡ ಸಾಹಿತ್ಯ ಲೋಕ ಬಡವಾಗಿದೆ. ಅವರ ಅಗಲಿಕೆಯ ನೋವಿನಲ್ಲಿರುವ ಅವರ ಕುಟುಂಬ ವರ್ಗ ಹಾಗೂ ಕೋಟ್ಯಂತರ ಕನ್ನಡ ಸಾಹಿತ್ಯಾಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

ವಿಜಯೇಂದ್ರ ಯಡಿಯೂರಪ್ಪ ಬಿಜೆಪಿ ರಾಜ್ಯಾಧ್ಯಕ್ಷ

ಕನ್ನಡದ ಶ್ರೇಷ್ಠ ಕಾದಂಬರಿಕಾರ, ಪದ್ಮಭೂಷಣ ಪುರಸ್ಕೃತ, ಕನ್ನಡ ಸಾರಸ್ವತ ಲೋಕಕ್ಕೆ ಮೊದಲ ಸರಸ್ವತಿ ಸಮ್ಮಾನ್ ಪ್ರಶಸ್ತಿಯ ಗೌರವವನ್ನು ತಂದುಕೊಟ್ಟ ಡಾ. ಎಸ್.ಎಲ್. ಭೈರಪ್ಪನವರು ವಿಧಿವಶರಾಗಿದ್ದು ಬಹಳ ನೋವು ತಂದಿದೆ. ಸಾಹಿತ್ಯಾಭಿಮಾನಿಗಳು ಹಾಗೂ ಅವರ ಕುಟುಂಬಸ್ಥರಿಗೆ ಈ ದುಃಖವನ್ನು ಭರಿಸುವ ಶಕ್ತಿ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಕನ್ನಡ ಸಾಹಿತ್ಯಕ್ಕೆ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ದೊರಕಿಸಿಕೊಟ್ಟ ಕನ್ನಡದ ಅದ್ಭುತ ಲೇಖಕ, ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಅವರ ನಿಧನದ ಸುದ್ದಿ ಆಘಾತ ಉಂಟುಮಾಡಿದೆ. ಜನಪ್ರಿಯ ಕಾದಂಬರಿಕಾರರಲ್ಲಿ ಒಬ್ಬರೆಂದು ಗುರುತಿಸಿಕೊಂಡಿದ್ದ ಎಸ್.ಎಲ್. ಭೈರಪ್ಪರ ಕೃತಿಗಳು ಒಂದು ನಿರ್ದಿಷ್ಟ ಪ್ರಕಾರಕ್ಕೆ ಸೀಮಿತವಾಗದೆ, ಅನನ್ಯ ನಿರೂಪಣಾ ಶೈಲಿಯಿಂದ ದೇಶ ವಿದೇಶಗಳಲ್ಲಿ ಅಪಾರ ಜನಪ್ರೀತಿ ಗಳಿಸಿಕೊಂಡಿದೆ. ಪದ್ಮಭೂಷಣ, ಪದ್ಮಶ್ರೀ, ಸರಸ್ವತಿ ಸಮ್ಮಾನ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳ ಜತೆಗೆ ಲೆಕ್ಕವಿಲ್ಲದಷ್ಟು ಗೌರವ ಸನ್ಮಾನಗಳನ್ನು ಪಡೆದಿರುವ ಭೈರಪ್ಪರ ನಿಧನ ಕನ್ನಡ ಸಾಹಿತ್ಯ ಲೋಕಕ್ಕೆ ಆದ ಅತಿದೊಡ್ಡ ನಷ್ಟ.

ಶಿವರಾಜ ತಂಗಡಗಿ, ಸಚಿವ



ಕನ್ನಡದ ಪ್ರಸಿದ್ಧ ಕಾದಂಬರಿಕಾರ, ಪದ್ಮವಿಭೂಷಣ ಪುರಸ್ಕೃತ, ಸರಸ್ವತಿ ಸಮ್ಮಾನ್ ಡಾ. ಎಸ್.ಎಲ್ ಭೈರಪ್ಪ ಅವರು ದೈವಾಧೀನರಾದರು ಎಂದು ತಿಳಿದು ಮನಸ್ಸು ಭಾರವಾಗಿದೆ. ತಮ್ಮ ಕೊನೆಯ ದಿನದವರೆಗೂ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದ ಅವರ ಬರಹಗಳು ಯುವಕರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಿಗೊಳಿಸುತ್ತಿವೆ. 2019ರಲ್ಲಿ ನಾನು ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದ ವೇಳೆ ಮೈಸೂರು ದಸರಾವನ್ನು ಭೈರಪ್ಪರಿಂದ ಉದ್ಘಾಟಿಸುವ ಸೌಭಾಗ್ಯ ನನ್ನದಾಗಿತ್ತು. ಇವರ ನಿಧನದೊಂದಿಗೆ ಕನ್ನಡ ಸಾರಸ್ವತ ಲೋಕ ಅಪೂರ್ವ ಸಾಹಿತಿಯನ್ನು ಕಳೆದುಕೊಂಡಂತಾಗಿದೆ. ಭಗವಂತ ಅವರ ಆತ್ಮಕ್ಕೆ ಸದ್ಗತಿ ಕರುಣಿಸಲಿ. ಓಂ ಶಾಂತಿ.

ವಿ.ಸೋಮಣ್ಣ, ಕೇಂದ್ರ ಸಚಿವ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಗತ್ಯ ನೆರವು ನೀಡುವುದು ಟ್ರಸ್ಟ್ ಉದ್ದೇಶ

ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಟ್ರಸ್ಟ್

ಎಸ್.ಎಲ್. ಭೈರಪ್ಪ ಅವರು ಕನ್ನಡ ಸಾಹಿತ್ಯದಲ್ಲಿಯೇ ಅತಿಹೆಚ್ಚು 'ರಾಯಲ್ಟಿ' ಪಡೆಯುವ ಸಾಹಿತಿ ಎನ್ನುವ ಸಾಧನೆ ಮಾಡಿದವರು. ಆದರೆ ತಮ್ಮ ಅಕ್ಷರಕ್ರಾಂತಿಯಲ್ಲಿ ಬಂದ ಹಣವನ್ನು ತಮ್ಮ ಸ್ವಂತ ಖರ್ಚಿಗೆ ಖರ್ಚು ಮಾಡದೇ ಬಡ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಮೀಸಲಿಟಿರುವುದು ಅವರ 'ವಿಶಾಲ' ಹೃದಯಕ್ಕೆ ಸಾಕ್ಷಿ ಎಂದರೆ ತಪ್ಪಾಗುವುದಿಲ್ಲ.

ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ, ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಅವರ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈ ಪ್ರತಿಷ್ಠಾನವನ್ನು ಸ್ಥಾಪಿಸಿದರೂ, ಈ ಪ್ರತಿಷ್ಠಾನದಲ್ಲಿ ತಾವು ಯಾವುದೇ ಹುದ್ದೆಯನ್ನು ಪಡೆಯದೇ, ತಮ್ಮ

> **ನಾನು ಬದುಕಿರುವವರೆಗೆ ನನ್ನ ಪುಸ್ತಕಗಳ ರಾಯಲ್ಟಿ ಬರುತ್ತೆ, ಅದನ್ನು ಮಕ್ಕಳ ವಿದ್ಯೆಗಾಗಿಯೇ ಖರ್ಚು ಮಾಡಬೇಕು ಅನಿಸಿದೆ. ನನಗೆ ಹಣದ ಮೇಲೆ ಆಸೆ ಇಲ್ಲ. ಇರುವುದನ್ನು ದಾನ ಮಾಡಿ ಹೊರಟುಬಿಡಬೇಕು. ಪಾಪ-ಪುಣ್ಯ ಇಂಥದರಲ್ಲೆಲ್ಲ ನನಗೆ ನಂಬಿಕೆಯಿಲ್ಲ.**
>
> **-ಎಸ್.ಎಲ್. ಭೈರಪ್ಪ**
>
> (ಸಂತೇಶಿವರದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದ ವೇಳೆ ನೀಡಿದ್ದ ತಮ್ಮ ಅಭಿಲಾಷೆ ವ್ಯಕ್ತಪಡಿಸಿದ್ದರು.)

ಆಶಯಗಳನ್ನು ಮುನ್ನಡೆಸಿಕೊಂಡು ಹೋಗುವ ಸಮರ್ಥರನ್ನು ಈ ಟ್ರಸ್ಟ್‌ನಲ್ಲಿ ಟ್ರಸ್ಟಿಗಳನ್ನಾಗಿ ಮಾಡಿದ್ದರು. ಸಾಹಿತ್ಯ ಭಂಡಾರದ ಅರುಣ ಅವರು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದು, ಪ್ರತಿಷ್ಠಾನದ ಉಪಾಧ್ಯಕ್ಷರಾಗಿ ತೇಜಸ್ವಿನಿ ಅನಂತಕುಮಾರ್, ಕಾರ್ಯದರ್ಶಿಯಾಗಿ ಸಹನಾ ವಿಜಯ್ ಕುಮಾರ್, ಖಜಾಂಜಿಯಾಗಿ ಕೃಷ್ಣಪ್ರಸಾದ್ ಹಾಗೂ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರನ್ನು ಟ್ರಸ್ಟಿಗಳನ್ನಾಗಿ ಮಾಡಿದ್ದರು. ಈ ಟ್ರಸ್ಟ್ ಮೂಲಕ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಮಹತ್ವದ ಯೋಜನೆಯ ಕನಸನ್ನು ಕಂಡಿದ್ದ ಭೈರಪ್ಪನವರು, ಇದಕ್ಕಾಗಿ ತಮ್ಮ ಪುಸ್ತಕಗಳಿಗೆ ಬಂದಿರುವ ರಾಯಲ್ಟಿಯ ಪಾಲನ್ನು ಮೀಸಲಿಟ್ಟಿದ್ದರು. ಪ್ರತಿವರ್ಷ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಗತ್ಯ ನೆರವನ್ನು ನೀಡುವುದು ಈ ಟ್ರಸ್ಟ್‌ನ ಪ್ರಮುಖ ಉದ್ದೇಶವಾಗಿದೆ.

ತಾಯಿ ಹೆಸರಲ್ಲಿ ಟ್ರಸ್ಟ್ ಸ್ಥಾಪಿಸಿ ಕಾರ್ಯ: ಈ ಪ್ರತಿಷ್ಠಾನಕ್ಕೂ ಮೊದಲೇ, ತಮ್ಮ ಹುಟ್ಟೂರು ಸಂತೇಶಿವರದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸಿರುವ ಉದ್ದೇಶದಿಂದ ಭೈರಪ್ಪನವರು, ತಮ್ಮ ತಾಯಿ ಗೌರಮ್ಮ ಅವರ ಹೆಸರಲ್ಲಿ ಟ್ರಸ್ಟ್ ಒಂದನ್ನು ಸ್ಥಾಪಿಸಿದ್ದರು. ಆ ಟ್ರಸ್ಟ್ ಮೂಲಕ ಸಂತೇಶಿವರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿಗೆ ಕ್ರಮವಹಿಸಿದ್ದರು.

ಹುಟ್ಟೂರಿಗೆ ನೀರು ಹರಿಸಿದ ಭಗೀರಥ ಭೈರಪ್ಪ

ಕನ್ನಡ ಸಾಹಿತ್ಯ ಲೋಕದ ಮತ್ತೊಂದು ಕೊಂಡಿ ಕಳಚಿ ಬಿದ್ದಿದೆ. ಕನ್ನಡದ ಹಿರಿಯ ಕಾದಂಬರಿಕಾರ, ಸರಸ್ವತಿ ಸಮ್ಮಾನ್, ಪದ್ಮ ಭೂಷಣ ಪುರಸ್ಕೃತ ಎಸ್‌ಎಲ್ ಭೈರಪ್ಪನವರು ಬುಧವಾರ ಬೆಂಗಳೂರಿನಲ್ಲಿ ವಿಧಿವಶರಾಗಿದ್ದಾರೆ. ಕೊನೆಯದಾಗಿ ಭೈರಪ್ಪನವರು ವಿಶ್ವವಾಣಿ ಸಮೂಹಕ್ಕೆ ಸಂದರ್ಶನ ನೀಡಿ ಹಲವು ವಿಚಾರಗಳನ್ನು ಹಂಚಿಕೊಂಡಿದ್ದರು. ಭೈರಪ್ಪನವರು ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆ ಕಟ್ಟೆಗಳಿಗೆ ಸರಕಾರದ ವತಿಯಿಂದ ಏತ ನೀರಾವರಿ ಯೋಜನೆಯಡಿ ನೀರು ಪೂರೈಕೆಗೆ ಶ್ರಮ ವಹಿಸಿದ್ದಾರೆ. ಯೋಜನೆ ಸಫಲಗೊಂಡು ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆಕಟ್ಟೆ ಗಳಿಗೆ ನೀರು ಪೂರೈಕೆಯಾಗಿದೆ. ಸುತ್ತಲ 20ಕ್ಕೂ ಹೆಚ್ಚು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಏರಿಕೆ ಯಿಂದಾಗಿ ಸಾವಿರಾರು ಕೊಳವೆ ಬಾವಿಗಳು ಮರುಪೂರಣಗೊಂಡು ರೈತ ಸಮುದಾಯಕ್ಕೆ ಖುಷಿ ನೆಮ್ಮದಿ ದೊರೆತಿದೆ. ಇದರಿಂದ ಹರ್ಷ ಗೊಂಡ ಊರಿನ ಜನ ಮಾ.9ರಂದು ಹುಟ್ಟೂರು ಸಂತೇಶಿವರದಲ್ಲಿ ಭೈರಪ್ಪನವರನ್ನು ಗೌರವಿಸಿ ದ್ದರು. ಈ ಹಿನ್ನೆಲೆಯಲ್ಲಿ ಭೈರಪ್ಪ ಅವರನ್ನು ವಿಶ್ವವಾಣಿ ಸಂದರ್ಶಿಸಿತ್ತು. ಸಂದರ್ಶನದ ಸಂಪೂರ್ಣ ವಿವರ ಇಲ್ಲಿದೆ.

- **ಭಾನುವಾರ ನಿಮ್ಮ ಹುಟ್ಟೂರಿನವರು ನಿಮಗೊಂದು ಕೃತಜ್ಞತಾ ಸಮರ್ಪಣೆ ಹಾಗೂ ಅಭಿನಂದನಾ ಸಮಾರಂಭ ಇಟ್ಟುಕೊಂಡಿದ್ದಾರೆ. ಹುಟ್ಟೂರಿನ ಕುರಿತ ನಿಮ್ಮ ಗಾಢವಾದ ನೆನಪುಗಳನ್ನು ನಿಮ್ಮ ಆತ್ಮಕತೆ 'ಭಿತ್ತಿ'ಯಲ್ಲೂ ಕಟ್ಟಿಕೊಟ್ಟಿದ್ದೀರಿ. ಹಿಂದಿರುಗಿ ನೋಡಿದರೆ ಏನನಿಸುತ್ತದೆ?**

ಭೈರಪ್ಪ: ಹುಟ್ಟೂರು ಅಂದರೆ ಎಲ್ಲರಿಗೂ ಪ್ರೀತಿಯೇ. ಆದರೆ ನನಗೆ ಸಂತೇಶಿವರದ ಬದುಕು ಸುಖಕರವಾಗೇನೂ ಇರಲಿಲ್ಲ. ಅದು ಸಂಕಟವಾಗಿಯೇ ಇತ್ತು. ಕಾರಣ ಮನೆಯಲ್ಲಿದ್ದ ಬಡತ, ಎಷ್ಟೋ ದಿವಸ ಒಂದಿಷ್ಟು ಊಟ ಮಾಡುವುದಕ್ಕೆ ರಾಗಿ ಕೂಡ ಇರುತ್ತಿರಲಿಲ್ಲ. ಅದಕ್ಕೆ ಕಾರಣ ನನ್ನ ಅಜ್ಜಿ ಮತ್ತು ತಂದೆ. ಚಿಕ್ಕಂದಿನಲ್ಲಿ ನಾನು ಸಾಹಸಿಯಾಗಿದ್ದೆ. ಮುಖ್ಯವಾಗಿ ಈಜು. ನನ್ನಮ್ಮನಿಗೆ ಅದರ ಬಗ್ಗೆ ಹೆದರಿಕೆ ಇತ್ತು. ಈಜಕೂಡದು ಎನ್ನುತ್ತಿದ್ದರು. ಆದರೆ ನಾನು ಕೇಳುತ್ತಿರಲಿಲ್ಲ. ಆಮೇಲೆ ನಾಟಕಗಳು ಆಗ ಬಹಳ. ಗುಬ್ಬಿ ವೀರಣ್ಣನವರ ಕಂಪನಿಯ ಪ್ರದರ್ಶನಗಳು ಆಗುತ್ತಿದ್ದವು. ನಾಟಕದ ಹಾಡುಗಳು ಬಾಯಿಪಾಠ ಬರುತ್ತಿದ್ದವು. ಮನೆಯಲ್ಲಿ ತಾಯಿಗೆ ಹೇಳದೆ ನಾಟಕ ಕಂಪನಿ ಹಿಂದೆ ಹೊರಟುಬಿಡುತ್ತಿದ್ದೆ. ಒಮ್ಮೆ ಹೀಗೆ ಬೇರೆ ಹಳ್ಳಿಗೆ ಹೋಗಿ ರಾತ್ರಿಯಿಡೀ ಅಲ್ಲಿದ್ದು ಮರುದಿನ ಮಧ್ಯಾಹ್ನ ಮನೆಗೆ ಬಂದೆ. ಅಷ್ಟರಲ್ಲಾಗಲೇ ಮನೆಯಲ್ಲಿ ತಾಯಿ ಭಯದಿಂದ ಊರೆಲ್ಲಾ ನನ್ನನ್ನು ಹುಡುಕಿಸಿ, ಕೆರೆಯಲ್ಲೂ ಹುಡುಕಿಸಿದ್ದರು.

- **ನಿಮ್ಮ ಮಾವನ ಜತೆಗೆ ನೀವಿದ್ದ ದಿನಗಳು ಇನ್ನಷ್ಟು ಯಾತನಾದಾಯಕವಾಗಿದ್ದವು?**

ಭೈರಪ್ಪ: ನಮ್ಮ ತಂದೆ ಲಿಂಗಣ್ಣಯ್ಯ ಅಂತ. ನಮ್ಮ ಕುಟುಂಬಕ್ಕೆ ಶಾನುಭೋಗಿಕೆ ಇತ್ತು. ಆದರೆ ನಮ್ಮ ತಂದೆಯ ಬೇಜವಾಬ್ದಾರಿಯಿಂದಾಗಿ ಅದನ್ನೆಲ್ಲಾ ಕಳೆದುಕೊಂಡಿದ್ದರು. ನನ್ನನ್ನು ನನ್ನ ತಾಯಿ ಅವಳ ಅಣ್ಣನ ಹತ್ತಿರ ಕಳಿಸಿದರು. ಮಾವ ಗುಡ್ಡಪ್ಪ ಅಂತ, ಒಂದು ದೇವಸ್ಥಾನದಲ್ಲಿ ಪೂಜೆ, ಶಾಸ್ತ್ರ ಹೇಳೋದು ಎಲ್ಲ ಮಾಡುತ್ತಿದ್ದ. ಒಂದು ಪಲ್ಲ ರಾಗಿ, ಹುರುಳಿಕಾಳು, ಹರಳೆಣ್ಣೆ ಹೊರಿಸಿ ತಾಯಿ ನನ್ನನ್ನು ಅಲ್ಲಿಗೆ ಕಳಿಸಿದರು. ಎರಡು ವರ್ಷ ಇಟ್ಟುಕೊಂಡು ಲೋಯರ್ ಸೆಕೆಂಡರಿ ಓದಿಸು ಅಂತ ಹೇಳಿದರು. ತಾಯಿ ಇರುವಾಗ ಬಹಳ ಪ್ರೀತಿಯಿಂದ ನೋಡಿಕೊಂಡ. ಮರುದಿನ ಮುಂಜಾನೆಯಿಂದಲೇ ಆತನ ಶಿಕ್ಷೆ ಶುರುವಾಯಿತು. ಆತ ನನ್ನ ಜುಟ್ಟು ಬಗ್ಗಿಸಿ ಹೊಡೆಯುತ್ತಿದ್ದ. ಇನ್ನೂ ಕತ್ತಲಿರುವಾಗಲೇ ಎದ್ದು ದನದ ಕೊಟ್ಟಿಗೆ ಕೆಲಸ ಮಾಡುತ್ತಿದ್ದೆ. ಇಷ್ಟೆಲ್ಲ ಮಾಡಿದರೂ ಮಾವನಿಂದ ಹೊಡೆತ ಅಂದ್ರೆ ಹೊಡೆತ. ಸುತ್ತಲಿನ ಮನೆಗಳಲ್ಲಿ ಧಾನ್ಯ ಕದಿಯುತ್ತಿದ್ದ. ನನಗೂ ಕದಿಯಲು ಪ್ರೇರೇಪಿಸುತ್ತಿದ್ದ. ನಾನು ಕದಿಯುತ್ತಿರಲಿಲ್ಲ. ಹೊಡೆಯುತ್ತಿದ್ದ.

- **ಭಾನುವಾರ ನಿಮ್ಮ ಹುಟ್ಟೂರಿನವರು ಪ್ಲೇಗ್‌ನ ದಾರುಣತೆ ನಿಮ್ಮ ಜೀವನದ ಘಟನೆಗಳಲ್ಲಿ ಹಾಸುಹೊಕ್ಕಾಗಿದೆ...**

ಭೈರಪ್ಪ: ಆಗೆಲ್ಲ ಪ್ಲೇಗ್ ಸಾಕಷ್ಟು ಇತ್ತು. ಒಂದ್ಸಲ ನನ್ನ ಅಕ್ಕ, ಅಣ್ಣ, ನಾನು ಮೂವರಿಗೂ ಪ್ಲೇಗ್ ಬಂತು. ಒಂದೇ ದಿನ ಅಣ್ಣ ಮತ್ತು ಅಕ್ಕ ಇಬ್ಬರೂ ಸತ್ತುಹೋದರು. ನನಗೆ ಜೋರು ಕಾಯಿಲೆ. ನನ್ನಮ್ಮ ನನ್ನನ್ನು ಎತ್ತಿಕೊಂಡು ಹೋಗಿ ರಂಗಮ್ಮ ಎಂಬವರಿದ್ದರು, ಅವರ ಮಡಿಲಿನಲ್ಲಿ ಹಾಕಿ, ಈ ಮಗು ನನ್ನದಲ್ಲ, ನಿನ್ನ ಅದೃಷ್ಟ ಚೆನ್ನಾಗಿದ್ದರೆ ಬದುಕಿಕೊಳ್ಳಲಿ ಎಂದು ಅವರ ಮಡಿಲಿಗೆ ಹಾಕಿಬಿಟ್ಟರು. ನಾನು ಹೇಗೋ ಬದುಕಿದೆ. ಆಮೇಲೆ ನಾನು ಮಾವನ ಜತೆಗಿದ್ದಾಗ, ಪ್ಲೇಗ್‌ನಿಂದ ತಾಯಿ ತೀರಿಹೋಗಿಬಿಟ್ಟರು. ಅಪ್ಪ ಯಾವ ಜವಾಬ್ದಾರಿಯನ್ನೂ ವಹಿಸಿಕೊಳ್ಳುತ್ತಿರಲಿಲ್ಲ. ನಾನೇ ಊರಿಗೆ ಹೋಗಿ ತಾಯಿಯ ಅಂತ್ಯಕ್ರಿಯೆ ಮುಗಿಸಿ ಬಂದೆ. ಅದರ ಮರುದಿನವೂ ಬೆಳಗ್ಗೆ ಬೇಗ ಎದ್ದು ದದು ಸಗಣಿ ಬಾಚಲಿಲ್ಲ ಎಂದು ಮಾವ ಹೊಡೆದ. ನನ್ನ ತಮ್ಮ ಪ್ಲೇಗ್‌ನಿಂದ ತೀರಿಕೊಂಡಾಗ ನನಗೆ ಹದಿನಾರು ವರ್ಷ. ಅಂತ್ಯಸಂಸ್ಕಾರಕ್ಕೆ ಯಾರೂ ಬರಲಿಲ್ಲ. ಯಾಕೆಂದರೆ ಕುಟುಂಬದ ಬಡತನ, ದಾರಿದ್ರ್ಯ, ಅಪ್ಪನ ಬೇಜವಾಬ್ದಾರಿತನ, ಮೈತುಂಬ ಮಾಡಿಕೊಂಡ ಸಾಲ. ಆರು ವರ್ಷದ ಮಗುವಿನ ಹೆಣ ಹೆಗಲ ಮೇಲೆ ಹಾಕಿಕೊಂಡು ಹೋಗಿ ನಾನೇ ಸುಟ್ಟುಹಾಕಿದೆ.

- **ಹುಟ್ಟಿ ಬೆಳೆದ ಊರಿನಲ್ಲಿ ಕೃತಜ್ಞತಾ ಸಮರ್ಪಣೆ ನಡೆಯುವ ಹೊತ್ತಿನಲ್ಲಿ ನಿಮ್ಮಲ್ಲಿ ಹುಟ್ಟಿಕೊಳ್ಳುತ್ತಿರುವ ಭಾವನೆಗಳೇನು?**

ಭೈರಪ್ಪ: ರಾಮಾಯಣದಲ್ಲಿ ಒಂದು ಪ್ರಸಂಗ ಇದೆ. ರಾವಣನ್ನು ಕೊಂದ ಬಳಿಕ, ಲಂಕೆ ಚೆನ್ನಾಗಿದೆ, ಇಲ್ಲೇ ಇರೋಣ ಎಂದು ಲಕ್ಷ್ಮಣ ಹೇಳುವಾಗ ರಾಮ ಹೇಳುತ್ತಾನೆ- ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ- ನನ್ನ ಜನ್ಮಭೂಮಿ ಅಯೋಧ್ಯೆಯೇ ನನಗೆ ಸ್ವರ್ಗಕ್ಕಿಂತ ಮಿಗಿಲು ಅಂತ. ಇಂಥ ಜನ್ಮಭೂಮಿಗಾಗಿ ಯಾವ ರೀತಿ ಸಹಾಯ ಮಾಡಬೇಕು ಅಂತ ಯೋಚನೆ ಮಾಡಿದೆ. ಅಲ್ಲೊಂದು ಶಾಲೆಯಿದೆ. ಅಲ್ಲಿ ಕಲಿಯುತ್ತಿರುವವರು ಸುತ್ತಮುತ್ತಲಿನ ಹಳ್ಳಿಯ ಮಕ್ಕಳು. ಸಂತೇಶಿವರದ ಲೈಬ್ರರಿಗೆ ಪುಸ್ತಕಗಳನ್ನು ಕೊಟ್ಟು ಶಾಲೆಯ ಮಕ್ಕಳಿಗೆ ಓದಿಸಲು ಮುಂದಾದೆವು. ಅದಕ್ಕಿಂತ ಮುಖ್ಯವಾದ್ದು ಅಲ್ಲಿನ ಕೆರೆಯ ಹೂಳು ತೆಗೆಸಿ ಏತ ನೀರಾವರಿ ನೀರು ಬರುವಂತೆ ಶ್ರಮವಹಿಸಿದೆವು. ನಲುವತ್ತು ವರ್ಷಗಳಿಂದ ಅದರ ಹೂಳು ತೆಗೆದೇ ಇರಲಿಲ್ಲ. ಅದಕ್ಕೆ ತುಂಬಾ ಪ್ರಯತ್ನ ಮಾಡಬೇಕಾಯಿತು. ಹಲವಾರು ವರ್ಷ ರಾಜಕಾರಣಿಗಳ ಹಿಂದೆ ಬೀಳಬೇಕಾಯಿತು. ಈ ಪ್ರಯತ್ನದಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್ ನನಗೆ ತುಂಬಾ ಸಹಾಯ ಮಾಡಿದರು. ಮೊದಲು ಆಗ ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪವ ರಲ್ಲಿಗೆ ನನ್ನನ್ನು ಕರೆದೊಯ್ದು, ಊರಿನ ಕೆರೆ ತುಂಬಿಸುವ ತೆಗೆಸುವ ಕುರಿತು ಮಾತನಾಡಿ ದರು. ಅವರು ಆ ಕಾರ್ಯಕ್ಕೆ ಸರಕಾರದ ವತಿಯಿಂದ ಚಾಲನೆ ನೀಡಿದರು. ಆದರೆ ಅಷ್ಟರಲ್ಲಿ ಕೊರೊನಾ ಕಾಯಿಲೆಯ ಪರಿಣಾಮ ಅದು ನಿಂತು ಹೋಯಿತು. ನಂತರ ಬಸವರಾಜ ಬೊಮ್ಮಾಯಿ ಅವರು ಬಂದರು. ಅವರ ಬಳಿಗೂ ಭಟ್ಟರು ನನ್ನನ್ನು ಕರೆದೊಯ್ದರು. ಅವರು ನನ್ನ ಕಾದಂಬರಿಗಳನ್ನು ಓದಿದ್ದಾರೆ. ನನ್ನನ್ನು ನೋಡಿ ಬೊಮ್ಮಾಯಿಯವರು ಆತ್ಮೀಯತೆಯಿಂದ ಮಾತನಾಡಿಸಿದರು. ಅವರ ಅವಧಿಯಲ್ಲಿ ಕೆರೆ ಹೂಳು ತೆಗೆಸಿ ನೀರು ತರಿಸುವ ಕಾರ್ಯ ಪೂರ್ತಿ ಮಾಡಲಾಯಿತು. ಅವರ ಲ್ಲದೇ ಇನ್ನೂ ಎಷ್ಟೋ ಮಂದಿ ಇದರಲ್ಲಿ ಸಹಾಯ ಮಾಡಿದ್ದಾರೆ.

- ಮುಂದಿನ ಯೋಜನೆಗಳೇನು?

ಭೈರಪ್ಪ: ಊರಿನಲ್ಲಿ ನಡೆಯುವ ಕಾರ್ಯಕ್ರಮ ಚೆನ್ನಾಗಿ ಆಗಲಿ ಎಂಬುದು ನನ್ನ ಆಸೆ. ನನ್ನಲ್ಲಿ ಊರಿಗಾಗಿ ಇನ್ನೂ ಏನೇನೋ ಯೋಚನೆಗಳಿವೆ. ನಾನು ಬಹಳ ಕಷ್ಟಪಟ್ಟು, ಅನ್ನ ಬಟ್ಟೆ ಇಲ್ಲದೆ ಹೇಗೋ ಮೇಲೆ ಬಂದವನು. ಈಗ ಆ ಥರದ ಅನುಭವಗಳು ಬೇರೆ ಯಾರಿಗೂ ಆಗದಿರಲಿ ಅಂತ ಇದೆ. ಅಂಥವರಿಗೆ ಸಹಾಯ ಮಾಡಬೇಕು ಎಂದಿದೆ. ಪಿಯುಸಿಯಲ್ಲಿ ಒಳ್ಳೇ ಅಂಕ ಬಂದ ಬಡ ಮಕ್ಕಳಿಗೆ ಎಂಜಿನಿಯರಿಂಗ್ ಓದಲು ದುಡ್ಡಿಲ್ಲದಿದ್ದರೆ ಅಂಥವರಿಗೆ ನೆರವಾಗ ಬೇಕು. ಎಲ್ಲ ಜಾತಿಯಲ್ಲೂ ಅಂಥವರಿದ್ದಾರೆ. ಅಂಥವರನ್ನು ಹುಡುಕಿ ಪ್ರತಿವರ್ಷವೂ ಸ್ಕಾಲರ್‌ಶಿಪ್ ಕೊಡಬೇಕಿದೆ. ಇದಕ್ಕಾಗಿ ಒಂದು ಟ್ರಸ್ಟ್ ಮಾಡಿಕೊಂಡು, ಅದಕ್ಕೆ ನಾನೇ ಅಧ್ಯಕ್ಷನಾಗಿ ಮುನ್ನಡೆಸಬೇಕು ಎಂಬ ಆಸೆಯಿದೆ. ನಾನು ಬದುಕಿರುವವರೆಗೆ ನನ್ನ ಪುಸ್ತಕಗಳ ರಾಯಲ್ಟಿ ಬರುತ್ತೆ, ಅದನ್ನು ಮಕ್ಕಳ ವಿದ್ಯೆಗಾಗಿಯೇ ಖರ್ಚು ಮಾಡಬೇಕು ಅನಿಸಿದೆ. ನನಗೆ ಹಣದ ಮೇಲೆ ಆಸೆ ಇಲ್ಲ. ಇರುವುದನ್ನು ದಾನ ಮಾಡಿ ಹೊರಟುಬಿಡಬೇಕು. ಪಾಪ- ಪುಣ್ಯ ಇಂಥದರಲ್ಲೆಲ್ಲ ನನಗೆ ನಂಬಿಕೆಯಿಲ್ಲ.



1931-2025

ಸರಸ್ವತಿ ಪುತ್ರನ ಪರ್ವಾಂತ್ಯ

ಹೋಗಿ ಬರುವಿರಾ ಸರ್? ಕೊನೆಯ ನಮಸ್ಕಾರ..

ಬಿ.ಕೆ.ಮೀನಾಕ್ಷಿ, ಮೈಸೂರು

ಭೈರಪ್ಪ ಇನ್ನಿಲ್ಲ....! ಓ ದೇವರೇ....ಈ ಪದಗಳನ್ನು ಅರಗಿಸಿಕೊಳ್ಳಲೇ ಆಗುತ್ತಿಲ್ಲ ಸರ್!

ನೀವು ನಿಜವಾಗಲೂ ನಮ್ಮನ್ನೆಲ್ಲ ಬಿಟ್ಟು ಹೊರಟು ಹೋದಿರಾ? ಇಲ್ಲ ಸರ್, ನೀವು ಖಂಡಿತ ಹೋಗಿಲ್ಲ, ಇಲ್ಲೇ ಇದ್ದೀರಿ. ಆಗ ನೀವು ಅರ್ಪಣೆ ಮಾಡುವಾಗ ಪ್ರಭುಶಂಕರರಿಗೆ ಹೇಳಿದ್ದಿರಿ, 'ಸರದಿ ಮುರಿದಿರಿ ಏಕೆ? ಅಂತ. ಈಗ ನೀವೇನು ಮಾಡಿದಿರಿ ಸರ್? ಛೇ! ನಿಮ್ಮನ್ನು ಹೀಗೆ ಹಚ್ಚಿಕೊಳ್ಳಬಾರದಿತ್ತು. ನಿಮ್ಮ ಕಾದಂಬರಿಗಳ ಮೇಲೆ ಇಷ್ಟೊಂದು ಮೋಹಗೊಳ್ಳಬಾರದಿತ್ತು. ಈಗ ನೋಡಿ, ನಮ್ಮನ್ನೆಲ್ಲ ಅದೆಂತಹ ಸಂಕಟಕ್ಕೆ ತಳ್ಳಿ ನಡೆದುಬಿಟ್ಟಿರಿ ನೀವು! ಈಗೊಂದು ಶೂನ್ಯ ಸೃಷ್ಟಿಯಾಗಿಹೋಯಿತು. ಅದನ್ನು ತುಂಬುವವರು ಯಾರು ಸರ್ ಈಗ?

ಹುಟ್ಟಿದ ಮೇಲೆ ಸಾವು ಸಹಜವೇ ಅಂತ ಸಮಾಧಾನ ಮಾಡಿಕೊಂಡರೂ ಆಗುತ್ತಿಲ್ಲವಲ್ಲ ಸರ್? ಒಂದು ನಿಶ್ಚಲ ಸ್ಥಿತಿಯಲ್ಲಿ ನಿಮ್ಮ ಇಲ್ಲವಾಗುವಿಕೆಯನ್ನು ಸ್ವೀಕರಿಸೋಣವೆಂದರೂ ಆಗುತ್ತಿಲ್ಲ. ನಿಮಗೊಂದು ಮಾತು ಹೇಳಬೇಕು. ನೀವು ಯಾರು ಏನು ಎಂದು ತಿಳಿಯದ ವಯಸ್ಸಿನಲ್ಲಿ, ನಾನೇ ಚಿಕ್ಕ ಹುಡುಗಿಯಾಗಿದ್ದಾಗ ಗೃಹಭಂಗ ಓದಿದೆ. ಗೃಹಭಂಗದ ಮುಖಪುಟವೂ ಇರಲಿಲ್ಲ ನಂಜಮ್ಮನ ಸ್ಥಿತಿಗೆ ಮುಸುಕಿನೊಳಗೇ ಅತ್ತೂ ಅತ್ತು ಗೋಳಾಡಿದ್ದೆ. ಆ ಕಾದಂಬರಿಯಲ್ಲಿ ಅವರೆಲ್ಲರೂ ಶೃಂಗೇರಿಗೆ ನಡೆದು ಹೋಗುವ ಚಿತ್ರಣ ಕಣ್ಣಿಗೆ ಕಟ್ಟಿತ್ತು. ಇಲ್ಲಿ ಒಂದು ಮಾತು ಹೇಳಲೇ ಬೇಕು. ಗುರುಪ್ರಸಾದ್ ಎಂಬ ನಮ್ಮ ಕುಟುಂಬ ಮಿತ್ರರೊಬ್ಬರು ಭಿತ್ತಿ ಓದಿ ಅಂದರು. 'ನಾನು ಓದಲ್ಲಪ್ಪ, ಅವರು ಹೆಂಗಸರನ್ನು ಬೈದು ಬರೀತಾರಂತೆ ಹಾಗೇ ಹೀಗೇ ಎಂದು ಹೇಳಿದೆ. 'ಅಯ್ಯೋ, ನೀವು ಓದದಿದ್ದರೆ ಅವರಿಗೇನೂ ಲಾಸ್ ಇಲ್ಲಾ. ನಿಮಗೆ ಲಾಸು ಅಷ್ಟೆ. ಎಂದ ಮೇಲೆ ಭಿತ್ತಿ ತಂದೆ. ಆನಂತರ ನಾನು ನಿಮ್ಮ ಕಾದಂಬರಿಗಳನ್ನು ಓದತೊಡಗಿದೆ. ಓದುತ್ತಾ ಹೋದಂತೆ ಅಲ್ಲೊಂದು ಹೊಸ ಲೋಕವೇ ಸೃಷ್ಟಿಯಾಗಿಬಿಟ್ಟಿತು. ನಾನು ಮತ್ತು ನಿಮ್ಮ ಕಾದಂಬರಿಗಳು.

ಎಡೆಬಿಡದಂತೆ ಓದಿದೆ ಸರ್. ಅದರಲ್ಲಿ ಓದದಿದ್ದುದು ಒಂದೇ 'ಕವಲು. ಅದೂ ನನ್ನ ಕಣ್ಣುಗಳ ಸಮಸ್ಯೆಯಿದ್ದುದರಿಂದ. 'ದೂರ ಸರಿದರು ಓದಿಯೇ ಮೈಸೂರು ನೋಡಲು ಮತ್ತು ವಾಸಿಸಲು ಆರಿಸಿಕೊಂಡೆವು ಸರ್. ಅಂಚು ಓದಿದಾಗಂತೂ.....ಬಿಡಿ ಹೇಳುವುದೇ ಬೇಡ! ಸಾಕ್ಷಿ! ಅಬ್ಬಾ ದೇವರೇ! ಹೀಗೊಂದು ಶಿಕ್ಷೆ ಕೊಡಲು ಸಾಧ್ಯವೇ? ದಾಟು, ತಬ್ಬಲಿಯು ನೀನಾದೆ, ನಾಯಿ ನೆರಳು, ಆವರಣ, ಜಲಪಾತ, ಪರ್ವ, ನೆಲೆ, ಉತ್ತರಕಾಂಡ, ಧರ್ಮಶ್ರೀ, ಸಾರ್ಥ, ಭಿತ್ತಿ, ಯಾನ, ಮಂದ್ರ, ಆವರಣ, ನಿರಾಕರಣ..... ಸರ್, ಏನು ಹೇಳಲಿ ಸರ್? ಇಲ್ಲ ಸರ್, ನೀವಿಲ್ಲ ಅನ್ನುವುದನ್ನು ನಾನು ಖಂಡಿತ ಅರಗಿಸಿಕೊಳ್ಳಲಾರೆ ಸರ್. ಯಾನ ಓದಿದಾಗಂತೂ ನೀವೊಬ್ಬ ವಿಸ್ಮಯಕಾರಿ ವ್ಯಕ್ತಿ ಅನ್ನಿಸಿದ್ದು ಸುಳ್ಳಲ್ಲ.



ಭಿತ್ತಿ ಓದಿದ ಮೇಲೆ ನಿಮ್ಮ ತಂಗಿ ಲಲಿತಮ್ಮ ಚಿಕ್ಕಮಗಳೂರಿನಲ್ಲೇ ಇದ್ದಾರೆ ಅಂತ ಅವರನ್ನು ಮಾತನಾಡಿಸಲು ಹೋಗಿದ್ದೆ. ಆಗ ಅವರ ಮಗ ಅರವಿಂದ ಪರಿಚಯವಾಗಿ ನಿಮ್ಮನ್ನು ಭೇಟಿ ಮಾಡಿಸಿದ್ದು ನನ್ನ ಜೀವನದ ಪರಮಾನಂದದ ಸಮಯ ಸರ್. ನಾನೊಬ್ಬ ಯಕಃಶ್ಚಿತ್ ಸಾಮಾನ್ಯ ಮಹಿಳೆ ಎಂಬುದೂ ನಿಮ್ಮ ಮುಂದೆ ನಗಣ್ಯವಾಗಿ, ಎಷ್ಟೊಂದು ಆಪ್ತವಾಗಿ ಮಾತಾಡಿದಿರಿ! ಕೇಳಿದ್ದಕ್ಕೆಲ್ಲ ಎಷ್ಟೊಂದು ಸಾವಧಾನವಾಗಿ ಉತ್ತರಿಸಿದಿರಿ! ಸಲಹೆ ಕೊಟ್ಟಿರಿ, ಲೋಕಾಭಿರಾಮವಾಗೂ ಮಾತಾಡಿದಿರಿ! ನೀವಾಗ ಚಿಕ್ಕಮಗಳೂರಿಗೆ ವಿಶ್ರಾಂತಿಗಾಗಿ ಬಂದಿದ್ದಿರಿ, ಐ.ಬಿ.ಯಲ್ಲಿ ಉಳಿದಿದ್ದಿರಿ. ಆ ನಿಮ್ಮ ವಿರಾಮದ ಸಮಯದಲ್ಲೂ ನನಗಾಗಿ ಸಮಯ ನೀಡಿದಿರಿ. ನಿಮ್ಮ ಜೊತೆ ಮಾತನಾಡಿದ್ದು, ನಿಮ್ಮ ಮುಂದೆ ಮುದುಡಿ ಗುಬ್ಬಿಯಂತೆ ಕುಳಿತದ್ದು ಇನ್ನೂ ಹಸಿರಾಗಿಯೇ ಇದೆ. ನೀವು ಎಲ್ಲರಿಗೂ ಖುಷಿ ಕೊಡುವ ಮನುಷ್ಯರು ಎಂದು ನಿಮ್ಮ ಒಂದೇ ಒಂದು ಸಣ್ಣ ನಡೆಯಲ್ಲಿ ಅರ್ಥ ಮಾಡಿಕೊಂಡೆ. ನಾನು ನಿಮಗಾಗಿ ತೆಗೆದುಕೊಂಡು ಬಂದಿದ್ದ ಹಣ್ಣುಗಳನ್ನು ತೊಳೆಸಿಕೊಂಡು ನನ್ನೆದುರಿಗೇ ತಿಂದಿರಲ್ಲಾ..... ಏನೆಂದರೂ ದೊಡ್ಡ ಮನುಷ್ಯರು ಸರ್ ನೀವು! ನಿಮ್ಮ ಜೊತೆಗಿನ ಮಾತುಕತೆಯನ್ನು ಒಂದು ಲೇಖನ ಮಾಡಿ, ಜನಮಿತ್ರದಲ್ಲಿ ಪ್ರಕಟಣೆಗೆ ಕೊಟ್ಟು ಅದನ್ನು ಇನ್ನೂ ಜತನವಾಗಿಟ್ಟುಕೊಂಡಿರುವೆ.

ವಯೋಸಹಜ ಖಾಯಿಲೆಗಳು ನಿಮಗೇನೂ ಇರಲಿಲ್ಲವೇನೋ ಸರ್. ಯಾಕೆಂದರೆ ನಿಮಗೆ ಸಂತೇಶಿವರದಲ್ಲಿ 'ಭಗೀರಥ ಬಿರುದು ಕೊಟ್ಟು ಸುತ್ತೂ ಹತ್ತಳ್ಳಿಯವರು ಸನ್ಮಾನಿಸಿದರಲ್ಲ, ಆಗ ನೀವು ಮರೆವಿಗೆ ಜಾರುತ್ತಿದ್ದಿರಿ. ಗ್ರಾಮದ ತುಂಬ ಓಡಾಡಿದಿರಿ, ಗ್ರಾಮಸ್ಥರನ್ನೆಲ್ಲ ಮಾತಾಡಿಸಿದರಿ, ಸಂಗ್ರಹಾಲಯದಲ್ಲಿ ಎಲ್ಲವನ್ನೂ ವೀಕ್ಷಿಸಿದಿರಿ. ಸ್ವಲ್ಪ ಮರೆವಿದ್ದರೂ ಅದೆಂತಹ ಮನಮುಟ್ಟುವ ಭಾಷಣ ಮಾಡಿದಿರಿ. ಅಲ್ಲಿ ನಿಮ್ಮ ಹಿಂದಿಂದೆಯೇ ಓಡಾಡಿದ್ದು, ನಿಮ್ಮನ್ನು ಒಂದೇ ಸಮನೆ ಹತ್ತಿರದಿಂದ ನೋಡಿದ್ದು, ಎಲ್ಲವೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ನಿಮ್ಮ ಕಾದಂಬರಿಗಳ ಬಗ್ಗೆ ಚರ್ಚೆ ನಡೆಯುವಾಗ, ನೀವು ಮನಸ್ಸಿನಲ್ಲಿ ಏನು ಯೋಚನೆ ಮಾಡುತ್ತಿದ್ದೀರಿ ಅಂತ ನಾನು ಹೀಗೆ ಕಲ್ಪನೆ ಮಾಡಿಕೊಳ್ಳುತ್ತಿದ್ದೆ, 'ನಾನು ಬರೆದಾಯ್ತು. ಏನು ಹೇಳಬೇಕೋ ಹೇಳಿಯಾಯಿತು. ಅದೇನು ಚರ್ಚೆ ಮಾಡ್ತೀರೋ ಮಾಡಿಕೊಳ್ಳಿ ಅಂತ ಚೂಪು ನೋಟದಿಂದ ಎಲ್ಲರನ್ನೂ ಗಮನಿಸುತ್ತಾ ಕುಳಿತುಬಿಡುತ್ತಿದ್ದಿರಿ. ದೇವರೇ ಅದೆಷ್ಟು ಚರ್ಚೆಗಳು! ಅದೇನು ಮಾತುಗಳು! ಅದೆಷ್ಟು ಆಕ್ಷೇಪಗಳು! ಇಂತಹವುಗಳೆಲ್ಲವೂ ಕಾದಂಬರಿಗಳನ್ನೂ, ನಿಮ್ಮನ್ನೂ ಸದಾ ಜನರ ನಡುವಿನಲ್ಲಿಟ್ಟವು.

ನಿಮ್ಮ ಎಲ್ಲ ಕಾದಂಬರಿಗಳೂ ನನಗಿಷ್ಟ. ನಿರಾಕರಣವಂತೂ ನನಗೆ ಬಹಳ ಇಷ್ಟವಾಗಿತ್ತು. ನನಗೆ ಆ ಕಾದಂಬರಿಯ ಪ್ರತಿಯೊಂದು ಸಾಲೂ ಮತ್ತೆ ಮತ್ತೆ ಕಾಡಿದ್ದವು. ನಿಮ್ಮನ್ನು ಓದಿದ ನಂತರ ಯಾವುದನ್ನು ಓದಿದರೂ ಅದು ಸಪ್ಪೆಯೆನಿಸಿಬಿಡುತ್ತಿತ್ತು. ನೀವು ಸೃಷ್ಟಿಸಿದ ಪಾತ್ರಗಳು, ಕಟ್ಟಿಕೊಟ್ಟ ವ್ಯಕ್ತಿತ್ವಗಳು, ನಡೆನುಡಿಗಳೊಂದಾಗಿ ಬದುಕಿದ ನೀವು ನಮಗೆಲ್ಲ ಮಾದರಿ. ನಿರಾಕರಣದ ಬಗ್ಗೆ ಬರೆದದ್ದನ್ನು ನಿಮಗೆ ತೋರಿಸಲು ನಾನು ನಿಮ್ಮ ಮನೆಗೆ ಬಂದಾಗ, ನೀವು ಸಿಗ್ನೇಚರ್ ಹಾಕ್ಬೇಕಾ? ಎಲ್ಲಿ ಪುಸ್ತಕ? ಅಂತ ಕೇಳಿದ್ದಿರಿ. ಅಲ್ಲಿಗಾಗಲೇ ನಿಮ್ಮ ಕೇಳಿಸಿಕೊಳ್ಳುವಿಕೆ ಮತ್ತು ನೆನಪು ನಿಮ್ಮನ್ನಗಲಲು ತಯಾರಿ ನಡೆಸಿದ್ದವು. ಬೃಹತ್ತಾಗಿ ಆಯೋಜಿಸಿದ್ದ ಭೈರಪ್ಪಾಭಿನಂದನ ಸಮಾರಂಭದಲ್ಲಿ ನಿರಾಕರಣವನ್ನು ಮತ್ತೆ ಕೊಂಡುಕೊಂಡು ನಿಮ್ಮ ಬಳಿ ಸಹಿ ಹಾಕಿಸಿಕೊಂಡಿದ್ದು ನನಗೆ ಸಿಹಿನೆನಪು. ಭೈರಪ್ಪನವರಿಗೆ ತೊಂಭತ್ತಾಯಿತು ಅಂದಾಗಲೆಲ್ಲ ನಿಮಗೆ ವಯಸ್ಸೇ ಆಗಬಾರದೆಂದು ನನ್ನ ಮನಸ್ಸು ದೇವರ ಬಳಿ ಮೊರೆಯಿಡುತ್ತಿತ್ತು. ನಿಮ್ಮನ್ನು ನಾನು ಕೇವಲ ವ್ಯಕ್ತಿಯಾಗಿ ಆರಾಧಿಸಿಲ್ಲ ಸರ್, ನಮ್ಮ ದೇಶದ ಸಾಕ್ಷಿಪ್ರಜ್ಞೆ ನೀವು, ನಮ್ಮ ಅಸ್ಮಿತೆ ನೀವು, ದೇಶಭಕ್ತಿಯ ಪ್ರತೀಕ ನೀವು, ನಿಮ್ಮ ಸಾಹಿತ್ಯದ ಶಕ್ತಿ ನನ್ನಂತಹ ಲಕ್ಷಾಂತರ ಜನರನ್ನು ನಿಮ್ಮೆಡೆಗೆ ಸೆಳೆದುಕೊಂಡಿದೆ. ನೀವು ನಮ್ಮನ್ನು ಅಗಲಿಲ್ಲ, ಅಗಲುವುದೂ ಇಲ್ಲ.....ನಿಮ್ಮ ಎಲ್ಲ ಕಾದಂಬರಿಗಳೂ ನನ್ನಂತಹ ಸಾವಿರ ಸಾವಿರ ನಿಮ್ಮ ಅಭಿಮಾನಿಗಳ ಮನೆಗಳಲ್ಲಿವೆ. ಅವುಗಳಲ್ಲಿ ನೀವು ಜೀವಂತವಿದ್ದೀರಿ. ಜೀವ ಸಂಚಾರಿಯಾಗಿದ್ದೀರಿ.

ಸರದಿ ಮುರಿದಿರಿ ಏಕೆ ಎಂದಿರಲ್ಲ, ಈಗ ನಿಮ್ಮ ಸರದಿ ಬಂದಿತೆಂದು ಹೊರಟುಬಿಟ್ಟಿರಾ? ನೀವು ನಮ್ಮನ್ನು ಬಿಟ್ಟು ನಡೆದಿದ್ದು ನಷ್ಟದ ಪರಮಾವಧಿ. ನೀವಿದ್ದೀರಿ ಅನ್ನುವುದೇ ಒಂದು ಬಲವಾಗಿತ್ತು. ಆಯಿತು ಸರ್, ಹೋಗಿಬನ್ನಿ. ನಿಮ್ಮ ಅಸೀಮವಾದ ಸಾಹಿತ್ಯಸೇವೆ, ದೇಶಪ್ರೇಮ, ನಿಷ್ಠುರ ನಡವಳಿಕೆ ನಮ್ಮ ಜೊತೆಗಿರುತ್ತದೆ. ದುಃಖ ತುಂಬಿದ ಮನಸಿನಿಂದ ವಿದಾಯ ಸರ್.

ಒಂದು ತಲೆಮಾರಿನ ಓದುಗರ ಅಭಿರುಚಿ ಹೆಚ್ಚಿಸಿದ ಸಾಹಿತಿ

ಶಶಿಧರ ಹಾಲಾಡಿ

ನಾನು ಮೊದಲ ಬಾರಿ ಎಸ್.ಎಲ್.ಭೈರಪ್ಪ ಅವರನ್ನು ನೋಡಿದ್ದು ಶಿವಮೊಗ್ಗದಲ್ಲಿ, ಅದು 90ರ ದಶಕ. ಕಾರ್ಯಕ್ರಮವೊಂದಕ್ಕೆ ಬಂದಿದ್ದ ಅವರನ್ನು ನಾನು, ನನ್ನ ಮಡದಿ, ಮಕ್ಕಳು ಎಲ್ಲರೂ ಹತ್ತಿರದಿಂದ ನೋಡಿದೆವು. ಅವರ ಒಂದು ಕಾದಂಬರಿಯನ್ನು ಖರೀದಿಸಿ, ಅದರ ಮೇಲೆ ಅವರ ಹಸ್ತಾಕ್ಷರ ಪಡೆದೆವು. ಕಾದಂಬರಿಕಾರ ಭೈರಪ್ಪನವರನ್ನು ಹತ್ತಿರದಿಂದ ನೋಡುವುದು ಎಂದರೆ, ಅದೊಂದು ಸಂಭ್ರಮ! ಏಕೆಂದರೆ, ನಮ್ಮ ಕುಟುಂಬದವರು, ಭಾವಂದಿರು, ಬಂಧುಗಳು ಎಲ್ಲರೂ ಬಹು ಹಿಂದಿನಿಂದಲೂ ಭೈರಪ್ಪನವರ ಕಾದಂಬರಿಗಳನ್ನು ಓದಿಕೊಂಡು ಬಂದಿದ್ದೇವೆ. ಹೊನ್ನಾಳಿ ಸನಿಹದ ಸವಳಂಗ ಎಂಬ ಪುಟ್ಟ ಹಳ್ಳಿಯಲ್ಲಿ ಹೊಟೆಲ್ ವ್ಯವಹಾರ ನಡೆಸುತ್ತಿದ್ದ ನನ್ನ ಭಾವಂದಿರು, 1981ರ ಸಮಯದಲ್ಲೇ ಭೈರಪ್ಪನವರ ಅದುವರೆಗಿನ ಎಲ್ಲಾ ಕಾದಂಬರಿಗಳನ್ನು ಖರೀದಿಸಿ, ಓದಿ, ಆ ಹಳ್ಳಿಯಲ್ಲಿದ್ದ ತಮ್ಮ ಬಾಡಿಗೆ ಮನೆಯಲ್ಲಿಟ್ಟುಕೊಂಡು, ಬಂದವರಿಗೆಲ್ಲಾ ಅಭಿಮಾನದಿಂದ ತೋರಿಸುತ್ತಿದ್ದರು, ಮಾತ್ರವಲ್ಲ, ಓದಲು ಎರವಲು ಕೊಡುತ್ತಿದ್ದರು. ಅವರಲ್ಲಿದ್ದ ಆ ಎಲ್ಲಾ ಕಾದಂಬರಿಗಳನ್ನೂ ನಮ್ಮ ಕುಟುಂಬದವರು, ಬಂಧುಗಳು ಪಡೆದು ಓದುವ ಪರಿಪಾಠವಿತ್ತು.



ಇಲ್ಲಿ ಭೈರಪ್ಪನವರ ಮೇಲಿನ ಅಭಿಮಾನದ ಜತೆಯಲ್ಲೇ, ಹಳ್ಳಿಗಾಡಿನ ಸಾಮಾನ್ಯ ಕುಟುಂಬವೊಂದು ಓದುವ ಸಂಸ್ಕೃತಿಯನ್ನು ಬೆಳೆಸಿಕೊಂಡ ಪ್ರಕ್ರಿಯೆಯನ್ನೂ ಗಮನಿಸಬಹುದು. ಆ ಪುಟ್ಟ ಹಳ್ಳಿಯಲ್ಲಿ ಹೊಟೇಲ್ ನಡೆಸುತ್ತಿದ್ದ ನಮ್ಮ ಭಾವಂದಿರಲ್ಲಿ ಓದುವ ಅಭಿರುಚಿ ಬೆಳೆಯಬೇಕೆಂದರೆ, ಅವರ ಎಲ್ಲಾ ಕಾದಂಬರಿಗಳನ್ನು ಖರೀದಿಸಿ, ಸಂಗ್ರಹಿಸಿಕೊಂಡು ಆಗಾಗ ಓದಬೇಕೆಂಬ ಆಸೆ ಬೆಳೆಯಬೇಕೆಂದರೆ, ಅವರ ಆ ಕಾದಂಬರಿಗಳ ಸತ್ವವನ್ನು ಗಮನಿಸಬೇಕು. ಅಂದಿನ 'ಜನಪ್ರಿಯ ಸಾಹಿತ್ಯ'ಕ್ಕಿಂತ ಬಹು ಉನ್ನತ ಮಟ್ಟದ, ಆದರೆ ಬಿಡದೆ ಓದಿಸಿಕೊಂಡು ಹೋಗುವ, ಮನೋಜ್ಞ ಕಾದಂಬರಿಗಳನ್ನು ಬರೆದು, ಜನಸಾಮಾನ್ಯರನ್ನು ಓದಲು ಹಚ್ಚಿದ್ದು ಭೈರಪ್ಪನವರ ಹೆಗ್ಗಳಿಕೆ. ಕನ್ನಡ ನಾಡಿನ ಜನಸಾಮಾನ್ಯರಲ್ಲಿ ಭೈರಪ್ಪನವರ ಕಾದಂಬರಿಗಳು ಓದುವ ಅಭಿರುಚಿಯನ್ನು ಬೆಳೆಸಿದ ಪರಿಯು ಒಂದು ವಿಸ್ಮಯ. ಈ ಕುರಿತು ಇತರ ಸಾಹಿತಿಗಳು, ಚಿಂತಕರು, ಸಂಕೋಚವಿಲ್ಲದೇ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಒಂದೆರಡು ತಲೆಮಾರಿನ ಓದುಗರಿಗೆ, ಓದುವ ರುಚಿಯನ್ನು ಹತ್ತಿಸಿದವರಲ್ಲಿಲ ಭೈರಪ್ಪನವರು ಪ್ರಮುಖರು. ಈ ಕುರಿತು ತೇಜಸ್ವಿಯವರು ಹಿಂದೊಮ್ಮೆ ಬರೆದದ್ದನ್ನು ಗಮನಿಸಬಹುದು.

''ಕಾದಂಬರಿಕಾರರಾಗಿ ಖ್ಯಾತರಾಗಿರುವ ಎಸ್.ಎಲ್. ಭೈರಪ್ಪನವರು ಕನ್ನಡ ಗದ್ಯಸಾಹಿತ್ಯದ ಬೆಳವಣಿಗೆಗೆ ಗಣನೀಯ ಸೇವೆ ಸಲ್ಲಿಸಿರುವವರು. ನವ್ಯಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯವನ್ನು ಕೊಂಡು ಓದುವವರ ಸಂಖ್ಯೆಯೇ ನಶಿಸಿ ಹೋಗುತ್ತಿದ್ದಾಗ, ಭೈರಪ್ಪನವರು ಓದುಗ ಸಹೃದಯರ ಸಮುದಾಯವನ್ನು ಜೀವಂತವಾಗಿ ಇಟ್ಟವರು. ಸಾಹಿತಿಗಳಲ್ಲಿ ಬಹುಪಾಲು ಪ್ರಶಸ್ತಿ, ಸನ್ಮಾನಗಳ ಬೆನ್ನುಹತ್ತಿರುವ, ಸ್ವಂತ ಅಭಿಮಾನಿಗಳ ಕೂಟವನ್ನು ಕಟ್ಟಿಕೊಳ್ಳುತ್ತಿರುವ ಸಮಕಾಲೀನ ಸಂದರ್ಭದಲ್ಲಿ, ಸಾಹಿತ್ಯ ಅಂತಿಮವಾಗಿ ಲೇಖಕ ಮತ್ತು ಓದುಗರ ನಡುವಿನ ಸಂವಾದವಾಗಿಯೇ ಬದುಕಬೇಕಾಗುತ್ತದೆ ಎಂಬ ವಾಸ್ತವವನ್ನು ಮರೆಯದೆ ಇವತ್ತಿಗೂ ಕೃತಿರಚನೆ ಮಾಡುತ್ತ ಬಂದಿರುವ ಲೇಖಕ ಶ್ರೀಯುತ ಎಸ್.ಎಲ್. ಭೈರಪ್ಪನವರು''–ಕೆ.ಪಿ ಪೂರ್ಣಚಂದ್ರ ತೇಜಸ್ವಿ (ತೇಜಸ್ವಿ ಪತ್ರಗಳು ಕೃತಿಯಲ್ಲಿ)

ನನ್ನ ಮೇಲೆ ಪ್ರಚಂಡ ಪರಿಣಾಮ ಬೀರಿದ ಕಾದಂಬರಿಗಳಲ್ಲಿ ಭೈರಪ್ಪನವರ 'ಗೃಹಭಂಗ' ಮುಂಚೂಣಿಯಲ್ಲಿದೆ. ನಮ್ಮ ದೇಶದ 14 ಕ್ಕೂ ಅಧಿಕ ಭಾಷೆಗಳಿಗೆ ಅನುವಾದಗೊಂಡಿರುವ ಈ ಕಾದಂಬರಿಯು, ವಿಶ್ವದರ್ಜೆಯ ಕಾದಂಬರಿಯಾಗಿ ಗುರುತಿಸಿಕೊಳ್ಳುವಷ್ಟು ಸಶಕ್ತವಾಗಿದೆ, ಮನೋಜ್ಞವಾಗಿದೆ. ಭೈರಪ್ಪನವರ ಬಾಲ್ಯದ ದಟ್ಟ ಅನುಭವಗಳ ಹಂದರ ಹೊಂದಿರುವ 'ಗೃಹಭಂಗ'ದ ಕುರಿತು ಈಗಾಗಲೇ ಸಾಕಷ್ಟು ವಿಶ್ಲೇಷಣೆಗಳು ನಡೆದಿವೆ. ಆದರೆ, ಪೂರ್ಣ ಪ್ರಮಾಣದಲ್ಲಿ 'ಗೃಹಭಂಗ' ವನ್ನು ವಿಶ್ಲೇಷಿಸುವ, ಚರ್ಚಿಸುವ ಕೆಲಸಕ್ಕೆ ಇನ್ನೂ ಅವಕಾಶವಿದೆ ಎಂದೇ ನನ್ನ ಅನಿಸಿಕೆ. ನಮ್ಮ ರಾಜ್ಯದ ಬಯಲುಸೀಮೆಯ (ಚನ್ನರಾಯಪಟ್ಟಣ ತಾಲೂಕು) ಹಳ್ಳಿಯ ಸಮತೋಲಿತ ಜೀವನವು, 1920–40ರ ದಶಕದ ಅವಧಿಯಲ್ಲಿ ಹೇಗೆ ನಲುಗಿತು, ಛಿದ್ರವಾಯಿತು ಎಂಬುದರ ಚಿತ್ರಣ 'ಗೃಹಭಂಗ'ದಲ್ಲಿದೆ. ಬ್ರಿಟಿಷರು ತಮ್ಮ ಲಾಭಕ್ಕಾಗಿ ತಂದ ಬಿಗಿ ಕಾನೂನುಗಳು, ಅವರ ಆಶ್ರಯದಲ್ಲಿ ರಾಜ್ಯಭಾರ ನಡೆಸುತ್ತಿದ್ದ ಮೈಸೂರು ಸಂಸ್ಥಾನದ ಅಧಿಕಾರಶಾಹಿ ನಡೆಸುತ್ತಿದ್ದ ದಬ್ಬಾಳಿಕೆ, ಮೈಸೂರು ಪೊಲೀಸರು ಸ್ವಾತಂತ್ರ್ಯಪೂರ್ವದಲ್ಲಿ ತೋರುತ್ತಿದ್ದ ದರ್ಪ, ದುಂಡಾವರ್ತಿ – ಇವೆಲ್ಲವೂ, ಅಂದಿನ ಗ್ರಾಮೀಣ ಬದುಕಿನ ಬೆನ್ನೆಲುಬನ್ನೇ ಮುರಿದ ಚಿತ್ರಣ ಈ ಕಾದಂಬರಿಯಲ್ಲಿದೆ. ಶಾನುಭೋಗಿಕೆ ನಡೆಸುತ್ತಿದ್ದ ಕುಟುಂಬವೊಂದು ಸಂಪೂರ್ಣವಾಗಿ ಛಿದ್ರವಾಗುವ ಸನ್ನಿವೇಶವು, ಮುಂದಿನ ದಶಕಗಳಲ್ಲಿ ಕೃಷಿಕರು, ಇತರ ಸಮುದಾಯದವರು ಪ್ರಾಧಾನ್ಯ ಪಡೆಯುವುದರ ಮುನ್ ಸೂಚನೆಯಾಗಿಯೂ ರೂಪುಗೊಂಡಿದೆ ಮತ್ತು ಈ ರೀತಿಯ ಹಲವು ವಿಚಾರಗಳ ಹಿನ್ನೆಲೆಯಲ್ಲಿ ಗೃಹಭಂಗವನ್ನು ಮರುಓದಿಗೆ ಒಳಪಡಿಸುವ ಅಗತವಿದೆ.

ಗೃಹಭಂಗ, ದೂರಸರಿದರು, ಪರ್ವ, ಸಾರ್ಥ, ವಂಶವೃಕ್ಷ, ಅನ್ವೇಷಣೆ, ದಾಟು, ತಂತು ಮೊದಲಾದ ಅವರ ಕಾದಂಬರಿಗಳನ್ನು ರಚನಾ ತಂತ್ರದ ದೃಷ್ಟಿಯಿಂದಲೂ ಗುರುತಿಸಬೇಕಾದ ಅಗತ್ಯವಿದೆ. ಒಂದೊಂದು ಕಾದಂಬರಿಯಲ್ಲಿ ಒಂದೊಂದು ಬಗೆಯ ತಂತ್ರವನ್ನು ಭೈರಪ್ಪನವರು ಅಳವಡಿಸಿದ್ದು ಗಮನಕ್ಕೆ ಬರುತ್ತದೆ. ಭೈರಪ್ಪನವರು ಕನ್ನಡ ಸಾರಸ್ವತ ಲೋಕ ನೀಡಿದ ಕೆಲವೇ ವಿಶ್ವದರ್ಜೆಯ ಸಾಹಿತಿಗಳಲ್ಲಿ ಒಬ್ಬರು ಎಂಬುದನ್ನು ಗುರುತಿಸಿದಾಗ, ಅವರ ಕೊಡುಗೆಯ ಮೌಲ್ಯ ಅರಿವಾದೀತು. ಕನ್ನಡ ಕಾದಂಬರಿಲೋಕವನ್ನು ಶ್ರೀಮಂತಗೊಳಿಸಿದ, ಪ್ರಬುದ್ಧ ವಿಷಯಗಳನ್ನು ಕಾದಂಬರಿಯಲ್ಲಿ ಅಳವಡಿಸಿ, ಜನಸಾಮಾನ್ಯ ಓದುಗರನ್ನು ಬೆರಗಾಗಿಸಿದ, ಚಿಂತನೆಗೆ ದೂಡಿದ ಕಾದಂಬರಿಕಾರರಾದ ಎಸ್.ಎಲ್ ಭೈರಪ್ಪನವರಿಗೆ ಅಂತಿಮ ನಮನಗಳು..!

ಭೈರಪ್ಪರ ವ್ಯಕ್ತಿತ್ವವೇ ತನ್ನನ್ನು ತಾನು ವಿಮರ್ಶಿಸುವ ಗುಣ..

ಕನ್ನಡದ ಖ್ಯಾತಿ ಸಾಹಿತಿ, ಆದರ್ಶ ಶಿಕ್ಷಕರೂ ಆಗಿದ್ದ ದಿ. ಬೆಳಗೆರೆ ಕೃಷ್ಣಶಾಸ್ತ್ರಿಯವರು ಎಸ್.ಎಲ್.ಭೈರಪ್ಪ ಅವರ ಕುರಿತಾಗಿ ತಮ್ಮ 'ಮರೆಯಲಾದೀತೇ' ಪುಸ್ತಕದಲ್ಲಿ ಬರೆದ ಲೇಖನ.

ನಾನು ಮೈಸೂರಿನಲ್ಲಿ ಟಿ.ಸಿ.ಎಚ್. ಮಾಡುತ್ತಿದ್ದ ದಿನಗಳವು. ಸಾವಿರದ ಒಂಭೈನೂರ ಐವತ್ತೆರಡನೆಯ ಇಸವಿ ಇರಬಹುದು. ಆಗ ಚನ್ನರಾಯಪಟ್ಟಣದ ಬಾಗೂರಿನ ವಿ.ಎಲ್. ರಾಮಚಂದ್ರ

ಎಂಬುವರು ನನ್ನ ಕ್ಲಾಸ್ ಮೇಟ್ ಮತ್ತು ರೂಮ್ ಮೇಟ್ ಆಗಿದ್ದರು. ನಮ್ಮ ವಾಸ್ತವ್ಯ ನರಸಿಂಹರಾಜ ಮೊಹಲ್ಲಾದಲ್ಲಿತ್ತು.

ಒಂದು ದಿನ ರಾಮಚಂದ್ರ ಅವರು ಒಬ್ಬ ಹುಡುಗನನ್ನು ಕರೆದುಕೊಂಡು ಬಂದು, 'ಇವನ ಹೆಸರು ಭೈರಪ್ಪ, ನನ್ನ ಶಿಷ್ಯ. ಬಾಗೂರಿನಲ್ಲಿ ನನ್ನ ವಿದ್ಯಾರ್ಥಿಯಾಗಿದ್ದ' ಎಂದು ಪರಿಚಯಿಸಿದರು.

ಅವತ್ತು ಭಾನುವಾರ, ಕಾಲೇಜಿಗೆ ಹೋಗುವ ತರಾತುರಿಯೇನೂ ಇರಲಿಲ್ಲವಾದ್ದರಿಂದ ನಾವು ಲೋಕಾಭಿರಾಮವಾಗಿ ಮಾತನಾಡತೊಗಿದೆವು (ಆಗ ಭೈರಪ್ಪನವರು ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದರು). ರಾಮಚಂದ್ರ ಅವರು ಭೈರಪ್ಪನವರಿಗೆ ಪ್ರತಿ ಭಾನುವಾರ ಬಂದು ಹೋಗುವಂತೆ ತಿಳಿಸಿದರು. ಆಮೇಲೆ ನನ್ನ ಕಡೆ ತಿರುಗಿ 'ಇವನೂ ಆಗಾಗ ಸಾಹಿತ್ಯದ ಬಗೆಗೆ ಮಾತನಾಡುತ್ತಿರುತ್ತಾನೆ ಶಾಸ್ತ್ರಿಗಳೇ' ಎಂದರು. ಆ ದಿನ ಹೆಚ್ಚೇನೂ ಮಾತನಾಡಲಿಲ್ಲ. ಭೈರಪ್ಪನವರು ನಾವು ಸುತ್ತಿಟ್ಟಿದ್ದ ಹಾಸಿಗೆಯ ಮೇಲೆ ಕೂತರು. ಅವತ್ತಿನ ಪೇಪರ್ ಕೈಗೆತ್ತಿಕೊಂಡು, ಅನಕೃಗೆ ನೂರು ಕಾದಂಬರಿ ಬರೆದದ್ದಕ್ಕೆ 'ಕಾದಂಬರಿ ಸಾರ್ವಭೌಮ' ಪ್ರಶಸ್ತಿ ಘೋಷಿಸಿದ್ದ ವಿಷಯದ ಬಗೆಗೆ ಹೇಳಿದರು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲ. ಭೈರಪ್ಪನವರು ಅಲಕ್ಷ್ಯ ಧ್ವನಿಯಿಂದ ಹೇಳಿದರು, 'ಒಂದು ಅವಾರ್ಡ್ ತಗೊಳ್ಳೋಕೆ ನೂರು ಕಾದಂಬರಿ ಬರೀಬೇಕಾ?' ಎಂದು.

'ಹಾಗೆಂದರೆ ಏನು ಇದರರ್ಥ?' ಕೇಳಿದರು ರಾಮಚಂದ್ರ

'ಒಂದೋ, ಎರಡೋ, ಮೂರೋ ಬರೀಬೇಕು. ಅದರೊಳಗೆ ಬರದಿದ್ರೆ, ತೆಗೆದು ಬಿಸಾಡಿಬಿಡಬೇಕು, ಮತ್ತೆ ಹಿಡಿಯಬಾರದು' ಎಂದರು ಭೈರಪ್ಪ.

'ಏಯ್... ಏನು ಹೀಗ್ ಮಾತಾಡ್ತಿದ್ದೀಯಲ್ಲ?' ಎಂದು ಶಿಷ್ಯನ ಮೇಲೆ ಮೆಚ್ಚುಗೆಯ ಧ್ವನಿಯಲ್ಲಿ ತಲೆಯಲ್ಲಾಡಿಸಿದರು ರಾಮಚಂದ್ರ, ಆಗ ನಾನೆಂದೆ, 'ನೋಡುವವರಿಗೂ ಆ ಅಭಿರುಚಿ ದೃಷ್ಟಿ ಇರಬೇಕಲ್ಲವೇ ಸಾರ್. ನೂರು ಕಾದಂಬರಿ ಬರೆಯುವವರೆಗೂ ಯಾಕೆ ಕಾದರು? ಅದರಲ್ಲೇನಾದರೂ ವರ್ಥ್ ಇದ್ದಿದ್ದರೆ ಮೊದಲೇ ನೋಡಬಹುದಿತ್ತಲ್ಲ?' ಎಂದೆ. ಭೈರಪ್ಪನವರು ನನ್ನ ಕಡೆ ದಿಟ್ಟಿಸಿ ನೋಡಿದರು. ಮುಂದುವರೆಸಿ 'ಸಂಧ್ಯಾರಾಗ ಬರೆದಾಗಲೇ ಅನಕೃ ಅವರಿಗೆ ಅವಾರ್ಡ್ ಕೊಟ್ಟಿದ್ದರೆ ಏನಾಗುತ್ತಿತ್ತು?' ಎಂದು ಹೇಳಿದೆ.

'ಅದೂ ಸರಿ ಬಿಡಿ' ಎಂದರು ಭೈರಪ್ಪ.ಭೈರಪ್ಪನವರು ನಮ್ಮ ಊರಿಗೆ ಬಂದಾಗಲೇ ಒಂದು ವಿಷಯವನ್ನು ತುಂಬಾ ಕಡ್ಡಾಯವಾಗಿ ಹೇಳಿದ್ದರು, ಅದೇನೆಂದರೆ 'ನಾನಿಲ್ಲಿ ಸುಮ್ಮನೆ ಇದ್ದು ಹೋಗೋಕೆ ಎಂದುಕೊಂಡು ಬಂದಿದ್ದೇನಿ. ನನ್ನ ಮೈಗೆ, ಮನಸ್ಸಿಗೆ ರೆಸ್ಟ್ ಬೇಕು. ಇಲ್ಲಿ ದಯವಿಟ್ಟು ಯಾರನ್ನೂ ಕರೆಸಬೇಡಿ. ಯಾರಿಗೂ ನಾನು ಬಂದಿರುವ ವಿಷಯವನ್ನು ತಿಳಿಸಬೇಡಿ, ಸಭೆ–ಸಮಾರಂಭ ಏರ್ಪಾಡು ಮಾಡಬೇಡಿ. ನಾನು ಸುಮ್ಮನೆ ನಿಮ್ಮ ಜೊತೆಗೆ ಇದ್ದು ಹೋಗ್ತಿನಿ' ಎನ್ನುತ್ತಿದ್ದರು. ನಾನು ಯಾರಿಗೂ ಹೇಳಿರಲಿಲ್ಲ, ಕರೆಸಲೂ ಇಲ್ಲ. ನಮ್ಮ ಪಕ್ಕದ ಹಳ್ಳಿಯಲ್ಲಿ ರಾಮಯ್ಯ, ಭೀಮಯ್ಯ ಎಂಬ ಇಬ್ಬರು ರಿಟೈರ್ ಟೀಚರ್ಸ್ ಇದ್ದರು. ಭೈರಪ್ಪನವರು ಬರುತ್ತಾರೆ ಎಂದು ಅವರು ಲೆಟರ್ ಬರೆದಾಗಲೇ ಹೇಳಿಬಿಟ್ಟಿದ್ದೆ.

ಭೈರಪ್ಪನವರು ಬೆಳಗೆರೆಗೆ ಬಂದರು. ನಮ್ಮ ಶಾಲೆಯಲ್ಲಿ ಪ್ರತೀ ವರ್ಷ ಕನ್ನಡದಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಪ್ರತೀ ವರ್ಷ ನೀಡುವುದು ವಾಡಿಕೆ. ಆ ದಿನ ಹೇಗೂ ಭೈರಪ್ಪನವರು ಬಂದಿದ್ದಾರಲ್ಲ ಅವರ ಕೈಯಲ್ಲಿಯೇ ಕೊಡಿಸೋಣ ಎಂದು ಪುಟ್ಟ ಸಭೆಯನ್ನು ಏರ್ಪಡಿಸಿದೆವು. ವಿದ್ಯಾರ್ಥಿಗಳು, ಪೋಷಕರು ಅನೇಕ ಜನ ಬಂದಿದ್ದರು. ಬಹುಮಾನ ವಿತರಿಸಿ ಭೈರಪ್ಪನವರು ವಿದ್ಯಾರ್ಥಿಗಳಿಗೆ ಒಂದೆರಡು ಹಿತವಚನಗಳನ್ನು ಹೇಳಿದರು: 'ಹಳ್ಳಿಯವರಿಗೆ ಇಂಗ್ಲಿಷ್ ಬರಲ್ಲ, ಪಟ್ಟಣದವರಲ್ಲ ಎಂಬ ಹಿಂಜರಿಕೆ ಇಟ್ಟುಕೊಳ್ಳಬೇಡಿ. ನೀವು ಅವರಿಗಿಂತ ಹೆಚ್ಚು ಅನುಭವಿಗಳು, ಬುದ್ಧಿವಂತರು. ಇಂಗ್ಲಿಷನ್ನು ಯಾರು ಬೇಕಾದರೂ ಕಲಿಯಬಹುದು, ಅದೇನೂ ಬ್ರಹ್ಮವಿದ್ಯೆಯಲ್ಲ. ಹಾಗೆ ಕಲಿತವರೆಲ್ಲರೂ ಮೇಧಾವಿಗಳಲ್ಲ. ನಿಮಗೆ ಬದುಕ ಅನೇಕ ಅನುಭವಗಳು ಪುಸ್ತಕದಲ್ಲಿರುವ ವಿದ್ಯೆಗಿಂತ ಹೆಚ್ಚಿನವನ್ನು ಕಲಿಸಿಕೊಡುತ್ತದೆ' ಎಂದರು.

ಭೈರಪ್ಪನವರ ಈ ಮಾತುಗಳು ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿವೆ. ವಿದ್ಯಾರ್ಥಿಗಳಲ್ಲಿರಬಹುದಾದ ಕೀಳರಿಮೆಯನ್ನು ತೊಡೆದುಹಾಕಲು ಎಂತ ನಿದರ್ಶನ ಇದು?

ಬೇರೊಂದು ಸಭೆಯಲ್ಲಿ ಭೈರಪ್ಪನವರು 'ನಾನು ಭಾಷಣ ಮಾಡುವುದಿಲ್ಲ, ಏನಾದರೂ ಪ್ರಶ್ನೆ ಕೇಳಿ' ಎಂದರು. ಅನೇಕರು ಪ್ರಶ್ನೆಗಳನ್ನು ಕೇಳಿದರು. ಅವರ ಬರವಣಿಗೆ, ಆಲೋಚನೆ, ನಿಲುವು, ಚಿಂತನೆಗಳ ಬಗ್ಗೆ. ಕೊನೆಗೊಬ್ಬರು 'ನಿಮ್ಮ ಬರಹದ ಮೂಲಕ ಭಾರತೀಯ ಮೌಲ್ಯಗಳಿಗೆ ಚ್ಯುತಿ ತರುವಂಥ ಕೆಲಸ ಮಾಡಿದ್ದೀರಿ, ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?' ಎಂದು ಕೇಳಿದರು. ಅದಕ್ಕೆ ಭೈರಪ್ಪನವರು 'ನೀವು ನನ್ನ 'ಪರ್ವ' ಕಾದಂಬರಿಯನ್ನು ಓದಿ ಈ ಪ್ರಶ್ನೆ ಕೇಳುತ್ತಿದ್ದೀರಾ ಎನಿಸುತ್ತಿದೆ. ನೋಡಿ, ನಮ್ಮಲ್ಲಿ ಯಾವುದೋ ಕೆಲವು ಸಿದ್ಧಾಂತಗಳನ್ನಿಟ್ಟುಕೊಂಡು, ಅದಕ್ಕೆ ಲೋಪ ಬಂದ ತಕ್ಷಣ ಸಿಡಿಮಿಡಿಗೊಳ್ಳುವ ರೀತಿಯಲ್ಲಿಯೇ ಜನ ಪ್ರತಿಕ್ರಿಯಿಸುತ್ತಾರೆ. ಸ್ವಲ್ಪ ವಿಶಾಲವಾಗಿ ಇನ್ನೊಂದು ದಿಕ್ಕಿನಿಂದ ಯೋಚನೆ ಮಾಡಿದರೆ ಅದಕ್ಕಿಂತ ಉತ್ತಮವಾದುದು ಸಿಗಬಹುದೆಂಬ ಕಲ್ಪನೆ ಕೂಡ ಅವರಲ್ಲಿರುವುದಿಲ್ಲ.

ಯಾರೋ ಒಬ್ಬರು ಕೇಳಿದರು: 'ಹಾಗಾದರೆ ನಿಮ್ಮ ಆದರ್ಶ ಯಾರು?' ಅದಕ್ಕೆ ಭೈರಪ್ಪನವರು ತಕ್ಷಣ 'ನನ್ನ ಆದರ್ಶ ಕೃಷ್ಣ ಮತ್ತು ಧರ್ಮರಾಯ. ಯಾವ ಲೋಪಗಳನ್ನು, ಒಳ್ಳೆಯತನದ ಹೆಸರಿನಲ್ಲಿ ತಪ್ಪನ್ನು ಬೆಳೆಸಿ 'ಒಳ್ಳೆಯತನ'ಕ್ಕೆ ಸ್ಥಾನವೇ ಇಲ್ಲದೇ ಮಾಡಿಬಿಟ್ಟಿದ್ದನೋ ಅಂತಹದನ್ನು ಮತ್ತೆ ಗಳಿಸಿಕೊಟ್ಟವನು ಕೃಷ್ಣ. ಇದು ತಪ್ಪು, ಇದು ಅಹಂಕಾರ, ಇದು ಕರ್ತವ್ಯ ಎನ್ನುವುದನ್ನು ಬೋಧಿಸಿ ತಪ್ಪಿಗೆ ಶಾಸ್ತಿ ಮಾಡಿ ಸಮಾಜಕ್ಕೆ ನ್ಯಾಯ ಕೊಟ್ಟವನು ಕೃಷ್ಣ. ನಾನವನನ್ನು ದೇವರು ಎಂದು ಬರೆದಿಲ್ಲ.

ಈ ವಿಚಾರಗಳನ್ನೆಲ್ಲ ಹೇಳಿದಾಗ ಎಲ್ಲರಿಗೂ ಖುಷಿಯಾಯ್ತು. ನನಗೂ ಅವರ ಬಗೆಗಿದ್ದ ಗೌರವ ಇಮ್ಮಡಿಸಿತು. ಮಾರನೆಯ ದಿನ ಅವರು ಮೈಸೂರು ಕಡೆ ಪ್ರಯಾಣ ಬೆಳಸಿದರು. ನಾನು ಬೆಳಗೆರೆಗೆ ಬಂದೆ.

ಇಲ್ಲಿ ಮುಖ್ಯವಾಗುವುದು ಭೈರಪ್ಪನವರ ಸ್ವಭಾವ–ಹುಟ್ಟುಗುಣ ಎನ್ನೋಣ, ಬೇಕಿದ್ದರೆ ತನ್ನನ್ನೇ ತಾನು ವಿಮರ್ಶಿಸಿಕೊಂಡು ನಿಷ್ಕರ್ಷೆಗೆ ಒಳಪಡಿಸಿಕೊಳ್ಳುವ ಈ ಗುಣ ಎಷ್ಟು ಜನಕ್ಕಿದೆ? ಅವರೊಂದು 'ಸ್ಪೆಷಲ್ ಮೇಕ್' ಎಂದೇ ನನ್ನ ನಂಬಿಕೆ. ಇದು ಅವರ ಬದುಕಿನ ಒಂದು ಮುಖ.

ಆನಂತರ ಪಟೇಲ್ ಯೂನಿವರ್ಸಿಟಿ, ನಂತರ ಕೆಲಸ ಹೋಗಿ ಹೊಟೇಲ್ ಆರಂಭಿಸುವ ಯೋಚನೆ. ಮತ್ತೆ ರೀಜನಲ್ ಕಾಲೇಜಿನ ಕೆಲಸ ಇತ್ಯಾದಿಗಳು ಮತ್ತೊಂದು ಮುಖ.

ಅವರು ರೀಜನಲ್ ಕಾಲೇಜಿನಲ್ಲಿದ್ದಾಗ ಅನೇಕ ದೇಶಗಳಿಗೆ ಭೇಟಿ ಕೊಟ್ಟಿದ್ದರು. ಆ ವೇಳೆಗಾಗಲೇ ಅವರು ಜಪಾನ್ ಗೆ ಹೋಗಿ ಬಂದು ಐದಾರು ತಿಂಗಳಾಗಿತ್ತು ಎಂದು ಕೇಳಿದ್ದೆ. ನಿಮ್ಮ ಜಪಾನಿನ ಅನುಭವಗಳನ್ನು ಹೇಳಿ ಎಂದೆ. ಬಹಳ ಸೊಗಸಾದ ಅನುಭವಗಳವು (ನಾನು ಈ ವಿಷಯ ಕುರಿತು ಒಂದತ್ತು ಕಡೆಯಾದರೂ ಉಪನ್ಯಾಸ ಮಾಡಿರಬಹುದು, ಅಷ್ಟು ಮೌಲಿಕವಾದ ವಿಚಾರಗಳನ್ನೊಳಗೊಂಡ ಅನುಭವ ಅದು ಎಂದಿದ್ದರು.

ನಮ್ಮ ವಿದ್ಯಾಭ್ಯಾಸ ಇಲಾಖೆಗೆ ಸಂಬಂಧಪಟ್ಟ ಅಂತಾರಾಷ್ಟ್ರೀಯ ಸೆಮಿನಾರ್ ಅದಾಗಿತ್ತು. ಭೈರಪ್ಪ ಇಂಡಿಯಾದ ರೆಪ್ರೆಸೆಂಟೇಟೀವ್ ಆಗಿ ಹೋಗಿದ್ದಾರೆ. ಅಲ್ಲಿ ನಾನಾ ರಾಷ್ಟ್ರಗಳಿಂದ ಬಂದ ಡೆಲಿಗೇಟ್ಸ್ ಇದ್ದಾರೆ. ಸೆಮಿನಾರ್ ಕುರಿತು ಹೆಚ್ಚಿಗೇನನ್ನೂ ಹೇಳಲಿಲ್ಲ. ಆದರೆ ಅವರಿಗಾದ ಒಂದೆರಡು ವೈಯಕ್ತಿಕ ಅನುಭವಗಳಿಗೆ ಒತ್ತು ಕೊಟ್ಟು ಭೈರಪ್ಪನವರು ಬೇರೆ ವಿಷಯ ಹೇಳಿದರು. ನಾಗಸಾಕಿಗೆ ಹೋಗಿದ್ದು, ಹಿರೋಷಿಮಾಗೆ ಹೋಗಿದ್ದು, ಅಲ್ಲಿನ ಟ್ರೈನ್‌ಗಳೆಲ್ಲ ಹೇಗಿರುತ್ತವೆ, ಅಲ್ಲಿಯ ರೈಲ್ವೆ ಇಲಾಖೆಯ ನೌಕರರಾಗಲಿ, ಅಧಿಕಾರಿಗಳಾಗಲಿ, ಸಾರ್ವಜನಿಕರಾಗಲಿ ಒಬ್ಬರನ್ನೊಬ್ಬರು ಹೇಗೆ ಟ್ರೀಟ್ ಮಾಡುತ್ತಾರೆ ಎನ್ನುವುದನ್ನೆಲ್ಲ ಕಣ್ಣಿಗೆ ಕಟ್ಟುವಂತೆ ವಿವರಿಸಿದರು.

ಅವರೇ ಹೇಳಿದ ಮತ್ತೊಂದು ಪ್ರಸಂಗ ಬಹಳ ಸ್ವಾರಸ್ಯಕರವಾಗಿದೆ. ಒಂದು ದಿನ ಟೋಕಿಯೋ ನಗರದಲ್ಲಿ ಸಂಜೆ ವಾಕಿಂಗ್ ಹೋದರಂತೆ. ಆ ಬೀದಿಯಲ್ಲಿ ಅನೇಕ ಬಗೆಯ ಆಟದ ಸಾಮಾನುಗಳನ್ನೂ ಮಾರುತ್ತಿದ್ದರಂತೆ. ಆ ವೇಳೆಗೆ ಭೈರಪ್ಪನವರಿಗೆ ಮಗನಿದ್ದ. ಚಿಕ್ಕ ಆಡುವ ವಯಸ್ಸಿನ ಹುಡುಗ. ಅವನಿಗೆ ಯಾವುದಾದರೂ ಆಕರ್ಷಕವಾದ ಆಟದ ಸಾಮಾನು ಕೊಂಡುಕೊಳ್ಳುವ ಆಸೆಯಿಂದ ಒಂದು ಅಂಗಡಿಗೆ ಹೋದರಂತೆ. ಇವರ ಹಾವಭಾವಗಳನ್ನೆಲ್ಲ ಗಮನಿಸಿ ಆ ಅಂಗಡಿಯವನು 'ನೋಡಿ, ಇದು ಹೀಗಿದೆ–ಇದೊಂದು ಹಕ್ಕಿ. ಮೇಲಕ್ಕೆ ಎಸೆದರೆ ರೆಕ್ಕೆ ಬಿಚ್ಚಿ ಹಾರಿ ಹೋಗುತ್ತೆ. ಮತ್ತೆ ತಾನಾಗಿ ಕೆಳಕ್ಕೆ ಇಳಿಯುತ್ತೆ. ಮಕ್ಕಳು ಇದನ್ನು ಚೆನ್ನಾಗಿ ಎಂಜಾಯ್ ಮಾಡ್ತಾರೆ' ಎಂದು ತಾನೇ ಅದನ್ನೊಮ್ಮೆ ಮೇಲಕ್ಕೆಸೆದು ತೋರಿಸಿದ. ಭೈರಪ್ಪನವರಿಗೆ ಬಹಳ ಖುಷಿಯಾಗಿ ಅದನ್ನು ತೆಗೆದುಕೊಳ್ಳಲು ನಿರ್ಧರಿಸಿದರು. ಆತ 'ನೋಡಿ–ನೀವೊಂದು ಸಲ ಎಸೆದು' ಎಂದ. ಇವರು ಟ್ರೈ ಮಾಡಿದರು. ಆ ಹಕ್ಕಿ ಫುಟ್‌ಪಾತ್‌ನಲ್ಲಿ ನಡೆದು ಹೋಗುತ್ತಿರುವ ಸುಮಾರು 12–13 ವರ್ಷದ ಹುಡುಗಿಯ ಹಣೆಗೆ ಹೊಡೆದುಬಿಡ್ತು. ಗಾಬರಿಯಿಂದ ಆ ಹುಡುಗಿ ಕಿರುಚಿಕೊಂಡು ಬಿದ್ದುಬಿಡ್ತು. ಪಕ್ಕದಲ್ಲೆ ತಂದೆ–ತಾಯಿ ನಿಂತಿದ್ರು, 'ಏನು? ಏನು?' ಎಂದು ಅನೇಕರು ಬಂದರು. ಸುತ್ತಲಿದ್ದವರೆಲ್ಲ ಇವರು ಎಸೆದದ್ದನ್ನೂ ನೋಡಿದ್ದರು. ಭೈರಪ್ಪನವರಿಗೆ ಅನಿಸಿತು, ಹೋ ಹೋ ಇವರೆಲ್ಲ ಸೇರಿ ನನ್ನನ್ನು ತದುಕಿಬಿಡ್ತಾರೆ. ಅನ್ಯಾಯವಾಗಿ ನಾನು ಹೀಗೆ ಮಾಡಿಬಿಟ್ಟೆನಲ್ಲ.. ಎಂಥಾ ಕೆಲ್ಲ ಆಗಿಹೋಯ್ತು ಎಂದು ಗಾಬರಿ, ಭಯ, ನಾಚಿಕೆ ಆಯ್ತು. ತಂದೆ–ತಾಯಿ ಇಬ್ಬರೂ ಮಗುವನ್ನು ಸಂತೈಸುತ್ತಿದ್ದಾರೆ. ಆತ ಮತ್ತೆ ಮತ್ತೆ ಇವರ ಕಡೆ ನೋಡುತ್ತಾರೆ.

ಒಂದಷ್ಟು ಹೊತ್ತು ಆದ ಮೇಲೆ ಆ ಮಗುವಿನ ತಂದೆ, ಮಗುವನ್ನು ತಾಯಿಗೆ ಒಪ್ಪಿಸಿ ದಾಪುಗಾಲು ಹಾಕಿಕೊಂಡು ಭೈರಪ್ಪನವರ ಕಡೆ ಬಂದ. ಜನರೆಲ್ಲ ನೋಡುತ್ತಿದ್ದಾರೆ. ಭೈರಪ್ಪನವರಿಗೆ ಒಂದು ಕ್ಷಣದಲ್ಲಿ 'ಈಗ ಬಲ್ತಾನೆ. ನಾಲ್ಕು ತದಕ್ತಾನೆ ಅಥವಾ ಪೊಲೀಸ್ ಕೇಸಾಗುತ್ತದೆ. ಆ ದೇಶದಲ್ಲಿ ಒಂದೊಂದು ಫರ್ಲಾಂಗಿಗೆ ಇಬ್ಬಿಬ್ಬರು ಪೊಲೀಸ್‌ನವರು ಇರುತ್ತಾರಂತೆ, ರೋಡ್ ಡಿಸಿಪ್ಲಿನ್ ಮೇಂಟೇನ್ ಮಾಡಲಿಕ್ಕೆ. ಏನೇ ಮಿಸ್ಚೀಫ್ ಆದರೂ ತಕ್ಷಣ ಅರೆಸ್ಟ್ ಮಾಡ್ತಾರಂತೆ (ಅಲ್ಲಿ ಕಾನ್‌ಸ್ಟೇಬಲ್‌ಗೆ ಅರೆಸ್ಟ್ ಮಾಡುವ ಅಧಿಕಾರವಿದೆ. ಆತ ಹೈಯರ್ ಆಫೀಸರ್ ಆಜ್ಞೆಗೆ ಕಾಯಬೇಕಿಲ್ಲ). ಅಲ್ಲಿಂದಲೇ ವೈರ್‌ಲೆಸ್ ಮೆಸೇಜ್ ಕಳಿಸ್ತಾರಂತೆ. ಒಂದು ಮೊಬೈಲ್ ಕೋರ್ಟ್ ಬರುತ್ತದಂತೆ. ಅದು ವಿಚಾರಣೆ ಮಾಡಿ ಒಂದಷ್ಟು ಜುಲ್ಮಾನೇನೋ ಶಿಕ್ಷೆಯೋ ಕೊಟ್ಟು–20 ನಿಮಿಷದಲ್ಲಿ ಇದೆಲ್ಲ ನಡೆದು ಹೋಗುತ್ತದೆ–ಬಿಟ್ಟುಬಿಡುತ್ತಾರೆ



(ನಮ್ಮಲ್ಲಿಯಂತೆ ಕೆಲಸ ಕೆಡಿಸಿ, ತಿಂಗಳುಗಟ್ಟಲೆ ಅಲೆಸಿ, ಒಳಕ್ಕೆ ಕರೆಸಿ–ಹೊರಕ್ಕೆ ತಳ್ಳಿ–ಇನ್ನೇನೋ ಮಾಡಿ ದೊಡ್ಡವರ ಹತ್ತಿರ ಫೋನ್ ಮಾಡಿಸಿ. ಈ ಕುತಂತ್ರಗಳಾವವೂ ಅಲ್ಲಿಲ್ಲ). ಅಂತೂ ಈ ವಿಷಯವೆಲ್ಲ ಪೇಪರ್‌ಗಳಲ್ಲಿ ಬರುತ್ತದೆ. ರೇಡಿಯೋದಲ್ಲಿ ಬರುತ್ತದೆ–ಯಾರೋ ಇಂಡಿಯಾದವನಂತೆ. ಇಲ್ಲಿಗೆ ಇಂಟರ್‌ನ್ಯಾಷನಲ್ ಕಾನ್ಸರೆನ್ಸಿಗೆ ಡೆಲಿಗೇಟ್ ಆಗಿ ಬಂದಿದ್ದನಂತೆ. ಅವನು ಹೀಗ್ಯಾಡಿದನಂತೆ. ಹೀಗಾಯ್ತಂತೆ, ಅರೆಸ್ಟಾದನಂತೆ ಎಂದೆಲ್ಲ ಬರುತ್ತದೆ. ನಾನು ವಾಪಸ್ ನಮ್ಮ ದೇಶಕ್ಕೆ ಹೋಗ್ತಿನಿ. ದೊಡ್ಡ ಮನುಷ್ಯ ಕಣಯ್ಯ ನೀನು. ಇನ್ನೆಂದೂ ಎಲ್ಲೂ ಹೋಗಬೇಡ. ನಿನ್ನ ಮನೆಯಲ್ಲಿ ನೀನಿರು ಎಂದು ಡಿಸ್‌ಮಿಸ್ ಮಾಡಿ ಮನೆಗೆ ಕಳಿಸುತ್ತಾರೆ. ಏಕೆಂದರೆ ಇಂಡಿಯಾದ ಮರ್ಯಾದೆ, ಗೌರವ–ಇವೆಲ್ಲ ನನ್ನ ಉದ್ದೇಶವಿಲ್ಲದೆ ಹೀಗಾಯ್ತಲ್ಲ. ಆದರೂ ಇಷ್ಟಕ್ಕೂ ನಾನು ಗುರಿಯಾದೆನಲ್ಲ ಇಷ್ಟೂ ಯೋಚನೆಗಳು ಕೆಲವೇ ಸೆಕೆಂಡುಗಳಲ್ಲಿ ಸುಳಿದಾಡಿತ್ತು.

ತಲೆಯೊಳಗೆ ಬಂದು ಹೋಯ್ತು. ಆ ವೇಳೆಗೆ ಅವನು ಹತ್ತಿರಕ್ಕೆ ಬಂದೇಬಿಟ್ಟ, ಕೈ ಜೋತು ಬಿಟ್ಟುಕೊಂಡು, ತಲೆ ತಗ್ಗಿಸಿ ನಿಂತರು ಭೈರಪ್ಪ. 'ಸುಮ್ಮನೆ ಓಡಿ ಹೋಗಲೇ?' ಎಂಬ ಯೋಚನೆಯೂ ಬಂದುಹೋಯಿತು. ಹಾಗೆ ಓಡಿಹೋಗಲು ಸಾಧ್ಯವಾದೀತೇ? ಏನಾದರಾಗಲಿ ನನಗಿನ್ನೇನೂ ಮಾಡೋಕೆ ತ್ರಾಣವಿಲ್ಲ ಎಂದು ಸುಮ್ಮನೆ ನಿಂತುಬಿಟ್ಟರು. ಆ ಮಗುವಿನ ತಂದೆ ಭೈರಪ್ಪನವರ ಭುಜದ ಮೇಲೆ ಕೈಹಾಕಿ ಹೇಳಿದರಂತೆ

'ಯಾಕಿಷ್ಟು ಖಿನ್ನರಾಗಿದ್ದೀರಿ? ಯಾರು ನೀವು? ಎಲ್ಲಿಂದ ಬಂದಿದ್ದೀರಿ? ನೋಡಿದ್ರೆ ಇಲ್ಲಿಯವರ ಹಾಗೆ ಕಾಣಿಸುತ್ತಿಲ್ಲ ನೀವು'. ಭೈರಪ್ಪನವರು ನಡುಗುವ ಧ್ವನಿಯಲ್ಲಿ ಹೇಳಿದರು: 'ನಾನು ಇಂಡಿಯಾದಿಂದ ಬಂದಿದ್ದೇನೆ'.

ತಕ್ಷಣ ಆತನ ಮುಖದಲ್ಲೊಂದು ಮಂದಹಾಸ ಮೂಡಿ ಹೇಳಿದ 'ಓಹೋ, ನೀವು ಇಂಡಿಯಾದಿಂದ ಬಂದವರೇ? ನೋಡಿ ಮಗುವಿಗೆ ಏನೂ ಆಗಿಲ್ಲ. ಬಿದ್ದದ್ದಕ್ಕೆ ಸ್ವಲ್ಪ ತರಚಿದ ಹಾಗಾಗಿದೆ. ಗಾಯವೇನೂ ಆಗಿಲ್ಲ. ಗಾಬರಿಗೆ ಕಿರುಚಿಕೊಂಡಿದೆ ಅಷ್ಟೇ, ನೀವ್ಯಾಕೆ ಇಷ್ಟೊಂದು ಖಿನ್ನರಾಗಬೇಕು ಅದಕ್ಕೆ'–ಎಂದ. ಭೈರಪ್ಪನವರಿಗೆ ಆಶ್ಚರ್ಯ! ತನ್ನನ್ನೆ ತಾನು ನಂಬದ ಸ್ಥಿತಿ. ಆತ ಹೆಂಡತಿಯನ್ನು ಕರೆದು ಪರಿಚಯಿಸಿದ 'ಇವರು ಇಂಡಿಯಾದಿಂದ ಬಂದವರಂತೆ' ಎಂದು. ಆಕೆ ಹೇಳಿದಳು 'ಓ ನೀವು ಬುದ್ಧನ ದೇಶದಿಂದ ಬಂದವರೇ?' ಆ ಯೋಚನೆಯಲ್ಲೇ ಸುಮ್ಮನೆ ನಿಂತುಬಿಟ್ಟರಂತೆ, ಭೈರಪ್ಪ ಮನೆಗೆ ಕರೆದರಂತೆ ಆ ದಂಪತಿ. ಆದರೆ ಇವರಿಗೆ ಸಂಕೋಚವಾಗಿ ನಿರಾಕರಿಸಿದರು. ಆ ಮಗುವಿನ ಕೈಲಿ ಹೇಳಿಸಿದರು 'ನಂಗೇನೂ ಆಗಿಲ್ಲ, ಚೆನ್ನಾಗಿದ್ದೀನಿ. ಬನ್ನಿ ಮನೆಗೆ' ಎಂದು. ಬೇರೆ ದಾರಿಯಿಲ್ಲದೆ ಅವರ ಮನೆಗೆ ಹೋದರು.

ನಾನು ಜಪಾನ್ ನೋಡಿಲ್ಲ. ನೋಡಿದಂತಹ ಮಹಾಶಯರ ಮಾತುಗಳ ಮೂಲಕ ನಾನು ಜಪಾನ್ ನೋಡಿದ್ದೇನೆ ಎಂಬ ನೆಮ್ಮದಿ ನನ್ನದಾಗಿದೆ.

ನಮ್ಮ ದೇಶದ ಕೆಲವು ವ್ಯವಸ್ಥೆ ಬದಲಾಗಬೇಕು

ಭೈರಪ್ಪನವರು ನನಗೆ ಹೇಳುವಾಗ ಅನೇಕ ಪ್ರಶ್ನೆಗಳು ಏಳುತ್ತವೆ. ನಾವು ಎಲ್ಲಿದ್ದೇವೆ? ಜಪಾನ್ ಎಲ್ಲಿದೆ? ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದರೂ ಜಗಳಗಳನ್ನು, ಗುಂಪುಗಾರಿಕೆಯನ್ನು ಜಾಸ್ತಿ ಮಾಡಿಕೊಂಡಿದೀವಿ. ಜಾತ್ಯತೀತ ರಾಷ್ಟ್ರ ಎಂದು ನಾಲಿಗೆಯಿಂದ ಹೇಳುವುದನ್ನು ಮಾತ್ರ ಕಲಿತುಕೊಂಡಿದ್ದೀವಿ. ನಾಲಿಗೆ ಹುಳು ಬಿದ್ದು ಹೋದರೂ ನಾಚಿಕೆ ಇಲ್ಲ. ಆಶ್ಚರ್ಯವಂತೂ ಖಂಡಿತಾ ಇಲ್ಲ. ಸುಳ್ಳಿನಿಂದಲೇ ತುಂಬಿಹೋಗಿರುವ ಈ ನಾಲಿಗೆಯಲ್ಲಿ ಮತ್ತೇನು ಹೊರಡಲಿಕ್ಕೆ ಸಾಧ್ಯ? ಬೇರೆ ಬೇರೆ ಜಾತಿ ಹೆಸರುಗಳನ್ನಿಟ್ಟು ಜಾತ್ಯತೀತ ಎಂದು ಕರೆಯುವುದಕ್ಕೇನಾದರೂ ಅರ್ಥವಿದೆಯೇ. ಇದು ಇಂಥವರಿಗೆ ಮಾತ್ರ ಇರುವ ಸ್ಕೂಲು, ಇಂಥ ವರ್ಗಕ್ಕಿರುವ ಹಾಸ್ಟೆಲು, ಇಂತಿಂಥವರಿಗೆ ಇಷ್ಟಿಷ್ಟು ಕೋಟ.. ಹೀಗೆಲ್ಲ ವಿಂಗಡಿಸಿ ಸಾಧಿಸಿದ್ದೇನು? ಹಳೆಯ ಜಾತಿಯ ಹೆಸರುಗಳಿಗೆ ಹೊಸ ಹೆಸರುಗಳನ್ನಿಟ್ಟು ಮಾಡುತ್ತಿರುವುದೇನು? ಎಷ್ಟು ಹೀನವಾಗಿ ನಡೆದುಕೊಳ್ಳುತ್ತಿದ್ದೇವೆ ನಾವು? ಈ ವಿಷಯಗಳನ್ನೆಲ್ಲ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ನಾನು ಹೋದಲ್ಲೆಲ್ಲ ಹೇಳುತ್ತೇನೆ ಎಂದದ್ದು ಈ ಕಾರಣಕ್ಕಾಗಿಯೇ ಎಂಬುದು ವಾಸ್ತವ.



ಸರಸ್ವತಿ ಪುತ್ರನ ಪರ್ವಾಂತ್ಯ

2016ರಲ್ಲಿ ಬೆಂಗಳೂರಿನಲ್ಲಿ ಅಷ್ಟಾವಧಾನ ಕಾರ್ಯಕ್ರಮ.

ಭಿತ್ತಿ ದಾಟಿದ ಅಕ್ಷರ ಯಾನ

ಎಸ್.ಎಸ್.ಭೈರಪ್ಪ ಭಾರತ ಸಾಹಿತ್ಯದ ಮೇರುಪರ್ವತ. ಅವರೇ ಹೇಳಿಕೊಂಡಂತೆ ಒಂದುಕಾಲದಲ್ಲಿ ಅವರಷ್ಟು ನಿಂದನೆಗೆ, ತಿರಸ್ಕಾರಕ್ಕೆ ಗುರಿಯಾದ ಸಾಹಿತಿ ಇನ್ನೊಬ್ಬರಿರಲಿಲ್ಲ. ಅವನ್ನೆಲ್ಲ ಮೀರಿನಿಂತು ಅಕ್ಷರಗಳ ಮೂಲಕ ಸಾಹಿತ್ಯ ಜಗತ್ತನ್ನು ಅಕ್ಷಯಗೊಳಿಸಿದ ಸಾಹಿತಿಯೂ ಮತ್ತೊಬ್ಬನಿಲ್ಲ. ಕನ್ನಡದ ಮೂಲಕ ಇಡೀ ದೇಶವನ್ನೇ ಬರಹದ ಮೂಲಕ ಆವರಿಸಿಕೊಂಡರು. ಸ್ಥಳೀಯ ಭಾಷೆಯಲ್ಲಿ ಸೃಷ್ಟಿಯಾದ ಕಾದಂಬರಿಗಳು ಆ ಮಟ್ಟದಲ್ಲಿ ಅನ್ಯಭಾಷೆಗಳಿಗೆ ಅನುವಾದಗೊಂಡ ಉದಾಹರಣೆಯನ್ನು ಭೈರಪ್ಪನವರಲ್ಲಿ ಮಾತ್ರ ನೋಡಲು ಸಾಧ್ಯ. ಅವರು ದೇಹ ತ್ಯಜಿಸಿ ಅಕ್ಷರ ಜಗತ್ತಿನಲ್ಲಿ ಲೀನವಾದ ಈ ಹೊತ್ತಿನಲ್ಲಿ ಅವರ ಸಾಹಿತ್ಯ ಜೀವನವನ್ನು ನೆನಪಿಸಿಕೊಳ್ಳುವ ಯತ್ನವಿದು.

ಆವರಣದಾಚೆ

ತನ್ನ ಜೀವನದ ಆರಂಭ ಕಾಲದಲ್ಲಿ ಒಬ್ಬ ವ್ಯಕ್ತಿ ಪಡೆದ ಅನುಭವವು ಶ್ರೀಮಂತವಾಗಿದ್ದಷ್ಟು ಆ ವ್ಯಕ್ತಿಯ ಮುಂದಿನ ಬದುಕಿನ ಬುತ್ತಿ ದೊಡ್ಡದಾಗುತ್ತದೆ. ಮನಕೆಲಸ, ಕೊಟ್ಟಿಗೆ ಕೆಲಸ, ಪೌರೋಹಿತ್ಯದ ಪರಿಚಾಕರಿ, ಹೊಟೇಲ್ ಕೆಲಸ, ಸಂತೆಯಲ್ಲಿ ಶರಬತ್ತು ಮಾರಾಟ, ಊದುಬತ್ತಿ ಮಾರಾಟ, ಸಿನಿಮಾ ದ್ವಾರಪಾಲನೆ, ಖಾಸಗಿ ಪಾಠ ಹೇಳುವುದು, ಕಥಾ ನಿರೂಪಣೆ, ಸಾಧುಗಳ ಜತೆ ಅಲೆದಾಟ, ರೈಲು ನಿಲ್ದಾಣದಲ್ಲಿ ಕೂಲಿ, ಅಡಿಗೆ ನಾಟಕ ಕಂಪನಿಯಲ್ಲಿ ಲೆಕ್ಕ ಬರೆಯುವುದು ಮೊದಲಾದ ಅನುಭವಗಳನ್ನು ತೀರ ಸಣ್ಣ ವಯಸ್ಸಿನಲ್ಲಿಯೇ ಪಡೆದ ವ್ಯಕ್ತಿಯೊಬ್ಬ ತತ್ವಶಾಸ್ತ್ರ ಪ್ರಾಧ್ಯಾಪಕನಾಗಿ ಕಾದಂಬರಿಕಾರನಾಗಿ ರೂಪುಗೊಂಡರೆ, ಅಂತಹ ವ್ಯಕ್ತಿ ಸೃಷ್ಟಿಸಿದ ಸಾಹಿತ್ಯದಲ್ಲಿ ವಸ್ತುವೈವಿಧ್ಯ ಮತ್ತು ಅನುಭವ ಶ್ರೀಮಂತಿಕೆ ಇಲ್ಲದಿರಲು ಸಾಧ್ಯವಿಲ್ಲ. ಅಂತಹ ಸಾಹಿತಿಯು ಕಲಾಪ್ರಜ್ಞೆಯನ್ನು ಕೂಡ ಹೊಂದಿದ್ದಾಗ ಸಾಹಿತ್ಯ ಕೃತಿಗಳು ಉತ್ತಮ ಕಲಾಕೃತಿಗಳಾಗುತ್ತವೆ.

ಇದು ವಿಶಿಷ್ಟತೆ

ದೇಶ ಸುತ್ತು, ಕೋಶ ಓದು ಎನ್ನುವ ಮಾತನ್ನು ಭೈರಪ್ಪನವರ ಹಾಗೆ ಅಕ್ಷರಶಃ ಪಾಲಿಸಿದ ಬೇರೆ ಕಾದಂಬರಿಕಾರರು ಕನ್ನಡದಲ್ಲಷ್ಟೇ ಅಲ್ಲ, ಬಹುಶಃ ಭಾರತೀಯ ಭಾಷೆಗಳಲ್ಲಿ ಇರಲಾರರು. ಭೈರಪ್ಪನವರು ದೇಶ ಸುತ್ತಿ ಕೋಶ ಓದಿದ್ದಷ್ಟೇ ಅಲ್ಲ; ಬರವಣಿಗೆಯನ್ನೂ ಮಾಡಿದರು. ಹೀಗೆ ಕನ್ನಡದಲ್ಲಿ ಬಹುದೊಡ್ಡ ಸಂಖ್ಯೆಯ ಓದುಗರಿಂದ ಪ್ರೀತಿ– ಅಭಿಮಾನವನ್ನು ಪಡೆದ ಭೈರಪ್ಪನವರು ಇತರ ಹಲವು ಭಾರತೀಯ ಭಾಷೆಗಳ ಓದುಗರಿಂದಲೂ ಮೆಚ್ಚುಗೆಯನ್ನು ಪಡೆದು ಪ್ರಸಿದ್ಧರಾಗಿದ್ದಾರೆ. ಕನ್ನಡದ ಕೆಲವು ಪ್ರಸಿದ್ಧ ವಿಮರ್ಶಕರ ಟೀಕೆಗಳೇನೇ ಇದ್ದರೂ, ಅವರ ಕೃತಿಗಳನ್ನು ಮೆಚ್ಚಿದ ಮತ್ತು ಗಂಭೀರವಾಗಿ ವಿಶ್ಲೇಷಿಸಿದ ಮಹತ್ವದ ವಿಮರ್ಶಕರು ದೊಡ್ಡ ಸಂಖ್ಯೆಯಲ್ಲಿಯೇ ಇದ್ದಾರೆ. ಅವರ ಕೃತಿಗಳ ಬಗ್ಗೆ ಅದೆಷ್ಟೋ ಪುಸ್ತಕಗಳು ಬಂದಿವೆ. ಅಲ್ಲದೆ ಅನೇಕ ಪಿಎಚ್.ಡಿ ಮತ್ತು ಎಂ.ಫಿಲ್. ಸಂಶೋಧನಾ ಪ್ರಬಂಧಗಳು ರಚನೆಯಾಗಿವೆ. ಜನಪ್ರಿಯವಾಗಿರುವುದೇ ಭೈರಪ್ಪನವರ ಕಾದಂಬರಿಗಳ ದೌರ್ಬಲ್ಯ ಎಂಬ ಗ್ರಹಿಕೆಯನ್ನು ಕನ್ನಡದ ಕೆಲವು ಮುಂಚೂಣಿ ವಿಮರ್ಶಕರು ಪ್ರಚಾರ ಮಾಡಿದ್ದುಂಟು. ಆದರೆ ಭೈರಪ್ಪನವರ ಕಾದಂಬರಿಗಳ ವಸ್ತು ಮತ್ತು ತಂತ್ರಗಳನ್ನು ಅಧ್ಯಯನ ಮಾಡಿದರೆ ಅವರ ಕಾದಂಬರಿಗಳು ಯಾಕೆ ಜನಪ್ರಿಯವಾಗಿವೆ ಎಂಬುದು ಅರ್ಥವಾಗಬಹುದು.

ಆತ್ಮಚರಿತ್ರೆ

ಭಿತ್ತಿ

ಸಣ್ಣ ಕಥಾಸಂಗ್ರಹ

ಗತಜನ್ಮ 1955

ವಿಮರ್ಶಾ ಕೃತಿಗಳು

ತತ್ವಶಾಸ್ತ್ರಸತ್ಯ ಮತ್ತು ಸೌಂದರ್ಯ (1966) ಪಿ.ಎಚ್.ಡಿ ಪ್ರಬಂಧ

ಸಾಹಿತ್ಯ ಮತ್ತು ಪ್ರತೀಕ (1967)

ಕಥೆ ಮತ್ತು ಕಥಾವಸ್ತು (1969)

ಸಂದರ್ಭ:ಸಂವಾದ (2011)

ನಾನೇಕೆ ಬರೆಯುತ್ತೇನೆ? (1980)

ಕಾದಂಬರಿಗಳೆಂಬ ಕಲಾಕೃತಿಗಳು

ಇಡೀ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಕಾದಂಬರಿ ರಚನೆಯ ಹಿಂದಿರುವ ತತ್ವ ಮತ್ತು ತಂತ್ರಗಳ ಕುರಿತಾಗಿ ಭೈರಪ್ಪನವರಂತೆ ಗಾಢವಾಗಿ ಚಿಂತಿಸಿದ ಮತ್ತು ಬರವಣಿಗೆ ಮಾಡಿದ ಮತ್ತು ಮಾತನಾಡಿದ ಕಾದಂಬರಿಕಾರರು ಇಲ್ಲವೆನ್ನಬಹುದು. ಈ ಕುರಿತಾಗಿ ಭೈರಪ್ಪನವರು ಬರೆದಿರುವ ಹಾಗೂ ವಿವಿಧ ಸಂದರ್ಶನಗಳಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ಕಾದಂಬರಿಗಳನ್ನು ಪ್ರವೇಶಿಸಲು ಇರುವ ವಿವಿಧ ದಾರಿಗಳನ್ನು ತೋರಿಸಿಕೊಡುತ್ತವೆ. ಅನೇಕ ವಿಮರ್ಶಕರು ಭೈರಪ್ಪನವರ ಕಾದಂಬರಿಗಳಲ್ಲಿರುವ ವಸ್ತುವನ್ನು ಮಾತ್ರ ಪರಿಗಣಿಸಿ ವಿಶ್ಲೇಷಿಸುತ್ತಾರೆ. ಅಂತಹ ವಿಮರ್ಶಕರು ಭೈರಪ್ಪನವರ ಕೃತಿಗಳಲ್ಲಿ ಸಾಮಾಜಿಕ–ರಾಜಕೀಯ ನಿಲುವುಗಳನ್ನು ಹುಡುಕಲು ತೊಡಗುತ್ತಾರೆ. ತಮ್ಮ ಪೂರ್ವನಿರ್ಧರಿತ ಸಿದ್ಧಾಂತಗಳಿಗೆ ಭೈರಪ್ಪನವರ ಕಾದಂಬರಿಗಳು ಹೊಂದದಿದ್ದಾಗ ಅವರಿಗೆ ಸಮಸ್ಯೆಯಾಗುತ್ತದೆ. ಆದರೆ,



ಸಾಹಿತ್ಯ ಕೃತಿಯನ್ನು ಕಲಾಕೃತಿಯಾಗಿ ಪರಿಗಣಿಸುವವರಿಗೆ ಭೈರಪ್ಪನವರ ಕಾದಂಬರಿಗಳು ದಾರ್ಶನಿಕ ಎನಿಸುತ್ತವೆ. ರಸಾನುಭವದೊಂದಿಗೆ ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆಯನ್ನು ವಿಸ್ತರಿಸುವ ಕೃತಿಗಳಾಗಿ ಕಾಣುತ್ತವೆ. ಭೈರಪ್ಪನವರ ಕಾದಂಬರಿಗಳಲ್ಲಿ ವಸ್ತುವೈವಿಧ್ಯ ಇರುವಂತೆ ತಂತ್ರವೈವಿಧ್ಯವು ಇದೆ. ಅವರ ಕಾದಂಬರಿಗಳಲ್ಲಿರುವ ತಂತ್ರಗಳನ್ನು ಹಲವು ನೆಲೆಗಳಲ್ಲಿ ಗುರುತಿಸಲು ಸಾಧ್ಯ.. ಘಟನೆಗಳ ಪೋಣಿಸುವಿಕೆ, ಪಾತ್ರ, ಚಿತ್ರಣ, ಕ್ರಮ, ಸಮಾನಾಂತರ ಕಥೆಗಳು, ಉಪಕಥೆಗಳು, ಕಥೆಯೊಳಗೆ ಕಥೆ, ಪ್ರಥಮ ಪುರುಷ, ಉತ್ತಮ ಪುರುಷ, ಪ್ರಜ್ಞಾ ಪ್ರವಾಹ ತಂತ್ರ ನಿರೂಪಣೆ, ಭಾಷೆಯ ಬಳಕೆಯ ಕ್ರಮ– ಗ್ರಾಮ್ಯ ಭಾಷೆ ಪ್ರಾದೇಶಿಕ ಭಾಷಾ ಪ್ರಭೇದಗಳು, ಉಲ್ಲೇಖಗಳ ಬಳಕೆ ಗಾದೆ, ಮಂತ್ರಗಳು, ಪುರಾಣ, ನಂಬಿಕೆ– ಆಚರಣೆಗಳ ಉಲ್ಲೇಖಗಳು ಇತ್ಯಾದಿ.

ದಾರ್ಶನಿಕ ಅನ್ವೇಷಣೆಯುಳ್ಳ ಭೈರಪ್ಪನವರ ಕಾದಂಬರಿಗಳೆಂಬ ಕಲಾಕೃತಿಗಳನ್ನು ಕೇವಲ ಸಾಮಾಜಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಮಾತ್ರ ನೋಡಿ ವಿಶ್ಲೇಷಿಸಿದರೆ ಅಥವಾ ಕೇವಲ ಸಮಾಜ ವಿಮರ್ಶೆಯ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಂಡರೆ ಆಗ ಕೃತಿಯಿಂದ ನಮಗಾಗುವ ಲಾಭ ಕಡಿಮೆ. ಹಾಗೆ ನೋಡಿದರೆ, ಭೈರಪ್ಪನವರು ಸಮಕಾಲೀನ ಸಾಮಾಜಿಕ ಸಂಗತಿಗಳಿಗೆ ತಮ್ಮ ಕಾದಂಬರಿಗಳ ಮೂಲಕ ಸ್ಪಂದಿಸಿದ ಬಗೆಯೂ ವಿಶೇಷವಾಗಿ ಉಲ್ಲೇಖನೀಯವೇ. ಸಿದ್ದಲಿಂಗಯ್ಯನವರು 'ಇಕ್ರಲಾ ವದೀರ್ಲಾ' ಎಂದು ಬರೆಯುವುದಕ್ಕೆ ಮೊದಲೇ ಭೈರಪ್ಪನವರ 'ದಾಟು' ಕಾದಂಬರಿಯ ಮೋಹನದಾಸ 'ಮೇಲುಜಾತಿಯವರನ್ನು 'ಒದೀದೆ ಯಾರೂ ದಾರಿಗೆ ಬರುಲ್ಲ' ಎಂದು ಹೇಳಿದ್ದ ಎನ್ನುವುದನ್ನು ನಾವು ಮರೆಯಬಾರದು. ಅಸ್ಪೃಶ್ಯತೆಯನ್ನು ಸೂಕ್ಷ್ಮವಾಗಿ ಚಿತ್ರಿಸಲು ಭೈರಪ್ಪನವರು ಬಳಸಿಕೊಂಡ ಸನ್ನಿವೇಶವಂತು ಬಹಳ ವಿಶಿಷ್ಟವಾಗಿ ಮೂಡಿಬಂದಿದೆ.

ದಾಟು ಕಾದಂಬರಿಯಲ್ಲಿ ಮಗಳು ಸತ್ಯಳನ್ನು ಸರಿದಾರಿಗೆ ತರಲು ಬೆಂಗಳೂರಿಗೆ ಹೋಗುವ ವೆಂಕಟರಮಣಯ್ಯನ ಜೊತೆ ಇರುವ ಬೆಟ್ಟಯ್ಯ ಅಲ್ಲಿ ಬೇರೆ ಆಟೋರಿಕ್ಷಾದಲ್ಲಿ ಹೋಗಬೇಕಾಗುತ್ತದೆ. ಮಗಳಿಗೆ ಹೊಡೆದು ಸುಸ್ತಾಗಿ ಎಚ್ಚರತಪ್ಪಿ ಬಿದ್ದ ವೆಂಕಟರಮಣಯ್ಯ ಎಚ್ಚರಗೊಂಡಾಗ ಬೆಟ್ಟಯ್ಯ ಹೇಳುವ ಮಾತು ತುಂಬಾ ಮಾರ್ಮಿಕವಾದದ್ದು. ಸ್ವಾಮಿಯೋರೆ, ನಾನೇನು ಮುಟ್ಟಿಲ್ಲ. ಚೆನ್ನಾಗಿ ಜ್ಞಾನ ಬಂದ ಮೇಲೆ ಮಡಿ ಉಟ್ಟುಕೊಳ್ಳುವಿರಂತೆ.. ಅಸ್ಪೃಶ್ಯತೆಯನ್ನು ಬಹುಶಃ ಇದಕ್ಕಿಂತ ಸೂಕ್ಷ್ಮವಾಗಿ ವಿಡಂಬಿಸಲು ಸಾಧ್ಯವಿಲ್ಲ. 'ದಾಟು' ಎಂದಲ್ಲ, ಭೈರಪ್ಪನವರ ಯಾವ ಕೃತಿಯೂ ಬದುಕಿನ ಯಾವುದೋ ಒಂದು ಮುಖವನ್ನು ಮಾತ್ರ ನೋಡುವುದಿಲ್ಲ. ಅವರ ಕೃತಿಗಳು ಸಾಂಸ್ಕೃತಿಕ, ನೈತಿಕ ಮೌಲ್ಯಗಳ ವಿವೇಚನೆಯೊಂದಿಗೆ, ಬದುಕಿನ ಹಲವು ಮಗ್ಗುಲುಗಳನ್ನು ಸ್ಪರ್ಶಿಸುತ್ತವೆ. ಆದರೆ ಸಿದ್ಧಾಂತಗಳ ಪ್ರತಿಬಿಂಬವಾಗಿ ಸಾಹಿತ್ಯವನ್ನು ಸೃಷ್ಟಿಸಬೇಕೆಂಬುದನ್ನು ಅವರು ಒಪ್ಪುವುದಿಲ್ಲ. ಅವರ ಪ್ರಕಾರ, ಸಾಹಿತಿಗಳಾದವರು ಬದುಕಿನ ಸತ್ಯಗಳನ್ನೂ ಮೌಲ್ಯಗಳನ್ನೂ ಶೋಧಿಸಿ ಓದುಗರಿಗೆ ಕಾಣಿಸಿದರೆ ಅದುವೇ ಸಮಾಜಕ್ಕೆ ಸಾಹಿತಿಗಳ ಕೊಡುಗೆ. ಆದರೆ ಸತ್ಯವನ್ನು ಅಥವಾ ವಾಸ್ತವವನ್ನು ಭೈರಪ್ಪನವರು ಹಸಿಹಸಿಯಾಗಿ ವರದಿಯ ರೂಪದಲ್ಲಿ ಮಂಡಿಸುವವರಲ್ಲ.ಅದು ಕಲ್ಪನೆಯೊಂದಿಗೆ ಬೆರೆತು ಕಲಾತ್ಮಕವಾಗಿ ರಸಾನುಭವವನ್ನು ನೀಡುವಂತಾಗಬೇಕು. ಹೀಗಾಗಿಯೇ ಇತಿಹಾಸದ ಸತ್ಯವನ್ನು ಹೇಳಬೇಕೆಂಬ ಅವರ ತುಡಿತವು 'ಆವರಣ' ಕಾದಂಬರಿಯಲ್ಲಿ, ಕಥೆಯೊಳಗಿನ ಕಥೆಯ ತಂತ್ರವಾಗಿ ಬಂತು. 'ಯಾನ' ಕಾದಂಬರಿ ಅತ್ಯಂತ ಆಧುನಿಕವಾದ ತಂತ್ರಜ್ಞಾನದ ಬಗೆಗೆ ಭೈರಪ್ಪನವರಿಗಿರುವ ಆಸಕ್ತಿಯನ್ನು ನಮ್ಮ ಮುಂದೆ ತೆರೆದಿಟ್ಟರೆ, ಪರ್ವ, ಉತ್ತರ ಕಾಂಡದಂತಹ ಕಾದಂಬರಿಗಳು ಮಹಾಭಾರತ ರಾಮಾಯಣಗಳಂತಹ ಇತಿಹಾಸಪುರಾಣಗಳಲ್ಲಿ ಹೇಳಲಾದ ಘಟನೆಗಳು ನಿಜವಾಗಿಯೂ ನಡೆದಿದ್ದರೆ ಹೇಗಿರುತ್ತಿತ್ತು ಎಂಬ ಅವರ ಕಲ್ಪನೆಯನ್ನು ಮುಂದಿಡುತ್ತವೆ.

ವಿಶ್ವಮಾನ್ಯ ಸಾಹಿತಿ

ಕನ್ನಡದಲ್ಲಿ ನಿಸ್ಸಂಶಯವಾಗಿ ಅತಿದೊಡ್ಡ ಸಂಖ್ಯೆಯ ಓದುಗರನ್ನು ಹೊಂದಿರುವ ಭೈರಪ್ಪನವರು ವರ್ತಮಾನ ಕಾಲದಲ್ಲಿ ಅನುವಾದಗಳ ಮೂಲಕ ಹೆಚ್ಚಿನ ಎಲ್ಲಾ ಪ್ರಮುಖ ಭಾರತೀಯ ಭಾಷೆಗಳಿಗೂ ಇಂಗ್ಲಿಷಲ್ಲದೆ ಇತರ ಹಲವು ವಿದೇಶಿ ಭಾಷೆಗಳಿಗೂ ತಲುಪಿದ್ದಾರೆ ಎನ್ನುವುದು ಕನ್ನಡಿಗರಿಗೆ ಮತ್ತಷ್ಟು ಹೆಮ್ಮೆಯ ಸಂಗತಿ.

ನಿಜವಾದ ಅರ್ಥದಲ್ಲಿ ಭಾರತೀಯ ತತ್ವಜ್ಞಾನ, ಭಾರತೀಯ ಸಂಸ್ಕೃತಿ ಮತ್ತು ಭಾರತೀಯ ಕಾವ್ಯಮೀಮಾಂಸೆ ಮತ್ತು ಭಾರತೀಯ ಕಲಾಮೀಮಾಂಸೆ – ಇವುಗಳನ್ನ ಓದಿಕೊಂಡು ಇವುಗಳ ಆಳವಾದ ಅರಿವಿನೊಂದಿಗೆ, ಪ್ರಜ್ಞಾಪೂರ್ವಕವಾಗಿ ಒಂದು ಕಲಾಕೃತಿಯನ್ನು ಸೃಷ್ಟಿಸುತ್ತಿದ್ದೇನೆ ಎನ್ನುವ ಅರಿವಿನೊಂದಿಗೆ ಬರೆದಂತಹ ಭಾರತೀಯ ಕಾದಂಬರಿಕಾರರೆಂದರೆ ಅದು ಭೈರಪ್ಪನವರು. ಭೈರಪ್ಪನವರು ಕೇವಲ ಕಾದಂಬರಿಗಳ ರಚನೆಯ ಕಾರಣಕ್ಕಾಗಿ ಮಾತ್ರ ನಮಗೆ ಮುಖ್ಯ ಅನಿಸುವುದಿಲ್ಲ ಬದಲಾಗಿ ಸತ್ಯ ಮತ್ತು ಸೌಂದರ್ಯ, ಸಾಹಿತ್ಯ ಮತ್ತು ಪ್ರತೀಕ ಮುಂತಾಗಿ ಅವರು ಸಾಹಿತ್ಯ ಮತ್ತು ಕಲೆಯ ಸೃಷ್ಟಿಪ್ರಕ್ರಿಯೆ ಬಗ್ಗೆ ನಡೆಸಿದಂತಹ ಚಿಂತನೆ, ಇತಿಹಾಸ ಮತ್ತು ಸಾಮಾಜಿಕ– ರಾಜಕೀಯ ಪರಿಸ್ಥಿತಿಗಳ ಬಗೆಗೆ ಅವರ ಪ್ರತಿಕ್ರಿಯೆಗಳು ಹಾಗೂ ಅಂಕಣಬರೆಹಗಳು, ಸಂದರ್ಶನಗಳು, ಭಿತ್ತಿಯಂತಹ ಆತ್ಮಕಥನ ಇವೆಲ್ಲ ಸಾಹಿತಿಯಾಗಿ ಭೈರಪ್ಪನವರನ್ನು ಮತ್ತಷ್ಟು ಪ್ರಸ್ತುತಗೊಳಿಸುತ್ತದೆ.

ಸಮಾಜಮುಖಿ ಬದುಕು

ಭೈರಪ್ಪನವರ ಕಾದಂಬರಿಗಳಲ್ಲಿ ಧರ್ಮಸೂಕ್ಷ್ಮಗಳ ಜಿಜ್ಞಾಸೆ ಇರುತ್ತದೆ ಅನ್ನುವುದು ಓದುಗರಿಗೆ ಗೊತ್ತಿದೆ. ಧರ್ಮ, ಅರ್ಥ, ಕಾಮ, ಮೋಕ್ಷ ಹೀಗೆ ಭಾರತೀಯ ಪುರುಷಾರ್ಥದ ಕಲ್ಪನೆಗಳನ್ನು ಅವರ ಕಾದಂಬರಿಗಳು ಒಂದಲ್ಲ ಒಂದು ರೀತಿಯಲ್ಲಿ ವಿಶ್ಲೇಷಿಸುತ್ತವೆ. ಆದರೆ, 'ಧರ್ಮ'ದ ಬದುಕನ್ನು ಬದುಕುವ ಮಟ್ಟಿಗೆ, ಭೈರಪ್ಪನವರು ಭಾರತದ ಯಾವ ಸಾಹಿತಿಯಲ್ಲೂ ಇಲ್ಲದ ಒಂದು ಗುಣವನ್ನು ಹೊಂದಿರುವುದನ್ನು ನಾವು ಕಾಣಬಹುದು. ಅವರ ಹುಟ್ಟೂರಿಗೆ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂಬ ನಿಟ್ಟಿನಲ್ಲಿ ಅವರು ಮಾಡಿದಂತಹ ಒಂದು ಪ್ರಯತ್ನ ಎಲ್ಲರಿಗೂ ಗೊತ್ತಿರುವಂತದ್ದೇ. ಆದರೆ, ಸಾಮಾಜಿಕ ಕಾರ್ಯಗಳಿಗಾಗಿ, ಕಷ್ಟದಲ್ಲಿ ಇರುವವರಿಗಾಗಿ ಜಾತಿಮತ ಭೇದ ಮಾಡದೆ, ಪ್ರಚಾರ ಬಯಸದೆ ಸಹಾಯ ಮಾಡುವ ಬಗೆಗೆ ತೀರ ಹತ್ತಿರದವರ ಬಳಿಯೂ ಹೇಳಿಕೊಳ್ಳದವರು ಅವರು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಸಂದರ್ಭದಲ್ಲಿ ಅವರಿಗೆ ಕೊಟ್ಟಂತಹ ಆ ಕಾಲದ ದೊಡ್ಡ ಮೊತ್ತವನ್ನು ಹಿಂದಕ್ಕೆ ಕೊಟ್ಟದ್ದು ಹಳೆಯ ಸುದ್ದಿ. ಹೀಗೆಯೇ ಅವರಿಗೆ ಬಂದ ಇತರ ಅನೇಕ ಪ್ರಶಸ್ತಿಗಳ ಮೊತ್ತಗಳನ್ನು, ಕಾರ್ಯಕ್ರಮಗಳ ಆಯೋಜಕರು ಕೊಡುವ ಗೌರವಧನ, ಪ್ರಯಾಣಭತ್ಯೆಗಳನ್ನು ಒಳ್ಳೆಯ ಉದ್ದೇಶಕ್ಕಾಗಿ ದಾನ ಮಾಡಿದ ಹಲವು ಉದಾಹರಣೆಗಳಿವೆ. ಕೆಲವು ಸಂದರ್ಭಗಳಿಗೆ ಈ ಲೇಖಕನೂ ಸಾಕ್ಷಿ. ವರ್ತಮಾನಕಾಲದಲ್ಲಿ ಭತ್ಯೆಗಳನ್ನು ನೋಡಿರುವವರಿಗೆ ಭೈರಪ್ಪನವರ ಈ ಗುಣ ಬಹಳ ವಿಶೇಷವೆನಿಸದಿರದು.

ಪ್ರಶಸ್ತಿಗಳು -ಗೌರವಗಳು

- ಪದ್ಮ ಭೂಷಣ-2023
- ಕೇಂದ್ರ ಸರಕಾರದ ಪದ್ಮಶ್ರೀ-2016
- ಮಮೋನಿ ರೈಸೊಂ ಗೋಸ್ವಾಮಿ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ (ಅಸ್ಸಾಂ ಸಾಹಿತ್ಯ ಸಭಾ)-2016
- ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್-2015
- ಸಾಹಿತ್ಯ ಅಕಾಡೆಮಿ ಫೆಲೋಶಿಪ್-2015
- ಡಾ. ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ-2014
- ವಾಗ್ವಿಲಾಸಿನಿ ಪುರಸ್ಕಾರ್ (ದೀನನಾಥ ಮಂಗೇಶ್ಕರ್ ಸ್ಮೃತಿ ಪ್ರತಿಷ್ಠಾನ)-2012
- ನಾಡೋಜ ಪ್ರಶಸ್ತಿ-2011
- ಸರಸ್ವತಿ ಸಮ್ಮಾನ್ ಪ್ರಶಸ್ತಿ (ಮಂದ್ರ ಕಾದಂಬರಿಗೆ)-2010
- ಎನ್.ಟಿ.ಆರ್ ರಾಷ್ಟ್ರೀಯ ಪ್ರಶಸ್ತಿ-2007
- ಗುಲಬರ್ಗಾ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್-2007
- ಪಂಪ ಪ್ರಶಸ್ತಿ-2005
- ಎಸ್.ಆರ್.ಪ್ರಶಸ್ತಿ-2002
- ಸಾಮಾನ್ಯ ಜ್ಞಾನ ಪ್ರಶಸ್ತಿ-2002
- ಗೊರೂರು ಪ್ರಶಸ್ತಿ-2000
- ಗ್ರಂಥಲೋಕ, ವರ್ಷದ ಅತ್ಯುತ್ತಮ ಸಾಹಿತ್ಯ ಕೃತಿ (ಸಾಕ್ಷಿ)-1998
- ಭಾರತೀಯ ಭಾಷಾ ಪರಿಷತ್ ಸಂವತ್ಸರ ಪುರಸ್ಕಾರ್,
- ಕೋಲ್ಕತ್ತಾ (ತಂತು ಕಾದಂಬರಿ): 1996-97
- ಮಾಸ್ತಿ ಸಾಹಿತ್ಯ ಪ್ರಶಸ್ತಿ-1996
- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ-1985
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ದಾಟು ಕಾದಂಬರಿಗೆ)-1975
- ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ವಂಶವೃಕ್ಷ ಕಾದಂಬರಿಗೆ)-1966
- ರಾಷ್ಟ್ರೀಯ ಪ್ರಾಧ್ಯಾಪಕ (ನ್ಯಾಷನಲ್ ಪ್ರೊಫೆಸರ್) ಗೌರವ
- ಸಾಹಿತ್ಯ ಅಕಾಡೆಮಿ ಫೆಲೋ ಗೌರವ

ಕಾದಂಬರಿಗಳು

» ಭೀಮಕಾಯ	1958
» ಧರ್ಮ ಶ್ರೀ	1961
» ದೂರ ಸರಿದರು	1962
» ಮತದಾನ	1965
» ವಂಶವೃಕ್ಷ	1965
» ಜಲಪಾತ (ಕಾದಂಬರಿ)	1967
» ನಾಯಿ ನೆರಳು	1968
» ತಬ್ಬಲಿಯು ನೀನಾದೆ	1968
» ಮಗನೆ	1968
» ಗೃಹಭಂಗ	1970
» ನಿರಾಕರಣ	1971
» ಗ್ರಹಣ	1972
» ದಾಟು	1973
» ಅನ್ವೇಷಣ	1976
» ಪರ್ವ	1979
» ನೆಲೆ	1983
» ಸಾಕ್ಷಿ	1986
» ಅಂಚು	1990
» ತಂತು	1993
» ಸಾರ್ಥ	1998
» ಮಂದ್ರ	2001
» ಆವರಣ	2007
» ಕವಲು	2010
» ಯಾನ	2014
» ಉತ್ತರಕಾಂಡ	2017

ಬಾಲ್ಯ, ಬದುಕು

- » ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ
- » ಗ್ರಾಮದಲ್ಲಿ 26-07-1934ರಲ್ಲಿ (ಭಿತ್ತಿ ಪ್ರಕಾರ) ಭೈರಪ್ಪನವರ ಜನನ
- » ಲಿಂಗಣ್ಣ- ಗೌರಮ್ಮ ತಂದೆ ತಾಯಿ
- » ಸಂತೇಶಿವರ ಹತ್ತಿರದ ಊರುಗಳಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ
- » ಹನ್ನೊಂದು ವರ್ಷದವರಾಗಿದ್ದಾಗ ತಾಯಿ ಗೌರಮ್ಮ (1945) ಮರಣ
- » ಒಂಭತ್ತನೆಯ ವಯಸ್ಸಿನಲ್ಲಿ ಅಣ್ಣ ಮತ್ತು ಅಕ್ಕ ಒಂದೇ ದಿನ ಸಾವು
- » 13ನೇ ವಯಸ್ಸಿನಲ್ಲಿಯೇ ಗಾಂಧೀಜಿಯವರ ಕರೆಯಂತೆ ಸ್ವಾತಂತ್ರ ಚಳವಳಿಗೆ
- » ಬ್ರಿಟಿಷ್ ಸರಕಾರದ ವಿರುದ್ಧ ಭಾಷಣ, ಹೆಂಡದ ಲಾರಿಗಳನ್ನು ತಡೆದ ಆಪಾದನೆ ಮೇಲೆ ಜೈಲಿಗೆ
- » ಮೈಸೂರಿನ ಶಾರದಾವಿಲಾಸದಲ್ಲಿ ಪ್ರೌಢ ಶಿಕ್ಷಣ, 1952ರಲ್ಲಿ ಎಸ್ಎಸ್ಎಲ್‌ಸಿ ಪೂರ್ಣ
- » 1954ರಲ್ಲಿ ಮಹಾರಾಜ ಕಾಲೇಜಿನಿಂದ ಇಂಟರ್ ಮೀಡಿಯಟ್‌ನಲ್ಲಿ ಉತ್ತೀರ್ಣ
- » ಇಂಟರ್‌ಮೀಡಿಯಟ್ ಓದುವಾಗ 'ಗತಜನ್ಮ' ನೀಳ್ಗತೆ, 'ಭೀಮಕಾಯ', 'ಬೆಳಕು ಮೂಡಿತು' ಎಂಬ ಕಾದಂಬರಿ ರಚನೆ
- » ಲೇಖಕ ಅ.ನ.ಕೃಷ್ಣರಾಯ ರಿಂದ ಭೈರಪ್ಪ ಅವರು ಪ್ರಭಾವಿತರಾಗಿದ್ದರು.
- » 1957ರಲ್ಲಿ ಬಿ.ಎ. (ಆನರ್ಸ್) ಪದವಿ, ತತ್ತ್ವಶಾಸ್ತ್ರ ವಿಷಯದಲ್ಲಿ ಎಂ.ಎ ಪದವಿ
- » 1958ರಲ್ಲಿ ಎಂ.ಎ ತತ್ತ್ವಶಾಸ್ತ್ರದಲ್ಲಿ ಎರಡು ಚಿನ್ನದ ಪದಕಗಳೊಂದಿಗೆ ಪ್ರಥಮ ರ್‍ಯಾಂಕ್
- » 1958ರಿಂದ 1960ರ ವರೆಗೆ ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ತತ್ತ್ವಶಾಸ್ತ್ರ ಮತ್ತು ಮನಶ್ಶಾಸ್ತ್ರದ ಅಧ್ಯಾಪಕರಾಗಿ ವೃತ್ತಿ ಆರಂಭ
- » -1958ರಲ್ಲಿ ಸರಸ್ವತಿ ಜತೆ ವಿವಾಹ. ರವಿಶಂಕರ್ (1960) ಉದಯಶಂಕರ್ (1962) ಇಬ್ಬರು ಪುತ್ರರ ಜನನ
- » -1960ರಿಂದ 1966ರವರೆಗೆ ಗುಜರಾತಿನ ಸರ್ದಾರ್ ಪಟೇಲ್ ವಿವಿಯಲ್ಲಿ ತತ್ತ್ವಶಾಸ್ತ್ರದ ಉಪನ್ಯಾಸಕರಾಗಿ ಕಾರ್ಯ
- » -ಧರ್ಮಶ್ರೀ ಕಾದಂಬರಿಯಿಂದ ಸಾಹಿತ್ಯ ಕೃಷಿ, 1961ರಲ್ಲಿ ಧರ್ಮಶ್ರೀ ಪ್ರಕಟ
- » ಗಂಗೂಬಾಯಿ ಹಾನಗಲ್ ಕುರಿತ ಗ್ರಂಥ ಸಂಪಾದನೆ ಮಾಡಿರುವ ಎಸ್.ಎಲ್.ಭೈರಪ್ಪ
- » 1962ರಲ್ಲಿ ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿವಿಗೆ ಬರೆದು ಒಪ್ಪಿಸಿದ 'ಸತ್ಯ' ಮತ್ತು 'ಸೌಂದರ್ಯ' ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ
- » 1967ರಿಂದ 1971ರವರೆಗೆ 4 ವರ್ಷಗಳ ಕಾಲ ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಶಿಕ್ಷಣ ಮೀಮಾಂಸೆಯ ಉಪಪ್ರಾಧ್ಯಾಪಕರಾಗಿ ಸೇವೆ
- » 1971ರಿಂದ 1991ರವರೆಗೆ 20 ವರ್ಷಗಳ ಕಾಲ ಸೇವೆ ಮೈಸೂರು ವಿವಿ ವ್ಯಾಪ್ತಿಯ ಪ್ರಾದೇಶಿಕ ಶಿಕ್ಷಣ ಕಾಲೇಜಿಗೆ ಪ್ರಾಧ್ಯಾಪಕರಾಗಿ ಸೇವೆ
- » ವಂಶವೃಕ್ಷಕ್ಕೆ 1966ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1975ರಲ್ಲಿ ದಾಟು ಕಾದಂಬರಿಗೆ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- » 'ಪರ್ವ' ಭೈರಪ್ಪನವರು ರಚಿಸಿದ ಕಾದಂಬರಿಗಳಲ್ಲೇ ಭಾರೀ ಚರ್ಚೆಗೆ ಒಳಗಾದದ್ದು,
- » 1999ರಲ್ಲಿ ಕನಕಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನಮ್ಮ ಗನ್ ಮ್ಯಾನ್ ಮಹೇಶ್ 'ಸಾರ್ ಭೈರಪ್ಪನವರು ನಿಧನರಾದರಂತೆ, ನ್ಯೂಸ್‌ನಲ್ಲಿ ಬರತ್ತೈತಿ' ಅಂದ, ಆತ ಅಕ್ಷರಶಃ ಗದ್ಗದಿತನಾಗಿದ್ದ, ಆನ್ ಮಾಡಿ ನೋಡಿದೆ, ಆತ ಸತ್ಯನ ಹೇಳಿದ್ದ. ಅವರು ಭೌತಿಕವಾಗಿ ನಷ್ಟ ಹೊಂದಿದ್ದರು. ಹದಿಹರೆಯದ ದಿನಗಳಲ್ಲಿ ಸರಾಗವಾಗಿ ಓದಿಸಿಕೊಂಡ ಅವರ ಕಾದಂಬರಿಗಳೊಂದೊಂದಾಗಿ ನೆನಪಾದವು. ಅವರ ಹಲವು ಕೃತಿಗಳು ಹಲವು ಓದಿಗೆ ಪಾತ್ರವಾಗಿದ್ದವು. ಅವರ ಕೃತಿಗಳು ಪ್ರಭಾವಿಸಿದ ಕಾರಣಕ್ಕೆ ನಾನೂ 'ಶಾಮಣ್ಣ' ಹೆಸರಿನ ಬೃಹತ್ ಕಾದಂಬರಿ ಬರೆದೆ. ಪ್ರಭುಶಂಕರ್ ಮನೆ ಪಕ್ಕದಲ್ಲಿದ್ದ ಮೈಸೂರಿನ ಅವರ ಮನೆಯಲ್ಲಿ ಎರಡು ಮೂರು ಸಲ ಒಡನಾಡಿದೆ, ಒಮ್ಮೆ ಅವರೊಂದಿಗೆ ಹೋಳಿಗೆ ಸೀಕರಣೆ ಉಂಡ ನೆನಪು. ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯವಿದ್ದಾಗ್ಯೂ ಅವರು ಹೊಸ ಬರಹಗಾರರ ಕೃತಿಗಳನ್ನು ಓದಿ ಪ್ರೋತ್ಸಾಹಿಸುತ್ತಿದ್ದರು. ಕಟು ಟೀಕೆ ಟಿಪ್ಪಣಿಗಳನ್ನು ನಸುನಗುತ್ತ ಅರಗಿಸಿಕೊಳ್ಳುತ್ತಿದ್ದರು. ಹೊರರಾಜ್ಯಗಳಲ್ಲೂ ಅಸಂಖ್ಯ ಅಭಿಮಾನಿಗಳನ್ನು ಹೊಂದಿದ್ದರು. ಅವರು ಕನ್ನಡ ಕಾದಂಬರಿಯ ದಿಗಂತವನ್ನು ವಿಶ್ವದಾದ್ಯಂತ ವಿಸ್ತರಿಸಿದರು.

ಕುಂ.ವೀರಭದ್ರಪ್ಪ ಖ್ಯಾತ ಕಾದಂಬರಿಗಾರ

ಭಾರತೀಯ ಪರಂಪರೆ, ನಾಗರಿಕ ಸಂವಿಧಾನ, ಸಂಸ್ಕೃತದ ಜಾಗತಿಕ ಮಹತ್ವ, ಸೃಜನಶೀಲ ರಾಜಕಾರಣದ ಅಡಿಗಲ್ಲುಗಳು, ವಿದೇಶಿ ಆಕ್ರಮಣಕಾರರ ಸೈದ್ಧಾಂತಿಕ ಮತ್ತು ಮತಾಂಧತೆಯ ಬೇರುಗಳ ಬಗ್ಗೆ ಬಹಳ ಸಂಶೋಧನೆ ಕೈಗೊಂಡು ಭಾರತದ ಸಾಹಿತ್ಯ ಕ್ಷೇತ್ರಕ್ಕೆ ಭಿನ್ನ ಮಜಲು ಸೃಷ್ಟಿಸಿದ್ದ ಭೈರಪ್ಪನವರ ಭೌತಿಕ ಅಗಲಿಕೆ ಸಾಹಿತ್ಯ ಮತ್ತು ಸಂಶೋಧನಾ ಲೋಕಕ್ಕೆ ತೀವ್ರಘಾತ ಉಂಟುಮಾಡಿದೆ. ಭಾರತದ ಶಿಕ್ಷಣ ವ್ಯವಸ್ಥೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಮೆಕಾಲೆ ಶಿಕ್ಷಣದ ನಕಾರಾತ್ಮಕ ಪ್ರಭಾವದಿಂದ ಆವರಿಸಿಕೊಂಡಿದ್ದ ಕತ್ತಲನ್ನು, ತಮ್ಮ ತೌಲನಿಕ, ಶಿಸ್ತುಬದ್ಧ ಚೌಕಟ್ಟಿನ ಸಂಶೋಧನೆಯ ಮುಖಾಂತರ ತೊಡೆದು ಹಾಕುವಲ್ಲಿ ಭೈರಪ್ಪನವರ ಕಾರ್ಯ ಸಾರ್ವಕಾಲಿಕವಾದದ್ದು.

ಡಾ.ಸುಧಾಕರ ಹೊಸಳ್ಳಿ, ಸಂವಿಧಾನ ತಜ್ಞ

10 ಭೈರಪ್ಪನವರ ಕಾದಂಬರಿಗಳ ಪೈಕಿ ಎಲ್ಲವೂ ಮನಸ್ಸಿನಾಳದಲ್ಲಿ ಬೇರುಬಿಟ್ಟು ಹರಡಿಕೊಂಡಿದ್ದರೂ, ಸಮಾಜದಲ್ಲಿ ಬಹಳ ಚರ್ಚೆಗೊಳಪಟ್ಟ 10 ಕೃತಿಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನೀಡಲಾಗಿದೆ.

1 ಪರ್ವ
ಮಹಾಭಾರತವನ್ನು ಹೊಸ ದೃಷ್ಟಿಕೋನದಿಂದ, ವೈಚಾರಿಕ ಮತ್ತು ಮಾನಸಿಕ ವಿಶ್ಲೇಷಣೆ ಯೊಂದಿಗೆ ಬರೆದ ಈ ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು.

2 ಸಾರ್ಥ
ಭಾರತೀಯ ತತ್ವಜ್ಞಾನದ ಆಳವನ್ನು ಅರಿಯಲು ಪ್ರೇರೇಪಿಸುವ, ಆದಿ ಶಂಕರರ ಜೀವನವನ್ನು ಐತಿಹಾಸಿಕ ಮತ್ತು ವೈಚಾರಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಕಾದಂಬರಿ.

3 ವಂಶವೃಕ್ಷ
ಮೌಲ್ಯಗಳು, ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷವನ್ನು ಸೂಕ್ಷ್ಮವಾಗಿ ವಿವರಿಸುವ ಈ ಕಾದಂಬರಿ ಚಲನಚಿತ್ರವಾಗಿಯೂ ಪ್ರಸಿದ್ಧವಾಗಿದೆ.

4 ದಾಟು
ಧರ್ಮ ಮತ್ತು ಜಾತಿಯ ಸೂಕ್ಷ್ಮಗಳನ್ನು ಆಧುನಿಕ ಸಮಾಜದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಈ ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದೆ.

5 ತಂತು
ತತ್ವಶಾಸ್ತ್ರ ಮತ್ತು ಮನುಷ್ಯ ಸಂಬಂಧಗಳನ್ನು, ವಿಶೇಷವಾಗಿ ಗುರು-ಶಿಷ್ಯರ ಸಂಬಂಧವನ್ನು ಆಧುನಿಕ ಸಂದರ್ಭದಲ್ಲಿ ವಿಶ್ಲೇಷಿಸಿ, ಚಿಂತನೆಗೆ ಒಳಪಡಿಸುತ್ತದೆ.

6 ಗೃಹಭಂಗ
ಗ್ರಾಮೀಣ ಬದುಕಿನ ವಾಸ್ತವತೆಯನ್ನು, ಕಡುಬಡತನ ಮತ್ತು ಕಷ್ಟಗಳ ನಡುವೆ ಒಂದು ಕುಟುಂಬದ ಹೋರಾಟವನ್ನು ನೈಜವಾಗಿ ಈ ಕೃತಿ ಚಿತ್ರಿಸುತ್ತಿದೆ.

7 ಮತದಾನ
ರಾಜಕೀಯ ವ್ಯವಸ್ಥೆ, ಚುನಾವಣೆ ಮತ್ತು ಹಳ್ಳಿಗಳ ವಾಸ್ತವಿಕ ಚಿತ್ರಣವನ್ನು ಒದಗಿಸುವ ಈ ಕೃತಿ, ರಾಜಕಾರಣದ ಸೂಕ್ಷ್ಮತೆಗಳನ್ನು ವಿವರಿಸುತ್ತದೆ.

8 ತಬ್ಬಲಿಯು ನೀನಾದೆ ಮಗನೆ
ಮೌಲ್ಯಗಳು, ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷವನ್ನು ಸೂಕ್ಷ್ಮವಾಗಿ ವಿವರಿಸುವ ಈ ಕಾದಂಬರಿ ಚಲನಚಿತ್ರವಾಗಿಯೂ ಪ್ರಸಿದ್ಧವಾಗಿದೆ.

9 ಆವರಣ
ಇತಿಹಾಸವನ್ನು ಪುನರ್ ವಿಮರ್ಶಿಸುವ, ಅದರಲ್ಲೂ ಭಾರತೀಯ ಇತಿಹಾಸದ ಕೆಲವು ನಿರ್ದಿಷ್ಟ ಘಟನೆಗಳ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

10 ಮಂದ್ರ
ಸಂಗೀತ ಮತ್ತು ಸೃಜನಶೀಲ ಬದುಕಿನ ಜಗತ್ತನ್ನು ಆಳವಾಗಿ ಪರಿಶೀಲಿಸುವ ಈ ಕೃತಿಯು, ಕಲಾವಿದನ ಅಂತರಂಗದ ಸಂಘರ್ಷ ಮತ್ತು ಸಾಧನೆಯ ಹಾದಿಯನ್ನು ನಿರೂಪಿಸುತ್ತದೆ.

ಅಮೃತಾನಂದಮಯಿ ಅವರಿಂದ ಅಮೃತಕೀರ್ತಿ ಪ್ರಶಸ್ತಿ ಸ್ವೀಕಾರ.

1931-2025

ಸರಸ್ವತಿ ಪುತ್ರನ ಪರ್ವಾಂತ್ಯ

ಪ್ರಶಸ್ತಿ ಮೊತ್ತವನ್ನು ಸದ್ದಿಲ್ಲದೇ ದಾನ ಮಾಡಿದ್ದ ಮಾನವತಾವಾದಿ

ಗೋಪಾಲಕೃಷ್ಣ ಕುಂಟಿನಿ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದು

2004ರ ಇಸವಿ. ಎಸ್.ಎಲ್.ಭೈರಪ್ಪ ಅವರಿಗೆ ನಿರಂಜನ ಪ್ರಶಸ್ತಿ ಘೋಷಿಸಲಾಗಿತ್ತು. ಪ್ರಶಸ್ತಿ ಸ್ವೀಕರಿಸಲು ಭೈರಪ್ಪ ಪುತ್ತೂರಿಗೆ ಬಂದಿದ್ದರು. ಅವರು ಹೋಟೇಲ್ ರಾಮದಲ್ಲಿ ವಾಸ್ತವ್ಯ ಹೂಡಿದ್ದರು. ಅವರನ್ನು ನಮ್ಮ ಪತ್ರಿಕೆಗಾಗಿ ಸಂದರ್ಶಿಸಲು ನಾನು ಹೋಟೇಲಿಗೆ ಹೋಗಿದ್ದೆ. ಸಂದರ್ಶನ ಮುಗಿದ ಮೇಲೆ ಭೈರಪ್ಪ ನನ್ನಲ್ಲಿ ಕೇಳಿದರು, ಇಲ್ಲಿಂದ ಅಳಿಕೆಗೆ ಎಷ್ಟು ದೂರ? ನಾನು ಇಪ್ಪತ್ತು ಕಿಮೀ ಇದೆ ಸಾರ್ ಅಂದೆ. ಹು ಅಂದರು. ಅವರನ್ನು ಪುತ್ತೂರಿಗೆ ಬರಮಾಡಿಕೊಂಡ ತಂಡದ ಮುಖ್ಯಸ್ಥರು ಡಾ.ಎಚ್.ಜಿ.ಶ್ರೀಧರ ಮೇಸ್ಟ್ರು. ಅವರು ಮರುದಿನ ಮುಂಜಾನೆ ಭೈರಪ್ಪ ಅವರನ್ನು ಕಾರ್ಯಕ್ರಮ ನಡೆಯುವ ವಿವೇಕಾನಂದ ಕಾಲೇಜಿಗೆ ಕರೆದೊಯ್ಯಲು ಹೋಟೇಲಿಗೆ ಬಂದರು. ಈ ವೇಳೆ ಭೈರಪ್ಪ, ಶ್ರೀಧರ ಅವರಲ್ಲಿ ಕೇಳಿದ್ದಾರೆ, ನೀವು ಪ್ರಶಸ್ತಿ ಜೊತೆ ಎಷ್ಟು ಹಣ ಕೊಡುತ್ತೀರಿ? ಶ್ರೀಧರ ಅವರು, ಹತ್ತು ಸಾವಿರ ರೂಪಾಯಿ ಸಾರ್ ಎಂದಿದ್ದಾರೆ. ಕ್ಯಾಶು ಕೊಡುವುದೋ? ಚೆಕ್ಕು ಕೊಡುವುದೋ? ಎಂದು ಭೈರಪ್ಪ ವಿಚಾರಿಸಿದ್ದಾರೆ. ಕ್ಯಾಶು ಎಂದಿದ್ದಾರೆ ಶ್ರೀಧರ. ಕಾರ್ಯಕ್ರಮ ಮಧ್ಯಾಹ್ನ ಮುಗಿಯಿತು. ಊಟ ಮುಗಿಸಿ ಭೈರಪ್ಪ ಹೋಟೇಲಿಗೆ ವಾಪಾಸಾಗುತ್ತಿದ್ದರು. ಕಾರಿನಲ್ಲಿ ಶ್ರೀಧರ ಮೇಸ್ಟ್ರು ಜೊತೆಗಿದ್ದಾರೆ. ಭೈರಪ್ಪ ಕೇಳಿದರು, ಶ್ರೀಧರರೇ, ನಿಮಗೆ ಅಭ್ಯಂತರವಿಲ್ಲದೇ ಹೋದರೆ ಸಂಜೆ ನಾವೊಮ್ಮೆ ಅಳಿಕೆಗೆ ಹೋಗಬಹುದೇ? ಎಂದು ಕೇಳಿದ್ದಾರೆ.

ಸಂಜೆ ಐದು ಗಂಟೆ ಸುಮಾರಿಗೆ ಭೈರಪ್ಪ ಅವರು ಶ್ರೀಧರ ಮೇಸ್ಟ್ರ ಜೊತೆ ಅಳಿಕೆಗೆ ಹೋಗಿದ್ದಾರೆ. ಅಲ್ಲಿ ಹಿರಿಯ ಸಾಹಿತಿ ಕೀರ್ತಿಶೇಷ ಶಿವರಾಮು ಅವರ ಪತ್ನಿ ಶಾರದಾ ವಾಸವಿದ್ದ ಮನೆಗೆ ಹೋಗಿದ್ದಾರೆ. ಶಾರದಮ್ಮ ಭೈರಪ್ಪ ಮತ್ತು ಶ್ರೀಧರ ಮೇಸ್ಟ್ರನ್ನು ಬರಮಾಡಿಕೊಂಡು ಚಹಾ, ಮಾತುಕತೆ ಎಲ್ಲಾ ನಡೆದು, ಇನ್ನೇನು ಬೀಳ್ಕೊಡುವ ಹೊತ್ತಿಗೆ ತನ್ನ ಬಳಿ ಶಿವರಾಮ ಕಾರಂತ ಪ್ರಶಸ್ತಿಯ ಜೊತೆಗೆ ಕೊಟ್ಟಿದ್ದ ಹತ್ತು ಸಾವಿರ ರೂಪಾಯಿಗಳ ಕಟ್ಟನ್ನು ಆರ್ಥಿಕವಾಗಿ ಕಷ್ಟದಲ್ಲಿದ್ದ ಶಾರದಾ ಅವರ ಕೈಗೆ ನೀಡಿದ್ದಾರೆ. ಆಕೆ ಕಣ್ಣು ತುಂಬಿಕೊಂಡು ಅದನ್ನು ಸ್ವೀಕರಿಸಿದ್ದಾರೆ. ವಾಪಸ್ಸು ಕಾರಿನಲ್ಲಿ ಪುತ್ತೂರಿಗೆ ಬರುತ್ತಿದ್ದಾಗ ಭೈರಪ್ಪ, ಶ್ರೀಧರ ಅವರೇ, ನಾನು ದುಡ್ಡನ್ನು ಇವರಿಗೆ ಕೊಟ್ಟಿರುವುದು ಎಲ್ಲೂ ಹೊರಗೆ ಬರಬಾರದು. ಅದೇನಾದರೂ ಹೊರಬಂದರೆ ನೀವೇ ಅಪರಾಧಿ.. ಎಂದು ಹೇಳಿ ನಸುನಕ್ಕಿದ್ದಾರೆ. 21 ವರ್ಷಗಳ ಕಾಲ ಈ ಸುದ್ದಿ ಶ್ರೀಧರ ಮೇಸ್ಟ್ರಲ್ಲೇ ಉಳಿದಿತ್ತು. ಶ್ರೀಧರ ಮೇಸ್ಟ್ರು ಇತ್ತೀಚೆಗೆ ನನ್ನ ಬಳಿ ಇದನ್ನು ಹೇಳಿಕೊಂಡಿದ್ದರು. ಭೈರಪ್ಪ ಇನ್ನಿಲ್ಲ. ಈ ಸುದ್ದಿ ಇನ್ನು ಹೊರಗೆ ಬಂದರೆ ತಪ್ಪೂ ಇಲ್ಲ.

ಅಗಾಧ ಸಂಖ್ಯೆಯಲ್ಲಿ ಕೃತಿಗಳು ಮಾರಾಟವಾಗುತ್ತಿದ್ದ, ಕನ್ನಡದ ಸಾಹಿತಿ ಭೈರಪ್ಪ ನಿಧನರಾದ ಸುದ್ದಿ ಕೇಳಿ ದುಃಖವಾಗಿದೆ. ಅವರ ಸಾಹಿತ್ಯ ಅಪಾರ. ವಿಭಿನ್ನ ಆಯಾಮಗಳನ್ನು ಸ್ಪರ್ಶಿಸಿದ ರೀತಿ ಅದ್ಭುತ. ಅವರು ಕನ್ನಡದಲ್ಲೂ, ಅನುವಾದದ ಮೂಲಕ ವಿವಿಧ ಭಾಷೆಗಳಲ್ಲೂ ದೊಡ್ಡದಾಗಿ ಗುರ್ತಿಸಿಕೊಂಡಿದ್ದರು. ಅವರು ಪದ್ಮಶ್ರೀ, ಪದ್ಮಭೂಷಣ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದ್ದರು. ತಮ್ಮ ಮಂದ್ರ ಪುಸ್ತಕಕ್ಕಾಗಿ ಸರಸ್ವತಿ ಸಮ್ಮಾನ್ ಪುರಸ್ಕಾರವನ್ನು ಪಡೆದಿದ್ದರು.

ನಿರ್ಮಲಾ ಸೀತಾರಾಮನ್ ಕೇಂದ್ರ ವಿತ್ತಸಚಿವೆ

ಡಾಕ್ಟರ್ ಎಸ್.ಎಲ್.ಭೈರಪ್ಪನವರ ನಿಧನದಿಂದ ದೇಶ ಒಬ್ಬ ಅಪ್ರತಿಮ ದೇಶಪ್ರೇಮಿ, ಭಾರತೀಯ ಸಂಸ್ಕೃತಿ ಪ್ರೇಮಿ ಲೇಖಕನೊಬ್ಬನನ್ನು ಕಳೆದುಕೊಂಡಿದ್ದಾಗಿದೆ. ಅತ್ಯಂತ ಹೆಚ್ಚು ಓದುವವರನ್ನು ಹೊಂದಿದ್ದ ಭೈರಪ್ಪನವರು ಸದಾ ಅಧ್ಯಯನಶೀಲ, ಸೃಜನಶೀಲ, ಸಾಮಾಜಿಕ ಕಳಕಳಿಯುಳ್ಳ ಲೇಖಕರಾಗಿದ್ದರು. ನನ್ನ ವೈದ್ಯಕೀಯ ಲೇಖನಗಳ ಬಗ್ಗೆ ಅತೀವ ಸಂತಸ ವ್ಯಕ್ತಪಡಿಸುತ್ತಿದ್ದ ಅವರು, ನನ್ನ ಸಮಗ್ರ ಆರೋಗ್ಯ ದರ್ಶನ ಮತ್ತು ಆಧ್ಯಾತ್ಮಿಕ ಆರೋಗ್ಯ ದರ್ಶನ ಕೃತಿಗಳನ್ನು ಓದಿ ಭಾರತೀಯ ಪ್ರಾಚೀನ ಆರೋಗ್ಯ ಮತ್ತು ಆಧುನಿಕ ವೈದ್ಯ ವಿಜ್ಞಾನಗಳೆರಡರ ಸಮ್ಮಿಶ್ರಿತ ಸಮಗ್ರ ದೃಷ್ಟಿ ಕೋನ ಯೋಗಣ್ಣನವರ ಲೇಖನಗಳಲ್ಲಿವೆ ಎಂದು ನನ್ನ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದರು.

ಡಾ.ಯೋಗಣ್ಣ ಮೈಸೂರು

ಭೈರಪ್ಪ ನಿಧನದಿಂದ ಸಾಹಿತ್ಯಲೋಕ ಬಡವಾಗಿದೆ. ಸಾವಿನ ಸುದ್ದಿ ಆಘಾತ ತಂದಿದೆ. ಸರಸ್ವತಿ ಸಮ್ಮಾನ್ ಪಡೆದು ಆ ಪ್ರಶಸ್ತಿಯ ಹಿರಿಮೆ ಹೆಚ್ಚಿಸಿದ ಸಾಹಿತಿ ಭೈರಪ್ಪನವರು. ಸಾಹಿತ್ಯ ಲೋಕದಲ್ಲಿ ಅವರು ಅಜರಾಮರ.

ಮನು ಬಳಿಗಾರ್ ಕಸಾಪ ಮಾಜಿ ಅಧ್ಯಕ್ಷ

ಭೈರಪ್ಪನವರು ಕನ್ನಡದ ಬಹುಮಾನ್ಯ ಲೇಖಕರು. ಕನ್ನಡ ಸಾಹಿತ್ಯ ಲೋಕದಲ್ಲಿ ಓದುಗ ಪ್ರಪಂಚವನ್ನು ಬಹು ದೊಡ್ಡ ಪ್ರಮಾಣದಲ್ಲಿ ಬೆಳೆಸಿದವರು. ತಾತ್ವಿಕವಾಗಿ ಭಿನ್ನ ನೆಲೆಯಲ್ಲಿ ಬರೆಯುತ್ತಿದ್ದ ಲೇಖಕರಾದರೂ, ಮಾನವೀಯ ಸಂಬಂಧಗಳನ್ನು ಗೌರವದಲ್ಲಿ ನಡೆಸಿಕೊಳ್ಳುತ್ತಿದ್ದ ಅಪ್ಪಟ ಮಾನವತಾವಾದಿ. ಗೃಹಭಂಗ ಕಾದಂಬರಿ ಅವರ ಅನುಭವಾತ್ಮಕ ನೆಲೆಯ ಕನ್ನಡದ ಬಹುಮಾನ್ಯ ಕಾದಂಬರಿ. ಅವರಿಗೆ ಬರಹವೆಂದರೆ ಸಂಶೋಧನೆಯ ನೆಲೆಯಲ್ಲಿ ಸಮಾಜವಿಜ್ಞಾನದ ಮಾನವಶಾಸ್ತ್ರದ ಸತ್ಯಶೋಧನೆ. ಅವರ ಮನೆಗೆ ಹೋಗಿ ಅವರೊಡನೆ ಮಾತನಾಡಿದ ಅನುಭವ ಇಂದಿಗೂ ಹಸಿರಾಗಿರುವ ನೆನಪು. ಆ ಹಿರಿಯ ಜೀವಕ್ಕೆ ಗೌರವದ ಅಶ್ರುತರ್ಪಣ.

ಎಸ್.ಜಿ.ಸಿದ್ಧರಾಮಯ್ಯ, ವಿಮರ್ಶಕ



ಭೈರಪ್ಪನವರ ಬದುಕು ಕೊನೆಯಿಲ್ಲದ ಯಾನ. ಹಿಮಾಲಯದಷ್ಟೇ ಎತ್ತರದ ವ್ಯಕ್ತಿತ್ವ ಅವರದ್ದು, ತಮ್ಮ ಕಾದಂಬರಿಯ ಮೂಲಕವೇ ವಿಜ್ಞಾನಿಗಳು ಯೋಚಿಸಲೂ ಸಾಧ್ಯವಾಗದ ಪಾತ್ರಗಳನ್ನು ಸೃಷ್ಟಿಸಿದವರು. ಈ ನವರಾತ್ರಿಯ ಸಂದರ್ಭದಲ್ಲಿ ಅವರನ್ನು ಕಳೆದುಕೊಂಡಿದ್ದು ಬಹಳ ದುಃಖ ತಂದಿದೆ. ಹಲವಾರು ಕಾದಂಬರಿಗಳು, ವಿಶ್ಲೇಷಣಾತ್ಮಕ ಚಿಂತನೆಗಳ ಮೂಲಕ ಹೊಸ ದಾರಿಯನ್ನೇ ತೆರೆದರು.

ಅನಂತ್ ನಾಗ್ ಹಿರಿಯ ನಟ

ನಾನೇಕೆ ಬರೆಯುತ್ತೇನೆ?

(ನಾನೇಕೆ ಬರೆಯುತ್ತೇನೆ? ಕೃತಿಯಿಂದ ಆಯ್ದುಕೊಂಡಿದ್ದು)

ಎಸ್.ಎಲ್.ಭೈರಪ್ಪ

ತಾವು ಇಂಥದೇ ಕಾರಣಕ್ಕಾಗಿ ಬರೆಯುತ್ತೇವೆಂದು ಎಲ್ಲ ಲೇಖಕರೂ ತಮ್ಮ ಜೀವನದುದ್ದಕ್ಕೂ ಮಾರ್ಗದರ್ಶಿಯಾಗುವಂಥ ಗುರಿಯನ್ನು ಖಚಿತಮಾಡಿಟ್ಟುಕೊಂಡಿರುವುದು ಸಾಧ್ಯವಿಲ್ಲ. ಉಳಿದವರ ಮಾತು ಹೋಗಲಿ. ನನ್ನ ಬರವಣಿಗೆಯ ಗೊತ್ತುಗುರಿಗಳು ಇನ್ನು ಒಂದು ವಾರದ ನಂತರ ಯಾವ ಧಾಟಿಯಲ್ಲಿ ಹೋಗುತ್ತವೆ ಎಂದು ಈ ದಿನ ನಿಶ್ಚಯವಾಗಿ ಹೇಳಲಾರೆ. ಕಳೆದ ಹದಿನೇಳು ವರ್ಷದಿಂದ, ಎಂದರೆ 1959ರಿಂದ ಬರೆಯುತ್ತಿದ್ದೇನೆ. ಈ ಅವಧಿಯಲ್ಲಿ ನನ್ನ ಬರವಣಿಗೆಯ ಯಾಕೆ ಏನುಗಳನ್ನು ಹಲವು ಬಾರಿ ವಿಮರ್ಶಿಸಿಕೊಂಡಿದ್ದೇನೆ. ಬದಲಿಸಿಕೊಂಡಿದ್ದೇನೆ. ಎಷ್ಟೋ ಸಲ ನಾನು ಪ್ರಜ್ಞೆಯ ಮಟ್ಟದಲ್ಲಿ ಆಲೋಚಿಸಿದ್ದ ರೀತಿಯನ್ನು ಮೀರಿ ಕೃತಿಗಳು ಸ್ವರೂಪ ತಳೆದಿವೆ. ಅವುಗಳ ಹೊಸ ಬೆಳಕಿನಲ್ಲಿ ನನ್ನ ಬರವಣಿಗೆಯ ದಿಕ್ಕು ಯಾವುದು ಎಂಬುದನ್ನು ಪುನರ್ವಿಮರ್ಶಿಸಿಕೊಂಡಿರುವುದೂ ಉಂಟು. ಈ ಅರ್ಥದಲ್ಲಿ ನಾನೇಕೆ ಬರೆಯುತ್ತೇನೆ ಎಂಬ ಪ್ರಶ್ನೆಯ ಉತ್ತರವು ಸಮಗ್ರವಾಗಿ ನನಗೇ ಪೂರ್ತಿಯಾಗಿ ಅರಿವಿಗೆ ಬಂದಿಲ್ಲವೆಂದೂ ಹೇಳಬಹುದು. ನನ್ನ ಬರವಣಿಗೆಯ ಆರಂಭಬಿಂದುವಿನಿಂದ ಇದುವರೆಗೆ ಬದಲಾದ ಕೆಲವು ಮುಖ್ಯ ತಿರುವುಗಳನ್ನು ಸಮೀಕ್ಷಿಸಿ ಈಗ ಯಾವ ನಿಲುವಿಗೆ ಬಂದಿರುವನೆಂದು ಸೂಚಿಸುವ ಪ್ರಯತ್ನವನ್ನಷ್ಟೇ ಇಲ್ಲಿ ಮಾಡುತ್ತೇನೆ.

ನನ್ನ ಮೊಟ್ಟಮೊದಲ ಕೃತಿ 'ಧರ್ಮಶ್ರೀ'ಯನ್ನು ಬರೆದಾಗ ಸಮಾಜದ ಹಲವು ಓರೆ ಕೋರೆಗಳನ್ನು ಸಾಹಿತ್ಯದಲ್ಲಿ ಹೊರಹಾಕಿ ಆ ಮೂಲಕ ತಿದ್ದಬೇಕೆಂಬ ಉದ್ದೇಶವಿತ್ತು. ಅದರಲ್ಲಿ ನಾನು ಹುಟ್ಟಿ ಬೆಳೆದ ಹಿಂದೂ ಸಮಾಜದ ನ್ಯೂನತೆಗಳನ್ನು ತೋರಿಸಲು ಹೊರಟೆ. ಬರೆದ ನಾಲ್ಕೈದು ವರ್ಷಗಳಲ್ಲಿಯೇ, ಅದನ್ನು ಪ್ರಕಟಿಸಿಯೂಬಿಟ್ಟಿದ್ದೆ. ಈ ರೀತಿಯ ಕೃತಿಯ ಮಿತಿಗಳು ನನಗೆ ಕಾಣತೊಡಗಿದವು. ಸಮಾಜಪರಿವರ್ತನೆ ಎಂಬ ಸಾಹಿತ್ಯೇತರ ಉದ್ದೇಶವು ತಲೆ ಎತ್ತಿರುವ ಭಾಗಗಳೆಲ್ಲ ಸಾಹಿತ್ಯಿಕವಾಗಿ ವಿಫಲಗೊಂಡು, ಈ ಉದ್ದೇಶವನ್ನು ಮೀರಿ ತಮಗೆ ತಾವೇ ಅಭಿವ್ಯಕ್ತವಾದ ಕೆಲವು ವಿವರ, ಸನ್ನಿವೇಶ ಮತ್ತು ಗೌಣಪಾತ್ರಗಳು ಜೀವಂತವಾಗಿರುವುದು ತಿಳಿಯಿತು. ಸಮಾಜವನ್ನು ಸಾಹಿತ್ಯದ ಮೂಲಕ ತಿದ್ದುವೆನೆಂಬ ಹುಚ್ಚಿನಿಂದ ನನ್ನನ್ನು ನಾನು ಬಿಡಿಸಿಕೊಂಡೆ. ನನ್ನ ಕಾದಂಬರಿಯನ್ನು ಓದಿ ಯಾರೂ ಬದಲಾಗಲಿಲ್ಲ. ಸಮಾಜ ತನ್ನ ಪಾಡಿಗೆ ತಾನು ಹೋಗುತ್ತಿದೆ ಎಂಬ ಭ್ರಮನಿರಸನವೂ ಅಷ್ಟರಲ್ಲಿ ಆಗಿತ್ತು. ಸಮಾಜಪರಿವರ್ತನೆಗೆ ಹತ್ತಾರು ಬೇರೆ ಬೇರೆ ಕಾರಣಗಳಿರುತ್ತವೆ. ಆರ್ಥಿಕ, ರಾಜಕೀಯ, ಔದ್ಯೋಗಿಕ, ವೈಚಾರಿಕ, ಹೀಗೆ ಹಲವು ಮುಖಗಳಲ್ಲಿ ಆಗುವ ಬದಲಾವಣೆಗಳ ಪರಿಣಾಮವಾಗಿ ಮನುಷ್ಯ ಮನುಷ್ಯನ ಸಂಬಂಧದ ಪರಿವರ್ತನೆಯಾಗುತ್ತದೆ. ಸದ್ಯದಲ್ಲಿ ಆಗುತ್ತಿರುವ ಈ ಬದಲಾವಣೆಗಳನ್ನೂ ಅವುಗಳು ಮಾನವ ಸಂಬಂಧದಲ್ಲಿ ಉಂಟು ಮಾಡುವ ಪರಿವರ್ತನೆಯನ್ನೂ ಸಾಹಿತ್ಯಕೃತಿಯು ಗುರುತಿಸಿ ಅಭಿವ್ಯಕ್ತಿಸಬಹುದು. ಅದನ್ನು ಓದಿದವರಿಗೆ ಸಮಸ್ಯೆಯ ಒಂದುಬಂಧದ ಅರಿವಾಗಬಹುದು.

ಅವರ ಸಂವೇದನೆಯಲ್ಲಿ ಪರಿವರ್ತನೆಯಾಗಬಹುದು. ಈ ದೃಷ್ಟಿಯಿಂದ ಸಮಾಜಪರಿವರ್ತನೆಯಲ್ಲಿ ಸಾಹಿತ್ಯಕೃತಿಗಳ ಪಾತ್ರವು ಕಿಂಚಿತ್ತೂ ಇಲ್ಲವೆನ್ನಲಾಗದಿದ್ದರೂ, ಮೇಲೆ ಹೇಳಿದ ಹಲವು ಮುಖಗಳ ಬದಲಾವಣೆಗಳೊಡನೆ ಹೋಲಿಸಿದಾಗ ಪರಿವರ್ತನೆಯ ಸಾಧನವಾಗಿ ಸಾಹಿತ್ಯಕ್ಕೆ ಅತಿಯಾದ ಮಹತ್ವವನ್ನು ಕೊಡಲು ಸಾಧ್ಯವಿಲ್ಲ. ಕಡಿಮೆ ಪ್ರಮಾಣದ ವಿದ್ಯಾವಂತ ರಿರುವ ನಮ್ಮ ಸಮಾಜದಲ್ಲಿ ಸಾಹಿತ್ಯಕೃತಿಗಳನ್ನು ಓದುವವರ ಪ್ರಮಾಣವೆಷ್ಟು? ಹೀಗೆ ಓದುವವರು ಯಾವ ವರ್ಗದವರು. ಯಾವ ಕಸುಬಿನವರು? ಸಾಹಿತ್ಯಕೃತಿಗಳಿಂದ ಸ್ಫೂರ್ತಿ ಪಡೆದು ಈ ಜನರು ಏನಾದರೂ ಕ್ರಾಂತಿ ಮಾಡುತ್ತಾರೆ ಅಥವಾ ತಮ್ಮನ್ನು ತಾವು ಬದಲಾಯಿಸಿಕೊಳ್ಳುತ್ತಾರೆ, ಎಂದು ನಂಬಿ ಸಾಹಿತಿಗಳು ಮಾತ್ರ ಆತ್ಮತೃಪ್ತಿಪಟ್ಟುಕೊಳ್ಳಬಹುದು.

ಹಾಗಾದರೆ ನನ್ನ ಬರವಣಿಗೆಯ ಗುರಿ ಏನು ಎಂಬ ಪ್ರಶ್ನೆಯಂತೂ ಆಗಾಗ್ಗೆ ಮನಸ್ಸನ್ನು ಕೊರೆಯುತ್ತಲೇ ಇತ್ತು. ಅಷ್ಟರಲ್ಲಿ 'ವಂಶವೃಕ್ಷ'ವನ್ನು ಬರೆದಿದ್ದೆ. ಬರೆದ ಕೆಲವು ತಿಂಗಳುಗಳ ನಂತರ ಹಸ್ತಪ್ರತಿಯನ್ನು ಓದುವಾಗ ಬೇರೊಂದು ಉತ್ತರವು ಕಾಣಿಸಿತು: ನಂಬಿಕೆ, ಆಚಾರ ವಿಚಾರಗಳ ಒಂದು ಯುಗವು ಕಳೆದು ಮತ್ತೊಂದು ಯುಗವು ಬರುವಾಗಿನ ಸ್ಥಿತ್ಯಂತರ ಕಾಲದಲ್ಲಿ ಬದುಕುವ ವ್ಯಕ್ತಿಗಳ ನೋವು, ಘರ್ಷಣೆ ಮೊದಲಾದುವನ್ನು ಚಿತ್ರಿಸುವುದೇ ಸಾಹಿತ್ಯದ ಗುರಿಯಾಗಬೇಕು ಎನ್ನಿಸಿತು. ಈ ವಿಚಾರವನ್ನೇ ಲಂಬಿಸಿ 'ವಂಶವೃಕ್ಷ'ಕ್ಕೆ ಹಿನ್ನುಡಿಯಾಗಿ ಬರೆದು ಅಂಟಿಸಿದೆ. 'ಹಿನ್ನುಡಿ'ಯಾಗಿ ಅಂಟಿಸಿದುದು ಒಂದು ದೃಷ್ಟಿಯಿಂದ ಅರ್ಥಪೂರ್ಣವಾಯಿತೆಂದು ಈಗ ಅನ್ನಿಸುತ್ತಿದೆ. ಏಕೆಂದರೆ ಈ ವಿಚಾರಗಳೆಲ್ಲ, ಕೃತಿಯನ್ನು ಬರೆದು ಮುಗಿಸಿದ ನಂತರ ಅದರ ಬಗೆಗೆ ಆಲೋಚಿಸುವಾಗ ಹುಟ್ಟಿಕೊಂಡವುಗಳು. ಕೃತಿರಚನೆಗೆ ಮುನ್ನವೇ ಅಥವಾ ಕೃತಿರಚನೆಯ ಪರಿಕ್ರಮದಲ್ಲಿಯೇ ಸುಪ್ತವಾಗಿದ್ದು ಕೃತಿಯ ಅಂತಃಸತ್ಯ ಮತ್ತು ಸ್ವರೂಪಗಳನ್ನು ರೂಪಿಸಿದ ಅಂಶಗಳಲ್ಲ. ನಾವು ಮಾಡಿದ ಕೆಲಸಗಳನ್ನು ಸಮರ್ಥಿಸಿಕೊಳ್ಳಲು ವಾದಗಳನ್ನು ಸೃಷ್ಟಿಸುವಂತೆ ತಾವು ಬರೆದ ಕೃತಿಗಳ ಪ್ರಾಮುಖ್ಯವನ್ನು ಸ್ಥಾಪಿಸಿಕೊಳ್ಳಲು ಆ ಕೃತಿಯನ್ನು ಬರೆದ ಉದ್ದೇಶಗಳನ್ನು ಲೇಖಕರು ಎಷ್ಟೋ ಸಲ ಸೃಷ್ಟಿಸಿಕೊಳ್ಳುವುದು ಅಪೂರ್ವವಲ್ಲ. 'ವಂಶವೃಕ್ಷ'ವನ್ನು ಒಂದು ಸಾಹಿತ್ಯಕೃತಿ ಎಂದು ವಿಮರ್ಶಿಸಬೇಕೇ ಹೊರತು, ಸ್ಥಿತ್ಯಂತರ ಕಾಲದ ಜನರ ಘರ್ಷಣೆ ಯಾತನೆಗಳನ್ನು ತುಂಬಿಕೊಂಡಿರುವ ಕೃತಿ ಎಂಬ ಪ್ರತ್ಯೇಕ ಜಾತಿಸೂತ್ರಗಳನ್ನು ನಿರ್ಮಿಸಿ ಅನ್ವಯಿಸಿ ವಿಮರ್ಶಿಸಬಾರದೆಂಬ ಅರಿವು ಹಲವು ವರ್ಷಗಳ ನಂತರ ನನಗೇ ಆಯಿತು.

ಆದರೆ ಈ ಅವಧಿಯಲ್ಲಿ 'ತಬ್ಬಲಿಯು ನೀನಾದೆ ಮಗನೆ'ಯನ್ನು ಬರೆದಿದ್ದೆ. 'ವಂಶವೃಕ್ಷ'ವನ್ನು ಬರೆದ ನಂತರ ನನ್ನಲ್ಲಿ ಮೂಡಿಬಂದ ಸ್ಥಿತ್ಯಂತರದ ಕಾಲದ.....ಎಂಬ ವಿಚಾರವು 'ತಬ್ಬಲಿ' ಕಾದಂಬರಿಯನ್ನು ಬರೆಯುವಾಗ ಸ್ಪಷ್ಟವಾಗಿ ನನ್ನ ಮನಸ್ಸಿನಲ್ಲಿ ನಿಂತಿದ್ದು ಕೃತಿರಚನೆಯ ಪರಿಕ್ರಮವನ್ನು

ರೂಪಿಸುವ ಒಂದು ಪ್ರಮುಖ ಅಂಶವೇ ಆಗಿತ್ತು. ಇದು ಈ ಕೃತಿಯ ಸಾಹಿತ್ಯಕ ಮಿತಿಯ ಒಳಕಾರಣವೆಂಬುದು ನನಗೆ ಹೊಳೆದದ್ದು ಮೂರು ನಾಲ್ಕು ವರ್ಷಗಳ ನಂತರ. ಇಲ್ಲಿ ಕೂಡ ಈ ಪೂರ್ವನಿಶ್ಚಿತ ವಿಚಾರವನ್ನು ಮೀರಿ ಮೂಡಿಬಂದ ಕೆಲವು ಪಾತ್ರಗಳು ಜೀವಂತವಾಗಿವೆ.

'ವಂಶವೃಕ್ಷ'ದ ಹಿನ್ನುಡಿಯನ್ನು ಬರೆದ ನಂತರ, 'ವಂಶವೃಕ್ಷ'ದಿಂದ ಬಿಡಿಸಿಕೊಳ್ಳಬೇಕೆಂಬ ಅನ್ನಿಸಿಕೆ ನನ್ನಲ್ಲಿ ಹುಟ್ಟಿತು. ಈ ದಿಶೆಯ ಪ್ರಯತ್ನದಲ್ಲಿ 'ಮತದಾನ'ವನ್ನು ಬರೆದೆ. ಸ್ಥಿತ್ಯಂತರ ಕಾಲದ..... ಯಾವ ಹೊರೆಯೂ ಇಲ್ಲದೆ ಸಮಕಾಲೀನ ಜೀವನದ ಒಂದು ಮುಖವನ್ನು ವಾಸ್ತವತೆಯ ಹದದಲ್ಲಿ ಹಿಡಿಯುವ ಪ್ರಯತ್ನ ಅದು. ಮುಂದೆ ಈ ಹದವೇ 'ಗೃಹಭಂಗ'ವನ್ನು ನಿರೂಪಿಸಿತು. 'ಗೃಹಭಂಗ'ವನ್ನು ಬರೆದು ಮುಗಿಸಿದ ನಂತರ ನನ್ನ ಸಾಹಿತ್ಯದ ಗೊತ್ತುಗುರಿಗಳು ನನಗೆ ಹೆಚ್ಚು ಸ್ಪಷ್ಟವಾಗಿ ಗೋಚರಿಸಿದವು; ನೇರವಾಗಿ ಜೀವನವನ್ನು ನೋಡಿ ಅದರ ನಾಡಿಯ ಮಿಡಿತವನ್ನು ಸಾಹಿತ್ಯದಲ್ಲಿ ಮೂಡಿಸುವುದೇ



ಬರವಣಿಗೆಯ ಗುರಿಯಾಗಬೇಕು: ಯಾವ ತತ್ತ್ವ ಆದರ್ಶ ಮೊದಲಾದವುಗಳೂ ನೇರವಾಗಿ ಸಾಹಿತ್ಯಕೃತಿಯ ವಸ್ತುವಾಗಬಾರದು ಎಂಬ ಅರಿವು ಸ್ಪಷ್ಟವಾಯಿತು. ಇದನ್ನೇ ಬೇರೆ ಮಾತಿನಲ್ಲಿ ಹೇಳಬೇಕಾದರೆ, ಸತ್ಯಾನ್ವೇಷಣೆಯೇ ಬರವಣಿಗೆಯ ಗುರಿಯಾಗಬೇಕು ಎಂಬ ದೃಷ್ಟಿ ಸ್ಫುಟವಾಯಿತು. ಇಲ್ಲಿ ಸತ್ಯ, ಅನ್ವೇಷಣೆ, ಎಂಬ ಮಾತುಗಳನ್ನು ಯಾವ ಅರ್ಥದಲ್ಲಿ ಗ್ರಹಿಸಬೇಕೆಂದು ಸೂಚಿಸುವುದು ಅಗತ್ಯ. ನನ್ನ ಚಿಕ್ಕ ವಯಸ್ಸಿನಿಂದ ಆದ ಅನುಭವದ ಪರಿಣಾಮವೋ, ಅಥವಾ ನನ್ನ ಮನೋಧರ್ಮವೇ ಅಂಥದೋ ಅಥವಾ ಇವೆರಡರ ಸಂಯುಕ್ತ ಪರಿಣಾಮವೋ, ಜೀವನದ ಬಗೆಗೆ ನಿಜವನ್ನು ಅರಿಯಬೇಕೆಂಬ ಪ್ರಯತ್ನ, ಜಿಜ್ಞಾಸೆಗಳು ನನ್ನ ಹದಿವಯಸ್ಸಿನಲ್ಲೇ ಆರಂಭವಾಗಿದ್ದವು. ಅದರ ಫಲವಾಗಿ ತತ್ತ್ವಶಾಸ್ತ್ರದ ಅಧ್ಯಯನವನ್ನು ಬಹಳ ಮನಸ್ಸಿಟ್ಟು ಮಾಡತೊಡಗಿದೆ. ನನ್ನ ಅಧ್ಯಾಪಕ ವೃತ್ತಿಯ ವಿಷಯವೂ ಅದೇ ಆಯಿತು. ಹೀಗೆ ಸುಮಾರು ಹತ್ತು ಹನ್ನೆರಡು ವರ್ಷ ಅದರಲ್ಲೇ ಮುಳುಗಿ ಏಳುವ ಹೊತ್ತಿಗೆ, ಸೌಂದಯ್ಯಮೀಮಾಂಸೆ, ಜ್ಞಾನಮೀಮಾಂಸೆ, ಮೌಲ್ಯಮೀಮಾಂಸೆ ಮೊದ ಲಾದ ಅದರ ಶಾಖೆಗಳನ್ನು ಅಧ್ಯಯನ ಮಾಡುವ ವೇಳೆಗೆ, ಶಾಸ್ತ್ರಗಳು ಸಾರುವ ಸತ್ಯದ ಸಾಪೇಕ್ಷ ಅರ್ಥದ ಅರಿವಾಗಿ ಅದರಲ್ಲಿ ಆಸಕ್ತಿ ಕಡಿಮೆಯಾಗತೊಡಗಿತು. ತತ್ತ್ವಶಾಸ್ತ್ರಜ್ಞನು ಹೇಳುವ ಸತ್ಯವನ್ನು ಓದುವುದಕ್ಕಿಂತ ಒಂದೇ ಒಂದು ತುಣುಕಾದರೂ ನಾನೇ ಸ್ವತಃ ಕಂಡುಕೊಂಡ ಸತ್ಯದಿಂದ ಹೆಚ್ಚು ಸಂತೋಷ, ಕೃತಕೃತ್ಯತೆಯ ಭಾವಗಳು ದೊರಕುತ್ತವೆ ಎಂಬುದು ಅನುಭವಕ್ಕೆ ಬಂತು.

ನನಗೆ ಆಸಕ್ತಿ ಇರುವುದು ಮನುಷ್ಯನ ಸ್ವಭಾವ, ಆಸೆ, ಆಕಾಂಕ್ಷೆ, ಉನ್ನತ ನೀಚ ಪ್ರವೃತ್ತಿಗಳು ಮೊದಲಾದವುಗಳನ್ನು ಅರಸಿ ಕಂಡುಕೊಳ್ಳಬೇಕಾದ ಸತ್ಯದಲ್ಲೇ ಹೊರತು ಬಾಹ್ಯಜಗತ್ತನ್ನು ಅಳೆಯುವ ಭೌತ, ಖಗೋಳ ಭೌತಶಾಸ್ತ್ರದ ಸತ್ಯದಲ್ಲಲ್ಲ; ಇದರ ಆಚೆಗೆ ಜಿಜ್ಞಾಸೆ ಮಾಡುವ ತತ್ತ್ವಶಾಸ್ತ್ರದ ಸತ್ಯದಲ್ಲಲ್ಲ; ಮನುಷ್ಯಜೀವನದ ಆಚೆ ಮತ್ತು ಈಚೆಗಿನ ಪ್ರಶ್ನೆಗಳನ್ನು ಚಿಂತಿಸುವ ಮತಧರ್ಮದ ಸತ್ಯಗಳಲ್ಲೂ ಅಲ್ಲ; ಮನುಷ್ಯನನ್ನು ಅಧ್ಯಯನ ಮಾಡಿದರೂ ಅವನ ಗುಣ ಸ್ವಭಾವ ಪ್ರವೃತ್ತಿಗಳ ಸಾಮಾನ್ಯತೆಯನ್ನು ಅರಸುವ ಸಮಾಜಶಾಸ್ತ್ರ, ಮನೋವಿಜ್ಞಾನ ಮೊದಲಾದವುಗಳು ಪ್ರಯತ್ನಿಸುವ ಸತ್ಯದಲ್ಲೂ ಅಲ್ಲ; ಕಲ್ಪನೆಯ ಸೃಜನಶೀಲತೆ ಇಲ್ಲದೆ ಗತವಾಸ್ತವತೆಯನ್ನು ಹುಡುಕಿಕೊಂಡು ಅಲೆಯುವ ಇತಿಹಾಸದಲ್ಲಂತೂ ಅಲ್ಲವೇ ಅಲ್ಲಾ ಎಂಬ ತಿಳಿವು ಈ ಹೊತ್ತಿಗೆ ಮೂಡಿತು. ಮನುಷ್ಯನ, ಮನುಷ್ಯಜೀವನದ ಸತ್ಯವನ್ನು ಮೂರ್ತ ರೂಪದಲ್ಲಿ ಅನ್ವೇಷಿಸುವುದು ಸಾಹಿತ್ಯವೊಂದೇ ಎಂಬುದು ಅರ್ಥವಾಯಿತು. ಹಾಗೆಂದು, ಸಾಹಿತ್ಯಕೃತಿಗಳನ್ನು ಅಧ್ಯಯನ ಮಾಡುವುದರಿಂದ ನನಗೆ ತೃಪ್ತಿಯಾಗಲು ಸಾಧ್ಯವಿರಲಿಲ್ಲ, ಬೇರೆ ಸಾಹಿತ್ಯಕೃತಿಗಳ ಸತ್ಯವನ್ನು ನಾನೆಂದೂ ಅಲ್ಲಗಳೆಯುವುದಿಲ್ಲ. ಆದರೆ ನಾನೇ ಸ್ವತಃ ಅನ್ವೇಷಿಸುವ, ಅರಸುವ, ಆವಿಷ್ಕರಿಸಿಕೊಳ್ಳುವ ಸತ್ಯದಿಂದ ನನಗೆ ಹೆಚ್ಚು ತೃಪ್ತಿ ಸಿಕ್ಕುತ್ತದೆ. ನನ್ನ ಜೀವನಕ್ಕೆ ಅರ್ಥ ಸಿಕ್ಕುತ್ತದೆ. ಇಂತಹ ತೃಪ್ತಿ ಅರ್ಥಗಳು ದೊರೆಯದಿದ್ದರೆ ಜೀವನವು ಯಾವ ಸುಖವೂ ಇಲ್ಲದೆ ನೀರಸವಾಗುತ್ತದೆ. ನನ್ನ ಬರವಣಿಗೆಗೆ ಒಂದು ಸ್ಪಷ್ಟ ಉದ್ದೇಶವು ಈ ಹಂತದಲ್ಲಿ ಕಾಣಿಸಿತು. ಆನಂತರದ ಎಂದರೆ 'ಗೃಹಭಂಗ'ದ ಅನಂತರದ ನನ್ನ ಮುಖ್ಯ ಕೃತಿಗಳಾದ 'ದಾಟು', 'ಅನ್ವೇಷಣ'ಗಳಲ್ಲಿ ಇದೀಗ ನಾನು ಬರೆದು ಮುಗಿಸಿರುವ ಮಹಾಭಾರತವನ್ನು ಕುರಿತ ಕಾದಂಬರಿಯಲ್ಲಿ, ಈ ಉದ್ದೇಶವು ಸ್ಫುಟವಾಗಿ ಕೆಲಸ ಮಾಡಿದೆ ಎನ್ನಬಹುದು. ಹಾಗೆ ನೋಡಿದರೆ ನನ್ನ ಹಿಂದಿನ ಕೃತಿಗಳಲ್ಲಿ ಈ ಉದ್ದೇಶವಿರಲಿಲ್ಲವೆಂದಲ್ಲ. ಕೆಲವು ಕೃತಿಗಳಲ್ಲಿ ಸುಪ್ತವಾಗಿ ಕೆಲಸಮಾಡಿ ನಿರ್ದೇಶಿಸಿತ್ತು, ಮತ್ತೆ ಕೆಲವುಗಳಲ್ಲಿ, 'ಧರ್ಮಶ್ರೀ' ಮತ್ತು 'ತಬ್ಬಲಿ'ಗಳ ವಿಷಯದಲ್ಲಿ ಈ ಮೊದಲೇ ಹೇಳಿದಂತೆ ನೇರವಾಗಿ ಸತ್ಯಾನ್ವೇಷಣಕ್ಕೆ ಹೊರತಾದ ಕೆಲವು ಉದ್ದೇಶಗಳು ತಲೆಹಾಕಿ ಲೇಖನಪ್ರಕ್ರಿಯೆಯನ್ನು ಬೇರೆ ದಾರಿಗಳಿಗೆ ಎಳೆದಿದ್ದವು. ಆದರೆ 'ಗೃಹಭಂಗ'ದ ನಂತರದ ಕೃತಿಗಳಲ್ಲಿ ನನ್ನ ಬರವಣಿಗೆಯ ಉದ್ದೇಶ ನನಗೇ ಸ್ಪಷ್ಟವಾಗಿ ಗೋಚರಿಸಿ ಈ ಹೊರತಾದ ಉದ್ದೇಶಗಳು ತಲೆಹಾಕಲು ಸಾಧ್ಯವಾಗಿಲ್ಲ. ಹಿಂದಿನ ಕೃತಿಗಳಲ್ಲಿ ಸುಪ್ತವಾಗಿದ್ದ ಮೂಲೋದ್ದೇಶವು ಈಗ ಪ್ರಜ್ಞೆಯ ಮಟ್ಟದಲ್ಲಿ ನಿಂತು ನಿರ್ದೇಶಿಸುತ್ತಿದೆ.

ಸಾಹಿತ್ಯಕೃತಿಗಳ ಮೂಲಕ ನಾನು ಅರಸುವ ಸತ್ಯದ ಸ್ವರೂಪವೆಂಥದು ಎಂಬುದನ್ನು ವಿವರಿಸಲು ಇಲ್ಲಿ ಅವಕಾಶ ಸಾಲದು. ಸತ್ಯದ ಅನ್ವೇಷಣ ಮತ್ತು ಅಭಿವ್ಯಕ್ತಿಗಳ ಸಾಧನವಾಗಿ ನನ್ನ ಕೃತಿಗಳಲ್ಲಿ ಬಂದಿರುವ ಪುರಾಣಕಲ್ಪನೆ, ಕನಸು, ಹುಚ್ಚು, ಪಾತ್ರಗಳ ಬಾಹ್ಯ ಮತ್ತು ಆಂತರಿಕಕ್ರಿಯೆಗಳು ಮೊದಲಾದ ಹಲವು ಹನ್ನೊಂದು ಪರಿಕರಗಳು ಸಂಕೇತಿಸುವ ಸತ್ಯವು ಯಾವ ರೀತಿಯದು ಎಂಬುದನ್ನೆಲ್ಲ ಸ್ಪಷ್ಟೀಕರಿಸುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ. ನಾನು ಮೇಲೆ ಹೇಳಿದ ಮಾತುಗಳ ಹಿನ್ನೆಲೆಯಲ್ಲಿ ನನ್ನ ಕೃತಿಗಳನ್ನು ಸಹೃದಯತೆಯಿಂದ, ಅಕಲುಷಿತ ಬುದ್ಧಿ ಮನಸ್ಸು ಭಾವನೆಗಳಿಂದ ಅವಲೋಕಿಸುವ ಸಾಹಿತ್ಯಜ್ಞರಿಗೆ ಇದಕ್ಕಿಂತ ಹೆಚ್ಚಿನ ವಿವರಣೆ ಅನಾವಶ್ಯಕ.

ತನ್ನಲ್ಲಿ ತಾನು ಬಹು ಸಂಕೀರ್ಣವೂ ಒಂದು ದೃಷ್ಟಿಕೋನದ ಮಿತಿಗೆ ಸಿಲುಕದಷ್ಟು ವಿಸ್ತಾರವೂ ಆದ ಜೀವನವನ್ನು ಯಥಾವತ್ ಗ್ರಹಿಸಿ ಅರ್ಥ ಮಾಡಿಕೊಳ್ಳುವುದು ಸಾಧ್ಯವಾಗ ದ್ದರಿಂದ ಅದರ ಯಾವುದೋ ಒಂದು ಅಂಶವನ್ನು ಒಂದು ರಚನೆ ಅಥವಾ ಬಂಧಕ್ಕೆ ಒಳಪಡಿಸಿ ಕಲ್ಪನೆಯಲ್ಲಿ ಪುನಃ ಸೃಷ್ಟಿಸಿ ನೋಡುವ ಪರಿಕ್ರಮದಲ್ಲಿ ಅದರ ಸತ್ಯವನ್ನು ಗ್ರಹಿಸುವುದು ನನ್ನ ಪ್ರಯತ್ನ. ಈ ಪ್ರಯತ್ನವು, ಮೇಲೆ ಹೇಳಿದಂತೆ, ನನ್ನ ಹಿಂದಿನ ಎಲ್ಲ ಕೃತಿಗಳಲ್ಲೂ ಇತ್ತು. ವಾಸ್ತವತೆಯೇ ಸತ್ಯ ಎಂಬ ಸೀಮಿತ ಸಿದ್ಧಾಂತಕ್ಕೆ ಕಟ್ಟುಬೀಳದ ನಾನು ಒಂದು ದೃಷ್ಟಿಯಿಂದ 'ಅವೈಜ್ಞಾನಿಕ'ವೆಂದು ಕಾಣುವ 'ನಾಯಿ-ನೆರಳು'ನಂಥ ಕೃತಿಯಲ್ಲೂ ಇದೇ ಪ್ರಯತ್ನಮಾಡಿದೆ. 'ಗೃಹಭಂಗ'ಕ್ಕಿಂತ ಹಿಂದಿನ ಕೃತಿಗಳಲ್ಲಿ ಈ ಪ್ರಯತ್ನ ವಿದ್ದರೂ, ಜೀವನದ ವಿಸ್ಮಯ ರೀತಿನೀತಿಗಳಿಗೆ ಸಂಪೂರ್ಣ ನಿಷ್ಠವಾಗಿ ನಡೆದುಕೊಂಡಿದಲ್ಲಿಲ್ಲ. ಸಾಹಿತ್ಯಕೃತಿಗೆ ಬಂದಾಗ ಧರ್ಮವು ಹೇಗೋ ಒಂದು ರೀತಿಯಲ್ಲಿ ಜಯಿಸುತ್ತದೆ. ಪಾಪ ಪ್ರಾಯಶ್ಚಿತ್ತ ಅಥವಾ ಕಾವ್ಯನ್ಯಾಯವು ಅದು ಹೇಗೋ ನನ್ನ ಹಿಂದಿನ ಕೃತಿಗಳಲ್ಲಿ ನುಸುಳಿ ಬಂದಿವೆ ಎಂಬುದು ಈಗ ನನಗೆ ಅರ್ಥವಾಗಿದೆ. 'ಗೃಹಭಂಗ'ವನ್ನು ಎರಡನೆಯ ಮುದ್ರಣಕ್ಕೆ ಕಳಿಸುವ ಮುನ್ನ ಮತ್ತೊಮ್ಮೆ ಓದಿದಾಗ ಇದರ ಮೂಲವು ಹೊಳೆಯಿತು. ಉತ್ತಮವಾದುದು ಹೇಗೋ ವಿಜೃಂಭಿಸಬೇಕು ಎಂಬ ಧೋರಣೆಯು ಜೀವನದೃಷ್ಟಿಯಾಗಿ ಎಷ್ಟೇ ಆರೋಗ್ಯಕರವಾದ ನಿಲುವಾದರೂ, ನಿಷ್ಠುರ ಸತ್ಯಶೋಧನೆಯನ್ನು ಒಲಿಸಿಕೊಳ್ಳುವ ಅಂಶವಾಗುತ್ತದೆ.



ಆದರೆ ಇದು ನನ್ನ ಕೃತಿಗಳಲ್ಲಿ ನುಸುಳಿ ಬರುತ್ತಿದ್ದುದು ಪೂರ್ಣವಾಗಿ ಮೌಲಿಕ ನಿಲುವಾಗಿಯಲ್ಲ, ನಾನು ಕಂಡ ಸತ್ಯವಾಗಿಯೂ ಅಲ್ಲ, ಕೃತಿಯ ಬಂಧವನ್ನು ಪೂರ್ಣಗೊಳಿಸುವ ಅಗತ್ಯವಾಗಿ: ಕಾದಂಬರಿಯ ಕ್ರಿಯೆಯ ಎಲ್ಲ ಘಟಕಗಳೂ ತಮ್ಮ ಚಲನೆಯನ್ನು ನಿಲ್ಲಿಸಿ ಒಂದು ಶಾಂತಿ ಸ್ಥಾನವನ್ನು ಮುಟ್ಟುವ ಸಾಧನವಾಗಿ ಇಲ್ಲದಿದ್ದರೆ ಅಂತ್ಯವು ಬೇರೆ ತೆರನಾಗುತ್ತಿತ್ತೇನೋ. ಯಾವ ಮೌಲಿಕ ನಿರ್ಣಯ ಅಥವಾ ಉಪಸಂಹಾರವನ್ನೂ ಕೊಡದೆ, ಸಮಸ್ಯೆಗೆ ಪರಿಹಾರದ ಸಂಕೇತವನ್ನೂ ಸೂಚಿಸದೆ ಮುಕ್ತಾಯವಾಗುವ 'ಜಲಪಾತ'ದಲ್ಲಿ ಈ ಅಪಾಯದಿಂದ ಪಾರಾಗಿದ್ದ ಸಂಗತಿಯು ನನಗೇ ಹೊಳೆದಿರಲಿಲ್ಲ. ಯಾವ ವಿಮರ್ಶಕರೂ ಈ ಅಂಶವನ್ನು ತೋರಿಸಿರಲಿಲ್ಲ. ಅವನ ಕಲ್ಪನೆಯ ಗುಣಧರ್ಮ ವಿಶೇಷ, ದೋಷ, ಮೊದಲಾದುವನ್ನು ಲೇಖಕನು ಕಂಡುಕೊಳ್ಳಲು ಸಹಾಯಕವಾಗುವ ರೀತಿಯ ವಿಮರ್ಶೆಯು ಸದ್ಯದ ಕನ್ನಡ ಸಾಹಿತ್ಯದಲ್ಲಂತೂ ಇಲ್ಲ.

ಕಾವ್ಯನ್ಯಾಯ ಕಲ್ಪನೆಯು ನಮ್ಮ ಸಾಹಿತ್ಯದ ಇತಿಹಾಸದುದ್ದಕ್ಕೂ ಇದೆ. ವ್ಯಾಸ ವಾಲ್ಮೀಕಿಯರಿಂದ ಹಿಡಿದು ಕಾಳಿದಾಸ ಕುಮಾರವ್ಯಾಸಾದಿ ಪರಂಪರೆಯುದ್ದಕ್ಕೂ ಅವರು ಸಾಧಿಸಿರುವ ಕಾವ್ಯೈಕ್ಯದಲ್ಲಿ ಇದೊಂದು ಶಕ್ತಿಶಾಲಿ ಅಂಶವಾಗಿಯೇ ಇದೆ. ನಾನು ಇದರಿಂದ ಬಿಡಿಸಿಕೊಂಡದ್ದು ಇತ್ತೀಚೆಗೆ 'ಗೃಹಭಂಗ'ದಲ್ಲಿ ನನಗೇ ತಿಳಿಯದಂತೆ ಬಿಡಿಸಿಕೊಂಡಿದ್ದೆ, 'ದಾಟು', 'ಅನ್ವೇಷಣೆ'ಗಳನ್ನು ಬರೆಯುವ ವೇಳೆಗೆ ಸ್ಪಷ್ಟವಾಗಿ ಅರ್ಥವೇ ಆಗಿತ್ತು, 'ದಾಟು'ವಿನ ಸತ್ಯಳು ಮೋಹನದಾಸನನ್ನು ಏಕೆ ಮದುವೆಯಾಗಬಾರದಾಗಿತ್ತು ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಹಲವರು ಹಲವು ವಿಧವಾದ ಸಾಹಿತ್ಯೇತರ ವ್ಯಾಖ್ಯೆ ನಿಂದೆಗಳನ್ನು ಮಾಡಿದ್ದಾರೆ. ಮಾಡುತ್ತಿದ್ದಾರೆ. ಆದರೆ ನಾನು ಅಲ್ಲಿ ಅವರಿಬ್ಬರ ಭಾವನೆಗಳ ಅಡಿಪಾಯವನ್ನು ಶೋಧಿಸಲು ಪ್ರಯತ್ನಿಸಿದ್ದೇನೆ. ಕಾವ್ಯನ್ಯಾಯದಿಂದ ಬಿಡಿಸಿಕೊಂಡಿದ್ದೇನೆ. ಕಥೆಯನ್ನು ಚಲನೆಯ ಮುಕ್ತಾಯಕ್ಕೆ ತರಬೇಕೆಂಬ ಸಾಂಪ್ರದಾಯಿಕ ಐಕ್ಯದ ಬೇಡಿಕೆಯನ್ನು ತಳ್ಳಿಹಾಕಿದ್ದೇನೆ. 'ಅನ್ವೇಷಣ'ದಲ್ಲಿ ಕೂಡ, ಗಂಡಹೆಂಡಿರು ಒಂದಾಗದಿದ್ದರೆ ವಿಶ್ವನಾಥನಿಗೆ ಇಷ್ಟೆಲ್ಲ ಅನುಭವ ವಾಗಿ ಅವನು ಕಂಡುಕೊಂಡದ್ದೇನು ಎಂಬ ಪ್ರಶ್ನೆ ಹಲವರನ್ನು ಕಾಡಿದೆ. ಕಾಡುತ್ತಿದೆ ಸಾಂಪ್ರದಾಯಿಕ ರೀತಿಯ ಐಕ್ಯ, ಅಥವಾ ಉಪಸಂಹಾರ ಎಂಬ ಕಲ್ಪನೆಯನ್ನು ನಾನು ಕೈಬಿಟ್ಟಿರುವುದರಿಂದಲೇ ಈ ಕಾದಂಬರಿಯಲ್ಲಿ ಸತ್ಯಕ್ಕೆ ಹೊರತಾದ ಮೌಲ್ಯಗಳು ತಲೆ ಎತ್ತಿ ಕೃತಿಯನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಸಾಧ್ಯವಾಗಿಲ್ಲ. ಸಾಹಿತ್ಯಕೃತಿಯ ಸ್ವರೂಪಕ್ಕೆ ಸಂಬಂಧಿಸಿದುದರಿಂದ ಇದು ತುಂಬ ಗಂಭೀರವಾದ ಪ್ರಶ್ನೆಯಾಗಿದೆ. ಆದರೆ ಲಂಬಿಸಲು ಇಲ್ಲಿ ಅವಕಾಶವಿಲ್ಲ. ಕೃತಿ ರಚನೆಯ ಗುರಿಯನ್ನು ಕೃತಿಸ್ವರೂಪದಿಂದ ಬೇರ್ಪಡಿಸಲು ಸಾಧ್ಯವಿಲ್ಲದುದರಿಂದ ಐಕ್ಯ, ಬಂಧ. ಮೊದಲಾದ ಕಲ್ಪನೆಗಳನ್ನು ಇಲ್ಲಿ ಪ್ರಸ್ತಾಪಿಸಬೇಕಾಯಿತು.

ನಾನು ಏಕೆ ಬರೆಯುತ್ತೇನೆ ಎಂಬ ಪ್ರಶ್ನೆಗೆ ಸದ್ಯಕ್ಕೆ ನನಗೆ ತೋಚುವ ಉತ್ತರವನ್ನು ಹೇಳಿದ್ದೇನೆ. ಆ ಉತ್ತರದ ಬೆಳಕಿನಲ್ಲಿ ನನ್ನ ಕೆಲವು ಹಿಂದಿನ ಕೃತಿಗಳನ್ನೂ ಅವಲೋಕಿಸಿದ್ದೇನೆ. ಭೈರಪ್ಪನವರು ಏಕೆ ಬರೆಯುತ್ತಾರೆಂದು ಇತರ ಕೆಲವರು ಮೂರು ನಾಲ್ಕು ವರ್ಷಗಳಿಂದ ಈಚೆಗೆ ಉತ್ತರಗಳನ್ನು ಸರಬರಾಜು ಮಾಡುವಲ್ಲಿ ತೊಡಗಿರುವುದರಿಂದ, ಈ ಸಂದರ್ಭದಲ್ಲಿ ಆ ಬಗೆಗೂ ಎರಡು ಮಾತನ್ನು ಹೇಳಿ ಮುಗಿಸುವುದು ಸೂಕ್ತವೆನಿಸುತ್ತದೆ. ಭೈರಪ್ಪನವರು ಪ್ರತಿಗಾಮಿ, ಪ್ರಗತಿ ವಿರೋಧಿ, ಆದುದರಿಂದ ಅಪಾಯಕಾರಿ ಲೇಖಕ ಎಂಬ ಪ್ರಚಾರವನ್ನು ಕೆಲವರು ತಮ್ಮ ಸ್ವಂತ ದಂಧೆಯಾಗಿಯೇ ಮಾಡಿಕೊಂಡಿರುವುದು ನನಗೆ ಗೊತ್ತಿದೆ. ವೈದಿಕಮೌಲ್ಯ ಪ್ರವರ್ತನೆಗೆಂದೇ ಇವರು ಕೃತಿರಚನೆ ಮಾಡುತ್ತಾರೆ ಎಂಬ ಜಗದ್ಗುರು ಆಚಾರ್ಯತ್ವವನ್ನೂ ಒಂದೆರಡು ಓಣಿಯವರು ನನಗೆ ಕೊಟ್ಟಿದ್ದಾರೆ. ಸಾಹಿತ್ಯಕೃತಿಗಳನ್ನು ಸಾಹಿತ್ಯೇತರ ದೃಷ್ಟಿಗಳಿಂದ ವಿಮರ್ಶಿಸುವವರ ಮಾತುಗಳಿಗೆ ನಾನು ಯಾವ ಬೆಲೆಯನ್ನೂ ಕೊಡುವುದಿಲ್ಲ. ಅಂಥವರ ಅಭಿಪ್ರಾಯಗಳನ್ನು ಉಪೇಕ್ಷಿಸುವುದೇ ವಿವೇಕವೆಂದು ಗಟ್ಟಿಯಾಗಿ ನಂಬಿದ್ದೇನೆ. ಆದರೂ ಈ ಸಂದರ್ಭದಲ್ಲಿ ಈ ಬಗೆಗೆ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೇನೆ:

ನಾವು ಬಯಸುವ ಧ್ವನಿ ಮೂಡುವಂತೆಯೇ, ನೀನು ಬರೆಯಬೇಕು. ಇಲ್ಲದಿದ್ದರೆ ನೀನು ಪ್ರಗತಿವಿರೋಧಿ, ಬೂರ್ಜ್ವಾ, ಫ್ಯಾಸಿಸ್ಟ್ ಆಗುತ್ತೀಯ' ಎಂದು ಮುಂತಾಗಿ ರಾಜಕೀಯ ಬೈಗುಳಗಳನ್ನು ಬಳಸಿ ದುಂಡಾವರ್ತಿ ಮಾಡುವುದು ಅಜ್ಞಾನದ ಕುರುಹು. ನಾನು ಬಡತನ, ಅಜ್ಞಾನ, ಭೇದ, ಶೋಷಣೆಗಳನ್ನು ಅನುಭವಿಸಿ ಬಲ್ಲೆ, ನನ್ನ ಕೃತಿಗಳಲ್ಲಿ ಇವೇ ದಟ್ಟವಾಗಿ ಬಂದಿವೆ. ಆದರೆ ಇವುಗಳ ಬಗೆಗೆ ಅತಿಭಾವುಕತೆಯಾಗಲಿ, ಪಕ್ಷಪಾತದಿಂದ ಕೂಡಿದ ಪ್ರೇಮವಾಗಲಿ, ಅವೈಚಾರಿಕ ಉದ್ವೇಗವಾಗಲಿ ನನಗಿಲ್ಲ. ಇವುಗಳ ಅನುಭವವಿಲ್ಲದೆ ಶ್ರೀಮಂತ ಮನೆಯಲ್ಲಿ ಹುಟ್ಟಿ ಬೆಳೆದವನಿಗೆ ಬರೆಯುವ ಅಧಿಕಾರವೇ ಇಲ್ಲವೆಂದು ಯಾರಾದರೂ ಹೇಳಬಹುದೆ? ಹಾಗಿದ್ದಲ್ಲಿ ಟಾಲ್‌ಸ್ಟಾಯ್ ಯಂಥವರು ಬರೆಯಲೇ ಕೂಡದಾಗಿತ್ತು. ಇನ್ನು ನನ್ನ ಅನುಭವವಾದ ಬಡತನ, ಅಜ್ಞಾನ, ಭೇದ, ಶೋಷಣೆ ಮೊದಲಾದುವುಗಳನ್ನು ಕಲೆಯಾಗಿಸುವ ಪರಿಕ್ರಮದಲ್ಲಿ, ಸ್ವರೂಪ ಕೊಟ್ಟು ಅವುಗಳ ಅರ್ಥವನ್ನು ಹುಡುಕುವ ಸ್ವಾತಂತ್ರ್ಯ ನನಗಿರಬೇಡವೆ? 'ನಾವು ಹೇಳುವ ರೀತಿಯಲ್ಲಿ ಅರ್ಥೈಸಿದರೆ ಮಾತ್ರ ನೀನು ಪ್ರಗತಿಗಾಮಿ. ನಿನ್ನದೇ ದಾರಿಯಲ್ಲಿ ಹೋದರೆ ಪ್ರತಿಗಾಮಿ' ಎಂದು ಬೆದರಿಸುವ ದೊಂಬಿ ಮನೋಭಾವದ ಕೂಗಿಗೆ ನಿಜವಾದ ಯಾವ ಲೇಖಕ ತಾನೆ ಬೆಲೆ ಕೊಟ್ಟಾನು?

ವಾಸ್ತವಾಂಶವೆಂದರೆ: ಇತಿಹಾಸದುದ್ದಕ್ಕೂ ಮಾನವಕುಲದ ಪ್ರಗತಿಯಾಗಿರುವುದು ಸತ್ಯದಿಂದ. ಪ್ರತಿಯೊಂದು ಕಾಲದಲ್ಲೂ ಪ್ರತಿಯೊಂದು ಯುಗದಲ್ಲೂ ಜೀವನದ ಅರ್ಥವನ್ನು ಹುಡುಕಲು ಸಾಹಿತಿ, ತತ್ತ್ವಶಾಸ್ತ್ರಜ್ಞ, ವಿಜ್ಞಾನಿ, ಇತಿಹಾಸಕಾರ ಮೊದಲಾಗಿ ಹಲವರು ಪ್ರಯತ್ನಿಸುತ್ತಲೇ ಇರುತ್ತಾರೆ. ಹೊಸ ಸತ್ಯಕ್ಕೆ ಅನುಗುಣವಾಗಿ ಪರಿಸರ, ವ್ಯಕ್ತಿ ಮತ್ತು ಸಮಾಜಗಳನ್ನು ಬದಲಿಸಬೇಕೆಂದು ಕೆಲವೊಮ್ಮೆ ಈ ಸತ್ಯದ ಆವಿಷ್ಕರ್ತರು, ಬಹುವೊಮ್ಮೆ ಇತರರು ಕ್ರಿಯಾಶೀಲರಾಗುತ್ತಾರೆ. ಸಮಾಜವು ಪರಿವರ್ತಿಸುತ್ತಿರುವುದು ಹೀಗೆ. ಜೀವನದ ಅರ್ಥವನ್ನು, ಸತ್ಯವನ್ನು, ಶೋಧಿಸುವ ಪ್ರತಿಯೊಂದು ಸಾಹಿತ್ಯ ಕೃತಿಯೂ ವೈಚಾರಿಕ ಪ್ರಗತಿಗೆ, ಸಂವೇದನೆಯ ಬದಲಾವಣೆಗೆ ಪರ್ಯಾಯವಾಗಿ ಕಾರಣವಾಗಿರುತ್ತದೆ. ನಮಗೆ ಪ್ರಗತಿ ಬೇಕು. ಸತ್ಯ ಬೇಡ ಎನ್ನುವುದು ಇಂಗ್ಲಿಷಿನ ಗಾದೆಯ ಮಾತಿನಂತೆ ಕುದುರೆಯ ಮುಂಬದಿಗೆ ಗಾಡಿಯನ್ನು ನಿಲ್ಲಿಸಿ. ಅನಂತರ ಗಾಡಿ ಚಲಿಸಲಿಲ್ಲವೆಂದು ಕುದುರೆಯ ಮೇಲೆ ಕೋಪಿಸಿಕೊಳ್ಳುವ ಅವಿವೇಕಿಯ ಕೆಲಸವಾಗುತ್ತದೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 143

ಸರಸ್ವತಿ ಪುತ್ರನ ಪರ್ವಾಂತ್ಯ

ವಿಶ್ವವಾಣಿ 25.09.2025 ಗುರುವಾರ vishwavani.news

ಹುಟ್ಟೂರಿಗೆ ಗಂಗೆ ಹರಿಸಿದ ಅಕ್ಷರ ಬ್ರಹ್ಮ

ಬಸವರಾಜ ಬೊಮ್ಮಾಯಿ
ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ

ಬದುಕಿನ ಸಾಕ್ಷಾತ್ಕಾರಕ್ಕೆ ಎರಡು ವಿಷಯ ಬಹಳ ಮುಖ್ಯ. ಒಂದು ಜ್ಞಾನ. ಇನ್ನೊಂದು ಧ್ಯಾನ. ಇವೆರಡರ ಸಾಧನೆಯನ್ನು ನಮ್ಮೆಲ್ಲರ ಅಭಿಮಾನದ ಹಲವಾರು ಪ್ರಶಸ್ತಿಗೆ ಪಾತ್ರರಾಗಿರುವ ಎಸ್.ಎಲ್. ಭೈರಪ್ಪ ಒಲಿಸಿಕೊಂಡಿದ್ದಾರೆ. ಬದುಕಿನಲ್ಲಿ ನಮ್ಮ ಮುಗ್ಧತೆ ಕಾಪಾಡಿಕೊಂಡು ಹೋಗುವುದು ಬಹಳ ಕಷ್ಟ. ಮಕ್ಕಳಿದ್ದಾಗ ನಮ್ಮ ಮುಖ ಮುಗ್ಧತೆಯಿಂದ ಕೂಡಿರುತ್ತದೆ. ಯಾಕೆಂದರೆ ಹೃದಯ ಮುಗ್ಧತೆಯಿಂದ ಕೂಡಿರುತ್ತದೆ. ದೊಡ್ಡವರಾದ ಮೇಲೆ ಆಕಾರ, ವಿಕಾರ ಆಗಿರುತ್ತದೆ. ಭೈರಪ್ಪರ ಮುಖದಲ್ಲಿ ಕೊನೆವರೆಗೂ ಮಗುವಿನ ಮುಗ್ಧತೆ ಇತ್ತು. ಮನುಷ್ಯ ಆತ್ಮಸಾಕ್ಷಿಯಾಗಿ ನಡೆದುಕೊಳ್ಳುವುದು ಬಹಳ ದೊಡ್ಡ ಸವಾಲು. ರಾಜಕಾರಣಿಗಳಿಗೆ ಆತ್ಮಸಾಕ್ಷಿ ಇರುವುದಿಲ್ಲ. ಭೈರಪ್ಪನವರು ಬದುಕನ್ನು ಅನುಭವಿಸಿ ಬರಹ ಬರೆದಿದ್ದಾರೆ. ಅವರ ಬರಹದಿಂದ ಬದುಕನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ನಾಡು ಬಹಳ ಶ್ರೀಮಂತ ಅಂತ ನಾವು ಕರೆಯುತ್ತೇವೆ. ಆರ್ಥಿಕವಾಗಿ ಶ್ರೀಮಂತರಿ ದ್ದರೆ ಅವರು ಶ್ರೀಮಂತರಲ್ಲ. ಶ್ರೀಮಂತಿಕೆ ವ್ಯಕ್ತಿಯ ಆರ್ಥಿಕ ಶ್ರೀಮಂತಿಕೆಯಿಂದ ಬರುವುದಿಲ್ಲ. ನಮ್ಮ ಸಂಸ್ಕೃತಿ, ಪರಂಪರೆ, ಕನ್ನಡ ನಾಡಿನ ಸಾತ್ವಿಕತೆ, ಕನ್ನಡ ನಾಡಿನಂತಹ ಹೃದಯವಂತ ಜನರು ಜಗತ್ತಿನ ಎಲ್ಲಿಯೂ ಸಿಗುವುದಿಲ್ಲ. ಕನ್ನಡ ನಾಡು ಶ್ರೀಮಂತ ಆಗಿರುವುದು ನಮ್ಮನ್ನಾಳಿದ ಮೈಸೂರು ಮಹಾರಾಜರು, ಹೊಯ್ಸಳರು, ಕದಂಬರಿಂದ ಅಲ್ಲದೆ ನಾಡಿನ ಸಾಹಿತಿಗಳು, ಕಲಾವಿದರು, ಶಿಲ್ಪಿಗಳಿಂದ. ಅಲ್ಲದೆ ಫಲತ್ತಾದ ಮಣ್ಣು, ಅಮೃತದಂತಹ ನೀರು, ಶುದ್ಧವಾದ ಗಾಳಿ, ನಮ್ಮ ಜೀವಂತಿಕೆಯ ಮೂಲಕ ಕನ್ನಡ ನಾಡು ಶ್ರೀಮಂತವಾಗಿದೆ. ಅಂತಹ ಶ್ರೀಮಂತಿಕೆಯ ಪುತ್ರರು ಎಸ್.ಎಲ್. ಭೈರಪ್ಪನವರು. ಅವರು ನಮ್ಮ ನಾಡಿನಲ್ಲಿ ಹುಟ್ಟಿರುವುದೇ ನಮಗೆ ವಿಶೇಷ.

ಹುಟ್ಟೂರಿಗೆ ನೀರು ತಂದವರು: ಎಲ್.ಎಲ್ .ಭೈರಪ್ಪನವರ ಪರ್ವ ಕಾದಂಬರಿಯನ್ನು ಕಾಲೇಜಿನಲ್ಲಿ ಇದ್ದಾಗ ಓದಿದೆ. ಪರ್ವದಲ್ಲಿ ಸರ್ವಕಾಲಿಕ ಸತ್ಯಹೇಳಿದ್ದಾರೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಅವರು ನಮ್ಮೂರಿನ ಕೆರೆ ತುಂಬಿಸುವ ಕೆಲಸ ಮಾಡಿ ಅಂತ ಹೇಳಿದಾಗ ನನ್ನ ಮನಸ್ಸಿಗೆ ನೋವಾಯಿತು. ವಿಶ್ವವಾಣಿ ಪತ್ರಿಕೆಯ ಸಂಪಾದಕರಾದ ವಿಶ್ವೇಶ್ವರ ಭಟ್ಟರು ಭೈರಪ್ಪನವರನ್ನು ಕರೆದುಕೊಂಡು ಬಂದಾಗ ಅವರು ನಮ್ಮೂರಿನ ಕೆರೆ ತಂಬಿಸಿ ಎಂದು ಕೇಳಿದಾಗ ನಾನು ಮಾಡಲೇಬೇಕು ಎಂದು ಮನಪೂರ್ವಕವಾಗಿ ಕೆಲಸ ಮಾಡಿದೆ. ಭೈರಪ್ಪನವರು ಅತ್ಯಂತ ಸಂವೇದನಾ ಶೀಲ ಸಾಹಿತಿಗಳು ಏನು ಬೇಕಾದರೂ ಕೇಳಬಹುದಿತ್ತು. ಅವರು ಬಿಡಿಎ ಸೈಟ್ ಕೇಳಬಹುದಿತ್ತು. ಆದರೆ, ಅವರು ನನ್ನೂರಿಗೆ ನೀರು ಕೊಡಿ ಸ್ವಾಮಿ ಎಂದು ಕೇಳಿದರು. ಭೈರಪ್ಪನವರು ತಮ್ಮ ಬೇರನ್ನು ಎಂದೂ ಮರೆತಿಲ್ಲ. ತಮ್ಮ ಊರಿನ ಜನರು, ತಂದೆ ತಾಯಿಯನ್ನು ಮರೆತಿಲ್ಲ ಊರಿನ ಕೆರೆ ಮರೆತಿಲ್ಲ. ಎನ್ನುವುದಕ್ಕೆ ಇದೇ ಸಾಕ್ಷಿ. ಕನ್ನಡ ನಾಡಿನ ಪ್ರತಿ ಗ್ರಾಮ ದಲ್ಲೂ ಎಸ್.ಎಲ್. ಭೈರಪ್ಪನಂಥವರು ಹುಟ್ಟಿದರೆ, ಈ ನಾಡು ಎಷ್ಟು ಆಗರ್ಭ ಶ್ರೀಮಂತ ಆಗುತ್ತಿತ್ತು.

ಬದುಕು ಸಾಹಿತ್ಯ ಒಂದೇ: ಸಾಹಿತಿ ಎಸ್. ಎಲ್. ಭೈರಪ್ಪ ಅವರ ಜೀವನ ಮತ್ತು ಸಾಹಿತ್ಯಕ್ಕೆ ಎರಡು ವಿಶ್ಲೇಷಣೆ ಅಗತ್ಯವಿಲ್ಲ. ಅವರ ಜೀವನ ಮತ್ತು ಬದುಕು ಎರಡೂ ಒಂದೇ ಆಗಿದೆ. ಎಸ್. ಎಲ್. ಭೈರಪ್ಪನವರ ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ನಾನು ಪರ್ವ ಕಾದಂಬರಿಯನ್ನು ಕಾಲೇಜು ಜೀವನದಲ್ಲಿಯೇ ಓದಲು ಪ್ರಯತ್ನ ಮಾಡಿದ್ದೆ, ಅಷ್ಟು ಸುಲಭವಾಗಿ ಅರ್ಥವಾಗಿರಲಿಲ್ಲ. ಕೆಲವು ವರ್ಷಗಳ ನಂತರ ಮತ್ತೆ ಓದಿದೆ. ಪ್ರತಿ ಸಾರಿ ಓದಿದಾಗ ಹೊಸ ಆಯಾಮ ಸಿಗುತ್ತದೆ. ನನಗೆ ಕಾಡಿರುವ ಎರಡು ಪುಸ್ತಕಗಳು ಒಂದು ಭೈರಪ್ಪ ಅವರ ಕಾದಂಬರಿ ಹಾಗೂ ಸ್ವಾಮಿ ವಿವೇಕಾನಂದರ ಲೈಫ್ ಆಫ್ಟರ್ ಡೆತ್. ಸ್ವಾಮಿ ವಿವೇಕಾನಂದರ ಲೈಫ್ ಆಫ್ಟರ್ ಡೆತ್ ಪುಸ್ತಕದಲ್ಲಿ ವಿವೇಕಾನಂದರು ಸಾಧಕರಿಗೆ ಸಾವು ಅಂತ್ಯವಲ್ಲ. ಸಾವಿನ ನಂತರವೂ ಬದುಕುವುದು ಸಾಧಕ.

ಅಂತಹ ಒಬ್ಬ ಸಾಧಕರು ಎಸ್. ಎಲ್. ಭೈರಪ್ಪನವರು.ಬದುಕನ್ನು ತಿಳಿದುಕೊಳ್ಳುವುದೇ ಕಷ್ಟ. ಅಂತಹ ಬದುಕನ್ನು ಆದರ್ಶವಾಗಿಟ್ಟುಕೊಂಡು ಸಾಹಿತ್ಯ ಬರೆಯುವುದು ದೊಡ್ಡ ಸವಾಲು ಅವರಿಗೆ ಇನ್ನೊಬ್ಬ ವ್ಯಕ್ತಿ, ಇನ್ನೊಂದು ವಿಚಾರ ಅವರಿಗೆ ಸವಾಲು ಅಲ್ಲ. ಅವರು ಬರೆಯುವ ಪ್ರತಿಯೊಂದು ಶಬ್ದವೂ ಪರೀಕ್ಷೆ. ಅವರು ಒಬ್ಬ ತತ್ವಜ್ಞಾನಿಯಂತೆ ಚಿಂತನೆ ಮಾಡಿದವರು, ಸಾಹಿತ್ಯಕ್ಕಾಗಿ ಬದುಕಿನಲ್ಲಿ ನಿರಂತರ ತಪಸ್ಸು ಮಾಡಿದ ತಪಸ್ವಿ ಅವರು, ಅವರ ಒಂದು ಕೃತಿ ಬರಬೇಕಾದರೆ ಮರು ಜನ್ಮ ಪಡೆಯುತ್ತ ಬಂದಿದೆ.

ಭಾರತದಲ್ಲಿ ಅತಿ ಹೆಚ್ಚು ಗೌರವಧನ: ಭೈರಪ್ಪ ಅವರು ಯಾವುದೇ ಪ್ರಶಸ್ತಿಗೂ ಲಾಬಿ ಮಾಡಿಲ್ಲ. ಕೆಲವರು ನೋಬೆಲ್ ಪ್ರಶಸ್ತಿಗೂ ಲಾಬಿ ಮಾಡಿದವರು ಇದ್ದಾರೆ. ಎಲ್ಲರೂ ಒಂದೇ ಥರ ವಿಚಾರ ಮಾಡಲು ಸಾಧ್ಯವಿಲ್ಲ. ವಿಭಿನ್ನತೆ ಬಹಳ ಮುಖ್ಯ. ಭೈರಪ್ಪನವರು ಪಾತ್ರಗಳಲ್ಲಿ ವಿಭಿನ್ನತೆ ತಂದಿದ್ದಾರೆ. ಪುಸ್ತಕದ ಮೊದಲ ಪುಟ ಓದಿದರೆ ಮುಂದಿನ ಪುಟ ತಿರುವಬೇಕು ಎನಿಸಬೇಕು. ಅವರು ಪೌರಾಣಿಕ ಮತ್ತು ಆಧುನಿಕ ವಿಷಯಗಳನ್ನೊಳಗೊಂಡ ಕಾದಂಬರಿ ಬರೆದಿದ್ದಾರೆ. ಮುಂದಿನ 95 ವರ್ಷಗಳ ನಂತರ ಓದಿದರೂ ಆಗಲೂ ಪ್ರಸ್ತುತವಾದ ವಿಷಯ ಅವರು ಬರೆದಿದ್ದಾರೆ. ಭಾರತದಲ್ಲಿ ಅತಿ ಹೆಚ್ಚು ಗೌರವಧನ ಬರುವುದು ಭೈರಪ್ಪ ಅವರಿಗೆ. ಭೈರಪ್ಪ ಅವರು ಬಡವರಾಗಲು ಓದುಗರು ಬಿಟ್ಟಿಲ್ಲ.

ಎಸ್. ಎಲ್. ಭೈರಪ್ಪ ಅವರ ಹೆಸರಿನಲ್ಲಿ ಇತ್ತೀಚೆಗೆ ಟ್ರಸ್ಟ್ ಮಾಡಿದ್ದಾರೆ. ನಮಗೆ ಸಮಾಜ ಏನು ಕೊಟ್ಟಿದೆಯೋ ಅದನ್ನು ನಾವು ಸಮಾಜಕ್ಕೆ ವಾಪಸ್ ಕೊಟ್ಟಾಗ ನಮ್ಮ ಬದುಕಿನ ಬ್ಯಾಲೆನ್ಸ್ ಸೀಟ್ ಪೂರ್ತಿಯಾಗುತ್ತದೆ. ಭೈರಪ್ಪನವರು ತಮಗೆ ಸಮಾಜ ಕೊಟ್ಟಿರುವುದನ್ನು ಸಮಾಜಕ್ಕೆ ಕೊಟ್ಟಿದ್ದಾರೆ. ಅವರು ತಮ್ಮ ಸಾಹಿತ್ಯದ ಮೂಲಕ ನಮ್ಮೆಲ್ಲರ ಹೃದಯ ಮಂದಿರದಲ್ಲಿ ಯಾವಾಗಲೂ ಜೀವಂತವಾಗಿರುತ್ತಾರೆ. ಅಕ್ಷರ ಲೋಕದ ಶಾರದೆಯ ಪುತ್ರನಿಗೆ ನನ್ನ ಹೃದಯ ತುಂಬಿದ ಭಾವಪೂರ್ಣ ಅಕ್ಷರ ನಮನಗಳು.

ಅನ್ಯ ಭಾಷೆಯಲ್ಲೂ ಪ್ರಸಿದ್ಧಿ

ಎಸ್. ಎಲ್. ಭೈರಪ್ಪ ಅವರ ಪ್ರಮುಖ ಕಾದಂಬರಿಗಳಾದ ವಂಶವೃಕ್ಷ, ದಾಟು, ತಬ್ಬಲಿಯು ನೀನಾದೆ ಮಗನೆ, ತಂತು, ಪರ್ವ, ಆವರಣ, ಗೃಹಭಂಗ, ಮಂದ್ರ ಮುಂತಾದವುಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಪರ್ವದ ಮೂಲಕ ಮಹಾಭಾರತ, ಉತ್ತರಖಾಂಡದ ಮೂಲಕ ರಾಮಾಯಣವನ್ನು ಪುನರ್ ವಿಮರ್ಶಿಸಿ ಜನತೆಗೆ ತಲುಪಿಸುವ ಕೆಲಸ ಮಾಡಿದ್ದಾರೆ. ಅವರ ಕಾದಂಬರಿಗಳು ಹಿಂದಿ, ಇಂಗ್ಲಿಷ್ ಮರಾಠಿ, ಸಂಸ್ಕೃತ ಭಾಷೆಗಳಿಗೂ ಭಾಷಾಂತರಗೊಂಡು ಜನಪ್ರಿಯತೆ ಪಡೆದಿವೆ.

ಸರಸ್ವತಿ ಪುತ್ರನೊಂದಿಗೆ ಆ ಮೂರು ತಾಸು

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

'ನಿಮಗೆ ಮಂದ್ರ ಕಾದಂಬರಿಯಲ್ಲಿ ಬರುವ ಪಾತ್ರದಲ್ಲಿ ಯಾವುದು ಇಷ್ಟ? ಪರ್ವ ಕಾದಂಬರಿಯ ಜಿಸ್ಟ್ ಏನು? ನನ್ನ ಯಾವ ಪುಸ್ತಕ ನಿಮಗೆ ಹೆಚ್ಚು ಹಿಡಿಸಿದ್ದು?' ಹೀಗೆ ಎದುರಿಗೆ ಗುಬ್ಬಚ್ಚಿಯಂತೆ ಕೂತಿದ್ದ ನನಗೆ ಎಸ್.ಎಲ್. ಭೈರಪ್ಪನವರು ಪ್ರಶ್ನಿಸುವ ವೇಳೆ, ಉತ್ತರಿಸುವುದೇನು? ಬಿಡುವುದೇನು? ಎನ್ನುವ ಗೊಂದಲಕ್ಕೆ ಸಿಲುಕಿದ್ದು ಸುಳ್ಳಲ್ಲ.

ಸರಸ್ವತಿ ಪುತ್ರ ಎಸ್.ಎಲ್. ಭೈರಪ್ಪ ಅವರು ನಮ್ಮ ಸಂಪಾದಕರಾದ ವಿಶ್ವೇಶ್ವರ ಭಟ್ಟರ ನಿವಾಸದಲ್ಲಿ ವಾಸ್ತವ್ಯ ಹೂಡಿರುವುದು ತಿಳಿಯುತ್ತಿದ್ದಂತೆ ಅವರನ್ನು ಭೇಟಿಯಾಗಿ ಒಂದು ನಮಸ್ಕಾರ ಹೇಳಿದರೆ ಜೀವನ ಸಾರ್ಥಕ ಎನ್ನುವ ಭಾವನೆಯಲ್ಲಿ ಭಟ್ ಅವರ ಬಳಿ ಅನುಮತಿ ಕೇಳಿದ್ದೆ. 'ಖಂಡಿತ ಬನ್ನಿ' ಎನ್ನುತ್ತಿದ್ದಂತೆ ನಾನು, ಅಪರ್ಣಾ ಇಬ್ಬರೂ ಸರ್ ಮನೆಗೆ ಹೋಗಿದ್ದೆವು. ಆದರೆ ಆ ವೇಳೆಗಾಗಲೇ ಭೈರಪ್ಪನವರು ವಿಶ್ರಾಂತಿಗೆ ಹೋಗಿದ್ದಾರೆ ಎಂದು ತಿಳಿಯಿತು. 'ಬಂದ ದಾರಿಗೆ ಸುಂಕವಿಲ್ಲವೇನೋ' ಎಂದು ಕೊಂಡು ಕೂತಿರುವಾಗಲೇ, ನಮ್ಮ ಮುಂದೆ 'ಸರಸ್ವತಿ ಪುತ್ರ'ರು ಬಂದಿದ್ದರು. ಬರುತ್ತಿದ್ದಂತೆ ನಮ್ಮನ್ನು ನೀವ್ಯಾರು ಎನ್ನುವ ಪ್ರಶ್ನಾರ್ಥಕ ಮುಖಮುದ್ರೆಯಲ್ಲಿ ದಿಟ್ಟಿಸಿದಾಗ, ಭಟ್ ಸರ್ ನಮ್ಮನ್ನು ಭೈರಪ್ಪನವರಿಗೆ ಪರಿಚಯಿಸಿದಾಗ ಮುಖದಲ್ಲೊಂದು 'ಮುಗುಳು ನಗೆ'. ನನ್ನ ಪರಿಚಯವನ್ನು ಮಾಡಿಸುತ್ತಿದ್ದಂತೆ, 'ನೀವು ಯಾವೂರು?' ಎಂದು ಕೇಳಿ ಊರು, ಹೆಸರು ತಿಳಿದುಕೊಂಡ ಬಳಿಕ ಪತ್ರಿಕೆ ಓದುವಲ್ಲಿ ತಲ್ಲೀನ.

ಅವರು ಕುಳಿತುಕೊಂಡು ವಿಶ್ವವಾಣಿ ಪತ್ರಿಕೆಯನ್ನು ಓದುವುದರಲ್ಲಿ ಮುಳುಗಿಹೋಗಿದ್ದರೆ, ನಾವು ಅವರನ್ನು ನೋಡುವುದರಲ್ಲಿ ತಲ್ಲೀನರಾದೆವು. ಕೆಲ ಸಮಯದ ಬಳಿಕ ಮತ್ತೆ ನೀವ್ಯಾರು ಎನ್ನುವ ಪ್ರಶ್ನೆ, ಅದಕ್ಕೆ ಮತ್ತದೇ ಉತ್ತರ. ವಯೋಸಹಜ ಕಾರಣದಿಂದ ಮರೆವಿನ ಕಾಯಿಲೆ ಕಾಣಿಸಿಕೊಂಡಿದ್ದರಿಂದ ಯಾವುದು ನೆನಪಿನಲ್ಲಿ ಉಳಿಯುವುದಿಲ್ಲ ಎನ್ನುವುದು ಆಗಲೇ ಗೊತ್ತಾಗಿದ್ದು. ಆದರೆ ಅವರ ಕಾದಂಬರಿಗಳ ವಿಷಯಕ್ಕೆ ಬಂದರೆ 'ಪಕ್ಕಾ' ನೆನಪು. ಯಾವ ಕಾದಂಬರಿಯ ಎಷ್ಟನೇ ಪುಟದಲ್ಲಿ ಏನು ಮುದ್ರಣವಾಗಿದೆ ಎನ್ನುವುದನ್ನು ಹೇಳುವಷ್ಟು 'ನೆನಪು' ನಿಖರವಾಗಿತ್ತು. ಅವರಿಗೆ ಮರೆವು ಆವರಿಸಿಕೊಂಡಿರುವುದು, ದೈನಂದಿನ ದಿನಕ್ಕೆ ಹೊರತು ತಮ್ಮ ಕಾಂದಬರಿಗಳ ವಿಷಯದಲ್ಲಿ ಅಲ್ಲ. ತಮ್ಮ 94ನೇ ವಯಸ್ಸಿನಲ್ಲಿಯೂ ಮೊದಲ ಕಾದಂಬರಿಯಲ್ಲಿನ ಪಾತ್ರ, ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಾ ಹೋದರು.

ಹಾಗೇ ನೋಡಿದರೆ, ವಿಶ್ವೇಶ್ವರ ಭಟ್ಟರ ಮನೆಯಲ್ಲಿ ತಂಗಿದ್ದ ಸಮಯದಲ್ಲಿ ಹೆಚ್ಚು ಜನರ ಭೇಟಿಗೆ ಅವಕಾಶ ನೀಡುತ್ತಿರಲಿಲ್ಲ. ಆದ್ದರಿಂದ ಆರಾಮವಾಗಿ ಮಾತಾಡಿಕೊಂಡು ಕೂರುವುದಕ್ಕೆ ನಮಗೆ ಅವಕಾಶ ಸಿಕ್ಕಿತ್ತು. ನಮ್ಮ ಹಾಗೆಯೇ ಸಾಹಿತ್ಯಸಕ್ತರು 'ಮನವಿ' ಮಾಡಿಕೊಂಡು ಬಂದಿದ್ದರು. ಎಂಟತ್ತು ಅಭಿಮಾನಿಗಳೊಂದಿಗೆ ಮಾತು ಆರಂಭಿಸಿದ ಅವರೊಂದಿಗೆ ಮಾತನಾಡುತ್ತಾ ಸುಮಾರು ಮೂರು ತಾಸು ಹೋಗಿದ್ದು ಅಲ್ಲಿದ್ದವರಿಗೆ ಅರಿವಿಗೆ ಬಂದಿರಲಿಲ್ಲ. ಅದು ಮಾತುಕತೆ ಎನ್ನುವುದಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳಿಗೆ ಶಿಕ್ಷಕರು ಕೇಳುವ 'ಪ್ರಶ್ನೋತ್ತರ' ಅವಧಿಯಂತಿತ್ತು ಎಂದರೆ ತಪ್ಪಾಗುವುದಿಲ್ಲ. ಮಾತಿಗೆ ಕೂತಿದ್ದ ಪ್ರತಿಯೊಬ್ಬರಿಗೂ, ಭೈರಪ್ಪನವರು ಅವರ ಯಾವ ಪುಸ್ತಕವನ್ನು ಓದಿದ್ದೀರಿ ಎಂದು ಪ್ರಶ್ನಿಸುವುದಷ್ಟೇ ಅಲ್ಲದೇ, ಆ ಪುಸ್ತಕದಲ್ಲಿ ಬರುವ ಪಾತ್ರಗಳು, ಪಾತ್ರ ರಚನೆಯಾದ ರೀತಿ, ಅದರ ಹಿಂದಿನ ಉದ್ದೇಶ, ಕಥೆ-ಉಪಕಥೆ ಹೇಳುತ್ತಾ ಸಾಗಿದರು. ಅವರು ಕೇಳುವಾಗಲೆಲ್ಲ, ಹೇಳಿದರೆ ತಪ್ಪೇನಾಗುವುದೋ? ಎನ್ನುವ ಅಂಜಿಕೆಯಲ್ಲಿಯೇ ನಾನಂತು ಉತ್ತರಿಸಿದ್ದೆ. ಈ ಚರ್ಚೆಯ ಅವಧಿಯಲ್ಲಿ ಅವರಿಗೆ ಆಯಾಸವಾಗಿದ್ದು ನಮಗೆ ತಿಳಿಯುತ್ತಿದ್ದರೂ, ಅವರಿಗಿದ್ದ ಉತ್ಸಾಹವನ್ನು ಕಂಡು ಇನ್ನಷ್ಟು ಹೊತ್ತು ಕೂರಬೇಕು ಅನಿಸಿದ್ದು ಸುಳ್ಳಲ್ಲ. ಹೀಗೆ 10 ನಿಮಿಷಕ್ಕೆ ಭೇಟಿಯಾಗಿ, ಆರ್ಶೀವಾದ ಪಡೆಯಬೇಕೆಂದು ಹೋಗಿದ್ದ ನಾವು ಅವರ ಮನೆಯಿಂದ ಸರಸ್ವತಿ ಪುತ್ರರೊಂದಿಗೆ ಬರೋಬ್ಬರಿ ಮೂರುವರೆಯಿಂದ ನಾಲ್ಕು ತಾಸು ಕಳೆದೆವು ಎನ್ನುವ ಸಾರ್ಥಕ ಭಾವನೆಯೊಂದಿಗೆ ಹೊರ ಬಂದಿದ್ದೆವು.

ನಾಲ್ಕು ತಾಸು ಗಟ್ಟಿ ಕೂತಿದ್ದ ಎಸ್.ಎಲ್. ಭೈರಪ್ಪ

ಭೈರಪ್ಪನವರಿಗೆ ವಯಸ್ಸಾಗಿದ್ದು ದೇಹಕ್ಕೆ ಮಾತ್ರ ಹೊರತು, ಅಕ್ಷರ ಪ್ರೀತಿ ಅಥವಾ ಮನಸ್ಸಿಗೆ ಅಲ್ಲ ಎನ್ನುವುದನ್ನು ಹತ್ತಿರದಿಂದ ನೋಡಿದ ಬಹುತೇಕರಿಗೆ ಗೊತ್ತಿತ್ತು. ವಯೋಸಹಜ ಕಾರಣಕ್ಕೆ, ಕೆಲ ವರ್ಷಗಳಿಂದ ಕಾರ್ಯಕ್ರಮಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿರಲಿಲ್ಲ. ಆದರೆ ವಿಶ್ವವಾಣಿ ವಾರ್ಷಿಕೋತ್ಸವ, ವಿಶ್ವೇಶ್ವರ ಭಟ್ಟರ ಪುಸ್ತಕ ಬಿಡುಗಡೆ, ಪ್ರವಾಸಿ ಪ್ರಪಂಚ ಲೋಕಾರ್ಪಣೆ ಸೇರಿದಂತೆ ವಿಶ್ವವಾಣಿಯ ಬಹುತೇಕ ಕಾರ್ಯಕ್ರಮ ಗಳಲ್ಲಿ ಭಾಗವಹಿಸುತ್ತಿದ್ದರು. ಅದರಲ್ಲಿಯೂ ಕೆಲ ತಿಂಗಳ ಹಿಂದೆ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮ ದಲ್ಲಿ ಅವರು ಕೆಲ ಸಮಯ ಉಳಿದುಕೊಂಡು ವಾಪಸು ಹೋಗುತ್ತಾರೆ ಎಂದೇ ಅನೇಕರು ಭಾವಿಸಿದ್ದರು. ಆದರೆ ನಮ್ಮೆಲ್ಲರ ನಿರೀಕ್ಷೆಯನ್ನು ತಲೆಕೆಳಗೆ ಮಾಡಿದ್ದು ಭೈರಪ್ಪನವರ ಗಟ್ಟಿತನಕ್ಕೆ ಸಾಕ್ಷಿ. ಸುಮಾರು ನಾಲ್ಕು ತಾಸು ನಡೆದ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿ ಆಸೀನರಾದವರು ಏಳಲೇ ಇಲ್ಲ.

ಕನ್ನಡದ ಅಸ್ಮಿತೆ ಕಳೆದುಕೊಂಡ ಮನಸ್ಸು ಭಾರವಾಗಿದೆ

ಆರ್. ದೊಡ್ಡೇಗೌಡ
ಪ್ರಧಾನ ವ್ಯವಸ್ಥಾಪಕ, ಸಪ್ನ ಬುಕ್ ಹೌಸ್ ಪ್ರೈ.ಲಿ

ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ (ಎಸ್.ಎಲ್ .ಭೈರಪ್ಪ) ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಉತ್ತುಂಗದ ಸಾಹಿತ್ಯ ಕೃಷಿ ಮಾಡಿ ನಕ್ಷತ್ರವಾಗಿ ಮಿಂಚಿದವರು. ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು ಮತ್ತು ಲೇಖಕರು, ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಬರೆದಿರುವ ಇವರ ಕೃತಿಗಳು ಇಂಗ್ಲಿಷ್ ಹಾಗೂ ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಭಾರತದ ಸಾಹಿತ್ಯವಲಯದಲ್ಲಿ ಹೆಸರಾಗಿದ್ದಾರೆ. ಇವರ ಕಾದಂಬರಿಗಳು ಹಲವಾರು ಮರುಮುದ್ರಣಗಳನ್ನು ಕಂಡು ಕನ್ನಡದ ಜನಪ್ರಿಯ ಬರಹಗಾರರಾಗಿದ್ದಾರೆ. ಭಾರತ ಸರಕಾರವು ಪದ್ಮಭೂಷಣ, ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಅನೇಕ ಕಾದಂಬರಿಗಳು ಚಲನಚಿತ್ರವಾಗಿ ಪ್ರಸಿದ್ಧಿ ಪಡೆದಿವೆ. ಅವರ 5ನೇ ವಯಸ್ಸಿನಲ್ಲಿ ಅವರ ತಾಯಿ ಬಡತನ - ಪ್ಲೇಗ್ ಗಳಿಗೆ ಜೀವವನ್ನು ತೆತ್ತಾಗ ಬದುಕಿನ ವಿಶ್ವ ವಿಶಾಲತೆಯ ರಂಗದಲ್ಲಿ ಸಾಹಸಮಯವಾದ ಬದುಕನ್ನು ತಾವೇ ನಿರ್ಮಿಸಿ ಕೊಳ್ಳ ತೊಡಗಿ, ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿದರು. ಗಾಂಧೀಜಿಯವರ ಮೌಲ್ಯಗಳಿಗೆ ಬೆಲೆ ಕೊಟ್ಟು ಸ್ವಾತಂತ್ರ ಚಳುವಳಿಗೆ ತೊಡಗಿಸಿಕೊಂಡಾಗ ಅವರಿಗೆ ಕೇವಲ 13 ವರ್ಷ!

ಹಲವು ಭಾಷೆಗಳಿಗೆ ಭೈರಪ್ಪನವರ ಕಾದಂಬರಿಗಳು ಅನುವಾದ: ಪ್ರೌಢ ಶಿಕ್ಷಣ ಹಾಗೂ ಕಾಲೇಜು ಓದು ಮೈಸೂರಿನಲ್ಲಿ ಮುಂದುವರೆಸಿದ ಭೈರಪ್ಪನವರು, ಎಂ.ಎ.ನಲ್ಲಿ ಸುವರ್ಣ ಪದಕದೊಂದಿಗೆ ತೇರ್ಗಡೆಯಾದರು. ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಿಂದ ಸತ್ಯ ಮತ್ತು ಸೌಂದರ್ಯ, ಎಂಬ ಇಂಗ್ಲಿಷ್‌ನಲ್ಲಿ ರಚಿಸಿದ ಮಹಾ ಪ್ರಬಂಧಕ್ಕಾಗಿ ಡಾಕ್ಟರೇಟ್ ಪದವಿ ಗಳಿಸಿದರು. ಹುಬ್ಬಳ್ಳಿ, ಗುಜರಾತಿನ ಸರದಾರ್ ಪಟೇಲ್ ವಿಶ್ವ ವಿದ್ಯಾಲಯ, ದೆಹಲಿಗಳಲ್ಲಿ ತಮ್ಮ ಉಪನ್ಯಾಸಕ ವೃತ್ತಿ ಕೈಗೊಂಡ ಭೈರಪ್ಪನವರು, ಶಾಸ್ತ್ರಿಯ ಶಿಸ್ತಿನ ಓದಿನ ನಡುವೆ ಮಹತ್ವದ ಕಾದಂಬರಿಗಳನ್ನು ರಚಿಸಿದ್ದಾರೆ. 1961 ರಲ್ಲಿ 'ಧರ್ಮಶ್ರೀ' ಕಾದಂಬರಿ ಪ್ರಕಟಿಸಿ ಇದುವರೆವಿಗೆ ನಾಲ್ಕು ದಶಕಗಳಲ್ಲಿ 21 ಕಾದಂಬರಿಗಳನ್ನು ಬರೆದಿದ್ದಾರೆ. ಆಯಾ ಕಾಲದಲ್ಲಿ ಬಂದ ಅವರ ಕಾದಂಬರಿಗಳೆಲ್ಲಾ ಚರ್ಚೆಗೆ ಒಳಗಾಗಿವೆ. ಇಂಗ್ಲಿಷ್ ಭಾಷೆಯೂ ಸೇರಿದಂತೆ ಭಾರತೀಯ ಹಲವು ಭಾಷೆಗಳಿಗೆ ಭೈರಪ್ಪನವರ ಕಾದಂಬರಿಗಳು ಅನುವಾದ ಗೊಂಡಿವೆ. ಗೃಹಭಂಗ, ವಂಶವೃಕ್ಷ, ನೆಲೆ. ಸಾಕ್ಷಿ, ನಾಯಿ ನೆರಳು, ತಬ್ಬಲಿಯು ನೀನಾದೆ ಮಗನೆ, ದಾಟು, ಧರ್ಮಶ್ರೀ, ಪರ್ವ, ಭಿತ್ತಿ ಮುಂತಾದವು ಹಿಂದಿ, ಮರಾಠಿಯಲ್ಲಿ ಜನಪ್ರಿಯವಾಗಿವೆ.

ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ. ಮತದಾನ ಕಾದಂಬರಿಗಳು ಚಲನಚಿತ್ರವಾಗಿ ಪ್ರಶಸ್ತಿ ಗಳಿಸಿವೆ. ವಂಶವೃಕ್ಷಕ್ಕೆ 1966 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1975 ರಲ್ಲಿ ದಾಟು ಕಾದಂಬರಿಗೆ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ದೊರೆತಿದೆ. 'ಪರ್ವ' ಭೈರಪ್ಪನವರು ರಚಿಸಿದ ಕಾದಂಬರಿಗಳಲ್ಲೇ ಭಾರೀ ಚರ್ಚೆಗೆ ಒಳಗಾದದ್ದು. ಮಹಾಭಾರತ ಕಾಲದ ಭಾರತೀಯ ಸಮಾಜದ ರೀತಿ ನೀತಿಗಳನ್ನೂ, ಆ ಕಾಲದ ಜೀವನ ಮೌಲ್ಯಗಳನ್ನು, ಮೃತ್ಯುವಿನ ರಹಸ್ಯಾತ್ಮಕತೆಯನ್ನು ಕಾದಂಬರಿಯಲ್ಲಿ ಅರ್ಥಪೂರ್ಣವಾಗಿ ಬಿಂಬಿಸಲಾಗಿದೆ. ಲೈಂಗಿಕತೆ ಮತ್ತು ಸಾವುಗಳ ನೆಲೆಯಲ್ಲಿ ದ್ರೌಪದಿ, ಕುಂತಿ. ಮಾದ್ರಿ, ಗಾಂಧಾರಿ ಪಾತ್ರಗಳನ್ನು ವಿಶಿಷ್ಟವಾಗಿ ಮೂಡಿಸಿದ್ದಾರೆ.

ಅಪಾರ ಓದುಗ ಅಭಿಮಾನಿ ಬಳಗ: ಕಾದಂಬರಿಗಳಲ್ಲದೆ ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿದ 'ಸಾಹಿತ್ಯ ಮತ್ತು ಪ್ರತೀಕ', 'ಕಥೆ ಮತ್ತು ಕಥಾವಸ್ತು', ನಾನೇಕೆ ಬರೆಯುತ್ತೇನೆ' ಎಂಬ ಕೃತಿಗಳನ್ನೂ ಭೈರಪ್ಪ ರಚಿಸಿದ್ದಾರೆ. 1999 ರಲ್ಲಿ ಕನಕಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಭೈರಪ್ಪ ಆಯ್ಕೆಯಾಗಿದ್ದರು. ಭೈರಪ್ಪನವರು ಜನಪ್ರಿಯ ಕಾದಂಬರಿಕಾರರು. ಅವರ ನಿಲುವುಗಳ ಬಗ್ಗೆ ಭಿನ್ನಾಭಿಪ್ರಾಯ ಇದ್ದದ್ದು ಮತ್ತು ಇರುವುದು ನಿಜ. ಅವರು ತಮ್ಮ ಬರಹಗಳಿಗೆ ತೆಗೆದುಕೊಳ್ಳುತ್ತಿದ್ದ ವಸ್ತು, ನಿರೂಪಣೆ, ಅಂತಿಮವಾಗಿ ತಾಳುವ ನೆನಪುಗಳು ಚರ್ಚಾರ್ಹವಾಗಿದ್ದವು. ಅವರಿಗೆ ಅಪಾರ ಓದುಗ ಅಭಿಮಾನಿ ಬಳಗ ಇತ್ತು ಮತ್ತು ಇದೆ. ಕನ್ನಡ ಮತ್ತು ಕನ್ನಡೇತರ ಓದುಗರನ್ನು ಅವರು ತಲುಪುವಲ್ಲಿ ಯಶಸ್ವಿಯಾಗಿದ್ದಾರೆ.

ಭೈರಪ್ಪನವರು ಕನ್ನಡ ಭಾಷೆಯ ಸೂಕ್ಷ್ಮಗಳನ್ನು ಬಲ್ಲವರಾಗಿದ್ದರು. ಮಾನವನ ದೌರ್ಬಲ್ಯಗಳ ಬಗ್ಗೆ ಅವರಿಗೆ ಅನುಕಂಪವಿತ್ತು. ಕಾಮ ಮತ್ತು ಸಂತಾನವನ್ನು ಅವರಂತೆ ಸಮಗ್ರವಾಗಿ ವಿಶ್ಲೇಷಿಸಿದ ಇನ್ನೊಬ್ಬ ಲೇಖಕ ಕನ್ನಡದಲ್ಲಿ ಇಲ್ಲ. ಕನ್ನಡದ ಬರಹಗಳಲ್ಲಿ ಹಾಗೂ ತಾತ್ವಿಕ ಚಿಂತನೆಗಳಲ್ಲಿ ತಮ್ಮ ಬರಹ ಸದಾ ನೆನಪಿನಲ್ಲಿರುತ್ತದೆ. ಕನ್ನಡದ ಶ್ರೇಷ್ಠ ಲೇಖಕರೊಬ್ಬರು ಕಣ್ಮರೆಯಾದಂತಾಯಿತು.

ಎಸ್.ಎಲ್. ಭೈರಪ್ಪ ಜತೆ ಸಂಸದ ತೇಜಸ್ವಿ ಸೂರ್ಯ .

ನಾಟಕ ಕಂಪನಿ ಕೆಲಸಕ್ಕೆ ಸೇರಿದ್ದ ಭೈರಪ್ಪ

ರೈಲಿನಿಂದ ಇಳಿದ ಬಳಿಕ ಮೂರು ಹೊತ್ತಿನ ಊಟಕ್ಕಾಗಿ ಭೈರಪ್ಪನವರು ಬ್ಯಾಡಗಿಯಲ್ಲಿದ್ದ ನಾಟಕ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರು. ಬಳಿಕ ರಾಣೆಬೆನ್ನೂರಿನ ಹೋಟೆಲ್ ಒಂದರಲ್ಲಿ ಕೆಲಸಕ್ಕೆ ಇದ್ದರು. ಈ ಸಂದರ್ಭದಲ್ಲಿ ಅವರು ರಾಣೆಬೆನ್ನೂರಿನಲ್ಲಿದ್ದ ಗರಡಿಮನೆಗಳು ಕುಸ್ತಿಪಂದ್ಯಗಳನ್ನು ನೋಡಿ ಭೀಮಕಾಯ ಎಂಬ ಕಾದಂಬರಿ ಬರೆದರು. ಎಸ್‌ಎಲ್ ಭೈರಪ್ಪನವರ ಕಾದಂಬರಿ ಪಯಣ ಆರಂಭವಾಗಿದ್ದು ಹಾವೇರಿಯಿಂದ ಎನ್ನುವುದ ಸಂಗತಿ ಅನೇಕರಿಗೆ ತಿಳಿದಿಲ್ಲ.



ಭೈರಪ್ಪನವರ ನಿಧನವು ಕನ್ನಡ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ. ಅವರು ಓದುವ ಸಂಸ್ಕೃತಿಯನ್ನು ಬೆಳೆಸಿದ ಧೀಮಂತ ಲೇಖಕರಾಗಿದ್ದರು. ಅಖಿಲ ಭಾರತ ಮಟ್ಟದ ಚಿಂತನೆ ರೂಢಿಸಿಕೊಂಡಿದ್ದ ಭೈರಪ್ಪನವರು ಬದುಕಿನ ಮೌಲ್ಯಗಳ ಶೋಧದಲ್ಲಿ ನಿರತರಾಗಿದ್ದರು. ಅವರು ಕನ್ನಡದ ಪರವಾಗಿದ್ದು, ಪ್ರಜ್ಞೆಯನ್ನು ವಿಸ್ತರಿಸಿದ ಮಹತ್ತ್ವದ ಲೇಖಕರಾಗಿದ್ದರು. ಅವರ ಕಾದಂಬರಿಗಳು ಹತ್ತಾರು ಮುದ್ರಣಗಳನ್ನು ಕಂಡಿದ್ದು, ಎಲ್ಲಾ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿರುವುದೇ ಅವರ ಪ್ರಸ್ತುತತೆಗೆ ಸಾಕ್ಷಿಯಾಗಿದೆ. ಭೈರಪ್ಪನವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬದ ಸದಸ್ಯರಿಗೆ ಹಾಗೂ ಅಭಿಮಾನಿಗಳಿಗೆ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ಭಗವಂತನು ಕರುಣಿಸಲಿ

- **ಎಂ.ಬಿ.ಪಾಟೀಲ** ಸಚಿವ

ನಾಡಿನ ಹಿರಿಯ ಸಾಹಿತಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ, ಕಾದಂಬರಿಕಾರ ಪ್ರೊ. ಎಸ್.ಎಲ್.ಭೈರಪ್ಪ ಅವರ ಅಗಲಿಕೆಯು ನೋವನ್ನುಂಟು ಮಾಡಿದೆ. ಅವರಿಗೆ ನನ್ನ ಭಾವಪೂರ್ಣ ನಮನಗಳು. ಎಸ್.ಎಲ್. ಭೈರಪ್ಪ ಅವರು ತಮ್ಮ ವಿಶಿಷ್ಟ ಬರಹದ ಮೂಲಕ ಕರ್ನಾಟಕ ಮಾತ್ರವಲ್ಲದೆ ಭಾರತದಾದ್ಯಂತ ಅಸಂಖ್ಯಾತ ಓದುಗರನ್ನು ಗಳಿಸಿದ್ದರು. ಹಲವು ಕಾದಂಬರಿಗಳು ವಿವಿಧ ಭಾಷೆಗಳಿಗೆ ಅನುವಾದಗೊಂಡಿದ್ದವು. ಅವರ ಅಗಲಿಕೆಯು ಸಾಹಿತ್ಯ ಲೋಕಕ್ಕೆ ತುಂಬಲಾಗದ ನಷ್ಟ. ಮೃತರ ಆತ್ಮಕ್ಕೆ ಸದ್ಗತಿ ಕೋರುತ್ತೇನೆ.

-**ಡಾ. ಜಿ.ಪರಮೇಶ್ವರ್** ಗೃಹ ಸಚಿವ

ಕನ್ನಡ ಸಾಹಿತ್ಯ ಲೋಕದ ಹಿರಿಯ ಸಾಹಿತಿ, ತಮ್ಮ ವಿಭಿನ್ನ ಆಯಾಮಗಳ ಬರವಣಿಗೆಯ ಮೂಲಕ ಅಪಾರ ಓದುಗರ ಮನಸೆಳೆದಿದ್ದ ಎಸ್.ಎಲ್ ಭೈರಪ್ಪರ ನಿಧನ ನಮಗೆಲ್ಲ ನೋವು ತಂದಿದೆ. ಭೈರಪ್ಪನವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ವಿಶಿಷ್ಟ ಬರಹ ಶೈಲಿಯಿಂದಾಗಿ ಅಪಾರ ಓದುಗರನ್ನು ಹೊಂದಿದ್ದ ಭೈರಪ್ಪನವರು, ಪದ್ಮಶ್ರೀ, ಪದ್ಮವಿಭೂಷಣ, ಸರಸ್ವತಿ ಸಮ್ಮಾನ್ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಅವರ ನಿಧನದಿಂದ ಕನ್ನಡ ಸಾಹಿತ್ಯಲೋಕ ಬಡವಾಗಿದೆ. ಅವರ ಕುಟುಂಬವರ್ಗ ಮತ್ತು ಓದುಗ ಬಳಗಕ್ಕೆ ನನ್ನ ಸಂತಾಪಗಳು.

-**ದಿನೇಶ್ ಗುಂಡೂರಾವ್** ಸಚಿವ

ಕನ್ನಡ ಸಾಹಿತ್ಯ ಲೋಕದ ಹಿರಿಯ ಬರಹಗಾರ ಎಸ್. ಎಲ್. ಭೈರಪ್ಪ ಅವರ ನಿಧನ ಸುದ್ದಿ ನೋವುಂಟು ಮಾಡಿದೆ. ಮನಸ್ಸಿಗೆ ಹತ್ತಿರವಾಗಿರುವ ಬರಹಶೈಲಿಯಿಂದ ಲಕ್ಷಾಂತರ ಓದುಗರ ಹೃದಯದಲ್ಲಿ ಅಜರಾಮರವಾದ ಸ್ಥಾನ ಪಡೆದ ಭೈರಪ್ಪರ ಅಗಲಿಕೆ ಕನ್ನಡ ಸಾಹಿತ್ಯ ಜಗತ್ತಿಗೆ ತುಂಬಲಾರದ ನಷ್ಟ. ಅವರ ಕುಟುಂಬವರ್ಗ ಹಾಗೂ ವಿಶ್ವದಾದ್ಯಂತ ಇರುವ ಓದುಗರಿಗೆ ನನ್ನ ಹೃತ್ಪೂರ್ವಕ ಸಂತಾಪಗಳು.

- **ಸತೀಶ್ ಜಾರಕಿಹೊಳಿ** ಸಚಿವ

ಕನ್ನಡ ಸಾಹಿತ್ಯ ಲೋಕಕ್ಕೆ ಅಮರ ಕೃತಿಗಳನ್ನು ನೀಡಿದ ಕಾದಂಬರಿಕಾರ ಡಾ. ಎಸ್. ಎಲ್. ಭೈರಪ್ಪ ಅವರ ಅಗಲಿಕೆ ತುಂಬಲಾರದ ನಷ್ಟ ಉಂಟು ಮಾಡಿದೆ. ಕಳೆದ ಆರು ದಶಕಗಳಲ್ಲಿ ಕನ್ನಡದ ಓದುಗರ ಹೃದಯ ಸಿಂಹಾಸನವನ್ನು ಆಳುತ್ತಿರುವ ಪರಿ ಅನನ್ಯವಾದದ್ದು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬಸ್ಥರು, ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

- **ಕೃಷ್ಣ ಬೈರೇಗೌಡ** ಕಂದಾಯ ಸಚಿವರು

ನಾಡಿನ ದಿಗ್ಗಜ ಸಾಹಿತಿ, ಮಹೋನ್ನತ ಕಾದಂಬರಿಕಾರರಾಗಿ ಕನ್ನಡಕ್ಕೆ ಭಿಸರಸ್ವತಿ ಸಮ್ಮಾನ್ ಗೌರವ ತಂದುಕೊಟ್ಟ ಪದ್ಮಭೂಷಣ ಡಾ.ಎಸ್.ಎಲ್. ಭೈರಪ್ಪನವರ ಅಗಲಿಕೆ ತೀವ್ರ ಶೋಕವನ್ನುಂಟು ಮಾಡಿದೆ. ಭೈರಪ್ಪ ಅವರು ಅಗಾಧ ಸಂಶೋಧನೆಗಳಿಂದ, ಇತಿಹಾಸದ ವ್ಯಾಪಕ ಅಧ್ಯಯನದಿಂದ ಕನ್ನಡ ಸಾರಸ್ವತ ಲೋಕಕ್ಕೆ ಅರ್ಥಪೂರ್ಣ ಸಾಹಿತ್ಯ ರಚಿಸಿದವರು. ತಮ್ಮ ಪ್ರಖರ ರಾಷ್ಟ್ರೀಯತೆಯ ಚಿಂತನೆ, ಆಳವಾದ ವಿಮರ್ಶೆ ಹೂರಣದ ಸಾಹಿತ್ಯವನ್ನು ನಾಡಿಗೆಲ್ಲ ಹಂಚಿದವರು. ಅವರ ಅಗಲಿಕೆಯಿಂದ ನಮ್ಮ ನಾಡಿನ ಸಾರಸ್ವತಲೋಕ ಬಡವಾಗಿದೆ. ಅವರ ಕುಟುಂಬಕ್ಕೆ, ಅಭಿಮಾನಿಗಳಿಗೆ ದೇವರು ದುಃಖ ಸಹಿಸಿಕೊಳ್ಳುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.

- **ಪ್ರಲ್ಹಾದ್ ಜೋಶಿ** ಕೇಂದ್ರ ಸಚಿವ

ಕನ್ನಡದ ಶ್ರೇಷ್ಠ ಕಾದಂಬರಿಕಾರರು ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕತರಾದ ಡಾ.ಎಸ್.ಎಲ್. ಭೈರಪ್ಪನವರ ನಿಧನದ ಸುದ್ದಿ ತಿಳಿದು ಮನಸ್ಸಿಗೆ ನೋವಾಯಿತು. ಅಪಾರ ಅಭಿಮಾನಿಗಳನ್ನು ಹೊಂದಿದ್ದ ಭೈರಪ್ಪನವರ ನಿಧನದಿಂದ ಸಾಹಿತ್ಯಲೋಕ ಬಡವಾಗಿದೆ. ಈ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಕುಟುಂಬಸ್ಥರಿಗೆ ನೋವು ಸಹಿಸುವ ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ

-**ಲಕ್ಷ್ಮೀ ಹೆಬ್ಬಾಳ್ಕರ್** ಸಚಿವೆ

ಒಂದು ತಲೆಮಾರಿನ ಓದುಗರ ಅಭಿರುಚಿ ಹೆಚ್ಚಿಸಿದ ಸಾಹಿತಿ

ಶಶಿಧರ ಹಾಲಾಡಿ

ನಾನು ಮೊದಲ ಬಾರಿ ಎಸ್.ಎಲ್.ಭೈರಪ್ಪ ಅವರನ್ನು ನೋಡಿದ್ದು ಶಿವಮೊಗ್ಗದಲ್ಲಿ, ಅದು 1990ರಲ್ಲಿ. ಕಾರ್ಯಕ್ರಮವೊಂದಕ್ಕೆ ಬಂದಿದ್ದ ಅವರನ್ನು ನಾನು, ನನ್ನ ಮಡದಿ, ಮಕ್ಕಳು ಎಲ್ಲರೂ ಹತ್ತಿರದಿಂದ ನೋಡಿದೆವು. ಅವರ ಒಂದು ಕಾದಂಬರಿಯನ್ನು ಖರೀದಿಸಿ, ಅದರ ಮೇಲೆ ಅವರ ಹಸ್ತಾಕ್ಷರ ಪಡೆದೆವು. ಕಾದಂಬರಿಕಾರ ಭೈರಪ್ಪನವರನ್ನು ಹತ್ತಿರದಿಂದ ನೋಡುವುದು ಎಂದರೆ, ಅದೊಂದು ಸಂಭ್ರಮ, ಏಕೆಂದರೆ, ನಮ್ಮ ಕುಟುಂಬದವರು, ಭಾವಂದಿರು, ಬಂಧುಗಳು ಎಲ್ಲರೂ ಬಹು ಹಿಂದಿನಿಂದಲೂ ಭೈರಪ್ಪನವರ ಕಾದಂಬರಿಗಳನ್ನು ಓದಿಕೊಂಡು ಬಂದಿದ್ದೇವೆ. ಹೊನ್ನಾಳಿ ಸನಿಹದ ಸವಳಂಗ ಎಂಬ ಪುಟ್ಟ ಹಳ್ಳಿಯಲ್ಲಿ ಹೊಟೆಲ್ ವ್ಯವಹಾರ ನಡೆಸುತ್ತಿದ್ದ ನನ್ನ ಭಾವಂದಿರು, 1981ರ ಸಮಯದಲ್ಲೇ, ಭೈರಪ್ಪನವರ ಅದುವರೆಗಿನ ಎಲ್ಲಾ ಕಾದಂಬರಿಗಳನ್ನು ಖರೀದಿಸಿ, ಓದಿ, ಆ ಹಳ್ಳಿಯಲ್ಲಿದ್ದ ತಮ್ಮ ಬಾಡಿಗೆ ಮನೆಯಲ್ಲಿಟ್ಟುಕೊಂಡು, ಬಂದವರಿಗೆಲ್ಲಾ ಅಭಿಮಾನದಿಂದ ತೋರಿಸುತ್ತಿದ್ದರು, ಮಾತ್ರವಲ್ಲ, ಓದಲು ಎರವಲು ಕೊಡುತ್ತಿದ್ದರು! ಅವರಲ್ಲಿದ್ದ ಆ ಎಲ್ಲಾ ಕಾದಂಬರಿಗಳ್ನೂ ನಮ್ಮ ಕುಟುಂಬದವರು, ಬಂಧುಗಳು ಪಡೆದು ಓದುವ ಪರಿಪಾಠವಿತ್ತು.

ಇಲ್ಲಿ ಭೈರಪ್ಪನವರ ಮೇಲಿನ ಅಭಿಮಾನದ ಜತೆಯಲ್ಲೇ, ಹಳ್ಳಿಗಾಡಿನ ಸಾಮಾನ್ಯ ಕುಟುಂಬವೊಂದು ಓದುವ ಸಂಸ್ಕೃತಿಯನ್ನು ಬೆಳೆಸಿಕೊಂಡ ಪ್ರಕ್ರಿಯೆಯನ್ನೂ ಗಮನಿಸಬಹುದು. ಆ ಪುಟ್ಟ ಹಳ್ಳಿಯಲ್ಲಿ ಹೊಟೇಲ್ ನಡೆಸುತ್ತಿದ್ದ ನಮ್ಮ ಭಾವಂದಿರಲ್ಲಿ ಓದುವ ಅಭಿರುಚಿ ಬೆಳೆಯಬೇಕೆಂದರೆ, ಅವರ ಎಲ್ಲಾ ಕಾದಂಬರಿಗಳನ್ನು ಖರೀದಿಸಿ, ಸಂಗ್ರಹಿಸಿಕೊಂಡು ಆಗಾಗ ಓದಬೇಕೆಂಬ ಆಸೆ ಬೆಳೆಯಬೇಕೆಂದರೆ, ಅವರ ಆ ಕಾದಂಬರಿಗಳ ಸತ್ವವನ್ನು ಗಮನಿಸಬೇಕು. ಅಂದಿನ 'ಜನಪ್ರಿಯ ಸಾಹಿತ್ಯ'ಕ್ಕಿಂತ ಬಹು ಉನ್ನತ ಮಟ್ಟದ, ಆದರೆ ಬಿಡದೆ ಓದಿಸಿಕೊಂಡು ಹೋಗುವ, ಮನೋಜ್ಞ ಕಾದಂಬರಿಗಳನ್ನು ಬರೆದು, ಜನಸಾಮಾನ್ಯರನ್ನು ಓದಲು ಹಚ್ಚಿದ್ದು ಭೈರಪ್ಪನವರ ಹೆಗ್ಗಳಿಕೆ. ಕನ್ನಡ ನಾಡಿನ ಜನಸಾಮಾನ್ಯರಲ್ಲಿ ಭೈರಪ್ಪನವರ ಕಾದಂಬರಿಗಳು ಓದುವ ಅಭಿರುಚಿಯನ್ನು ಬೆಳೆಸಿದ ಪರಿಯು ಒಂದು ವಿಸ್ಮಯ. ಈ ಕುರಿತು ಇತರ ಸಾಹಿತಿಗಳು, ಚಿಂತಕರು, ಸಂಕೋಚವಿಲ್ಲದೇ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಒಂದೆರಡು ತಲೆಮಾರಿನ ಓದುಗರಿಗೆ, ಓದುವ ರುಚಿಯನ್ನು ಹತ್ತಿಸಿದವರಲ್ಲಿಲ ಭೈರಪ್ಪನವರು ಪ್ರಮುಖರು. ಈ ಕುರಿತು ತೇಜಸ್ವಿಯವರು ಹಿಂದೊಮ್ಮೆ ಬರೆದದ್ದನ್ನು ಗಮನಿಸಬಹುದು:

''ಕಾದಂಬರಿಕಾರರಾಗಿ ಖ್ಯಾತರಾಗಿರುವ ಶ್ರೀಯುತ ಎಸ್.ಎಲ್.



ಭೈರಪ್ಪನವರು ಕನ್ನಡ ಗದ್ಯಸಾಹಿತ್ಯದ ಬೆಳವಣಿಗೆಗೆ ಗಣನೀಯ ಸೇವೆ ಸಲ್ಲಿಸಿರುವವರು. ನವ್ಯಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯವನ್ನು ಕೊಂಡು ಓದುವವರ ಸಂಖ್ಯೆಯೇ ನಶಿಸಿಹೋಗುತ್ತಿದ್ದಾಗ, ಭೈರಪ್ಪನವರು ಓದುಗ ಸಹೃದಯರ ಸಮುದಾಯವನ್ನು ಜೀವಂತವಾಗಿ ಇಟ್ಟವರು. ಸಾಹಿತಿಗಳಲ್ಲಿ ಬಹುಪಾಲು ಪ್ರಶಸ್ತಿ, ಸನ್ಮಾನಗಳ ಬೆನ್ನುಹತ್ತಿರುವ, ಸ್ವಂತ ಅಭಿಮಾನಿಗಳ ಕೂಟವನ್ನು ಕಟ್ಟಿಕೊಳ್ಳುತ್ತಿರುವ ಸಮಕಾಲೀನ ಸಂದರ್ಭದಲ್ಲಿ, ಸಾಹಿತ್ಯ ಅಂತಿಮವಾಗಿ ಲೇಖಕ ಮತ್ತು ಓದುಗರ ನಡುವಿನ ಸಂವಾದವಾಗಿಯೇ ಬದುಕಬೇಕಾಗುತ್ತದೆ ಎಂಬ ವಾಸ್ತವವನ್ನು ಮರೆಯದೆ ಇವತ್ತಿಗೂ ಕೃತಿರಚನೆ ಮಾಡುತ್ತ ಬಂದಿರುವ ಲೇಖಕ ಶ್ರೀಯುತ ಎಸ್.ಎಲ್. ಭೈರಪ್ಪನವರು'' –ಕೆ.ಪಿ ಪೂರ್ಣಚಂದ್ರ ತೇಜಸ್ವಿ (ತೇಜಸ್ವಿ ಪತ್ರಗಳು ಕೃತಿಯಲ್ಲಿ)

ನನ್ನ ಮೇಲೆ ಪ್ರಚಂಡ ಪರಿಣಾಮ ಬೀರಿದ ಕಾದಂಬರಿಗಳಲ್ಲಿ ಭೈರಪ್ಪನವರ 'ಗೃಹಭಂಗ' ಮುಂಚೂಣಿಯಲ್ಲಿದೆ. ನಮ್ಮ ದೇಶದ 14 ಕ್ಕೂ ಅಧಿಕ ಭಾಷೆಗಳಿಗೆ ಅನುವಾದಗೊಂಡಿರುವ ಈ ಕಾದಂಬರಿಯು, ವಿಶ್ವದರ್ಜೆಯ ಕಾದಂಬರಿಯಾಗಿ ಗುರುತಿಸಿಕೊಳ್ಳುವಷ್ಟು ಸಶಕ್ತವಾಗಿದೆ, ಮನೋಜ್ಞವಾಗಿದೆ. ಭೈರಪ್ಪನವರ ಬಾಲ್ಯದ ದಟ್ಟ ಅನುಭವಗಳ ಹಂದರ ಹೊಂದಿರುವ 'ಗೃಹಭಂಗ'ದ ಕುರಿತು ಈಗಾಗಲೇ ಸಾಕಷ್ಟು ವಿಶ್ಲೇಷಣೆಗಳು ನಡೆದಿವೆ; ಆದರೆ, ಪೂರ್ಣ ಪ್ರಮಾಣದಲ್ಲಿ 'ಗೃಹಭಂಗ' ವನ್ನು ವಿಶ್ಲೇಷಿಸುವ, ಚರ್ಚಿಸುವ ಕೆಲಸಕ್ಕೆ ಇನ್ನೂ ಅವಕಾಶವಿದೆ ಎಂದೇ ನನ್ನ ಅನಿಸಿಕೆ. ನಮ್ಮ ರಾಜ್ಯದ ಬಯಲುಸೀಮೆಯ (ಚನ್ನರಾಯಪಟ್ಟಣ ತಾಲೂಕು) ಹಳ್ಳಿಯ ಸಮತೋಲಿತ ಜೀವನವು, 1920–40ರ ದಶಕದ ಅವಧಿಯಲ್ಲಿ ಹೇಗೆ ನಲುಗಿತು, ಛಿದ್ರವಾಯಿತು ಎಂಬುದರ ಚಿತ್ರಣ 'ಗೃಹಭಂಗ'ದಲ್ಲಿದೆ. ಬ್ರಿಟಿಷರು ತಮ್ಮ ಲಾಭಕ್ಕಾಗಿ ತಂದ ಬಿಗಿ ಕಾನೂನುಗಳು, ಅವರ ಆಶ್ರಯದಲ್ಲಿ ರಾಜ್ಯಭಾರ ನಡೆಸುತ್ತಿದ್ದ ಮೈಸೂರು ಸಂಸ್ಥಾನದ ಅಧಿಕಾರಶಾಹಿ ನಡೆಸುತ್ತಿದ್ದ ದಬ್ಬಾಳಿಕೆ, ಮೈಸೂರು ಪೊಲೀಸರು ಸ್ವಾತಂತ್ರ್ಯಪೂರ್ವದಲ್ಲಿ ತೋರುತ್ತಿದ್ದ ದರ್ಪ, ದುಂಡಾವರ್ತಿ – ಇವೆಲ್ಲವೂ, ಅಂದಿನ ಗ್ರಾಮೀಣ ಬದುಕಿನ ಬೆನ್ನೆಲುಬನ್ನೇ ಮುರಿದ ಚಿತ್ರಣ ಈ ಕಾದಂಬರಿಯಲ್ಲಿದೆ. ಶಾನುಭೋಗಿಕೆ ನಡೆಸುತ್ತಿದ್ದ ಕುಟುಂಬವೊಂದು ಸಂಪೂರ್ಣವಾಗಿ ಛಿದ್ರವಾಗುವ ಸನ್ನಿವೇಶವು, ಮುಂದಿನ ದಶಕಗಳಲ್ಲಿ ಕೃಷಿಕರು, ಇತರ ಸಮುದಾಯದವರು ಪ್ರಾಧಾನ್ಯ ಪಡೆಯುವುದರ ಮುನ್ಸೂಚನೆಯಾಗಿಯೂ ರೂಪುಗೊಂಡಿದೆ ಮತ್ತು ಈ ರೀತಿಯ ಹಲವು ವಿಚಾರಗಳ ಹಿನ್ನೆಲೆಯಲ್ಲಿ ಗೃಹಭಂಗವನ್ನು ಮರುಓದಿಗೆ ಒಳಪಡಿಸುವ ಅಗತವಿದೆ.

ಗೃಹಭಂಗ, ದೂರಸರಿದರು, ಪರ್ವ, ಸಾರ್ಥ, ವಂಶವೃಕ್ಷ, ಅನ್ವೇಷಣೆ, ದಾಟು, ತಂತು ಮೊದಲಾದ ಅವರ ಕಾದಂಬರಿಗಳನ್ನು ರಚನಾ ತಂತ್ರದ ದೃಷ್ಟಿಯಿಂದಲೂ ಗುರುತಿಸಬೇಕಾದ ಅಗತ್ಯವಿದೆ. ಒಂದೊಂದು ಕಾದಂಬರಿಯಲ್ಲಿ ಒಂದೊಂದು ಬಗೆಯ ತಂತ್ರವನ್ನು ಭೈರಪ್ಪನವರು ಅಳವಡಿಸಿದ್ದು ಗಮನಕ್ಕೆ ಬರುತ್ತದೆ. ಭೈರಪ್ಪನವರು ಕನ್ನಡ ಸಾರಸ್ವತ ಲೋಕ ನೀಡಿದ ಕೆಲವೇ ವಿಶ್ವದರ್ಜೆಯ ಸಾಹಿತಿಗಳಲ್ಲಿ ಒಬ್ಬರು ಎಂಬುದನ್ನು ಗುರುತಿಸಿದಾಗ, ಅವರ ಕೊಡುಗೆಯ ಮೌಲ್ಯ ಅರಿವಾದೀತು. ಕನ್ನಡ ಕಾದಂಬರಿಲೋಕವನ್ನು ಶ್ರೀಮಂತಗೊಳಿಸಿದ, ಪ್ರಬುದ್ಧ ವಿಷಯಗಳನ್ನು ಕಾದಂಬರಿಯಲ್ಲಿ ಅಳವಡಿಸಿ, ಜನಸಾಮಾನ್ಯ ಓದುಗರನ್ನು ಬೆರಗಾಗಿಸಿದ, ಚಿಂತನೆಗೆ ದೂಡಿದ ಕಾದಂಬರಿಕಾರರಾದ ಎಸ್.ಎಲ್ ಭೈರಪ್ಪನವರಿಗೆ ಅಂತಿಮ ನಮನಗಳು.

ಭಿತ್ತಿ: ಅನುಭವ ಕಥನ

ಗೊರೂರ್ ಶಿವೇಶ್

'ಭಿತ್ತಿ' ಎಸ್.ಎಲ್. ಭೈರಪ್ಪನವರ ಆತ್ಮಕಥೆ. ಅವರ ಗೃಹಭಂಗ ಮತ್ತು ಅನ್ವೇಷಣ ಕಾದಂಬರಿಗಳನ್ನು ಓದಿದ್ದರೆ ಅವು ಅವರ ಆತ್ಮಕಥೆಯ ಬಾಲ್ಯ ಮತ್ತು ಯೌವನದ ಅನುಭವಗಳ ಆಧಾರಿತ ಕಾದಂಬರಿಗಳಾಗಿವೆ. ಭಿತ್ತಿ ಆತ್ಮಕತೆಯಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಅವರ ಹುಟ್ಟೂರು ಸಂತೇಶಿವರ ಹಾಗೂ ಸುತ್ತಲಿನ ಬಾಗೂರು,ನುಗ್ಗೆಹಳ್ಳಿ, ತಿಪಟೂರು ಮತ್ತು ಚನ್ನರಾಯಪಟ್ಟಣದ ಬಾಲ್ಯ ಜೀವನದ ಅನುಭವಗಳು ದಟ್ಟವಾಗಿ ಮೂಡಿದೆ. ಬಾಲ್ಯದಲ್ಲಿ ತಾಯಿ, ಊರಿಗೆ ಊರನ್ನೇ ಬಲಿ ತೆಗೆದುಕೊಳ್ಳುತ್ತಿದ್ದ ಪ್ಲೇಗ್‌ನಿಂದಾಗಿ ಸೋದರ ಸೋದರಿಯರನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ, ಅಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಚಿಕ್ಕ ವಯಸ್ಸಿನ

ಬಾಲಕ ಅಂತ್ಯಸಂಸ್ಕಾರ ಮಾಡಬೇಕಾದ ಪರಿಸ್ಥಿತಿ, ಸಮಯಕ್ಕಾಗದ ಬಂಧುಗಳು, ನೆರವಿಗೆ ಬರುವ ಊರಿನ, ತಾಲೂಕಿನ ಜನ ಹೀಗೆ ಅನೇಕರನ್ನು ತಮ್ಮ ಕೃತಿಯಲ್ಲಿ ಪಡಿಮೂಡಿಸಿದ್ದಾರೆ. ಮುಂದೆ ಅವರ ವಿದ್ಯಾಭ್ಯಾಸ, ಸಂಗೀತದ ಅಭಿರುಚಿ ಬೆಳೆದ ಬಗ್ಗೆ ಅವರ ಆಧ್ಯಾಪಕ ವೃತ್ತಿ ಸೇರಿದಂತೆ ಅವರ ಅರವತ್ತರವರೆಗಿನ ಜೀವನದ ಚಿತ್ರಣವನ್ನು ಮತ್ತು ಅವರ ವಿವಿಧ ಕಾದಂಬರಿಗಳು ಮೂಡಿಬಂದ ಬಗೆಯನ್ನು ಭಿತ್ತಿಯಲ್ಲಿ ಕಾಣಬಹುದು.

ಹುಟ್ಟಿನಿಂದ ತಮ್ಮ 60ರ ವರೆಗಿನ ಜೀವನದಲ್ಲಿ ತಾವು ಕಂಡುಂಡ ಅನುಭವಗಳು ಬದುಕಿನ ಭಾಗವಾಗಿ ಬಂದ ವ್ಯಕ್ತಿಗಳು ಜೀವನದ ಪಯಣದಲ್ಲಿ ಜೊತೆಯಾದವರು ಎಲ್ಲರನ್ನು ನಿರುದ್ವಿಗ್ನರಾಗಿ, ನಿರ್ವಿಕಲ್ಪ ಮನೋಭಾವದಲ್ಲಿ ನಿರೂಪಿಸಿರುವುದು ಕೃತಿಯ ಹೆಗ್ಗಳಿಕೆ. ತಮ್ಮ ವಿವಿಧ ಕಾದಂಬರಿಗಳು ಮೂಡಿ ಬಂದ ಬಗೆ,ಮೈಸೂರಿನ ಆರ್.ಐ.ಇ (ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್) ಅಧ್ಯಾಪಕ ವೃತ್ತಿಯ ದಿನಗಳು ಹಾಗೂ ಇತರೆ ರಾಜ್ಯಗಳಲ್ಲಿ ವೃತ್ತಿ ಹಾಗೂ ಪ್ರವಾಸದ ಸಂದರ್ಭದ ಅಂಶಗಳನ್ನು ಕೃತಿ ಒಳಗೊಂಡಿವೆ.

ಎಸ್.ಎಲ್.ಭೈರಪ್ಪನವರು ಅಧ್ಯಾಪಕ ವೃತ್ತಿಯಲ್ಲಿ ಕೈಗೊಂಡ ಸಂದರ್ಭ ಕನ್ನಡದ ಪ್ರಮುಖ ಲೇಖಕರು ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ನಳನಳಿಸುತ್ತಿದ್ದ ಕಾಲಘಟ್ಟ. ನವ್ಯ ಸಾಹಿತ್ಯ ಪ್ರಭಾವ ದಟ್ಟವಾಗಿದ್ದ ಸಂದರ್ಭದಲ್ಲಿ ಅದರ ಮುಂಚೂಣಿ ಲೇಖಕರಾದ ಗೋಪಾಲಕೃಷ್ಣ ಅಡಿಗ, ಯು.ಆರ್.ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ, ಪೂರ್ಣಚಂದ್ರ ತೇಜಸ್ವಿ ಜೊತೆಗೆ ನವೋದಯ ಸಾಹಿತ್ಯದ ಕುವೆಂಪು, ಕೆ.ಎಸ್. ನರಸಿಂಹಸ್ವಾಮಿ ಮುಂತಾದ ಸಾಹಿತ್ಯ ದಿಗ್ಗಜರು ಮೈಸೂರಿನಲ್ಲಿ ಇದ್ದ ಸಂದರ್ಭದಲ್ಲಿ ಪ್ರಸಿದ್ಧ ಲೇಖಕರ ಅವರದೇ ಆದ ಸಿದ್ಧಾಂತಗಳು, ಬಣಗಳು ಇದ್ದು ಆ ಬಣಗಳ ನಡುವಿನ ಸಂಘರ್ಷವೂ ಕೃತಿಯಲ್ಲಿ ಮೂಡಿದೆ.

1931-2025

ಸರಸ್ವತಿ ಪುತ್ರನ ಪರ್ವಾಂತ್ಯ

ಬದುಕಿನಿಂದಲೇ ಹುಟ್ಟಿಕೊಂಡ ಗೃಹಭಂಗ

ನಿರೂಪ (ಕೆ. ಪೃಥ್ವಿಜಿತ್)

ಈ ಗೃಹ ಅದೆಷ್ಟು ಬಾರಿ ಭಂಗವಾಗಿರಬಹುದು? ಛಿದ್ರಗೊಂಡ ಮನೆ ಮತ್ತು ಮನಸ್ಸು ಅದೆಷ್ಟು ಬಾರಿ ಒಗ್ಗೂಡಲು ಯತ್ನಿಸುತ್ತಿದ್ದರೂ ಹಂತಹಂತವಾಗಿ ಒಡೆಯುತ್ತಲೇ ಸಾಗುತ್ತದೆ. ಕಡೆಗೂ ಮನೆಯಾಗಿ ಮತ್ತೆ ಎದ್ದು ನಿಂತಾಗ ಅದಕ್ಕೆ ಪ್ಲೇಗಿನ ರೂಪದಲ್ಲಿ ಬಂದೆರಗುವ ವಿಧಿ ಆ ಮನೆಯನ್ನು ಸ್ಮಶಾನಮೌನಕ್ಕೊಯ್ಯುತ್ತದೆ. ಆ ಮನೆಯ ಕುಡಿ ತನ್ನ ಮೂಲನೆಲೆಯನ್ನೇ ಕಳೆದುಕೊಂಡು ಮತ್ತೆಲ್ಲೋ ನೆಲೆಯರಸಿ ಹೊರಟು ಹೋಗುತ್ತದೆ.

ಇಲ್ಲಿ ಒಂದು ಕಡೆ ಮನೆ ಕಟ್ಟುವ ಮತ್ತೊಂದು ಕಡೆ ಮನೆ ಒಡೆಯುವ ಎರಡು ರೀತಿಯ ಮನಸ್ಸುಗಳಿವೆ. ಮನೆ ಒಡೆಯುವ ಮನಸ್ಸುಗಳಿಗೆ ತಾವು ಒಡೆಯುತ್ತಿದ್ದೇವೆ, ಇದರ ಅಂತ್ಯ ದುರಂತ ಎಂಬ ಪ್ರಜ್ಞೆಯೇ ಇಲ್ಲ. ಮನೆಯನ್ನು ಕಟ್ಟುವ ಮನಸ್ಸುಗಳಿಗೆ ಒಡೆಯುವ ಮನಸ್ಸುಗಳ ಗಮ್ಯ ದುರಂತ ಮಾತ್ರವೆಂದು ತಿಳಿದೂ ಅದನ್ನು ತಡೆಯಲಾಗದ, ತಿದ್ದಲಾಗದ ಅಸಹಾಯಕ ನೋವಿದೆ. ಎಲ್ಲ ಸವಾಲನ್ನು ಮೀರಿಯೂ ಮತ್ತೆ ಮನೆ ಕಟ್ಟಿ ನಿಲ್ಲುವ ಮನಸ್ಸು ಆ ಮನೆಯನ್ನು ಪ್ರವೇಶಿಸಲಾಗದೇ, ಸುಖಿಸಲಾಗದೇ, ಸಂಭ್ರಮಿಸಲಾಗದೇ ಸಾವನ್ನಪ್ಪುತ್ತದೆ. ಇದರ ಅರ್ಥವೇನು? ಧ್ವನಿಯೇನು? ತಥ್ಯವೇನು?

ಗೃಹಭಂಗ ಹಲವು ಪ್ರಶ್ನೆಗಳನ್ನು ಹುಟ್ಟಿಸಿ, ಉತ್ತರ ಕಂಡುಕೊಳ್ಳುವ ಹೊಣೆಗಾರಿಕೆಯನ್ನು ಓದುಗರಿಗೇ ಬಿಡುತ್ತದೆ. ತುಮಕೂರು ಜಿಲ್ಲೆಯ, ತಿಪಟೂರು ತಾಲೂಕಿನ, ಕಂಬನಕೆರೆ ಹೋಬಳಿಯ, ರಾಮಸಂದ್ರವೆಂಬ ಆ ಊರಿನಲ್ಲಿ ಬರೀ ನೋವು, ದುರಂತಗಳೇ ಯಾಕೆ ಸಂಭವಿಸುತ್ತವೆ? ಆ ಊರಿನಲ್ಲಿ ನಗುವೆಂಬುದೇ ಇಲ್ಲವೇ ಅಥವಾ ಅದು ಸೃಷ್ಟಿಕರ್ತನಿಗೆ ಬೇಕಿರಲಿಲ್ಲವೇ? ನಂಜಮ್ಮನೂ ಸೇರಿ ಅವಳ ಇಬ್ಬರು ಮಕ್ಕಳು ಪ್ಲೇಗಿಗೆ ಬಲಿಯಾಗುತ್ತಾರೆ ಯಾಕೆ? ಗಂಗಮ್ಮನೂ ಸೇರಿ ಅವಳ ಇಬ್ಬರೂ ಮಕ್ಕಳು ಸಂಸ್ಕಾರವೇ ಇಲ್ಲದೆ ಅಪಸವ್ಯದ ಪ್ರತಿಮೂರ್ತಿಗಳಂತೆ ಬದುಕುತ್ತಾರೆ, ಯಾಕೆ? ಮಾದೇವಯ್ಯ ಎಂಬ ಸನ್ಯಾಸಿ ಊರು ಬಿಟ್ಟಿದ್ದಕ್ಕೇ ರಾಮಸಂದ್ರದಲ್ಲಿ ಬರ ಬಂದಿದ್ದೇ? ಅವರು ಹಿಂತಿರುಗಿದ್ದಕ್ಕೇ ಮತ್ತೆ ಮಳೆ ಬಂತೇ? ಕಂಠೀ ಜೋಯಿಸರಿಗೆ ಮಾಟಮಂತ್ರಗಳೆಲ್ಲ ಗೊತ್ತಿದ್ದರೂ ಅವರಿಗೆ ತಮ್ಮ ವಿದ್ಯೆಯ ಬಗ್ಗೆ ನಿಜಕ್ಕೂ ಶ್ರದ್ಧೆಯಿತ್ತೇ? ಇಂತಹ ಹತ್ತು ಪ್ರಶ್ನೆಗಳಿಗೆಲ್ಲ ಅಸ್ಪಷ್ಟತೆಯೇ ಉತ್ತರ. ಇವೆಲ್ಲವೂ ಹೀಗೆ ಇರಬೇಕೆಂಬುದೇ ಸೃಷ್ಟಿಯ ಉದ್ದೇಶವೋ? ಸೃಷ್ಟಿಯ ಓಘದಲ್ಲಿ ತನ್ನಷ್ಟಕ್ಕೆ ತಾನು ರೂಪುಗೊಂಡ ಶಿಲ್ಪವೋ?

ಭಾರತದಲ್ಲಿ ಸ್ತ್ರೀಯರ ಶೋಷಣೆ ಯಾವ ಮಟ್ಟದಲ್ಲಿ ಸಾಗಿದೆ ಎನ್ನುವ ಅರಿವು ಹುಟ್ಟಿದ್ದೇ ಬ್ರಿಟಿಷರ ಪ್ರವೇಶದ ನಂತರ. ಹಿಂದುಳಿದವರು, ಬಡವರು, ಕೆಳಜಾತಿಯವರನ್ನು ಶೋಷಣೆಗೊಳಪಡಿಸಿ, ಈಗ ಪಶ್ಚಾತ್ತಾಪಪಡುತ್ತಿರುವ ಭಾರತದಲ್ಲಿ ತಾಯಿ ಎಂಬ ಪದವಿಗೇರಿರುವ ಸ್ತ್ರೀ ಮಾತ್ರ ಮುಕ್ತಿ ಪಡೆದಿಲ್ಲ. ಒಂದುಕಡೆ ಬ್ರಿಟಿಷರು ತೋರಿದ ಹೊರದಾರಿಯನ್ನು ಹಿಡಿದು ಪೂರ್ಣವಾಗಿ ಹೊರಗೇ ಹೋಗಿರುವ ಮಹಿಳೆ, ಮತ್ತೊಂದು ಕಡೆ ಭಾರತೀಯ ಸಂಸ್ಕೃತಿಯನ್ನು ಬದ್ಧತೆಯಾಗಿ ಸ್ವೀಕರಿಸಿ ಬದುಕುತ್ತಿರುವ ಮಹಿಳೆ, ಇನ್ನೊಂದು ಕಡೆ ಇವೆರಡರಲ್ಲಿರುವ ಒಳಿತನ್ನೋ, ಕೆಡುಕನ್ನೋ ಸ್ವೀಕರಿಸಿ ಬದುಕುತ್ತಿರುವ ಮಹಿಳೆ...ಇಂತಹ ಸಂಕರಗಳ ನಡುವೆ ಭಾರತದಲ್ಲಿ ಕೋಟ್ಯಂತರ ಗಂಗಮ್ಮ, ನಂಜಮ್ಮ ಬದುಕುತ್ತಲೇ ಇದ್ದಾರೆ. ಗಂಡಸರು ತಮ್ಮ ಮುಟ್ಠಾಳತನದಿಂದ, ಅಹಂಕಾರದಿಂದ, ಅಶಿಸ್ತಿನಿಂದ ಮಾಡಿಕೊಂಡ ಎಡವಟ್ಟುಗಳನ್ನೆಲ್ಲ ಸರಿಪಡಿಸಲು ಜನ್ಮಪೂರ್ತಿ ಪಡಿಪಾಟಲು ಪಡುತ್ತ, ಸಾಯುವ ಹಂತದಲ್ಲಿ ಯಾತಕ್ಕಾಗಿ ಪಡಬೇಕಿತ್ತು ಇಷ್ಟೆಲ್ಲ ಕಷ್ಟವನ್ನೆಂದು ತಮ್ಮ ಆತ್ಮಾವಲೋಕನ ಮಾಡಿಕೊಳ್ಳುವ ಕೋಟ್ಯಂತರ ನಂಜಮ್ಮಂದಿರು ಇಂದಿಗೂ ಭಾರತದಲ್ಲಿ ಬದುಕಿದ್ದಾರೆ. ಗ್ರಾಮಭಾರತವನ್ನು ಒಮ್ಮೆ ಪ್ರವೇಶಿಸಿ, ಪ್ರತಿಮನೆಗಳ ಕಿಟಕಿಗಳಿಂದ ಹಣಕಿ ನೋಡಿದರೂ ಸಾಕು ಮನೆಯಲ್ಲೊಬ್ಬ ನಂಜಮ್ಮ ಕಾಣಿಸುತ್ತಾಳೆ.

ಮತ್ತೊಂದು ಕಡೆ ನಂಜಮ್ಮಳಿಗೆ ವಿರುದ್ಧ ಪದವಾಗಿ ಗಂಗಮ್ಮ ಇದ್ದಾಳೆ. ಸ್ವಲ್ಪ ಮುಂದುವರಿದು ನೋಡಿದರೆ ಅಲ್ಲೊಬ್ಬ ಸಾತು ಕಾಣಿಸುತ್ತಾಳೆ. ಇವರೆಲ್ಲರನ್ನು ಅಣಕಿಸುವಂತೆ ರಾಮಸಂದ್ರವೆಂಬ ಊರಿನಲ್ಲಿ ನರಸಿ ಎಂಬ ವೇಶ್ಯೆ ಕಾಣಿಸುತ್ತಾಳೆ (ಈಕೆ ಖುಲ್ಲಂಖುಲ್ಲ ವೇಶ್ಯೆಯೇ ಆದರೂ ತನ್ನ ಜೀವನ ನಿರ್ವಹಣೆಗೆ ಅಂಗಡಿಯೊಂದನ್ನು ಇಟ್ಟುಕೊಂಡು ಗೌರವದೊಂದಿಗೆ ಬದುಕುತ್ತಾಳೆ). ಗೃಹಭಂಗದ ವಿಶೇಷವೆಂದರೆ ಸಂಸ್ಕಾರದ ಪ್ರತಿಮೂರ್ತಿಯಾದ ಸೊಸೆ ನಂಜಮ್ಮ ಸಾವನ್ನಪ್ಪಿದರೂ, ಸಂಸ್ಕಾರಹೀನತೆಯ ಪ್ರತೀಕವಾದ ಅತ್ತೆ ಗಂಗಮ್ಮ ಬದುಕಿಯೇ ಇರುತ್ತಾಳೆ. ಸಂಸ್ಕಾರಕ್ಕೆ ಸಾವು ಬೇಗ, ಸಂಸ್ಕಾರ ಹೀನತೆಗೆ ಆಯುಷ್ಯ ಜಾಸ್ತಿಯೆಂದು ಇದರರ್ಥವೋ?

ತನ್ನ 13ನೇ ವಯಸ್ಸಿನಲ್ಲಿ ರಾಮಣ್ಣನವರನ್ನು ಮದುವೆಯಾದ ಗಂಗಮ್ಮ ತನ್ನ ಕಡೆ ಕಡೆ ವಯಸ್ಸಿನಲ್ಲೂ ತನ್ನ ಸಂಸ್ಕಾರಹೀನತೆಯನ್ನು, ದುಷ್ಟತೆಯನ್ನು, ಮುಟ್ಠಾಳತನವನ್ನು, ಅವಿವೇಕವನ್ನು ಕಳೆದುಕೊಳ್ಳುವುದಿಲ್ಲ. ಬದಲಿಗೆ ಅವನ್ನೆಲ್ಲ ಒಂದು ಅಲಂಕಾರವಾಗಿ ಕಾಪಿಟ್ಟುಕೊಳ್ಳುತ್ತಾಳೆ. ಗೃಹಭಂಗ ಶುರುವಾಗುವುದೇ ಜಾವಗಲ್ಲಿನ 13 ವರ್ಷದ ಗಂಗಮ್ಮ 45 ವರ್ಷದ ರಾಮಣ್ಣನವರನ್ನು ಮದುವೆಯಾಗುವುದರೊಂದಿಗೆ. ಸಂಸ್ಕಾರವೇ ಇಲ್ಲದ ಈಕೆ ಕೈಹಿಡಿದ ಗಳಿಗೆಯಲ್ಲೇ ಮೂರು ಊರಿನ ಶ್ಯಾನುಭೋಗಿಕೆ, 6 ಎಕರೆ ಗದ್ದೆ, 8 ಎಕರೆ ಹೊಲ, ಮುನ್ನೂರು ತೆಂಗಿನ ಮರದ ಒಡೆಯನಾಗಿದ್ದ ರಾಮಣ್ಣನವರ ಮನೆ ಒಡೆಯುವುದಕ್ಕೂ ಆರಂಭವಾಗುತ್ತದೆ. ಆಕೆಯ ಅವಿವೇಕಗಳು (ಪದ ಸ್ವಲ್ಪ ಮೃದುವಾಯತು!) ಇಡೀ ಕಾದಂಬರಿಪೂರ್ತಿ ಪ್ರಸ್ತಾಪವಾಗುತ್ತವೆ. ತನ್ನದೇ ಮಗನಿಗೆ ಅವಳು ಸೂಳೆಮಗ ಎಂದು ಸಲೀಸಾಗಿ ಬೈಯುತ್ತಾಳೆ. ಅವಳ ಬಾಯಲ್ಲಿ ಬರದ ಬೈಗುಳಗಳೇ ಇಲ್ಲ ಎಂದರೂ ಸರಿ. ತಾನೇ ನಿಂತು ಮದುವೆ ಮಾಡಿಸಿದ ಮಕ್ಕಳಿಗೆ ತಂತಮ್ಮ ಹೆಂಡತಿಯರ ತಾಳಿ ಕೀಳಿ ಎಂದು ಪದೇ ಪದೇ ಆದೇಶಿಸುತ್ತಾಳೆ (ಮೊದಲ ಮಗ ಚೆನ್ನಿಗರಾಯನಿಗೆ ಧೈರ್ಯ ಕಡಿಮೆ, ಪತ್ನಿಯ ತಾಳಿ ಕೀಳಲು ಹೋಗಲಿಲ್ಲ. ಎರಡನೆಯ ಮಗ ಅಪ್ಪಣ್ಣಯ್ಯ ಒಂದು ಪ್ರಸಂಗದಲ್ಲಿ ಅದನ್ನು ಮಾಡಿಯೂ ಮಾಡುತ್ತಾನೆ. ಅವನಿಂದ ಪತ್ನಿ ಸಾತು ಶಾಶ್ವತವಾಗಿ ದೂರಾಗುತ್ತಾಳೆ. ಒಂದು ಕುಟುಂಬವನ್ನು ಒಗ್ಗೂಡಿಸಲು ನಂಜಮ್ಮ ಮಾಡಿದ ಯತ್ನ ತೊಳೆದುಕೊಂಡು ಹೋಗುತ್ತದೆ).

ಗಂಗಮ್ಮನ ಪಾತ್ರ ಎಷ್ಟು ಒರಟಾಗಿದೆ ಎಂದರೆ ಈ ಮಟ್ಟದ ದುಃಸಂಸ್ಕಾರದ ಹೆಣ್ಣೊಬ್ಬಳನ್ನು ಬಹುತೇಕರು ತಮ್ಮ ಜೀವನದಲ್ಲೆಂದೂ ನೋಡಿರಲಾರರು. ಸ್ತ್ರೀಯೊಬ್ಬಳು ಹೀಗಿರಲು ಸಾಧ್ಯವೇ ಎಂದು ಅನುಮಾನಿಸುವವರು ಈ ಪಾತ್ರಕ್ಕೊಂದು ಬಲವಾದ ಬೇರಿದೆ ಎಂಬುದನ್ನು ತಿಳಿದಿರಬೇಕು. ಅದು ಸ್ವತಃ ಲೇಖಕರ ಜೀವನದಿಂದಲೇ ಬಂದಿದೆ.



ಕಥನಕಲೆಯೇ ವಿಶಿಷ್ಟ

ಭೈರಪ್ಪನವರ ಕಥನಶೈಲಿ ಹೀಗೆಯೇ ಎಂದು ವಿವರಿಸಲಾಗದ ಒಂದು ಸೌಂದರ್ಯ ಹೊಂದಿದೆ. ಕನ್ನಡ ಸಾಹಿತ್ಯದಲ್ಲಿ ಯಾವೊಂದು ಪ್ರಕಾರಕ್ಕೆ ಸೇರದ, ತಾನೇ ಒಂದು ಹೊಸ ಪ್ರಕಾರವಾಗಲೂ ಅವಕಾಶ ನೀಡದ, ಯಾರ ಹಿಡಿತಕ್ಕೂ ಸಿಗದ ಅಸಮಾನ್ಯತೆ ಅವರದ್ದು. ಅವರನ್ನು ಯಾರೆಷ್ಟಾದರೂ ಬೈಯಲಿ ಓದಿಸಿಕೊಂಡು ಹೋಗುವಂತೆ ಬರೆಯಬಲ್ಲ ಅವರ ಕೌಶಲ್ಯಕ್ಕೆ ಬೆರಗಾಗದೇ ಇರಲಾರರು. ಓದಿ ಮುಗಿದ ಮೇಲೆ ಒದಗುವ ಧ್ಯಾನಸ್ಥ ಸ್ಥಿತಿ ಉಂಟು ಮಾಡುವ ಧನ್ಯತಾ ಭಾವಕ್ಕೆ ಬೆಲೆ ಕಟ್ಟಲಾಗದು. ಅಂತಹದ್ದೇ ಒಂದು ಅನನ್ಯ ಅನುಭವಕ್ಕೆ ನಮ್ಮನ್ನು ಒಡ್ಡುವುದು ಗೃಹಭಂಗದ ಸಾಮರ್ಥ್ಯ. ನಿಮ್ಮನ್ನು ಆಗಾಗ ಕರಗಿಸುತ್ತ, ವಿಸ್ಮಯಗೊಳಿಸುತ್ತ, ದುಃಖದಲ್ಲಿ ಮುಳುಗೇಳಿಸುತ್ತ ಗೃಹಭಂಗ ಮುಂದೆ ಸಾಗುತ್ತದೆ. ಇಡೀ ಕಾದಂಬರಿ ಪೂರ್ಣ ಗಂಭೀರವಾಗಿದೆ. ಅದಕ್ಕಿಂತ ಹೆಚ್ಚಾಗಿ ಕಾದಂಬರಿಯ ಪ್ರತಿ ಸಾಲಿನಲ್ಲೂ ಒಂದು ನೋವಿನ ಹರಿವಿದೆ. ಅದು ಕೆಲವೊಮ್ಮೆ ಹೆಪ್ಪುಗಟ್ಟಿದ್ದರೆ, ಕೆಲವೆಡೆ ಬರೀ ತೇವವಾಗಿದೆ. ವಾಕ್ಯವಾಕ್ಯವನ್ನು ಅಂತಃಚ್ಚಕ್ಷುವಿನ ಮೂಲಕ ನೀವು ಸ್ಪರ್ಶಿಸಿದರೆ ಕಡೆಯ ಪಕ್ಷ ನೋವಿನ ಪಸೆಯಾದರೂ ನಿಮ್ಮ ಕೈಗೆ ತಾಕದೇ ಇರಲಾರದು. ಮೊದಲ ಪುಟದಿಂದ ಶುರುವಾಗುವ ಈ ನೋವು, ಮ್ಲಾನತೆ, ಕಡೆಯ ಪುಟದವರೆಗೂ ಯಾಕಿದೆ? ಗೃಹಭಂಗ ಮಾತ್ರವಲ್ಲ ಭೈರಪ್ಪನವರ ಬಹುತೇಕ ಕಾದಂಬರಿಗಳ ಹರಿವೂ ಹೀಗೆಯೇ..!

ಲೇಖಕರು ತಮ್ಮ ತಂದೆಯ ತಾಯಿ, ಅಜ್ಜಿಗೇ ಈ ಕಾದಂಬರಿಯ ಮೂಲಕ ಮತ್ತೊಮ್ಮೆ ಜೀವಿಸಲು ಅವಕಾಶ ನೀಡಿದ್ದಾರೆ (ಗೃಹಭಂಗದ ಬಹುತೇಕ ಪಾತ್ರಗಳು ಲೇಖಕರ ಜೀವನದಿಂದಲೇ ರೂಪು ತಳೆದಿದ್ದು). ಗಂಗಮ್ಮ ಪ್ರತಿಯೊಬ್ಬ ಓದುಗನಲ್ಲೂ ಜೀವತಳೆದು ಅಸಹ್ಯ ಹುಟ್ಟಿಸುತ್ತ ಹೋಗುತ್ತಾಳೆ. ವಸ್ತುಸ್ಥಿತಿಯಲ್ಲಿ ಗೃಹಭಂಗ (ಮನೆ ಒಡೆಯುವುದು)ದ ಬುನಾದಿಯಿರುವುದೇ ಗಂಗಮ್ಮನ ಮದುವೆಯಲ್ಲಿ. ಮುಂದೆ ಅವಳಿಗೆ ಹುಟ್ಟುವ ಇಬ್ಬರು ಮಕ್ಕಳಾದ ಚೆನ್ನಿಗರಾಯ (15 ವರ್ಷ) ಮತ್ತು ಅಪ್ಪಣ್ಣಯ್ಯ (13 ವರ್ಷ) ತಾಯಿಗೇ ಕೆಟ್ಟದಾಗಿ ಬೈದು ಮನೆಯಿಂದ ಹೊರ ಓಡಿ ಕಬ್ಬಿನಗದ್ದೆಯಲ್ಲಿ ಅವಿತುಕೊಂಡು, ಅಪ್ಪಣ್ಣಯ್ಯನ ಬೀಡಿ ಚಟದಿಂದ ಹೊಲಕ್ಕೆ ಬೆಂಕಿ ಬಿದ್ದು, ಬೆಂಕಿಯಿಂದ ಊರಿನ ಬಹುತೇಕ ಬೆಳೆ ನಾಶವಾಗಿ, ಆ ನಾಶದ ನಷ್ಟಭರ್ತಿ ಮಾಡಿಕೊಡಲು ಗಂಗಮ್ಮ ಪಟೇಲ ಶಿವೇಗೌಡನಿಗೆ ಜಮೀನನ್ನೇ ಅಡ ಇಟ್ಟ ಗಳಿಗೆಯಲ್ಲಿ ಗೃಹಭಂಗದ ಮತ್ತೊಂದು ಮಜಲು ಶುರುವಾಗುತ್ತದೆ. ಮೊದಲನೆಯ ಹೆರಿಗೆಗೆಂದು ತವರಿಗೆ ಹೋಗಿದ್ದ ಅಪ್ಪಣ್ಣಯ್ಯನ ಹೆಂಡತಿ ಸಾತು, ನಿಮ್ಮಮ್ಮನ ಜೊತೆ ಬದುಕಲಿಕ್ಕೆ ಸಾಧ್ಯವಿಲ್ಲ. ನಿಮ್ಮ ಮನೆಯ ಹಿಂದೆ ಇನ್ನೊಂದು ಸಣ್ಣ ಮನೆ ಕಟ್ಟಿ, ಆಮೇಲೆ ನನ್ನ ಕರೆದುಕೊಂಡು ಹೋಗಿ ಎಂದು ಗಂಡನಿಗೆ ಹೇಳುವುದರೊಂದಿಗೆ ಗೃಹಭಂಗ ಇನ್ನೊಂದು ತಿರುವು ಪಡೆದುಕೊಳ್ಳುತ್ತದೆ.

ಮುಂದೆ ಅಡವಿಟ್ಟಿದ್ದ ಜಮೀನಿನ ಜೊತೆ ಸ್ವಂತ ಮನೆಯನ್ನು ಪಟೇಲ ಶಿವೇಗೌಡ ಕಿತ್ತುಕೊಳ್ಳುತ್ತಾನೆ. ಆಗ ಗಂಗಮ್ಮ ಹಿರಿಯ ಸೊಸೆ ನಂಜಮ್ಮಳಿಗೆ ನಿನ್ನಿಂದಲೇ ಎಲ್ಲ ಅನಿಷ್ಟ ಸಂಭವಿಸಿದ್ದು, ನೀನು ಬೇರೆಯಿರು ಎನ್ನುತ್ತಾಳೆ. ನಂಜಮ್ಮ ಬೇರೆ ವಾಸ್ತವ್ಯ ಹೂಡುತ್ತಾಳೆ. ಗಂಗಮ್ಮ ಮತ್ತು ಮಕ್ಕಳು ಹನುಮಂತದೇವರ ಗುಡಿಯಲ್ಲಿ ಮೊಕ್ಕಾಂಗೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಇದು ಗೃಹಭಂಗ ಸಂಪೂರ್ಣಗೊಂಡ ಹಂತ. ಮುಂದಿನದೆಲ್ಲ ಆ ಮನೆ ಇನ್ನಷ್ಟು ಛಿದ್ರವಿಚ್ಛಿದ್ರಗೊಳ್ಳುವ ಘಟ್ಟಗಳು.

ಇಷ್ಟು ಹೇಳುವ ಹೊತ್ತಿನಲ್ಲಿ ಮನೆ ಅಥವಾ ಗೃಹ ಎಂಬ ಪದ ಬಳಕೆಯೇ ತಪ್ಪು. ಅದು ಈಗಾಗಲೇ ಕೈಬಿಟ್ಟಾಗಿದೆ. ಆದರೆ ಮನೆ ಎನ್ನುವುದು ಇಲ್ಲಿ ಒಂದು ಸಾಂಕೇತಿಕ ಪದ. ಅದು ಎಲ್ಲರೂ ಒಂದಾಗಿ ಸಂಘಟಿತವಾಗಿ ಬಾಳುವುದನ್ನು ಧ್ವನಿಸುತ್ತದೆ. ಅದು ಒಡೆದಿದೆ ಎಂದರೆ ಅಲ್ಲಿ ಮನಸ್ಸುಗಳು, ಭಾವನೆಗಳು ಒಡೆದು ವ್ಯಕ್ತಿಗಳು ಬೇರೆ ಬೇರೆಯಾಗಿದ್ದಾರೆ ಎಂಬುದರ ಬಿಂಬ. ಒಂದು ವೇಳೆ ವ್ಯಕ್ತಿಗಳು ಒಂದೇ ಸೂರಿನಲ್ಲಿದ್ದರೂ ಮನಸ್ಸುಗಳು ಒಡೆದು ತಮ್ಮೊಳಗೇ ಬೇರೆಯಾಗಿ ಬದುಕಲು ಶುರು ಮಾಡಿದರೆಂದರೆ, ವಾಸಿಸುವ ಅಷ್ಟೂ ಜನರ ಭಾವನೆ, ಪ್ರೀತಿ, ಒಗ್ಗಟ್ಟು ಬೆಸೆದುಕೊಂಡು ಅವರವರ ಮನೋಲೋಕದಲ್ಲಿ ರೂಪುಗೊಂಡಿದ್ದ ಒಂದು ಬೆಸುಗೆಯ, ಬಂಧದ ಮನೆ ವಿಘಟಿತವಾಗಿರುತ್ತದೆ. ಇಂತಹ ವಿಘಟನೆ ಮುಂದೆ ಭೌತಿಕವಾಗಿ ಸಂಭವಿಸುವ ಗೃಹಭಂಗಕ್ಕೆ ಮುನ್ಸೂಚನೆ ಮಾತ್ರ.

ಮುಂದೆಯೂ ಈ ಬೆಸುಗೆ, ಬಂಧದ ಮನೆ ಒಡೆಯುತ್ತಲೇ ಸಾಗುತ್ತದೆ. ಅಪ್ಪಣ್ಣಯ್ಯ ತಾಯಿಯಿಂದ ದೂರಾಗಿ ತನ್ನದೇ ಸಂಸಾರ ಕಟ್ಟಿಕೊಳ್ಳುತ್ತಾನೆ (ಮುಂದೆ ಪತ್ನಿಯನ್ನು ದೂರತಳ್ಳಿ ತಾಯಿಯನ್ನೇ ಕೂಡಿಕೊಳ್ಳುತ್ತಾನೆ), ಅದು ಬೆಸುಗೆ ಇನ್ನಷ್ಟು ಸಡಿಲಗೊಳ್ಳುವ ಸ್ಥಿತಿ. ಇದಕ್ಕೂ ಮುಂದೆ ಅಪ್ಪಣ್ಣಯ್ಯನ ಪತ್ನಿ ಸಾತು, ಶಾನುಭೋಗಿಕೆ ಹಣದಲ್ಲಿ ನಮಗೂ ಪಾಲು ಬೇಕೆಂದು ನಂಜಮ್ಮನಲ್ಲಿ ಜೋರಾಗಿಯೇ ಕೇಳುತ್ತಾಳೆ. ಶಾನುಭೋಗಿಕೆ ನಡೆಸಲು ಕಿಂಚಿತ್ತೂ ಪರಿಶ್ರಮಪಡದೇ, ಅದರ ಕಷ್ಟದ ಅರಿವೂ ಇಲ್ಲದೇ, ಹಿನ್ನೆಲೆ ಮುನ್ನೆಲೆಗಳ ತಿಳಿವೂ ಇಲ್ಲದೇ ಪಾಲು ಮಾತ್ರ ತಮಗೂ ಬೇಕೆಂದು ಕೇಳುವ ಈ ಘಳಿಗೆಯಲ್ಲಿ ಬಂಧ ಪೂರ್ಣ ಹರಿದುಹೋಗುತ್ತದೆ.

ನಂಜಮ್ಮನ ಬೇರು ಯಾವುದು?: ನಂಜಮ್ಮನ ಪಾತ್ರವನ್ನು ಆಳವಾಗಿ ಧ್ಯಾನಿಸಿದರೆ ಇಲ್ಲೊಬ್ಬಳು ಕುಂತಿ ಕಾಣಿಸುತ್ತಾಳೆ. ಆಕೆ ಮಹಾಭಾರತದ ಕುಂತಿಯಲ್ಲ ಪರ್ವದ ಕುಂತಿ! ವಿಶ್ವನಾಥ ಪ್ಲೇಗಿನಿಂದ ಬಚಾವಾಗಿದ್ದಕ್ಕೆ ಶೃಂಗೇರಿಗೆ ಹರಕೆ ತೀರಿಸಲು ಹೊರಟ ನಂಜಮ್ಮ ಮೊದಲು ಹರಿಹರಪುರ ತಲುಪುತ್ತಾಳೆ. ಮಠದ ಕೆಳಭಾಗದಲ್ಲಿ ತುಂಗಾ ನದಿಯಿದೆ. ಮರಳಲ್ಲಿ ನಡೆದು ಕಲ್ಲಿನ ಮೇಲೆ ಕುಳಿತು ನದಿಗೆ ಕಾಲುಬಿಟ್ಟು ಮನೋವಾರಿಧಿಯಲ್ಲಿ ದೂರವ್ಯಾಪಿ ಸಂಚಾರ ಹೊರಡುವ ನಂಜಮ್ಮನೆ ವಿಸ್ತಾರಗೊಂಡು ಪರ್ವದಲ್ಲಿ ಮಧ್ಯಾಹ್ನದೊತ್ತು ಗಂಗಾನದಿಯಲ್ಲಿ ಕಾಲಿಳಿಬಿಟ್ಟುಕೊಂಡು ಬಾಲ್ಯದಲ್ಲೇ ತ್ಯಜಿಸಿದ ಕರ್ಣನ ಬಗ್ಗೆ ಯೋಚಿಸುವ ಕುಂತಿಯಾಗಿ ಜೀವ ಪಡೆದಳೇ? ಅನ್ನಿಸುತ್ತದೆ. ಇಬ್ಬರಿಗೂ ಎಲ್ಲಿಂದೆಲ್ಲಿಗೆ ಹೋಲಿಕೆ? ಆಕೆಯೆಲ್ಲಿ ಈಕೆಯೆಲ್ಲಿ ಎನ್ನುವಂತಿಲ್ಲ. ಕುಂತಿಯೆಂಬ ಪಾತ್ರಕ್ಕೆ ಜೀವತುಂಬಬಲ್ಲ ಮತ್ತೊಬ್ಬಾಕೆಯನ್ನು ಲೇಖಕರು ಇನ್ನೆಲ್ಲಿಂದ ತರಲು ಸಾಧ್ಯ? ಈ ನಂಜಮ್ಮ ಬೇರಾರೂ ಅಲ್ಲ ಗೌರಮ್ಮ. ಸ್ವತಃ ಲೇಖಕರ ತಾಯಿ. ಗೌರಮ್ಮ ನಂಜಮ್ಮಳಾಗಿ ಗೃಹಭಂಗದಲ್ಲಿ ರೂಪಾಂತರಗೊಂಡ ನಂತರ ಆಕೆಯೇ ಕುಂತಿಯಾಗಿ ಪರ್ವದಲ್ಲಿ ಪುರಾಣ ಸೇರಿಕೊಳ್ಳುತ್ತಾಳೆ. ಕುಂತಿ ಪಟ್ಟ ಕಷ್ಟಕ್ಕೂ ನಂಜಮ್ಮ ಪಟ್ಟ ಕಷ್ಟಕ್ಕೂ ಬಹಳ ವ್ಯತ್ಯಾಸವೇನಿಲ್ಲ. ಪರ್ವದಲ್ಲಿ ಪಾಂಡುರಾಜ ಬೇಗ ಮೃತಪಡುತ್ತಾನೆ. ಗೃಹಭಂಗದಲ್ಲಿ ಚೆನ್ನಿಗರಾಯ ಬದುಕಿದ್ದರೂ ಸತ್ತಂತಿರುತ್ತಾನೆ. ಈ ಇಬ್ಬರೂ ತಮ್ಮ ಗಂಡಂದಿರಿಂದ ಯಾವ ಸುಖ ಪಡೆದರು? ಪಾಂಡು ಒಬ್ಬ ಸ್ತ್ರೀಲೋಲ (ಪರ್ವದ ಪ್ರಕಾರ). ಚೆನ್ನಿಗರಾಯನಿಗೆ ಸದಾ ಊಟದ ಚಿಂತೆ. ಪತ್ನಿ ಇಡೀ ದಿನ ಉಪವಾಸವಿದ್ದರೂ ತನ್ನೊಂದಿಗೆ ಮಲಗು ಬಾ ಎಂದು ಒತ್ತಾಯಿಸುವಷ್ಟು ಲಂಪಟ.

ನಂಜಮ್ಮ ಮುಟ್ಟಾದರೆ ಹೊರಗೆ ಕೂರುತ್ತಿರಲಿಲ್ಲ. ಬದಲಿಗೆ ತಾನೇ ಅಡುಗೆ ಮಾಡುತ್ತಿದ್ದಳು. ಶಾಸ್ತ್ರಪಾಲನೆಯನ್ನೆಲ್ಲ ತೋರಿಸಿಕೊಳ್ಳುವುದಕ್ಕಷ್ಟೇ ಉಳಿಸಿಕೊಂಡು ಉಳಿದಿದ್ದನ್ನೆಲ್ಲ ಬಿಟ್ಟೇ ಬಿಟ್ಟಿದ್ದಳು. ಅಂತಹ ಬಡತನ, ಹಸಿವು, ದೈನ್ಯತೆಯ ಸ್ಥಿತಿಯಲ್ಲಿ ಅವಕ್ಕೆಲ್ಲ ಅವಕಾಶವಾದರೂ ಎಲ್ಲಿತ್ತು? ಆಕೆ ಮಡಿಗಿಂತ ಮನುಷ್ಯತ್ವ ದೊಡ್ಡದು ಎಂದು ಭಾವಿಸುತ್ತಾಳೆ. ಪತ್ನಿ ಸಾತುವಿನ ತಾಳಿ ಕಿತ್ತುಕೊಂಡು ಆಕೆಯನ್ನು ಪತಿ ಅಪ್ಪಣ್ಣಯ್ಯ ಅಟ್ಟಾಡಿಸಿದಾಗ ಸಾತುವನ್ನು ತನ್ನ ಮನೆಯಲ್ಲಿಟ್ಟುಕೊಳ್ಳುತ್ತಾಳೆ. ಗಂಡನ ತಾಳಿಯನ್ನೇ ಬೇಡವೆಂದಿರುವ ಹೆಣ್ಣನ್ನು ತನ್ನ ಮನೆಯಲ್ಲಿಟ್ಟುಕೊಂಡಿದ್ದು ತಪ್ಪು, ಧರ್ಮಶಾಸ್ತ್ರಕ್ಕೆ ವಿರುದ್ಧ ಎಂದು ಊರಿನ ಅಯ್ಯಾ ಶಾಸ್ತ್ರಿ, ಅಣ್ಣಾ ಜೋಯಿಸರು ಸುಳ್ಳೇ ತೀರ್ಪು ನೀಡಿದಾಗ ಅದಕ್ಕೆ ಕಿಂಚಿತ್ತೂ ನಂಜಮ್ಮ ತಲೆಕೆಡಿಸಿಕೊಳ್ಳುವುದಿಲ್ಲ. ಶೃಂಗೇರಿ ಮಠದಿಂದಲೇ ಸುಳ್ಳುಸುಳ್ಳೇ ಬಹಿಷ್ಕಾರದ ಪತ್ರ ತರಿಸಿದರೂ ನಂಜಮ್ಮ ಚಿಂತಿಸುವುದಿಲ್ಲ. ಬಣಜಿಗರ ಜಾತಿಗೆ ಸೇರಿದ ಲಿಂಗಾಯತ ಸ್ವಾಮಿ ಮಾದೇವಯ್ಯನವರ ತೊಡೆ ಮೇಲೆ ಕುಳಿತು ಅವರು ತಿನ್ನಿಸಿದ್ದನ್ನು ಮಗ ವಿಶ್ವ ತಿಂದರೂ ನಂಜಮ್ಮನ ಮನಸ್ಸು ಗಲಿಬಿಲಿಗೊಳಗಾಗಲಿಲ್ಲ. ಸ್ವಾತಂತ್ರ್ಯಪೂರ್ವದ ಪಾತ್ರವಾದ ನಂಜಮ್ಮ ಆಗಲೇ ಜಾತಿಯನ್ನು ಮೀರಿದ್ದಳು! ನಂಜಮ್ಮ ಪಾತ್ರ ಮಾತ್ರವಲ್ಲ ಆಕೆಯೊಂದು ಸಂಸ್ಕೃತಿ ಮತ್ತು ಗಂಗಮ್ಮನಂತಹ ವಿಕೃತಿಗೆ ಲೇಖಕರ ಬದುಕೋ ಅಥವಾ ಅವರ ಲೇಖನಿಯೋ ನೀಡಿದ ಉತ್ತರ.

ಚೆನ್ನಿಗರಾಯ ಮತ್ತು ಅಪ್ಪಣ್ಣಯ್ಯನ ಅಣ್ಣ ತಮ್ಮಂದಿರ ಪಾತ್ರದ ಮೂಲಕ ಎರಡು ವಿಚಾರವನ್ನು ಗ್ರಹಿಸಬಹುದು. 1. ಒಂದೇ ಕುಟುಂಬದಲ್ಲಿ ಎರಡು ದರಿದ್ರಗಳು ಹುಟ್ಟಲು ಸಾಧ್ಯ. ಅಲ್ಲಿ ಬದಲೇ ಆಗಲೊಲ್ಲೆ ಎನ್ನುವ ಚೆನ್ನಿಗರಾಯರೂ ಇರುತ್ತಾರೆ. ಎತ್ತಿದರೆ ಏಳಬಲ್ಲೆ ಎನ್ನುವ ಅಪ್ಪಣ್ಣಯ್ಯನಂತವರೂ ಇರುತ್ತಾರೆ. 2. ಒಂದು ವೇಳೆ ಚೆನ್ನಿಗರಾಯನ ಪತ್ನಿಯಾಗಿ ಸಾತು, ಅಪ್ಪಣ್ಣಯ್ಯನ ಪತ್ನಿಯಾಗಿ ನಂಜಮ್ಮ ಬಂದಿದ್ದರೆ ಗೃಹಭಂಗದ ಕಥೆಯೇ ಬೇರಾಗುತ್ತಿತ್ತು!

ರಾಮಸಂದ್ರದ ಒಡೆದ ಮನೆಗಳು

ರಾಮಸಂದ್ರವೆಂಬ ಆ ಊರಿನಲ್ಲಿ ಭಂಗಗೊಂಡ ಒಂದು ಮನೆಯ ಕಥೆಯನ್ನು ಲೇಖಕರು ಸಂಪೂರ್ಣವಾಗಿ ಕೆನೆಗಟ್ಟಿಸಿದ್ದಾರೆ. ಆದರೂ ಆ ಊರಿನಲ್ಲಿ ಅದೆಷ್ಟು ಮನೆಗಳು ಹಾಗೆ ಒಡೆದುಹೋಗಿವೆಯೋ? ಜೂಜುಕೋರ ರೇವಣ್ಣಶೆಟ್ಟಿಯ ಪತ್ನಿ ಸರ್ವಕ್ಕ, ಮಾವನನ್ನೇ ಕೂಡಿದ್ದಾಳೆ ಎಂಬ ಆರೋಪದಿಂದ ಗಂಡನಿಂದ ಬೇರೆ ಬದುಕುವ ನರಸಿ ಇವರೆಲ್ಲ ಭಗ್ನವಾದ ಮನೆಗಳ ಸರಣಿಯ ಸುಳಿವು ನೀಡುತ್ತಾರೆ. ರೇವಣ್ಣಶೆಟ್ಟಿ ಇಸ್ಪೀಟಾಟಕ್ಕೆ ದುಡ್ಡು ಬೇಕೆಂದು ತನ್ನ ಸ್ವಂತ ಮಗಳನ್ನೇ ಕಾಶಿಂಬಡ್ಡಿಗೆ ಒತ್ತೆಯಿಡುತ್ತಾನೆ. ಅಂದರೆ ಸೂಳೆಗಾರಿಕೆ ಮಾಡಿಸುತ್ತಾನೆ. ಮುಂದೆ ಗರ್ಭಪಾತಕ್ಕೆ ಔಷಧ ಕೊಟ್ಟು ಮಗಳನ್ನು ಕೊಂದೂ ಬಿಡುತ್ತಾನೆ! ಮಗಳಿಂದಲೇ ಸೂಳೆಗಾರಿಕೆ ಮಾಡಿಸಿದ ಗಂಡನ ಕೃತ್ಯದಿಂದ ಸಿಡಿದೆದ್ದ ಸರ್ವಕ್ಕನ ಮನೆ ಮನಸ್ಸು ಒಳಗೊಳಗೇ ಒಡೆದುಹೋಗುತ್ತದೆ.

ತನ್ನ ಅಪ್ಪನೊಂದಿಗೆ ಪತ್ನಿ ನರಸಿ ಅಡ್ಡ ಸಂಬಂಧ ಹೊಂದಿದ್ದಾಳೆ ಎಂಬ ಕಾರಣಕ್ಕೆ ಪತಿ ಗಿರಿಯಶೆಟ್ಟಿ ಪಂಚಾಯ್ತಿ ಸೇರಿಸುತ್ತಾನೆ. ಮುಂದೆ ಅಪ್ಪ ಚೆನ್ನಸೆಟ್ಟಿ, ಮಗ ಗಿರಿಯಸೆಟ್ಟಿ, ಪತ್ನಿ ನರಸಿ ಮೂವರೂ ಬೇರಾಗುತ್ತಾರೆ. ಇದು ಮತ್ತೊಂದು ಗೃಹಭಂಗ. ಈ ನರಸಿ ಊರಿನ ರಸಿಕರಿಗೆಲ್ಲ ರಾಣಿಯಾದ ನಂತರ ಅದೆಷ್ಟು ಮನೆಗಳು ಒಳಗೊಳಗೇ ಛಿದ್ರಗೊಂಡವೋ? ಇಲ್ಲಿ ನರಸಿಯನ್ನು ಬೈಯುವಂತಿಲ್ಲ. ಒಬ್ಬಂಟಿಯಾಗಿ ಬದುಕುವ ಆ ಸುಂದರ ಕನ್ಯೆ ಮರ್ಯಾದಸ್ಥೆಯಾಗಿ ಬದುಕಲು ರಾಮಸಂದ್ರದ ವಿಟಪುರುಷರು ಅವಕಾಶ ಕೊಡುತ್ತಾರೆನ್ನುವುದು ಕಷ್ಟ. ಸ್ತ್ರೀಯನ್ನು ಆ ಮಟ್ಟದ ಭೋಗವಸ್ತುವಾಗಿ ನೋಡುವಾಗ ನರಸಿಯ ಕಷ್ಟಗಳೇನಿದ್ದವೋ?



ಶಿವೇಗೌಡನೆಂಬ ಸಿರಿವಂತ ಪಟೇಲ ಇಡೀ ಊರಿಗೇ ಊರೇ ಬರಗಾಲದಿಂದ ತತ್ತರಿಸುತ್ತಿದ್ದರೂ ಅದಕ್ಕೆ ಮರುಗಲಿಲ್ಲ. ಬದಲಿಗೆ ಕಾಶಿ ಪ್ರವಾಸ ಹೋಗಿರುವ ಸನ್ಯಾಸಿ ಮಾದೇವಯ್ಯನವರ ಕೋಣೆಯಲ್ಲಿದ್ದ ರಾಗಿಯನ್ನು ಕದ್ದು ತನ್ನ ಮನೆಗೆ ಸಾಗಿಸುತ್ತಾನೆ. ಹಸಿವಿನಿಂದ ಅದೇ ಕೋಣೆಗೆ ಕದಿಯಲೆಂದು ಹೋದ ಇತರರಿಗೆ ಸಿಕ್ಕಿದ್ದು ದಿಗ್ಭ್ರಮೆ ಮಾತ್ರ. ಈ ಶಿವೇಗೌಡ ಊರಿಗೆ ಕಾಶಿಂಬಡ್ಡಿಯನ್ನು ಪ್ರವೇಶ ಮಾಡಿಸುತ್ತಾನೆ. ಅಂದರೆ ಕಾಶಿಂಬಡ್ಡಿ ವಸ್ತುಗಳನ್ನು ಅಡವಿಟ್ಟುಕೊಂಡು ಬಡ್ಡಿಗೆ ಹಣ ಕೊಡುತ್ತಾನೆ. ಬರಗಾಲದಿಂದ ಊರಜನ ತಮ್ಮಲ್ಲಿರುವ ಅಮೂಲ್ಯ ವಸ್ತುಗಳನ್ನೆಲ್ಲ ಕಳಕೊಳ್ಳುತ್ತಾರೆ. ಕಾಶಿಂಬಡ್ಡಿಗೆ ಒಳಗೊಳಗೇ ಹಣ ನೀಡಿ ಬಡ್ಡಿ ವ್ಯವಹಾರ ಮಾಡಿಸುವ ಶಿವೇಗೌಡ (ಹಾಗಂತ ಹಲವರ ಗುಮಾನಿ)ನ ಖಜಾನೆಯನ್ನು ಈ ವಸ್ತುಗಳು ಸೇರುತ್ತವೆ. ಹೀಗೆ ಊರನ್ನು ಶಕ್ತಿಬಲದಿಂದ, ಯುಕ್ತಿಬಲದಿಂದ ದೋಚುವ ಶಿವೇಗೌಡನ ಕಾರಣಕ್ಕೆ ನೂರಾರು ಮನೆಗಳು ಒಡೆದುಹೋಗುತ್ತವೆ, ನರಳಿ ನಾಶವಾಗುತ್ತವೆ. ಇದು ಗೃಹಭಂಗದ ಇನ್ನೊಂದು ಅಧೋಮುಖ ಯಾತ್ರೆ.

ಪುರೋಹಿತ ದ್ವಯರಾದ ಅಯ್ಯಾಶಾಸ್ತ್ರಿ, ಅಣ್ಣಾ ಜೋಯಿಸರು ತಮ್ಮ ಶಾಸ್ತ್ರಜ್ಞಾನದಿಂದ ಊರನ್ನು ದೋಚುತ್ತಾರೆ. ಕಷ್ಟಪಟ್ಟು ನಂಜಮ್ಮ ಶ್ಯಾನುಭೋಗಿಕೆ ನಡೆಸುತ್ತಿದ್ದರೂ ಅದರ ಪಾಲು ನಿನಗೂ ಸೇರಬೇಕೆಂದು ಅಪ್ಪಣ್ಣಯ್ಯನನ್ನು ಅಣ್ಣಾ ಜೋಯಿಸ ರೊಚ್ಚಿಗೆಬ್ಬಿಸುತ್ತಾನೆ. ಬಡತನದಲ್ಲಿ ಶ್ರಾದ್ಧ ಮಾಡುವ ಗಂಗಮ್ಮ ತುಪ್ಪದಲ್ಲೇ ತಿಂಡಿಯನ್ನು ಕರಿಯುವಂತೆ ಮಾಡಿ, ತನ್ನ ತುಪ್ಪ ತಿನ್ನುವ ಆಸೆಯನ್ನು ಅಣ್ಣಾ ಜೋಯಿಸ ತೀರಿಸಿಕೊಳ್ಳುತ್ತಾನೆ. ಗಂಡನಿಂದ ತಾಳಿ ಕೀಳಿಸಿಕೊಂಡು ಅನಾಥಳಾದ ಸಾತುವನ್ನು ಮಾನವೀಯತೆಯಿಂದ ಮನೆಗೆ ಸೇರಿಸಿಕೊಂಡರೆ ಅದು ತಪ್ಪು ಎಂದು ನಂಜಮ್ಮಳಿಗೇ ಬಹಿಷ್ಕಾರ ಹಾಕಿಸುತ್ತಾನೆ. ಹೀಗೆ ಈ ಘನ ಪುರೋಹಿತರು ಒಂದು ಊರನ್ನು ತಮ್ಮ ಶಾಸ್ತ್ರತೇಜಸ್ಸಿನಿಂದ ವಿಭಜಿಸುತ್ತಾರೆ!

ಬಡತನಕ್ಕೆ, ಪ್ಲೇಗಿಗೆ, ಬರಗಾಲಕ್ಕೆ, ಅಜ್ಞಾನಕ್ಕೆ, ಸಿಡುಕಿಗೆ, ಚಟಗಳಿಗೆ ಸಿಕ್ಕಿ ಇಡೀ ಊರಿಗೆ ಊರೇ ಒಡೆದುಹೋಗಿದೆ. ಇಲ್ಲಿರುವ ಶಿವೇಗೌಡ, ಗಂಗಮ್ಮ, ಚೆನ್ನಿಗರಾಯ, ನರಸಿ, ಪುರೋಹಿತ ದ್ವಯರು ಒಡೆತನಕ್ಕೆ ಹೆಸರುವಾಸಿ. ಅಂತಹ ಕಥೆಯನ್ನು ಕಟ್ಟುವ ಗೃಹಭಂಗ ತಾನೇ ಒಂದು ಊರಾಗಿದೆ. ಅಲ್ಲಿ ಬರೀ ಒಡೆದುಹೋದ ಮನೆ ಮತ್ತು ಮನಸ್ಸುಗಳೇ ಕಾಣುತ್ತವೆ.

ಗೃಹಭಂಗದ ಕಾದಂಬರಿಯಲ್ಲಿನ ದುರ್ಬಲ ವ್ಯಕ್ತಿಗಳು, ಸ್ವಾತಂತ್ರ್ಯಪೂರ್ವದಲ್ಲಿ ಭಾರತದಲ್ಲೆಲ್ಲ ತುಂಬಿಕೊಂಡಿದ್ದರು. ಅದೇ ಭಾರತವನ್ನು ಬ್ರಿಟಿಷರ ಕೈಗೆ ಕೊಟ್ಟು ಅವರು 200ಕ್ಕೂ ಹೆಚ್ಚು ವರ್ಷ ಆಳಲು ಅವಕಾಶ ಮಾಡಿಕೊಟ್ಟಿದ್ದು. ಇಂತಹ ದುರ್ಬಲರ ನಾಯಕರು ಒಳಗೊಳಗೇ ಬೇರೊಂದು ಲೆಕ್ಕಾಚಾರ ಹಾಕಿಕೊಂಡು ಮೇಲ್ನೋಟಕ್ಕೆ ಭಾರತವನ್ನು ಮತದ ಆಧಾರದಲ್ಲಿ ಒಡೆದರು. ಪಾಕಿಸ್ತಾನವನ್ನು ಸೃಷ್ಟಿಸಿದ ಮೊಹಮ್ಮದ್ ಅಲಿ ಜಿನ್ನಾರಿಗೆ ಸ್ವತಂತ್ರ ದೇಶದ ನಾಯಕರಾಗುವ ಪರೋಕ್ಷ ಕನಸಿದ್ದರೆ, ತನ್ನ ನಾಯಕತ್ವಕ್ಕೆ ಅಡ್ಡಿಯಾಗುವ ಯಾವುದೇ ನಾಯಕ ಭಾರತದಲ್ಲಿರುವುದು ಜವಾಹರ್‌ಲಾಲ್ ನೆಹರೂಗೆ ಬೇಕಿರಲಿಲ್ಲ. ಒಂದು ರೀತಿಯಲ್ಲಿ ಮತದ ಭೂತವನ್ನು ಸೃಷ್ಟಿಸಿ ಅದನ್ನು ದೇಶ ಒಡೆಯುವುದಕ್ಕೆ ಬಳಸಿಕೊಂಡರು ಎಂದರೂ ಸರಿಯೇ. ಬ್ರಿಟಿಷರು ಹಿಂದೂ ಮುಸ್ಲಿಮರನ್ನು ಒಡೆದರೆ, ಶಿವೇಗೌಡ ಚೆನ್ನಿಗರಾಯ, ಅಪ್ಪಣ್ಣಯ್ಯನನ್ನು ಒಡೆದರು. ಈ ಇಬ್ಬರ ಕನ್ನಡಿಯಲ್ಲಿ ನೆಹರೂ, ಜಿನ್ನಾರ ಪ್ರತಿಬಿಂಬಗಳು ಮಸುಕು ಮಸುಕಾಗಿ ಕಂಡು ಮರೆಯಾಗುತ್ತವೆ.

(ಭೈರಪ್ಪನವರ ಸಾಹಿತ್ಯದ ಕುರಿತು ಪ್ರಕಟವಾದ ವಿಮರ್ಶಾಕೃತಿ ನಿರ್ಲಿಪ್ತಿ ಪುಸ್ತಕದ ಲೇಖನದಿಂದ ಆಯ್ದಭಾಗಗಳು)



1931-2025

ಸರಸ್ವತಿ ಪುತ್ರನ ಪರ್ವಾಂತ್ಯ

ವಿಶ್ವವಾಣಿ 25.09.2025 ಗುರುವಾರ
vishwavani.news

ಎಸ್.ಎಲ್.ಭೈರಪ್ಪ ಅವರೊಂದಿಗೆ ಸಂಸದ ಬಸವರಾಜ ಬೊಮ್ಮಾಯಿ.

ಸಾಂಸ್ಕೃತಿಕ ನಗರಿಯಲ್ಲಿ ಸೂತಕದ ಛಾಯೆ | ಸಂತೇಶಿವರದ ಸಸಿ ಮೈಸೂರಿನಲ್ಲಿ ಹೆಮ್ಮರ

ಮೈಸೂರಿನ ಸಾಹಿತ್ಯ ಸಂತ ಭೈರಪ್ಪ

ಕೆ.ಜಿ.ಲೋಕೇಶ್ ಬಾಬು

ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರಿನ ಪಾಲಿಗೆ ಸಾಹಿತ್ಯಾತ್ಮಕವಾಗಿ ಕುವೆಂಪು ನಂತರ ದೊಡ್ಡ ಹೆಸರು ತಂದುಕೊಟ್ಟವರು ಡಾ.ಎಸ್.ಎಲ್.ಭೈರಪ್ಪ(ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ). ಹೆಸರಿನಲ್ಲೇ ಒಂದು ಬಗೆಯ ಗಟ್ಟಿತನ ಉಳ್ಳ ಇಂತಹ ಭೈರಪ್ಪ ಅವರು ದೇಶ ಸುತ್ತಿದ್ದೂ ಉಂಟು. ಕೋಶ ಓದಿದ್ದು ಮಾತ್ರವಲ್ಲ, ಬರೆದದ್ದೂ ಉಂಟು. ಸೀದಾ ಸಾದಾ ನಡೆನುಡಿಯ ಭೈರಪ್ಪ ಅವರು ಮೂಲತಃ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಎಂಬ ಪುಟ್ಟ ಹಳ್ಳಿಯಿಂದ ಬಂದವರಾದರೂ ನೆಲೆ ಕಂಡುಕೊಂಡಿದ್ದು ಮೈಸೂರಿನಲ್ಲಿ.

ಸ್ಪಷ್ಟ ಗುರಿಯೊಂದಿಗೆ ಮೈಸೂರಿಗೆ ಬಂದ ಭೈರಪ್ಪನವರನ್ನು ಮೈಸೂರು ಅಪ್ಪಿಕೊಳ್ಳದೆ ಇರಲಿಲ್ಲ, ಏಕೆಂದರೆ, ಅವರ ಸಾಹಿತ್ಯ ಕಸುಬುದಾರಿಕೆ ಮೈಸೂರಿನಂತಹ ನಗರಿಗೆ ಅರಿವಾಗಲು ಬಹಳ ಕಾಲ ಬೇಕಾಗಲಿಲ್ಲ, ಇದು ಕನ್ನಡ ಸಾಹಿತ್ಯವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದಿತ್ತು. ಡಾ.ಕುವೆಂಪು, ಡಾ. ಹಾಮಾ ನಾಯಕ್, ಡಾ.ಪ್ರಭುಶಂಕರ, ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ, ಡಾ.ಸಿಪಿಕೆ, ಆರ್.ಕೆ.ನಾರಾಯಣ್, ಡಾ.ಯು.ಆರ್. ಅನಂತಮೂರ್ತಿ, ಎಂ.ಎ.ಕೃಷ್ಣಮೂರ್ತಿ, ಟಿ.ಪಿ.ಕೈಲಾಸಂ ಸೇರಿದಂತೆ ಘಟಾನುಘಟಿ ಸಾಹಿತಿಗಳ ನೆಲೆಬೀಡಾದ ಮೈಸೂರಿನಲ್ಲಿ ಸ್ವಾತಂತ್ರ್ಯ ನಂತರ ಸಾಹಿತ್ಯ ವಲಯ ಎಂಬುದು ಬಡತನ ಕಂಡದ್ದೇ ಇಲ್ಲ.

ಸಂಗೀತದ ಪರಮ ಆರಾಧಕರು: ಅಂತಹ ಮೈಸೂರಿನಲ್ಲಿ ಕುವೆಂಪು ಅವರ ನಂತರದಲ್ಲಿ ಅತಿ ಹೆಚ್ಚು ಪ್ರಚಲಿತವಾದವರು ಭೈರಪ್ಪನವರು. ಅವರು ಸಾಹಿತ್ಯ ಆರಾಧಕರು ಮಾತ್ರವಲ್ಲ, ಹಿಂದೂಸ್ತಾನಿ ಸಂಗೀತದ ಪರಮ ಆರಾಧಕರು ಆಗಿದ್ದರು. ದೇಶದ ಎಲ್ಲಿಯೇ ಹಿಂದೂಸ್ತಾನಿ ಸಂಗೀತ ಕಛೇರಿ ನಡೆಯುತ್ತಿದೆ ಎಂಬ ಮಾಹಿತಿ ಸಿಗುತ್ತಿದ್ದಂತೆ ವಿಮಾನವೇರಿ ತೆರಳುತ್ತಿದ್ದರು. ಸಂಗೀತದ ಬಗ್ಗೆ ಆಳವಾದ ಜ್ಞಾನ ಹೊಂದಿದ್ದರು. ಇದು ಅವರಿಗೆ ಸಾಹಿತ್ಯದೊಂದಿಗೆ ಸಂಗೀತದ ಅಭಿರುಚಿಯೂ ಅಪಾರವಾಗಿತ್ತು ಎಂಬುದರ ಪ್ರತೀಕವಾಗಿತ್ತು.

ಶ್ರೀಮಂತಿಕೆಯ ವ್ಯಕ್ತಿತ್ವ: ಭೈರಪ್ಪ ಕೇವಲ ಕಾದಂಬರಿಕಾರ ಮಾತ್ರ ಆಗಿರಲಿಲ್ಲ, ಆದರ್ಶ ವ್ಯಕ್ತಿತ್ವ ಹೊಂದಿದ್ದ ಶ್ರೀಮಂತಿಕೆಯ ಪ್ರತೀಕವಾಗಿದ್ದರು. ಹುಟ್ಟೂರು ಸಂತೇಶಿವರವನ್ನು ತನ್ನ ಹೆಸರಿನೊಂದಿಗೆ ಸೇರ್ಪಡೆ ಮಾಡಿಕೊಂಡಿದ್ದರು. ಮೈಸೂರಿನ ಸಜ್ಜನರೊಂದಿಗೆ ಹೆಜ್ಜೆ ಇಟ್ಟ ಭೈರಪ್ಪನವರು ಮೈಸೂರಿನ ಶಾರದ ವಿಲಾಸ ಪ್ರೌಢಶಾಲೆಯಲ್ಲಿ ಓದಿದ ಮೇಲೆ ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾಗಿ 1957ರಲ್ಲಿ ಬಿ.ಎ. ಆನರ್ಸ್ ಪದವಿ ಗಳಿಸಿದರು. 1958ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ ಪದವಿಯಲ್ಲಿ ಪ್ರಥಮ ಶ್ರೇಣಿಯ ಸಾಧನೆ ಮಾಡಿ ಚಿನ್ನದ ಪದಕ ಗಳಿಸಿದರು.

ಹುಟ್ಟೂರಿನಲ್ಲಿ ನೆನಪಿನ ಕಣಜ

ಹುಟ್ಟೂರಿನಲ್ಲಿ ನವೀಕೃತ ಗೌರಮ್ಮ ಸ್ಮಾರಕ ಟ್ರಸ್ಟ್‌ನಲ್ಲಿ ಭೈರಪ್ಪನವರ ಪುಸ್ತಕ, ಫೋಟೋ, ಬಾಲ್ಯದಲ್ಲಿ ಬಳಸುತ್ತಿದ್ದ ಟ್ರಂಕ್, ಕೈ ಬರಹ, ದೇಶದ ಮಹನೀಯರ ಜತೆಗಿನ ಭಾವಚಿತ್ರಗಳು, ಭೈರಪ್ಪ ಅವರ ಹಸ್ತಾಕ್ಷರ, ಪುಸ್ತಕ ಪ್ರಪಂಚ, ಭಾವಚಿತ್ರಗಳಿಂದ ತುಂಬಿ ತುಳುಕುತ್ತಿದೆ.

ಎಂಎ ಪದವಿ ಬಳಿಕ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ತರ್ಕಶಾಸ್ತ್ರ ಮತ್ತು ಮನಃಶಾಸ್ತ್ರದ ಅಧ್ಯಾಪಕರಾಗಿ, ಅನಂತರ 1960ರಿಂದ 1966ರವರೆಗೆ ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು.

ಗಂಗೆ ಬತ್ತದಂತೆ ಭೈರಪ್ಪ ಪ್ರಾರ್ಥನೆ

ಭೈರಪ್ಪನವರ ಹುಟ್ಟೂರು ಸಂತೇಶಿವರದಲ್ಲಿ ಇತ್ತೀಚೆಗಷ್ಟೇ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ಮಹಿಳೆಯರು ಪೂರ್ಣಕುಂಭ ಮೆರವಣಿಗೆಯಲ್ಲಿ ತಂದ ಗಂಗೆಯನ್ನು ಪ್ರೋಕ್ಷಣೆ ಮೂಲಕ ಭೈರಪ್ಪ ಕಾರ್ಯಕ್ರಮ ಉದ್ಘಾಟಿಸಿದ್ದರು. ನಂತರ ಆ ನೀರನ್ನು ಈಶ್ವರನ ಅಭಿಷೇಕಕ್ಕೆ ಬಳಸಿ ನಂತರ ಕೆರೆಗೆ ಬಿಡುವ ಮುನ್ನ ಕೆರೆ ಯಾವತ್ತೂ ಬತ್ತದಿರಲಿ ಎಂದು ಭೈರಪ್ಪ ಪ್ರಾರ್ಥಿಸಿದ್ದರು. ಸುದೀರ್ಘ 25 ವರ್ಷದ ಬಳಿಕ ಸಂತೇಶಿವರದ ಕೆರೆ ತುಂಬಿ ತುಳುಕುತ್ತಿದೆ. ಇದರ ಹಿಂದೆ ಭೈರಪ್ಪ ಅವರ ಶ್ರಮ ಇರುವುದನ್ನು ಗ್ರಾಮಸ್ಥರು ಇಂದಿಗೂ ನೆನೆಯುತ್ತಾರೆ.

1967ರಿಂದ 1971ರವರೆಗೆ ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಶಿಕ್ಷಣ ಮೀಮಾಂಸಾ ವಿಷಯದಲ್ಲಿ ಉಪಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ನಂತರ ಮೈಸೂರಿನಲ್ಲಿರುವ ಪ್ರಾದೇಶಿಕ ಶಿಕ್ಷಣ ಕಾಲೇಜಿಗೆ ವರ್ಗವಾಗಿ ತತ್ವಶಾಸ್ತ್ರ ಮತ್ತು ಶಿಕ್ಷಣಶಾಸ್ತ್ರದ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿ 1991ರಲ್ಲಿ ನಿವೃತ್ತರಾದರು. ಮೈಸೂರಿಗೆ ಬರುವುದಕ್ಕೆ ಮುಂಚೆಯೇ ಸ್ವಾತಂತ್ರ್ಯ ಚಳವಳಿಗೆ ಧುಮುಕಿದ್ದ ಬಾಲಕ ಭೈರಪ್ಪ, ಗಾಂಧಿ ಚಿಂತನೆಗಳಿಂದ ಪ್ರೇರೇಪಿತರಾಗಿದ್ದರು. ಆ ಹೊತ್ತಿನಲ್ಲಿ, ಹಳ್ಳಿಗಳಿಗೆ ಹೆಂಡ ಪೂರೈಸುತ್ತಿದ್ದ ಲಾರಿಗಳಿಗೆ ಅಡ್ಡ ನಿಂತಿದ್ದರು, ಬ್ರಿಟಿಷ್ ವಿರೋಧಿ ಭಾಷಣವನ್ನೂ ಮಾಡುವ ಮೂಲಕ ಪ್ರತಿರೋಧ ತೋರಿ ದೇಶಪ್ರೇಮ ಮೆರೆದಿದ್ದರು.

ಭೈರಪ್ಪ ಎಂಬ ಮಾಹಾನ್ ಚೇತನ ಮೈಸೂರು, ಕರ್ನಾಟಕ ಮಾತ್ರವಲ್ಲದೆ ಭಾರತಾದ್ಯಂತ ಸಾಹಿತ್ಯಾಸಕ್ತರಿಗೆ ಚಿರಪರಿಚಿತ ಹೆಸರು. ಕನ್ನಡ ಕಾದಂಬರಿ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ಕೀರ್ತಿ ಅವರಿಗೆ ಸಲ್ಲಿದೆ. ಕನ್ನಡ ಸಾರಸ್ವತ ಲೋಕಕ್ಕೆ ಮೊದಲ ಸರಸ್ವತಿ ಸಮ್ಮಾನ್ ಪ್ರಶಸ್ತಿಯ ಗೌರವ ತಂದುಕೊಟ್ಟ ಸಾಹಿತ್ಯ ಸಂತ ಅವರಾಗಿದ್ದರು.

ಏಳೂ ಭೂಖಂಡಗಳಲ್ಲಿ ಪ್ರವಾಸ ಮಾಡಿ ದಾಖಲೆ: ಭೈರಪ್ಪನವರ ಕಾದಂಬರಿಗಳು ರಾಜ್ಯದ ಹಲವು ವಿಶ್ವವಿದ್ಯಾಲಯಗಳ ಪಠ್ಯಗಳಾಗಿ ಸ್ಥಾನವನ್ನು ಪಡೆದಿರುವುದಲ್ಲದೆ, 20ಕ್ಕೂ ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳ ಅಧ್ಯಯನದ ವಿಷಯವೂ ಆಗಿವೆ. ಭೈರಪ್ಪನವರ 24 ಕಾದಂಬರಿಗಳನ್ನೂ ಹಾಗೂ ಸಾಹಿತ್ಯವಿಮರ್ಶೆ, ಸೌಂದರ್ಯ ಮೀಮಾಂಸೆ ಮತ್ತು ಸಂಸ್ಕೃತಿಯ ಕುರಿತಾಗಿ 5 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ ಬಹುತೇಕ ಕಾದಂಬರಿಗಳು ಭಾರತದ ಹದಿನಾಲ್ಕು ಭಾಷೆಗಳಿಗೂ ಅನುವಾದಗೊಂಡು, ಆರು ಕಾದಂಬರಿಗಳು ಇಂಗ್ಲಿಷ್‌ಗೆ ಅನುವಾದಗೊಂಡಿವೆ. ಅವರು ಮೂರು ದಶಕಗಳಿಗೂ ಹೆಚ್ಚು ಕಾಲ ಎನ್.ಸಿ.ಈ.ಆರ್.ಟಿ ಯಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ರ ಮತ್ತು ಶಿಲ್ಪಕಲೆಯಲ್ಲೂ ಅಭಿರುಚಿ ಹೊಂದಿದ್ದ ಭೈರಪ್ಪನವರು ಬಾಲ್ಯದಿಂದಲೇ ಪ್ರವಾಸದ ಗೀಳು ಹತ್ತಿಸಿಕೊಂಡಿದ್ದರು. ಪರಿಣಾಮ, ವಿಶ್ವದ ಏಳೂ ಭೂಖಂಡಗಳಲ್ಲಿ ಪ್ರವಾಸ ಮಾಡಿ ದಾಖಲೆ ಸೃಷ್ಟಿಸಿದ್ದಾರೆ. 94 ವರ್ಷ ಪೂರೈಸಿದರೂ ಸಹ ಇಂದಿಗೂ ಸಹ ಭೈರಪ್ಪನವರು ಜೀವನದ ಬಗೆಗಿನ ಉತ್ಸಾಹವನ್ನು ಹಾಗೆಯೇ ಉಳಿಸಿಕೊಂಡಿದ್ದ ಅವರು ಇತ್ತೀಚಿನವರೆಗೂ ಮೈಸೂರಿನ ಕುವೆಂಪುನಗರ ಬಡಾವಣೆಯಲ್ಲಿರುವ ನಿವಾಸದಲ್ಲಿ ಪತ್ನಿಯೊಂದಿಗೆ ನೆಲೆಸಿದ್ದರು. ಆದರೆ, ಕಳೆದ ಮೂರ್ನಾಲ್ಕು ತಿಂಗಳ ಹಿಂದೆ ಆರೋಗ್ಯ ಸಮಸ್ಯೆ ಕಾಡಿದ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡಿದ್ದರು.

ಭೈರಪ್ಪನವರ ಅದೆಷ್ಟೋ ಕೃತಿಗಳು ಭಾಷೆಯ ಗಡಿಯನ್ನು ದಾಟಿ ಗುಜರಾತಿ, ಹಿಂದಿ, ಸಂಸ್ಕೃತ, ಮಲಯಾಳಂ, ತಮಿಳು, ತೆಲುಗು, ಇಂಗ್ಲಿಷ್ ಭಾಷೆಗಳಿಗೂ ಅನುವಾದಗೊಂಡಿವೆ. 1961ರಲ್ಲಿ ಪ್ರಕಟಗೊಂಡ ಧರ್ಮಶ್ರೀಯಿಂದ ಹಿಡಿದು ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾದ ಉತ್ತರಕಾಂಡದವರೆಗೆ 20ಕ್ಕೂ ಹೆಚ್ಚು ಮಹತ್ವಪೂರ್ಣ ಕಾದಂಬರಿಗಳನ್ನು ಭೈರಪ್ಪನವರು ಬರೆದಿದ್ದಾರೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೇ, ನಾಯಿನೆರಳು, ಮತದಾನ ಕೃತಿಗಳು ಚಲನಚಿತ್ರಗಳಾಗಿ ರಾಷ್ಟ್ರಮಟ್ಟದಲ್ಲಿ ಹತ್ತು ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡು ಜನಪ್ರಿಯಗೊಂಡಿವೆ.

ಟೀಕಾಕಾರರಿಗೂ ಪ್ರಿಯ

ಎಡಪಂಥೀಯ ಹಾಗೂ ಬಲಪಂಥೀಯ ನಡೆಯ ಸಮಬಲದ ಹೋರಾಟದ ಅಖಾಡದಂತಿರುವ ಮೆಸೂರಿನಲ್ಲಿ ಭೈರಪ್ಪ ಅವರನ್ನೂ ವಿವಾದಗಳು ಸುತ್ತುವರಿದಿದ್ದವು. ತಮ್ಮ ಭಾಷಣದಲ್ಲಿ ವಿಷಯಾಧಾರಿತವಾಗಿ ಮಾತನಾಡುತ್ತಿದ್ದ ಅವರಿಗೆ ಮರುದಿನವೇ ತೀವ್ರತರವಾದ ಪ್ರತಿಕ್ರಿಯೆಗಳು ಸುತ್ತಿಕೊಳ್ಳುತ್ತಿದ್ದವು. ಸರಸ್ವತಿ ಸಮ್ಮಾನ್ ಪ್ರಶಸ್ತಿ ಬಂದಾಗಲೂ ಟೀಕೆಗಳು ಎದುರಾದವು. ಕೇವಲ ಕಾದಂಬರಿ ಬರೆದವರಿಗೆ ಸಾಹಿತ್ಯ ಸಮ್ಮಾನ್ ಎಂದು ಮೊದಲಿಸಿದವರಿಗೆ ಮೌನದ ಮೂಲಕವೇ ತಿರುಗೇಟು ನೀಡಿದರು. ಅವರದ್ದೇ ಆದ ವಿಚಾರಗಳಿಂದ ಬಲಪಂಥೀಯರು ಎಂದು ಗುರುತಿಸಲ್ಪಡುತ್ತಿದ್ದ ಭೈರಪ್ಪ, ಒಮ್ಮೊಮ್ಮೆ ತಮ್ಮ ಹೇಳಿಕೆಗಳ ಮೂಲಕವೇ ಟೀಕೆಗೆ ಒಳಗಾಗುತ್ತಿದ್ದರು. ಟಿಪ್ಪು ಕುರಿತಾಗಿ ಅವರು ನೀಡಿದ ಹೇಳಿಕೆ ವಿವಾದಕ್ಕೆ ಕಾರಣವಾಯಿತು. ಟಿಪ್ಪು ಹಿಂದೂ ವಿರೋಧಿ ಎಂಬ ಹೇಳಿಕೆಯನ್ನು ಎಡಪಂಥೀಯರು ಬಲವಾಗಿ ವಿರೋಧಿಸಿದ್ದರು. ಟಿಪ್ಪು ಸ್ಮಾರಕ ಸ್ಥಳಾಂತರ, ಟಿಪ್ಪು ಜಯಂತಿ ಮುಂತಾದ ಸಂದರ್ಭಗಳಲ್ಲಿ ಭೈರಪ್ಪ ಅವರ ಪ್ರತಿಕ್ರಿಯೆಗಳು ಅನೇಕರ ಟೀಕೆಗೆ ಗುರಿಯಾದವು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿ ಇದ್ದಾಗಲಂತೂ ಅದೂ ಇನ್ನೂ ಬಲವಾಗುತ್ತ ಹೋಯಿತು. ಜತೆಗೆ ರಾಜಕೀಯ ತಿರುವು ಪಡೆಯಿತು. ಕೇಂದ್ರದಲ್ಲಿ ನರೇಂದ್ರ ಮೋದಿ ಸರಕಾರ ಅಧಿಕಾರಕ್ಕೆ ಬಂದಾಗ ಮತ್ತು ಮೋದಿ ಅವರು ಪ್ರಧಾನಿ ಅಭ್ಯರ್ಥಿ ಎಂದಾಗಲೂ ಮೋದಿ ಅವರ ಪರ ಭೈರಪ್ಪ ಮಾತನಾಡಿದ್ದರು. ಇನ್ನೂ ಅನೇಕ ವರ್ಷಗಳ ಕಾಲ ಮೋದಿ ಪ್ರಧಾನಿ ಆಗಿ ಉಳಿದಾಗಲೇ ಭಾರತದ ಅಭಿವೃದ್ಧಿ ಸಾಧ್ಯ ಎಂದು ಅವರು ಹೇಳಿದ್ದರು. ಕೇಂದ್ರ ಸರಕಾರದ ವಿವಿಧ ಯೋಜನೆಯನ್ನು ಹೊಗಳಿದ್ದ ಭೈರಪ್ಪ ಅವರ ಮನೆಯ ಆವರಣದಲ್ಲಿಯೇ ಒಮ್ಮೆ ಯೋಜನೆಗಳ ಪ್ರಚಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು ಕೇಂದ್ರ ಸರಕಾರದ ಜನಪ್ರಿಯ ಕಾರ್ಯಕ್ರಮಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದರು. ಕೆಲವು ಸಂದರ್ಭಗಳಲ್ಲಿ ತುರ್ತು ಪರಿಸ್ಥಿತಿಯನ್ನು ಟೀಕಿಸುವಾಗ ಇಂದಿರಾ ಗಾಂಧಿಯನ್ನು ವಿರೋಧಿಸಿದ್ದರು. ರಾಮಮಂದಿರ ನಿರ್ಮಾಣ, ಉದ್ಘಾಟನೆ ಸಂದರ್ಭದಲ್ಲಿಯೂ ಅವರು ಅದರ ಪರವಾಗಿ ಹೇಳಿಕೆ ನೀಡಿದ್ದರು. ಅವರ ದಾಟು, ಆವರಣ, ಪರ್ವ ಮುಂತಾದ ಕಾದಂಬರಿಗಳಲ್ಲಿನ ಕಥೆಯನ್ನೂ ಕೆಲವರು ವಿರೋಧಿಸಿದ್ದೂ ಉಂಟು. ಪ್ರಮುಖವಾಗಿ ದಾಟು, ಗೃಹಭಂಗವನ್ನು ಬಲಪಂಥೀಯರು ವಿರೋಧಿಸಿದ್ದರು.

ದಾಖಲೆ ಮಾರಾಟ ಕಂಡ ಕಾದಂಬರಿಗಳು

ಭಾರತೀಯ ಸಾಹಿತ್ಯ, ತತ್ವಶಾಸ್ತ್ರ ಮತ್ತು ಸೌಂದರ್ಯಶಾಸ್ತ್ರದಲ್ಲಿ ಆಳವಾದ ಜ್ಞಾನವನ್ನು ಹೊಂದಿದ್ದರು. ಇವರ ಅನೇಕ ಕಾದಂಬರಿಗಳು ಪ್ಯಾನ್ ಇಂಡಿಯಾ ಮಟ್ಟಕ್ಕೆ ತಲುಪುವ ಮೂಲಕ ಹಲವು ಭಾಷೆಗಳಲ್ಲಿ ಇವರ ಸಾಹಿತ್ಯ ತರ್ಜುಮೆಗೊಂಡಿದೆ. ಇವರ ಪುಸ್ತಕಗಳು 25 ವರ್ಷಗಳಿಗೂ ಹೆಚ್ಚು ಕಾಲ ಅತ್ಯುತ್ತಮವಾಗಿ ಮಾರಾಟವಾಗುವ ಮೂಲಕ ದಾಖಲೆ ಬರೆದಿದ್ದು, ಮರಾಠಿಯಲ್ಲಿ ಕಳೆದ ದಶಕದಲ್ಲಿ ಅತಿ ಹೆಚ್ಚು ಮತ್ತು ಹಿಂದಿಯಲ್ಲಿ ಟಾಪ್ 5ರಲ್ಲಿ ಹೆಚ್ಚು ಮಾರಾಟವಾದ ಕಾದಂಬರಿಗಳಾಗಿವೆ.

ನಾಡಿನ ಹಿರಿಯ ಸಾಹಿತಿ, ಕಾದಂಬರಿಕಾರ ಎಸ್. ಎಲ್. ಭೈರಪ್ಪರ ನಿಧನ ಸುದ್ದಿ ಕೇಳಿ ಮನಸ್ಸಿಗೆ ಆಘಾತವಾಯಿತು. ನಾಡಿನ ಸಾಹಿತ್ಯ ಲೋಕದ ಸಾಕ್ಷಿಪ್ರಜ್ಞೆಯಂತಿದ್ದ ಅವರು ಸಾಹಿತ್ಯವನ್ನೇ ಉಸಿರಾಗಿಸಿಕೊಂಡು ಬದುಕಿದವರು. ಅವರು ಎಷ್ಟೇ ಎತ್ತರಕ್ಕೆ ಬೆಳೆದರು ತಾವು ಹುಟ್ಟಿದ ಊರು ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಂತೇಶಿವರ ಗ್ರಾಮದ ಬಗ್ಗೆ ಅವರಿಗೆ ಅಪಾರ ಅಭಿಮಾನ ಮತ್ತು ಕಾಳಜಿ ಇಟ್ಟುಕೊಂಡಿದ್ದರು. ಅವರು ತಮ್ಮೂರಿನ ಕೆರೆಗಳಿಗೆ ನೀರು ತುಂಬಿಸಲು ಇಳಿವಯಸ್ಸಿನಲ್ಲಿ ಓಡಾಡಿದ್ದರು.

ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ಹಿರಿಯ ಸಾಹಿತಿ ಭೈರಪ್ಪ ನಿಧನದಿಂದ ಸಾರಸ್ವತ ಲೋಕ ಪ್ರಮುಖ ಕೊಂಡಿಯನ್ನು ಕಳೆದುಕೊಂಡಂತಾಗಿದೆ. ಅವರೊಂದಿಗೆ ಕೆಲವು ಬಾರಿ ಸಂವಾದ ನಡೆಸುವ ಅವಕಾಶ ನಡೆಸುವ ಅವಕಾಶ ಸಿಕ್ಕಿದ್ದು ಜೀವನ ಮಹತ್ವದ ಕ್ಷಣಗಳಾಗಿವೆ. ಕೆಲವರ ವ್ಯಕ್ತಿತ್ವಗಳೇ ಹಾಗೆ. ಅವರಿಗೆ ಪ್ರಶಸ್ತಿ ಬಂದಿದೆ ಎನ್ನುವುದಕ್ಕಿಂತ ಅವರಿಂದ ಪ್ರಶಸ್ತಿಗಳಿಗೇ ಸಮ್ಮಾನ ಪಡೆಯುತ್ತದೆ. ಲೇಖನಿ ಮೂಲಕ ಎಲ್ಲರನ್ನೂ ಸೆಳೆದುಕೊಂಡಿದ್ದ ಶ್ರೀಯುತರು, ತಮ್ಮ ಆದಾಯವನ್ನು ಸಮಾಜ ಸೇವೆಗೆ ಮೀಸಲಿರಿಸಿ ಜನಮಾನಸದಲ್ಲಿ ವಿಶೇಷ ಸ್ಥಾನಮಾನ ಪಡೆದುಕೊಂಡಿದ್ದಾರೆ.

ಯದುವೀರ್ ಒಡೆಯರ್ ಸಂಸದ

ಖ್ಯಾತ ಸಾಹಿತಿಗಳು, ಸರಸ್ವತಿ ಸಮ್ಮಾನ್, ಪದ್ಮಭೂಷಣ ಪುರಸ್ಕೃತ ಡಾ. ಎಸ್. ಎಲ್. ಭೈರಪ್ಪರ ನಿಧನದಿಂದ ಕನ್ನಡ ಸಾಹಿತ್ಯ ಲೋಕ ಒಂದು ಅನರ್ಘ್ಯ ರತ್ನವನ್ನು ಕಳೆದುಕೊಂಡಿದೆ. ತಮ್ಮ ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ್ದ ಅವರು, ಕನ್ನಡ ಮಾತ್ರವಲ್ಲದೆ ತಮ್ಮ ಅನುವಾದಿತ ಕೃತಿಗಳು ಮೂಲಕ ಭಾರತಾದ್ಯಂತ ಅನೇಕ ಭಾಷೆಗಳಲ್ಲಿ ಅಸಂಖ್ಯಾತ ಓದುಗ ಬಳಗವನ್ನು ಸಂಪಾದಿಸಿದ್ದರು. ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ.

ಆರ್. ಅಶೋಕ್ ವಿಪಕ್ಷ ನಾಯಕ

ಪದ್ಮಭೂಷಣ ಡಾ.ಎಸ್.ಎಲ್. ಭೈರಪ್ಪನವರ ನಿಧನ ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ. ಭೈರಪ್ಪನವರಿಗೆ ಕನ್ನಡ ಭಾಷೆಯ ಸೂಕ್ಷ್ಮಗಳು ಚೆನ್ನಾಗಿ ತಿಳಿದಿತ್ತು. ಮಾನವನ ದೌರ್ಬಲ್ಯಗಳ ಬಗ್ಗೆ ಅವರಿಗೆ ಅನುಕಂಪೆಯಿತ್ತು. ಕಾಮ ಮತ್ತು ಸಂತಾನವನ್ನು ಅವರಂತೆ ಸಮಗ್ರವಾಗಿ ವಿಶ್ಲೇಷಿಸಿದ ಇನ್ನೊಬ್ಬ ಲೇಖಕ ಕನ್ನಡದಲ್ಲಿ ಇಲ್ಲ. ಅವರ ನಿಧನದೊಂದಿಗೆ ಕನ್ನಡದ ದೊಡ್ಡ ಲೇಖಕರೊಬ್ಬರು ಕಣ್ಮರೆಯಾದಂತಾಯಿತು. ಅವರಿಗೆ ಅಂತಿಮ ನಮನಗಳು. ಅವರ ಅಗಲಿಕೆಯನ್ನು ಭರಿಸುವ ಶಕ್ತಿ ಅವರ ಕುಟುಂಬಕ್ಕೆ ದೊರಕಲಿ.

ಡಾ.ಪುರುಷೋತ್ತಮ ಬಿಳಿಮಲೆ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಭೈರಪ್ಪನ ಅವರದ್ದು ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತಾದ್ಯಂತ ಸಾಹಿತ್ಯಾಸಕ್ತರಿಗೆ ಚಿರಪರಿಚಿತ ಹೆಸರು. ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ಕೀರ್ತಿ ಕೂಡ ಇವರಿಗೆ ಸಲ್ಲುತ್ತದೆ. ಕನ್ನಡ ಸಾರಸ್ವತ ಲೋಕಕ್ಕೆ ಮೊದಲ ಸರಸ್ವತಿ ಸಮ್ಮಾನ್ ಪ್ರಶಸ್ತಿಯ ಗೌರವವನ್ನು ತಂದುಕೊಟ್ಟ ಇವರ ಕಾದಂಬರಿಗಳು ಭಾರತದ ಬಹುತೇಕ ಭಾಷೆಗಳಿಗೆ ಅನುವಾದಗೊಂಡಿವೆ. ದೂರದರ್ಶನದ ಹಲವು ಕಾರ್ಯಕ್ರಮಗಳಲ್ಲಿ ಭೈರಪ್ಪನವರು ಭಾಗವಹಿಸಿದ್ದು, ದೆಹಲಿಯಲ್ಲಿದ್ದಾಗ ಯಾವುದೇ ಕಾರ್ಯಕ್ರಮಗಳಿಗೆ ಬಂದಿದ್ದರೂ ನನ್ನನ್ನು ಕಚೇರಿಯಲ್ಲಿ ಭೇಟಿ ಮಾಡುತ್ತಿದ್ದರು.

ನಾಡೋಜ ಡಾ. ಮಹೇಶ್ ಜೋಶಿ ಅಧ್ಯಕ್ಷ ಕನ್ನಡ ಸಾಹಿತ್ಯ ಪರಿಷತ್ತು.

ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನ, ಕಾದಂಬರಿ ಸಾರ್ವಭೌಮ ಡಾ. ಎಸ್.ಎಲ್. ಭೈರಪ್ಪನವರು ನಮ್ಮನ್ನು ಅಗಲಿದ್ದಾರೆ. ಕಾದಂಬರಿಗಳ ಮೂಲಕವೇ ಬದುಕಿನ ಸೂಕ್ಷ್ಮಗಳನ್ನು, ಭಾರತೀಯ ಸಂಸ್ಕೃತಿಯ ಮಹತ್ವವನ್ನು ತಿಳಿಸಿಕೊಟ್ಟ ಮಹಾನ್ ಚೇತನವದು. ತಮ್ಮ ಮಾಂತ್ರಿಕವಾದಂತಹ ಅಕ್ಷರಗಳ ಮೂಲಕ ಕನ್ನಡ ಭಾಷಾ ಸಿರಿವಂತಿಕೆಗೆ ಇನ್ನಷ್ಟು ಮೆರುಗು ನೀಡಿದ್ದು ಗಮನಾರ್ಹ. ಭೈರಪ್ಪನವರ ನಿಧನ ಕೇವಲ ಒಬ್ಬ ಸಾಹಿತಿಯ ಅಗಲಿಕೆಯಲ್ಲ, ಅದು ಕನ್ನಡದ ಆತ್ಮವೊಂದರ ನಿರ್ಗಮನ.

ತೇಜಸ್ವೀ ಸೂರ್ಯ ಸಂಸದ

ಎಸ್.ಎಲ್. ಭೈರಪ್ಪನವರು ನಿಧನರಾಗಿರುವುದು ಸಾರಸ್ವತಲೋಕಕ್ಕೆ ಅದರಲ್ಲೂ ಅವರ ಓದುಗಬಳಗಕ್ಕೆ ತುಂಬಲಾರದ ನಷ್ಟವಾಗಿದೆ. ಶ್ರೀಯುತರು ಭೌತಿಕದೇಹವನ್ನು ತೊರೆದಿದ್ದಾರೆ. ಆದರೆ, ನಾಸ್ತಿ ತೇಷಾಮ್ ಯಶಃ ಕಾಯೇ ಜರಾ ಮರಣಜಂ ಭಯಮ್ ಎಂಬ ಆರ್ಯೋಕ್ತಿಯಂತೆ, ಇಂದಿನ ಹಾಗೂ ಮುಂಬರುವ ಜನಮಾನಸದಲ್ಲಿ ಜೀವಂತವಾಗಿ ಇರುತ್ತಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಅವರ ಕುಟುಂಬ ಸದಸ್ಯರಿಗೂ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನೂ ದಯಪಾಲಿಸಲಿ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮೈಸೂರು.

ಬಾನಂಗಳದಲ್ಲೆಂದೂ ಮಿನುಗಲಿರುವ ಕನ್ನಡದ ಸಾಹಿತ್ಯ ಲೋಕದ ಧ್ರುವತಾರೆ



ಎಸ್. ಎಲ್. ಭೈರಪ್ಪನವರ ಮೈಸೂರಿನ ಮನೆಗೆ ಎರಡು ಬಾರಿ ಹೋಗಿದ್ದೆ. ಮೊದಲ ಸಲ, ಕತಾರ್ ಕರ್ನಾಟಕ ಸಂಘದ 2019ರ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಅಧಿಕೃತ ಆಮಂತ್ರಣ ನೀಡಿ ಆಮಂತ್ರಿಸಲು, ನಂತರದಲ್ಲಿ ಅವರು ಪದ್ಮಪ್ರಶಸ್ತಿ ಪುರಸ್ಕೃತರಾದಾಗ ಅವರನ್ನು ಅಭಿನಂದಿಸಲು ಹೋಗಿದ್ದೆ.

ಅವರು ದೋಹಾ-ಕತಾರಿಗೆ ಬಂದಾಗ, ಅವರ ಬಹುಪಾಲಿನ ಮೇಲ್ವಿಚಾರಿಕೆ ನನ್ನ ಪಾಲಿನದಾಗಿತ್ತು. ಅವರು ದೋಹಾಗೆ ಬಂದಿಳಿದ ರಾತ್ರಿ, ಅವರು ತಂಗಿದ್ದ ರಾಡಿಸನ್ ಬ್ಲೂ ಹೋಟೆಲ್ ಕೋಣೆಗೆ ರಾತ್ರಿ ಊಟದ ವ್ಯವಸ್ಥೆ ಮಾಡಲೆಂದು ನಾನು, ನನ್ನಾಕೆಯೊಂದಿಗೆ ಹೋಗಿದ್ದೆ. ಮೊಸರನ್ನ ಮಾತ್ರ ಸಾಕೆಂದು ಜೊತೆಗೆ ಸ್ವಲ್ಪ ಉಪ್ಪಿನಕಾಯಿ ಮತ್ತು ಹಪ್ಪಳ ಸೇವಿಸಿದ್ದರು. ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಎಷ್ಟು ಸಮಯ ಅವರು ಮಾತಾಡಬಹುದೆಂದು ಕೇಳಿದರು. 15ರಿಂದ 20 ನಿಮಿಷವೆಂದು ನಾನು ಹೇಳಿದಾಗ, ಕೋಪಗೊಂಡವರಂತೆ ಕಂಡ ಅವರು, ಕೇವಲ ಅಷ್ಟು ಸಮಯಕ್ಕೆ ಅಲ್ಲಿಂದ ಇಲ್ಲಿಗೆ ಏಕೆ ಕರೆಸಬೇಕೆಂದು ಕೇಳಿದರು. ಬೇರೆ ಕಾರ್ಯಕ್ರಮಗಳಿಗೂ ಅವಕಾಶ ಮಾಡಿಕೊಡುವುದರಿಂದ, ಜೊತೆಗೆ ಆ ಬಾರಿ ಪುನೀತ್ ರಾಜಕುಮಾರ್ ಕೂಡ ಕಾರ್ಯಕ್ರಮದಲ್ಲಿ

ಹೆಚ್.ಕೆ. ಮಧು
ದೋಹಾ, ಕತಾರ್

ಭಾಗಿಯಾಗಿರುವುದರಿಂದ, ಕಾರ್ಯಕ್ರಮವಾದ ಮಾರನೆಯ ದಿನದಂದು ಕನ್ನಡ ಸಾಹಿತ್ಯಾಭಿಮಾನಿ ಸದಸ್ಯರಿಗೆ ಅವರೊಂದಿಗೆ ಎರಡು ತಾಸುಗಳ ಸಂವಾದ ಮಾದರಿಯ ಕಾರ್ಯಕ್ರಮ ಏರ್ಪಡಿಸಿರುವುದಾಗಿ ಹೇಳಿದಾಗ ಸಮಾಧಾನಗೊಂಡರು. ಆ ಸಂವಾದ ಕಾರ್ಯಕ್ರಮದಲ್ಲಿ ಅವರ ಕಟ್ಟಾ ಅಭಿಮಾನಿಗಳು ಹಾಗೂ ಅವರ ಕಾದಂಬರಿಗಳನ್ನು ಹಲವಾರು ಬಾರಿ ಓದಿದ್ದ ಸಾಹಿತ್ಯಾಸಕ್ತರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಅವರಿಗೆ ಖುಷಿ ತರಿಸಿತ್ತು.

ಅವರಿಗೇಕೆ ಜ್ಞಾನಪೀಠ ಪ್ರಶಸ್ತಿ ದೊರೆತಿಲ್ಲ ಎಂಬ ನನ್ನ ಪ್ರಶ್ನೆಗೆ ವಿಸ್ತಾರವಾದ ಚರ್ಚೆ ಮಾಡಿದರು. ಪ್ರಶಸ್ತಿ ಲಭಿಸುವುದು ಗೌರವದ ವಿಷಯವಾದರೂ, ಅದೇ ಕೊನೆಯಲ್ಲ. ಓದುಗ ಪ್ರಭುಗಳ ಮನೆ-ಮನೆಗಳಲ್ಲಿ ಅವರ ಕೃತಿಗಳಿವೆ. ಅವರ ಬಹುತೇಕ ಕಾದಂಬರಿಗಳನ್ನು ಹತ್ತಾರು ಬಾರಿ ಓದಿರುವ ಕನ್ನಡಿಗರು ಕೊಟ್ಟಿರುವ ಮನ್ನಣೆಗಿಂತ ಇನ್ನೇನು ಬಿರುದು-ಪ್ರಶಸ್ತಿಗಳು ಬೇಕು? ಹಲವಾರು ಭಾಷೆಗಳಲ್ಲಿ ಅವರ ಕೃತಿಗಳು ಪ್ರಕಟಣೆಗೊಂಡು ಮುದ್ರಿತವಾಗಿರುವುದು ಹೆಮ್ಮೆಯ ವಿಷಯವಲ್ಲವೇ?

ಸರಸ್ವತಿ ಸಮ್ಮಾನ್ ಪ್ರಶಸ್ತಿ ಕಡಿಮೆಯೇ? ಹೀಗೆ ಅವರ ವ್ಯಾಖ್ಯೆ ಮುಂದುವರೆದಿತ್ತು.

ಕನ್ನಡದ, ಕನ್ನಡ ಸಾಹಿತ್ಯದ ಬಹು ದೊಡ್ಡ ಹೆಮ್ಮೆಯ ಕೊಂಡಿಯೊಂದು ದೂರ, ದೂರವಾಗಿದೆ. ಬದುಕಿನ ಇಳಿವಯಸ್ಸಿನಲ್ಲೂ ಉತ್ಸಾಹವನ್ನು ಇಳಿಸಿಕೊಳ್ಳದೆ, ಇಳೆಯೊಳಗೆ ಬೆರೆಯುವ ತನಕ ಸಮಾರಂಭಗಳಲ್ಲಿ, ಚರ್ಚಾವೇದಿಕೆಗಳಲ್ಲಿ ಹಾಗೂ ಸಾಹಿತ್ಯ ಸಂವಾದಗಳಲ್ಲಿ ಭಾಗಿಯಾಗುತ್ತಿದ್ದ ಕನ್ನಡ ಸಾಹಿತ್ಯಲೋಕದ ಈ ಧ್ರುವತಾರೆ ಬಾನಂಗಳದಲ್ಲಿ ಸದಾ ಮಿನುಗುತ್ತಲೇ ಇರುತ್ತದೆ.

ಭೈರಪ್ಪನವರ ಕೃತಿಗಳು ಸದಾ ಕಾಲ ಜೀವಂತ

1970ರಿಂದ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಆರಂಭವಾದ ನನ್ನ ಭೈರಪ್ಪ ಅವರ ಭೇಟಿ ಈವರೆಗೆ ಬಹಳ ಅನ್ಯೋನ್ಯತೆಯಿಂದ ಕೂಡಿತ್ತು. 50 ವರ್ಷಗಳ ಒಡನಾಟದಲ್ಲಿ ಕನ್ನಡ ಸಾಹಿತ್ಯ, ಪುಸ್ತಕ, ವಿಮರ್ಶೆ, ಅನುವಾದ ಕುರಿತಾದ ಮಾತುಕತೆಯೇ ನಮ್ಮ ನಡುವೆ ಹೆಚ್ಚಿನ ಚರ್ಚೆ ಆಗುತ್ತಿತ್ತು.

ಅವರ ಕೃತಿ ಎಲ್ಲಾ ಭಾಷೆಗಳಿಗೆ ಅನುವಾದ ಆಗಿದೆ. ಲಿಪಿಯೇ ಇಲ್ಲದ ಭಾಷೆಗಳಿಗೂ ಅನುವಾದ ಮಾಡಲಾಗಿದೆ. ತೀರಾ ಇತ್ತೀಚೆಗೆ ಮಗದಿ ಎಂಬ ಭಾಷೆಗೆ ಅವರ ಕೆಲ ಕೃತಿ ಅನುವಾದವಾಗಿವೆ. ಸಾಹಿತ್ಯದ ಬಗ್ಗೆ ಬಹಳವಾಗಿ ಅಧ್ಯಯನ ಮಾಡಿದ್ದ ಅವರು ಭರತಖಂಡದ ಅತ್ಯಂತ ಜನಪ್ರಿಯ ಸಾಹಿತಿ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಹಾಮಾ ನಾಯಕರು ಹಾಗೂ ನಾನು ಅವರ ಪರಮಾಪ್ತರಲ್ಲಿ ಮೊದಲಿಗರು.ಭೈರಪ್ಪ ಅವರು ಬೇರೆಯವರಂತೆ ಲೆಕ್ಕಕ್ಕಾಗಿ ನೂರಾರು ಕಾದಂಬರಿ ಬರೆಯಲಿಲ್ಲ. ಆದರೆ, ಅವರು ಬರೆದ ಅಂದಾಜು 25 ಕಾದಂಬರಿಗಳೇ ಬಹಳ ಮೌಲಿಕ ಹಾಗೂ ಗುಣಾತ್ಮಕತೆಯಿಂದ ಕೂಡಿದ್ದವು. ಆ ಕಾರಣದಿಂದಾಗಿಯೇ ಇಂದಿಗೂ, ಎಂದೆಂದಿಗೂ ಕನ್ನಡ ಸಾಹಿತ್ಯ ವಲಯ ಮಾತ್ರವಲ್ಲ, ಇಡೀ ದೇಶದ ಸಾಹಿತ್ಯ ವಲಯದಲ್ಲಿ ಆ ಕೃತಿಗಳು ಸದಾಕಾಲ ಜೀವಂತವಾಗಿರುತ್ತವೆ. ಸಾಹಿತ್ಯ ವಲಯಕ್ಕೆ ಪ್ರೇರಣೆ ನೀಡುವ ದೃಷ್ಟಿಯಿಂದಲೇ ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಸ್ಥಾಪಿಸಿ ಪ್ರಖ್ಯಾತ ಲೇಖಕರು ಹಾಗೂ ಸಾಹಿತಿಗಳನ್ನು ಪುರಸ್ಕರಿಸುವ ಕೆಲಸ ಮಾಡುತ್ತಿದ್ದರು. ಆ ಟ್ರಸ್ಟ್‌ಗೆ ಅವರೇ ಅಧ್ಯಕ್ಷರಾಗಿದ್ದರು.

ಪ್ರಧಾನ್ ಗುರುದತ
ಹಿರಿಯ ಸಾಹಿತಿ

ಇಡೀ ಭರತಖಂಡದಲ್ಲಿ ಭೈರಪ್ಪನವರಂತಹ ಸಾಹಿತಿ ಮತ್ತೊಬ್ಬರಿಲ್ಲ. ಅವರ ಕೃತಿಗಳು ರಷ್ಯನ್ ಹಾಗೂ ಚೀನಿ ಭಾಷೆಗೆ ಭಾಷಾಂತರ ಆಗಿರುವುದೇ ಅವರ ಸಾಹಿತ್ಯದ ಗಟ್ಟಿತನಕ್ಕೆ ಸಾಕ್ಷಿಯಾಗಿದೆ.

ಮಗದಿ, ಸಂಕೇತಿ, ಉರ್ದು ಹಾಗೂ ಲಿಪಿಯೇ ಇಲ್ಲದ ಭಾಷೆಗಳಿಗೂ ಅವರ ಕಾದಂಬರಿಗಳು ಭಾಷಾಂತರಗೊಂಡಿವೆ ಎಂದಾದರೆ, ನಾವು ಆ ಸಾಹಿತ್ಯದೊಳಗಿನ ಗಟ್ಟಿತನವನ್ನು ಊಹಿಸಲೂ ಕೂಡ ಸಾಧ್ಯವಿಲ್ಲ. ಸಾಹಿತ್ಯ ಲೋಕವನ್ನು ಮತ್ತಷ್ಟು ಶ್ರೀಮಂತಗೊಳಿಸುವ ಸಲುವಾಗಿ ಅವರು ರೂಪಿಸಿದ ಸಾಹಿತ್ಯಪ್ರಿಯರ ಒಕ್ಕೂಟಕ್ಕೆ 35 ಸಾವಿರಕ್ಕೂ ಹೆಚ್ಚು ಮಂದಿ ಸದಸ್ಯರಾಗಿದ್ದರು. ಅದು ಕನ್ನಡ ಸಾಹಿತ್ಯ ಲೋಕದ ಶ್ರೀಮಂತಿಕೆಗೆ ಜೀವಂತ ಸಾಕ್ಷಿಯಾಗಿದೆ.

ತತ್ವ ಶಾಸ್ತ್ರದ ಪ್ರಾಧ್ಯಾಪಕರಾಗಿ, ಸಾಹಿತಿಯಾಗಿ, ಸಮಾಜಸೇವಕರಾಗಿ, ನಾಡು, ನುಡಿ, ನೆಲ, ಜಲದ ವಿಷಯದಲ್ಲಿ ಗಟ್ಟಿಧ್ವನಿ ಎತ್ತಿದ್ದ ಭೈರಪ್ಪ ಅವರು ಟಿಪ್ಪು ಸುಲ್ತಾನ್ ಅಂತಹ ವಿಚಾರದಲ್ಲಿಯೂ ತಮ್ಮ ಸಮರ್ಥ ನಿಲುವು ಮಂಡಿಸಿದ ಗಟ್ಟಿಗರು. ತತ್ವಶಾಸ್ತ್ರ ಮತ್ತು ಸಾಹಿತ್ಯ ವಿಮರ್ಶೆಯಲ್ಲಿ ಕರಾರುವಾಕ್ಕಾಗಿ ಉಳುಮೆ ಮಾಡಿದ್ದ ಯೋಗಿ ಭೈರಪ್ಪ ಅವರಾಗಿದ್ದರು. ಭಾರತೀಯ ಸಾಹಿತ್ಯದಲ್ಲಿ ಅವರಿಗೆ ಹೋಲಿಕೆಯಾಗುವ ವ್ಯಕ್ತಿ ಮತ್ತೊಬ್ಬರಿಲ್ಲ. ಶುದ್ಧ ಸಸ್ಯಹಾರಿಯಾಗಿದ್ದ ಅವರು ಕಡೆಯ ಕ್ಷಣದವರೆಗೂ ಅದನ್ನು ಕಟ್ಟುನಿಟ್ಟಾಗಿ ಪಾಲಿಸಿದರು. ಹಿತ-ಮಿತವನ್ನು ಬದುಕಿನಲ್ಲಿ ಅನುಸರಿಸಿದರು.

ಸಾಹಿತ್ಯ ವಲಯದ ಪ್ರತಿಯೊಬ್ಬರಿಂದಲೂ ಅತ್ಯಂತ ಗೌರವಕ್ಕೆ, ಮೆಚ್ಚುಗೆಗೆ ಪಾತ್ರವಾದ ಸಾಹಿತಿ ಭೈರಪ್ಪ. ಅವರ ಕೊಡುಗೆಗಳನ್ನು ಇಡೀ ಸಾಹಿತ್ಯ ವಲಯ ಗುರುತಿಸಿತ್ತು. ಎಲ್ಲಾ ಪಂಥ ಮೀರಿ ಗುರುತಿಸಿಕೊಂಡಿದ್ದರು. ಸರಸ್ವತಿ ಸಮ್ಮಾನ್ ಪ್ರಶಸ್ತಿ ಪಡೆದ ಮೊದಲ ಕನ್ನಡ ಸಾಹಿತಿ ಅವರು ಎಂಬುದೇ ಈ ನಾಡಿನ ಹೆಮ್ಮೆ.

1931-2025

ಸರಸ್ವತಿ ಪುತ್ರನ ಪರ್ವಾಂತ್ಯ

ವಿಶ್ವವಾಣಿ 25.09.2025 ಗುರುವಾರ
vishwavani.news

ಕಾದಂಬರಿಕಾರರಾಗಿ ಭೈರಪ್ಪನವರು ಅದ್ವಿತೀಯರು ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಅವರು ಕೇವಲ ಲೇಖಕರಾಗಿ ಮಾತ್ರ ನಮಗೆ ಮಾದರಿ ಅಲ್ಲ. ಒಬ್ಬ ಸಾಹಿತ್ಯ ಮೀಮಾಂಸಕರಾಗಿ, ಸಂಸ್ಕೃತಿ ಚಿಂತಕರಾಗಿ, ತತ್ತ್ವಜ್ಞಾನಿಯಾಗಿ, ಕಷ್ಟದಲ್ಲಿರುವವರಿಗೆ ಅಥವಾ ಸಮಾಜಹಿತದ ಒಳ್ಳೆಯ ಉದ್ದೇಶಗಳಿಗೆ ನೈತಿಕ ಮತ್ತು ಆರ್ಥಿಕ ಬೆಂಬಲ ಕೊಡುವವರಾಗಿ, ಪ್ರಸಿದ್ಧರಾಗುವುದಕ್ಕೆ ಮೊದಲೂ ಸಾಹಿತ್ಯದ ಪ್ರಭಾವಿ ಪ್ರವಾಹದ ವಿರುದ್ಧ ಈಜುವ ಧೈರ್ಯ ತೋರಿಸಿದವರಾಗಿ- ಹೀಗೆ ಎಲ್ಲವೂ ಆಗಿರುವ ಮತ್ತೊಬ್ಬ ಲೇಖಕನನ್ನು ನನ್ನ ಸೀಮಿತ ಅರಿವಿನಲ್ಲಿ ನಾನು ಕಂಡದ್ದಿಲ್ಲ; ಕೇಳಿದ್ದಿಲ್ಲ.

ಭೈರಪ್ಪರಿಗೆ ಭೈರಪ್ಪರೇ ಸಾಟಿ

ಅಜಕ್ಕಳ ಗಿರೀಶ ಭಟ್

ಆಸ್ಪತ್ರೆಯಲ್ಲಿ ದಾಖಲಾದವರನ್ನು ಭೇಟಿಯಾಗಲು ಹೋಗುವುದು ನನಗೆ ಯಾವಾಗಲೂ ತುಸು ಕಷ್ಟದ ವಿಷಯ. ಇದು ನನ್ನಂತೆ ಇತರ ಹಲವರ ಅನುಭವವೂ ಇರಬಹುದು.

ಕಾರಣ ಎಲ್ಲರಿಗೂ ಗೊತ್ತಿರುವಂಥದ್ದೇ. ಆಸ್ಪತ್ರೆಯಲ್ಲಿ ಇರುವವರಿಗೆ, ಅಂತಾರಾಷ್ಟ್ರೀಯ, ರಾಷ್ಟ್ರೀಯ ಅಥವಾ ಸ್ಥಳೀಯ ಟ್ರೆಂಡಿಂಗ್ ವಿಷಯಗಳನ್ನು ಅಥವಾ ರಾಜಕೀಯ, ಕ್ರಿಕೆಟ್, ಸಾಹಿತ್ಯ, ಕಲೆ ಮುಂತಾದ ವಿಚಾರಗಳನ್ನು ಲೋಕಾಭಿರಾಮವಾಗಿ ಮಾತನಾಡುವ ಮನಸ್ಥಿತಿ ಸಾಮಾನ್ಯವಾಗಿ ಇರುವುದಿಲ್ಲ. ನಾವಾದರೋ ಅವರ ಅನಾರೋಗ್ಯ ಇತ್ಯಾದಿ ಕುರಿತು ಪ್ರಶ್ನೆಗಳನ್ನು ಕೇಳುವುದು ಅನಿವಾರ್ಯ. ಆದರೆ ಅದಾಗಲೇ ಹಲವರ ಎದುರು ಹೇಳಿ ಆಗಿರುವ ತಮ್ಮ ಅನಾರೋಗ್ಯ, ಚಿಕಿತ್ಸೆಯ ವಿವರಗಳನ್ನು ಮತ್ತೊಮ್ಮೆ ನಮ್ಮೆದುರು ಹೇಳುವ ಕಷ್ಟವೂ ಅವರಿಗೆ ಇಷ್ಟವಾಗದೇನೋ ಎಂಬ ದಾಕ್ಷಿಣ್ಯ.

ಕನ್ನಡದ ರತ್ನ ಡಾ. ಎಸ್. ಎಲ್. ಭೈರಪ್ಪನವರು ಆಸ್ಪತ್ರೆಯಲ್ಲಿರುವ ಮಾಹಿತಿ ಸಿಕ್ಕಿತ್ತು. ಕಳೆದ ತಿಂಗಳು ಬೇರೆ ಕೆಲಸಕ್ಕೆ ಬೆಂಗಳೂರಿಗೆ ಹೋಗಿದ್ದ ನನ್ನ ಪತ್ನಿ ಮತ್ತು ನಾನು ಭೈರಪ್ಪನವರನ್ನು ನೋಡಿ, ಅವರಿಗೆ ತೊಂದರೆ ಕೊಡದೆ ನಮಸ್ಕಾರವಷ್ಟೇ ಮಾಡಿ ಬರೋಣ ಎನಿಸಿ ಹೋಗಿದ್ದವು.

ಭೈರಪ್ಪನವರನ್ನು ಗೊತ್ತಿರುವವರಿಗೆ ಗೊತ್ತಿದೆ; ಅವರು ಎಲ್ಲರಂಥವರಲ್ಲ.

ನಾವು ತಲುಪಿದ ತಕ್ಷಣ ಮಲಗಿದ್ದಲ್ಲಿಂದ ಎದ್ದು ಕೂತ ಭೈರಪ್ಪನವರ ಜೊತೆ ಒಂದೂವರೆ ಗಂಟೆಗಿಂತಲೂ ಹೆಚ್ಚು ಹೊತ್ತು ಮಾತುಕತೆ ನಡೆಯಿತು. ಅವರು ಮಾತಾಡಿದ್ದು ಅವರ ಆರೋಗ್ಯ ಸಮಸ್ಯೆಯ ಬಗೆಗೆ ಏನೂ ಅಲ್ಲ. ಅಂಥ ಸಮಸ್ಯೆಯೇನೂ ಇಲ್ಲ. ಸ್ವಲ್ಪ ಮಸಾಜು, ಫಿಸಿಯೋಥೆರಪಿ ಎಲ್ಲ ಮಾಡುತ್ತಾರೆ. ಎಂಬುದಷ್ಟೆ ಅವರ ಆರೋಗ್ಯ ಅಥವಾ ಅನಾರೋಗ್ಯ ಮತ್ತು ಚಿಕಿತ್ಸೆಯ ಕುರಿತು ಅವರು ಹೇಳಿದ ಮಾತು. ಬದಲಾಗಿ ಅವರು ಮಾತಾಡಿದ್ದು ಸಾಹಿತ್ಯ, ಸಂಸ್ಕೃತಿ-ಸಮಾಜದ ಕುರಿತೇ!

ನಮ್ಮ ಬಹಳಷ್ಟು ಸಾಹಿತಿಗಳು ಭಾವಿಸುವಂತೆ, ಸಾಹಿತಿ ಮಾತ್ರ ಸಮಾಜದಲ್ಲಿ ಭಯಂಕರ ಮಹತ್ವವಿರುವ ವ್ಯಕ್ತಿ ಎಂದು ಅವರು ಭಾವಿಸುವವರಲ್ಲ. ಸಮಾಜಸೇವಕರು, ವಿಜ್ಞಾನಿಗಳು, ವೈದ್ಯರು, ಸಂಪತ್ತಿನ ಸೃಷ್ಟಿಗೆ ಕಾರಣರಾಗುವ ಉದ್ಯಮಿಗಳು- ಹೀಗೆ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಮಂದಿಯೂ ಅವರ ದೃಷ್ಟಿಯಲ್ಲಿ ಮುಖ್ಯರೇ. ಅವರ ಪ್ರಕಾರ ಜ್ಞಾನ ಮತ್ತು ಸತ್ಯದ ಅನ್ವೇಷಣೆಯೇ ಸಾಮಾಜಿಕ ಪ್ರಗತಿಯಾಗಲು ಇರುವ ಮಾರ್ಗ; ಹೀಗಾಗಿ ಪುಸ್ತಕಗಳು ಎಂದುಗೂ ಪ್ರಸ್ತುತ ಎಂದರು. ಜ್ಞಾನ ಮತ್ತು ಸತ್ಯದ ಅನ್ವೇಷಣೆಯೆಂದಾಗ ಅದು ಕೇವಲ ವಿಜ್ಞಾನ ಮತ್ತಿತರ ಕ್ಷೇತ್ರಗಳದು ಮಾತ್ರವಲ್ಲ; ಬದಲಾಗಿ ಸಮಾಜ-ಸಂಸ್ಕೃತಿಯ ಬಗೆಗೂ ಹೌದು. ಆದ್ದರಿಂದ ಭಾರತೀಯತೆಯ ವಿರುದ್ಧವಿರುವ ಮತ್ತು ಭಾರತೀಯರ ಒಗ್ಗಟ್ಟನ್ನು ಒಡೆಯಲು ಯತ್ನಿಸುವ ದೇಶೀ- ವಿದೇಶೀ ಶಕ್ತಿಗಳ ಹುನ್ನಾರಗಳ ಬಗ್ಗೆಯೂ ಅವರು ಮಾತನಾಡಿದರು.

ಆಸ್ಪತ್ರೆಯಲ್ಲಿದ್ದಾಗಲೂ ಅವರ ಮನೋದಾರ್ಢ್ಯ, ಜೀವನಪ್ರೀತಿ ಮತ್ತು ಸಮಾಜನಿಷ್ಠೆ ಹಿಂದಿನಂತೆಯೇ ಅನ್ಯಾದೃಶವಾಗಿತ್ತು. ವಯಸ್ಸಾದವರು, ದೇಹವು ದುರ್ಬಲವಾದವರು (ಕೆಲವೊಮ್ಮೆ ತೋರಿಕೆಗಾದರೂ) ಸಾಮಾನ್ಯವಾಗಿ ಹೇಳುವ, 'ಈ ಜೀವನ ಸಾಕಪ್ಪಾ' ಎಂಬಂತಹ ವೈರಾಗ್ಯದ ಒಂದು ಪದವೂ ಅವರ ಬಾಯಲ್ಲಿ ಬರಲಿಲ್ಲ.

ಭೈರಪ್ಪನವರ ಒಂದು ಮಾತು ಮಾತ್ರ ಬಹಳ ಕಾಡಿತು. ಬಾಲ್ಯದಲ್ಲಿ ನಾನು ಪಟ್ಟ ಕಷ್ಟವನ್ನು ಭಿತ್ತಿಯಲ್ಲಿ ಬರೆದಿದ್ದೇನೆ. ಆ ಕಾಲದಲ್ಲಿ ನನಗೆ ಸಹಾಯ ಮಾಡಿದ್ದು ಸಮಾಜ. ಅಂತಹ ಸಮಾಜದ ಋಣ ನನ್ನ ಮೇಲೆ ಇದೆಯಲ್ಲ; ಅದನ್ನು ನಾನು ತೀರಿಸಬೇಡವೆ?

ಬಾಲ್ಯದಲ್ಲಿ ಬಹಳ ಕಷ್ಟಗಳನ್ನು ಅನುಭವಿಸಿ ಶಿಕ್ಷಣ ಪಡೆದು ಬೆಳೆದ ಅವರಲ್ಲಿ ಈ ಮಟ್ಟಿನ ಋಣಪ್ರಜ್ಞೆ ಇರುವಾಗ, ಬಾಲ್ಯದಲ್ಲಿ ಅಂತಹ ಕಷ್ಟವೇನೂ ಇಲ್ಲದೆ ಸಲೀಸಾಗಿ ಶಿಕ್ಷಣ ಪಡೆಯುವ ಅವಕಾಶವನ್ನು, ಒಂದಲ್ಲ ಒಂದು ರೀತಿಯಲ್ಲಿ ಸಮಾಜದಿಂದಲೇ ಪಡೆದ ನಮ್ಮಂಥವರ ಮೇಲೆ ಅದೆಷ್ಟೊಂದು ಋಣಭಾರವಿದೆ? ಈ ಯೋಚನೆ ಮನಸ್ಸಿಗೆ ಬಂದು ನಮ್ಮೆದುರು ಕೂತಿರುವ ಈ ವ್ಯಕ್ತಿತ್ವ ಎಷ್ಟು ದೊಡ್ಡದು ಎಂದು ಮತ್ತೊಮ್ಮೆ ಮನವರಿಕೆಯಾಯಿತು.

ಬಡಮಕ್ಕಳು ಶಿಕ್ಷಣ ಪಡೆಯಲು ಆರ್ಥಿಕ ಸಂಕಷ್ಟ ಅಡ್ಡಿಯಾಗಬಾರದು ಎನ್ನುವ ಕಾಳಜಿ ಅವರ ಮಾತಿನಲ್ಲಿ ಪುನಃ ಪುನಃ ವ್ಯಕ್ತವಾಯಿತು. ತಮ್ಮ ಬಾಲ್ಯ, ಶಿಕ್ಷಣದ ಅನುಭವಗಳನ್ನು, ಬಡವಿದ್ಯಾರ್ಥಿಗಳ ಕುರಿತ ಕಾಳಜಿಯ ಮಾತುಗಳನ್ನು ಅವರು ಹಿಂದೆಯೂ ಕೆಲವು ಕಡೆ ಹೇಳಿದ್ದನ್ನು ಕೇಳಿದ್ದೇನೆ. ಅಷ್ಟೇ ಅಲ್ಲದೆ, ಅವರು ಹೇಳಿಕೊಳ್ಳದೆ ಇದ್ದರೂ ಮತ್ತು ಅದಕ್ಕಿಂತ ಮುಖ್ಯವಾಗಿ ಬೇರೆಯವರ ಮೂಲಕ ಹೇಳಿಸದೆ ಇದ್ದರೂ, ಅವರೊಬ್ಬ ದೊಡ್ಡ ಫಿಲಾಂತ್ರೊಪಿಸ್ಟ್ ಎಂಬುದು ಕೂಡ ನನ್ನ ನೇರ ಅನುಭವಕ್ಕೂ ಬಂದಿರುವಂಥದ್ದೇ. ಅದೇನೂ ನನಗೆ ಹೊಸ ವಿಚಾರವಲ್ಲ.



ಆದರೆ, 94ರ ಹರೆಯದ ಈ ವ್ಯಕ್ತಿ ಆಸ್ಪತ್ರೆಯಲ್ಲಿರುವಾಗಲೂ ಯೋಚಿಸುವ ಈ ಬಗೆ ಅಸಾಮಾನ್ಯವಾದುದು. ಕೆಲವು ಸಮಯದ ಹಿಂದೆ ತಮ್ಮ ಹೆಸರಿನ ಟ್ರಸ್ಟ್ ಉದ್ಘಾಟನೆಯ ಸಂದರ್ಭವನ್ನೂ ಅವರು ನೆನಪಿಸಿಕೊಂಡರು. ಅಲ್ಲಿ ಸಭಾಂಗಣ ತುಂಬಿ ತುಳುಕಿದ ಕುರಿತು ಅವರಿಗಾದ ಸಂತಸ ಅವರ ಮಾತಿನಲ್ಲಿ ಗೊತ್ತಾಗುತ್ತಿತ್ತು.

★★★★

ನನಗೆ ಕಾದಂಬರಿಗಳ ಮೂಲಕ ಭೈರಪ್ಪನವರ ಪರಿಚಯ ಮೊದಲೇ ಇದ್ದಿತಾದರೂ ಅವರಿಗೆ ನನ್ನ ಪರಿಚಯವಾಗಲು ನಾನು ಅವರ ಆವರಣ ಕೃತಿಯ ಹಿನ್ನೆಲೆಯಲ್ಲಿ ಬರೆದ 'ಬುದ್ಧಿಜೀವಿ ವರ್ಸಸ್ ಬೌದ್ಧಿಕ ಸ್ವಾತಂತ್ರ್ಯ' ಕೃತಿ ಕಾರಣವಾಯಿತು. ಆ ಪುಸ್ತಕವನ್ನು ಓದಿದ ಅವರು ಬಹಳ ಮೆಚ್ಚಿಕೊಂಡು ದೂರವಾಣಿ ಕರೆ ಮಾಡಿ ಮಾತನಾಡಿದರು. ಹಲವರಿಗೆ ಆ ಕೃತಿಯ ಬಗೆಗೆ ಹೇಳಿಯೂ ಇದ್ದರು. ಬೇರೆ ಬೇರೆ ಕಾರ್ಯಕ್ರಮಗಳಿಗೆ ಮಂಗಳೂರಿಗೆ ಕಾರಿನಲ್ಲಿ ಹೋಗುವಾಗ ಎರಡು ಮೂರು ಬಾರಿ ಮನೆಗೂ ಬಂದಿದ್ದರು.

ಹೆಚ್ಚಿನ ಸಾಹಿತಿಗಳು ಎದುರು ಯಾರಾದರೂ ಸಿಕ್ಕಾಗ, ಅದರಲ್ಲೂ ಕಿರಿಯರು ಸಿಕ್ಕಾಗ ತಮ್ಮ ಅನುಭವವನ್ನು ಹೇಳುವ ಉತ್ಸಾಹವಿರುತ್ತದೆ. ಕೆಲವರಲ್ಲಿ ಅದು ಚಟವೇ ಆಗಿರುವುದೂ ಉಂಟು. ಆದರೆ ಭೈರಪ್ಪನವರು ಅದ್ಭುತ ಕೇಳುಗರು. ಬಹುಶಃ ಸುಮಾರು ಹದಿನೇಳು ವರ್ಷಗಳಿಗೂ ಹಿಂದೆ ಅವರು ಮನೆಗೆ ಬಂದಿದ್ದಾಗ, ನನ್ನ ಪತ್ನಿ ಕೊಡಗಿನಿಂದ ಬಂದವಳು ಎಂದು ಗೊತ್ತಾದಾಗ ಸುಮಾರು ಹೊತ್ತು ಕೊಡಗಿನ ವಿವಿಧ ವಿಚಾರಗಳ ಬಗ್ಗೆ ಕಿವಿಗೊಟ್ಟು ಕೇಳಿದ್ದರು. ಕಿರಿಯರಿಂದಲೂ ಕಿವಿಗೊಟ್ಟು ಕೇಳಿ ತಿಳಿದುಕೊಳ್ಳುವ ಅವರ ಮನೋಭಾವ ವಿಶೇಷವಾದುದು.

ಭೈರಪ್ಪನವರ ಜೊತೆಗಿನ ನನ್ನ ಸಂಬಂಧವು ಕೇವಲ ಸಾಹಿತಿ- ಓದುಗನ ನಡುವಿನ ಸಂಬಂಧ ಆಗಿರಲಿಲ್ಲ. ಅವರ ವಿಶ್ವಾಸಕ್ಕೆ ಪಾತ್ರರಾದವರ ಬಗೆಗೆ ಅವರು ವಹಿಸುವ ಕಾಳಜಿಯನ್ನು ಬಲ್ಲವರೇ ಬಲ್ಲರು. ಎಷ್ಟೋ ಸಲ, ಅವರ ಜೊತೆ ವಿಚಾರಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ನನಗೆ ಸಿಕ್ಕಿದೆ. ಹಾಗೆ ಹೋದಾಗ ಕೆಲವು ಕಡೆ ಅವರ ಅಭಿಮಾನಿಗಳು ಯಾರಾದರೂ ತಮ್ಮ ಮನೆಯಲ್ಲಿ ಅವರಿಗೂ ಜೊತೆಗಿದ್ದ ನಮಗೂ ಭರ್ಜರಿಯಾದ ಊಟ ಹಾಕುತ್ತಿದ್ದುದುಂಟು. ಅವಾಗೆಲ್ಲ, ಆರೋಗ್ಯದ ದೃಷ್ಟಿಯಿಂದ ಯಾವುದು ತಿನ್ನಬೇಕು; ಯಾವುದನ್ನು ಹೆಚ್ಚು ತಿನ್ನಬಾರದು ಎಂದು ಹೇಳುತ್ತಿದ್ದರು.

ಮತ್ತೊಮ್ಮೆ ಶಿವಮೊಗ್ಗದಲ್ಲಿ ಅವರ ಕೃತಿಗಳ ಸಂಬಂಧವಾಗಿ ಆಯೋಜನೆಯಾಗಿದ್ದ ಒಂದು ಕಾರ್ಯಕ್ರಮದಲ್ಲಿ ಅವರೂ ನಾನೂ ಇದ್ದೆವು. ಒಂದೇ ಹೋಟೆಲಿನಲ್ಲಿ ನಮಗೆ ಕೋಣೆಯ ವ್ಯವಸ್ಥೆಯಾಗಿತ್ತು. ಕಾರ್ಯಕ್ರಮ ಮುಗಿದು ಹೋಟೆಲು ಕೋಣೆಗೆ ಬಂದು ರಾತ್ರಿ ಬಸ್ಸಿಗೆ ಹೊರಡಲು ತಯಾರಾಗುತ್ತಿದ್ದೆ. ಭೈರಪ್ಪನವರು ನನ್ನನ್ನು ಅವರ ಕೋಣೆಗೆ ಕರೆಸಿದರು. ಆಯೋಜಕರ ಕಡೆಯಿಂದ ಶಿವಮೊಗ್ಗದ ವಿನಯ್ ಅವರೂ ಕೋಣೆಯಲ್ಲಿದ್ದರು. ಅವರ ಕೈಯಲ್ಲಿ ಒಂದು ಲಕೋಟೆಯಿತ್ತು.

''ಎಷ್ಟಿದೆ ಅದರಲ್ಲಿ?'' ಭೈರಪ್ಪನವರು ಕೇಳುತ್ತಿದ್ದರು. ''ಹತ್ತು ಸಾವಿರ'' ಎಂದು ವಿನಯ್ ಅವರು ಹೇಳಿದಂತಾಯಿತು.

''ನನಗೆ ಬೇಡ, ಅದನ್ನು ಇವರಿಗೆ ಕೊಡಿ, ಚಿಂತನ ಬಯಲು ಪತ್ರಿಕೆಗೆ ಸಹಾಯ ಆಗುತ್ತದೆ'' ಅಂತ ಭೈರಪ್ಪನವರೆಂದರು. ವಿನಯ್ ಅವರು ನನಗೆ ಲಕೋಟೆಯನ್ನು ಕೊಡಲು ಬಂದಾಗ ನಾನು ದಾಕ್ಷಿಣ್ಯ ಮಾಡಿದೆ, ಭೈರಪ್ಪನವರು ಬಿಡಲಿಲ್ಲ. ನಾನು ಸ್ವೀಕರಿಸಿದೆ. ವರ್ಷಗಳ ಹಿಂದೆಯೇ ಪತ್ರಿಕೆಯ ಆರಂಭದ ಸಂಚಿಕೆಯನ್ನು ನೋಡಿ, ಇದ್ದುದರಲ್ಲಿ ಗರಿಷ್ಠವೆನಿಸಿದ ರೂಪಾಯಿ ಹತ್ತು ಸಾವಿರದ ಮಹಾಪೋಷಕ ಆಜೀವ ಚಂದಾವನ್ನು ಚೆಕ್ ಮೂಲಕ ಕಳುಹಿಸಿದ್ದರೆಂಬುದೂ ಪ್ರತ್ಯೇಕವಾಗಿ ಹೇಳಬೇಕಾದ ಸಂಗತಿ. ನಾನು ಭಾವುಕನಾಗುವುದು ಕಡಮೆ, ಆದರೆ ಅದನ್ನು ನೆನೆದಾಗ ಇಂದೂ ಭಾವುಕನಾಗುತ್ತೇನೆ.

ಸಾಹಿತ್ಯ ಸಮ್ಮೇಳನದಲ್ಲಿ ಕೊಟ್ಟ ಮೊತ್ತವನ್ನು ಅವರು ಸರಕಾರಕ್ಕೆ ಹಿಂತಿರುಗಿಸಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಯಾವ ಪ್ರಚಾರವೂ ಇಲ್ಲದೆ, ಭೈರಪ್ಪನವರು ಹೀಗೆ ಬೇರೆ ಬೇರೆ ಕಡೆಗಳಲ್ಲಿ ಅರ್ಥವಿಮುಖರಾಗಿ ಕೊಡುಗೈ ದಾನಿಯಾಗಿ ನಡೆದುಕೊಂಡುದು ಇದೆ. ಯಾವುದರ ಬಗೆಗೆ ಡಿಟ್ಯಾಚ್‌ಮೆಂಟ್ ಇರಬೇಕು, ಯಾವುದರ ಬಗೆಗೆ ಅಟ್ಯಾಚ್‌ಮೆಂಟ್ ಇರಬೇಕು ಎನ್ನುವ ಸ್ಪಷ್ಟತೆ ಅವರಿಗಿತ್ತು.

★★★★

ಒಂದು ಅಪಕಲ್ಪನೆ ಬಹಳ ಜನರಲ್ಲಿದೆ; ಎಡಪಂಥೀಯರಲ್ಲದವರು ಬುದ್ಧಿಜೀವಿಗಳು ಎನಿಸಿಕೊಳ್ಳಲು ಸಾಧ್ಯವಿಲ್ಲ ಎಂದು. ಈ ಕಲ್ಪನೆಯನ್ನೂ ಎಡಪಂಥೀಯರೇ ಬಿತ್ತಿ ಬೆಳೆಸಿದ್ದು ಎನ್ನೋಣ. ಬಡವರ ಉದ್ಧಾರದ ಬಗೆಗೆ ಉದ್ದುದ್ದ ಭಾಷಣ ಮಾಡುವ ಸಾಹಿತಿಗಳು ಕನ್ನಡದಲ್ಲಿ, ಭಾರತದಲ್ಲಿ ಬೇಕಾದಷ್ಟು ಮಂದಿಯಿದ್ದಾರೆ. ಆದರೆ, ಭೈರಪ್ಪನವರಿಗಿಂತ ದೊಡ್ಡ ಬುದ್ಧಿಜೀವಿಗಳು, ಸಾಕ್ಷಿಪ್ರಜ್ಞೆಗಳು ಯಾರಿದ್ದಾರೆ? ಅಷ್ಟೇ ಅಲ್ಲ; ಅವರಂತೆ ಕಾಯೇನ ವಾಚಾ ಮನಸಾ ಸಮಾಜದ ಋಣವನ್ನು ನಿಜ ಅರ್ಥದಲ್ಲಿ ತೀರಿಸಿದವರು ಎಷ್ಟು ಬುದ್ಧಿಜೀವಿಗಳಿದ್ದಾರೆ? ಎಷ್ಟು ಸಾಹಿತಿಗಳಿದ್ದಾರೆ? ಒಬ್ಬರೂ ಇಲ್ಲವೆಂದರೂ ಉತ್ಪ್ರೇಕ್ಷೆಯಲ್ಲ.

ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಅವರಿಗೆ ಅಪಾರವಾದ ಶ್ರದ್ಧೆ ಇತ್ತು. ಅಲ್ಲದೆ, ಜನರ ಧಾರ್ಮಿಕ ಶ್ರದ್ಧೆಯ ಬಗೆಗೆ ಅವರಿಗೆ ತುಂಬ ಗೌರವ ಕೂಡ ಇತ್ತು. ಅವರ ಹುಟ್ಟೂರಿನ ಒಂದು ದೇವಾಲಯ ಸಂಪೂರ್ಣವಾಗಿ ಪುನರ್ ನಿರ್ಮಾಣ ಈಗ ಆಗುತ್ತಿದೆಯಂತೆ. ಆ ಸುದ್ದಿಯನ್ನು ಹೇಳುವಾಗ ಅವರ ಮುಖದಲ್ಲಿ ಎದ್ದು ಕಾಣುತ್ತಿದ್ದ ಸಂಭ್ರಮವೇ ಜನರ ನಂಬಿಕೆಗಳ ಬಗೆಗೆ ಅವರಿಗಿರುವ ಆದರವನ್ನು ತೋರಿಸುತ್ತಿತ್ತು.

ಭೈರಪ್ಪನವರು ಸ್ವತಃ ನಿತ್ಯಪೂಜೆ ಇತ್ಯಾದಿ ಮಾಡುತ್ತಿರಲಿಲ್ಲ. ಹೀಗಾಗಿಯೇ ಒಂದು ರೀತಿಯಲ್ಲಿ ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ ಕೂಡಲ ಸಂಗಮದೇವನ ಎಂದು ಬಸವಣ್ಣನವರು ಹೇಳಿದಂತೆ ಅವರ ಬದುಕು ಮತ್ತು ದೃಷ್ಟಿ-ಧೋರಣೆ ಇತ್ತೆನಿಸುತ್ತದೆ. ವೇದೋಪನಿಷತ್ತುಗಳ ಅದ್ವೈತವನ್ನು ಅಕ್ಷರಶಃ ಡಾ. ಭೈರಪ್ಪನವರಂತೆ ಪಾಲಿಸಿದವರು ಅತಿ ವಿರಳ. ಎಷ್ಟೇ ವಯಸ್ಸಾದರೂ ಮತ್ತಷ್ಟು ಗಳಿಸಬೇಕೆಂಬ, ಆಸೆಯೆಂಬ ಹೆಣ್ಣು ನಮ್ಮನ್ನು ಬಿಟ್ಟುಹೋಗುವುದಿಲ್ಲ ಎನ್ನುವ ಮಾತಿದೆ; ಸಾಕು ಎನ್ನುವ ಭಾವ ಮನುಷ್ಯರಲ್ಲಿ ಬರುವುದು ಬಹಳ ಕಷ್ಟ. ಇದಕ್ಕೆ ಸಾಹಿತಿಗಳೂ ಹೊರತಲ್ಲ. ಆದರೆ ಇಲ್ಲೂ ಭೈರಪ್ಪನವರು ಏಕಾಂಗಿಯಾಗಿ ಕನ್ನಡದ ಸಾಹಿತಿಗಳಿಗಿಂತ ಬೇರೆಯಾಗಿ ನಿಲ್ಲುತ್ತಾರೆ. ತಮ್ಮ ಸುದೀರ್ಘ ಕಾಲದ ಬರವಣಿಗೆಯಲ್ಲಿ ಪಡೆದ ಅರ್ಥವನ್ನೆಲ್ಲ ಧರ್ಮವನ್ನು ಪಾಲಿಸಲಿಕ್ಕಾಗಿ ಉಪಯೋಗಿಸಬೇಕು ಎನ್ನುವುದು ಅವರ ತತ್ತ್ವವಷ್ಟೇ ಆಗಿರಲಿಲ್ಲ. ಅವರ ಅನುಷ್ಠಾನವೂ ಅದೇ ಆಗಿತ್ತು. ತನ್ನ ಬದುಕು ಪರಿಪೂರ್ಣವಾಯಿತು ಎನ್ನುವ ಭಾವನೆ ಯಾವಾಗ ಬರುತ್ತದೆ; ಪುರುಷಾರ್ಥ ಸಾಧನೆ ಎಂದರೇನು ಎಂಬುದರ ಬಗೆಗೆ ಭೈರಪ್ಪನವರಿಗೆ ಸ್ಪಷ್ಟ ಕಲ್ಪನೆ ಇತ್ತು.

ಕಾದಂಬರಿಕಾರರಾಗಿ ಭೈರಪ್ಪನವರು ಅದ್ವಿತೀಯರು ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಅವರು ಕೇವಲ ಲೇಖಕರಾಗಿ ಮಾತ್ರ ನಮಗೆ ಮಾದರಿ ಅಲ್ಲ. ಒಬ್ಬ ಸಾಹಿತ್ಯ ಮೀಮಾಂಸಕರಾಗಿ, ಸಂಸ್ಕೃತಿ ಚಿಂತಕರಾಗಿ, ತತ್ತ್ವಜ್ಞಾನಿಯಾಗಿ, ಕಷ್ಟದಲ್ಲಿರುವವರಿಗೆ ಅಥವಾ ಸಮಾಜಹಿತದ ಒಳ್ಳೆಯ ಉದ್ದೇಶಗಳಿಗೆ ನೈತಿಕ ಮತ್ತು ಆರ್ಥಿಕ ಬೆಂಬಲ ಕೊಡುವವರಾಗಿ, ಪ್ರಸಿದ್ಧರಾಗುವುದಕ್ಕೆ ಮೊದಲೂ ಸಾಹಿತ್ಯದ ಪ್ರಭಾವಿ ಪ್ರವಾಹದ ವಿರುದ್ಧ ಈಜುವ ಧೈರ್ಯ ತೋರಿಸಿದವರಾಗಿ- ಹೀಗೆ ಎಲ್ಲವೂ ಆಗಿರುವ ಮತ್ತೊಬ್ಬ ಲೇಖಕನನ್ನು ನನ್ನ ಸೀಮಿತ ಅರಿವಿನಲ್ಲಿ ನಾನು ಕಂಡದ್ದಿಲ್ಲ; ಕೇಳಿದ್ದಿಲ್ಲ.

ಕೊನೆಯದಾಗಿ: ಭೈರಪ್ಪನವರ ಕಾದಂಬರಿಗಳಿಗಾಗಿ, ಸಂಸ್ಕೃತಿ ಮತ್ತು ಸಮಾಜನಿಷ್ಠೆಗಾಗಿ ನಾವು ಅವರಿಗೆ ಚಿರಋಣಿಗಳೇ ಹೌದು. ಅವರಂತೆ ಎಲ್ಲರೂ ದೊಡ್ಡ ಸಾಹಿತಿಗಳಾಗಲಾರೆವು ನಿಜ; ಆದರೆ ತನಗೆ ಕಂಡ ಸತ್ಯವನ್ನು ಪ್ರಾಮಾಣಿಕವಾಗಿ ಮತ್ತು ಧೈರ್ಯವಾಗಿ ಹೇಳುತ್ತಿದ್ದ ಅವರ ಧೀಶಕ್ತಿಯ ಒಂದಂಶ ನಮಗೂ ಸಿದ್ಧಿಸಲಿ ಎಂದಷ್ಟೇ ನಾವು ಪ್ರಾರ್ಥಿಸಬಹುದು.

ಈಗಲೂ ನನಗೆ ಭೈರಪ್ಪನವರ ಕೃತಿಯೊಂದನ್ನು ಚಿತ್ರವಾಗಿಸುವ ಬಯಕೆ

ತೊಂಬತ್ತರ ದಶಕದಲ್ಲಿ ನಾನು ಚಿತ್ರರಂಗಕ್ಕೆ ಬಂದು, ತರಬೇತಿ ಪಡೆದು, ಸ್ವತಂತ್ರ ನಿರ್ದೇಶಕನಾಗಬೇಕೆಂದು ನಿರ್ಧರಿಸಿದಾಗ ನನ್ನ ಕಣ್ಣಮುಂದೆ ಮೊದಲು ಬಂದದ್ದು 'ನಾಯಿ-ನೆರಳು. ಇದು ಮೂಢನಂಬಿಕೆ, ವೈಚಾರಿಕತೆ ಎರಡನ್ನೂ ಹದವಾಗಿ ಬೆರೆಸಿ ರಚಿತವಾಗಿದ್ದ ಕುತೂಹಲಕಾರಿ ಕಥೆಯಾಗಿತ್ತು. ಇದನ್ನು ಚಲನಚಿತ್ರವಾಗಿಸಬೇಕು ಎಂದುಕೊಂಡು ಕನ್ನಡದ ಖ್ಯಾತ ನಾಯಕನಟರೊಬ್ಬರಿಗೆ ಈ ಕಥೆ ಹೇಳಿದ್ದೆ. ಅವರಿಗೂ ಇದು ಇಷ್ಟವಾಗಿತ್ತು. ನಾನು ಈ ಚಿತ್ರವನ್ನು ಮುಖ್ಯಧಾರೆಯ ಸಿನಿಮಾ ಮಾದರಿಯಲ್ಲಿ ಮಾಡಬೇಕೆಂದು ಯೋಚಿಸಿದ್ದೆ. ಕಥೆಯಲ್ಲಿ ಬರುವ ಮೂರೂ ಮುಖ್ಯ ಪಾತ್ರಗಳನ್ನು ಒಬ್ಬನೇ ನಟ ನಿರ್ವಹಿಸುವುದು ಎಂದೂ ತೀರ್ಮಾನವಾಗಿತ್ತು. ಆದರೆ ಆಗ ನನಗೆ ಭೈರಪ್ಪನವರ ಪರಿಚಯ ಇರಲಿಲ್ಲ.

ಪಿ. ಶೇಷಾದ್ರಿ, ಖ್ಯಾತ ಸಿನಿಮಾ ನಿರ್ದೇಶಕರು

ಭೈರಪ್ಪನವರಿಗೂ ಮತ್ತು ದೃಶ್ಯಮಾಧ್ಯಮಕ್ಕೂ ವಿಶಿಷ್ಟವಾದ ನಂಟು. ಇಲ್ಲಿಯವರೆಗೆ ಅವರ ನಾಲ್ಕು ಕಾದಂಬರಿಗಳು ಚಲನಚಿತ್ರಗಳಾಗಿ ರೂಪಾಂತರಗೊಂಡಿವೆ. ಅವು ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಮತದಾನ, ಮತ್ತು ನಾಯಿನೆರಳು. ದಾಟು ಮತ್ತು ಗೃಹಭಂಗ ಟೆಲಿವಿಷನ್ ಧಾರಾವಾಹಿಗಳಾಗಿವೆ. ಸಿನಿಮಾ ಆಗಲೀ ಸೀರಿಯಲ್ ಆಗಲಿ ಅದಕ್ಕೆ ಒಂದು ಗಟ್ಟಿಯಾದ ಕಥೆ ಇರಬೇಕು. ಭೈರಪ್ಪನವರ ಕಥನ ಶಕ್ತಿ ಇದೆಯಲ್ಲ ಅದು ಈ ಮಾಧ್ಯಮಕ್ಕೆ ಸೊಗಸಾಗಿ ಹೊಂದುತ್ತದೆ. ಹಾಗಾಗಿಯೇ ಅವರ ಎಲ್ಲ ಕಾದಂಬರಿಗಳಲ್ಲೂ ದೃಶ್ಯಮಾಧ್ಯಮದ ಅಳವಡಿಕೆಯ ಸಾಧ್ಯತೆಗಳು ದಟ್ಟವಾಗಿ ಕಾಣಿಸುತ್ತವೆ. ಹಾಗಿದ್ದಮೇಲೆ ಯಾಕೆ ಕೆಲವೇ ಕೆಲವು ಕೃತಿಗಳು ಮಾತ್ರ ಅಳವಡಿಸಲ್ಪಟ್ಟಿವೆ ಎಂಬ ಪ್ರಶ್ನೆ ಉದ್ಭವಿಸಬಹುದು. ನಿಜವಾದ ಕಾರಣ ಏನೆಂದರೆ, ಕಾದಂಬರಿಗಳಲ್ಲಿ ಆ ಸಾಧ್ಯತೆಗಳಿದ್ದರೂ ಚಿತ್ರ ನಿರ್ದೇಶಕರಲ್ಲಿ ಆ ಸಾಧ್ಯತೆಗಳಿವೆಯೇ ಎಂದು ಭೈರಪ್ಪನವರು ಸೂಕ್ಷ್ಮವಾಗಿ ಗಮನಿಸುತ್ತಾರೆ. ಕೇಳಿದವರಿಗೆಲ್ಲಾ ತಮ್ಮ ಕೃತಿಯ ಹಕ್ಕುಗಳನ್ನು ಅವರು ಕೊಡುವುದಿಲ್ಲ. ಎಪ್ಪತ್ತರ ದಶಕದಲ್ಲಿ ಡಾ.ರಾಜ್‌ಕುಮಾರ್ ಅವರಿಗೆ ಭೈರಪ್ಪನವರ 'ನಿರಾಕರಣ ಮಾಡುವ ಬಗ್ಗೆ ಒಲವಿತ್ತು. ಭೈರಪ್ಪನವರೊಂದಿಗೆ ಮಾತು ಕೂಡ ಆಡಿದ್ದರು. ಲೇಖಕರು ಎಷ್ಟು ಹಣ ಕೇಳಿದರೂ ಕೊಡುವ ಇಚ್ಛೆ ವ್ಯಕ್ತಪಡಿಸಿದ್ದರು. ಆದರೆ ಭೈರಪ್ಪನವರೇ ಏಕೋ ಮನಸ್ಸು ಮಾಡಲಿಲ್ಲ.

ಆದರೆ 'ವಂಶವೃಕ್ಷ ಚಲನಚಿತ್ರವಾಯಿತು. ಅದು ಆದದ್ದು ಹೀಗೆ. 'ವಂಶವೃಕ್ಷದ ಜನಪ್ರಿಯತೆಯನ್ನು ಕಂಡ ಖ್ಯಾತ ನಿರ್ದೇಶಕರುಗಳಾದ ಪುಟ್ಟಣ್ಣಕಣಗಾಲ್ ಮತ್ತು ಸಿದ್ಧಲಿಂಗಯ್ಯ ಇದನ್ನು ತೆರೆಗೆ ತರಲು ಹವಣಿಸಿದ್ದರು. ಆದರೆ ಭೈರಪ್ಪನವರು ಅವರಿಗೆ ಇದರ ಹಕ್ಕನ್ನು ಕೊಟ್ಟಿರಲಿಲ್ಲ. ಅಷ್ಟರಲ್ಲಿ ಜಿ.ವಿ.ಅಯ್ಯರ್ 'ಚೌಕದದೀಪ' ಚಿತ್ರಮಾಡಿ ಸೋಲುಂಡಿದ್ದರು. ಅವರಿಗೆ ಮತ್ತೆ ತಮ್ಮ ಶಕ್ತಿಯನ್ನು ತೋರಲು ಒಂದು ಒಳ್ಳೆಯ ವಸ್ತು ಬೇಕಾಗಿತ್ತು. ವಂಶವೃಕ್ಷ ಕಣ್ಣಿಗೆ ಬಿತ್ತು. ಅದನ್ನು ಆಧರಿಸಿ ಸಿನಿಮಾ ಮಾಡಲು ಇಚ್ಛಿಸಿ ದೆಹಲಿಯಲ್ಲಿದ್ದ ಭೈರಪ್ಪನವರ ಬಳಿ ಹೋಗಿ ಇದರ ಹಕ್ಕುಗಳನ್ನು ಕೊಡಿ ಎಂದು ಕೇಳಿದರಂತೆ. ಆಗ ಭೈರಪ್ಪನವರು ಬಿ.ವಿ.ಕಾರಂತರು ಇದನ್ನು ನಿರ್ದೇಶಿಸುವುದಾದರೆ ಮಾತ್ರ ಹಕ್ಕುಗಳನ್ನು ಕೊಡುತ್ತೇನೆ ಎಂದು ಕಂಡೀಷನ್ ಹಾಕಿದರಂತೆ. ರಂಗಭೂಮಿಯ ಹಿನ್ನೆಲೆಯಿಂದ ಬಂದ ಕಾರಂತರಿಗೆ ಸಿನಿಮಾ ಕ್ಷೇತ್ರದ ಪರಿಚಯ ಇರಲಿಲ್ಲ. ಇದೇ ಅನುಮಾನವನ್ನು ಅಯ್ಯರ್ ವ್ಯಕ್ತಪಡಿಸಿದಾಗ, ಭೈರಪ್ಪನವರು ಒಂದು ಮಾತು ಹೇಳಿದ್ದು ವಿಶೇಷವಾಗಿದೆ. 'ಉಳಿದವರ ಯಶಸ್ಸಿಗಿಂತ ಕಾರಂತರು ಮಾಡುವ ತಪ್ಪುಗಳೂ ಕಲಾತ್ಮಕವಾಗಿರುತ್ತವೆ!

ತೊಂಬತ್ತರ ದಶಕದಲ್ಲಿ ನಾನು ಚಿತ್ರರಂಗಕ್ಕೆ ಬಂದು, ತರಬೇತಿ ಪಡೆದು, ಸ್ವತಂತ್ರ ನಿರ್ದೇಶಕನಾಗಬೇಕೆಂದು ನಿರ್ಧರಿಸಿದಾಗ ನನ್ನ ಕಣ್ಣಮುಂದೆ ಮೊದಲು ಬಂದದ್ದು 'ನಾಯಿ-ನೆರಳು. ಇದು ಮೂಢನಂಬಿಕೆ, ವೈಚಾರಿಕತೆ ಎರಡನ್ನೂ ಹದವಾಗಿ ಬೆರೆಸಿ ರಚಿತವಾಗಿದ್ದ ಕುತೂಹಲಕಾರಿ ಕಥೆಯಾಗಿತ್ತು. ಇದನ್ನು ಚಲನಚಿತ್ರವಾಗಿಸಬೇಕು ಎಂದುಕೊಂಡು ಕನ್ನಡದ ಖ್ಯಾತ ನಾಯಕನಟರೊಬ್ಬರಿಗೆ ಈ ಕಥೆ ಹೇಳಿದ್ದೆ. ಅವರಿಗೂ ಇದು ಇಷ್ಟವಾಗಿತ್ತು. ನಾನು ಈ ಚಿತ್ರವನ್ನು ಮುಖ್ಯಧಾರೆಯ ಸಿನಿಮಾ ಮಾದರಿಯಲ್ಲಿ ಮಾಡಬೇಕೆಂದು ಯೋಚಿಸಿದ್ದೆ. ಕಥೆಯಲ್ಲಿ ಬರುವ ಮೂರೂ ಮುಖ್ಯ ಪಾತ್ರಗಳನ್ನು ಒಬ್ಬನೇ ನಟ ನಿರ್ವಹಿಸುವುದು ಎಂದೂ ತೀರ್ಮಾನವಾಗಿತ್ತು. ಆದರೆ ಆಗ ನನಗೆ ಭೈರಪ್ಪನವರ ಪರಿಚಯ ಇರಲಿಲ್ಲ. ಅವರಿಂದ ಈ ಕಾದಂಬರಿಯ ಹಕ್ಕುಗಳನ್ನು ಹೇಗೆ ಪಡೆಯುವುದು ಎಂಬ ಯೋಚನೆಯಲ್ಲಿದ್ದೆ. ಇದಕ್ಕೆ ಹಣ ಹೂಡುವ ನಿರ್ಮಾಪಕನೊಬ್ಬ ಸಿಗಲಿ, ಅವನನ್ನೂ ಕರೆದುಕೊಂಡು ಭೈರಪ್ಪನವರನ್ನು ಭೇಟಿ ಮಾಡೋಣ ಎಂದು ಸುಮ್ಮನಿದ್ದೆ.



ಅಷ್ಟರಲ್ಲಿ ಗಿರೀಶ್ ಕಾಸರವಳ್ಳಿಯವರು ಇದೇ ಕಥೆಯನ್ನು ಆಧರಿಸಿ ಚಿತ್ರ ಮಾಡುತ್ತಿದ್ದಾರೆ ಎಂಬ ಸುದ್ದಿ ಬಂತು. ನಾನು ನನ್ನ ಪ್ರಯತ್ನವನ್ನು ಕೈಬಿಟ್ಟೆ. ನಾನು ಯೋಚಿಸಿದ್ದ ಈ ಕಥೆಯನ್ನು ಕಾಸರವಳ್ಳಿ ಹೇಗೆ ದೃಶ್ಯಮಾಧ್ಯಮಕ್ಕೆ ತರಬಹುದು ಎಂಬ ಕುತೂಹಲ ಮಾತ್ರ ನನ್ನಲ್ಲಿ ತೀವ್ರವಾಗಿತ್ತು.

ಈಗಲೂ ನನಗೆ ಭೈರಪ್ಪನವರ ಕೃತಿಯೊಂದನ್ನು ಚಿತ್ರವಾಗಿಸುವ ಬಯಕೆಯಿದೆ. ನನ್ನ ಮನಸ್ಸಿನಲ್ಲಿ ಇರುವ ಕಾದಂಬರಿಗಳಲ್ಲಿ 'ನಿರಾಕರಣವೂ ಒಂದು. ಒಮ್ಮೆ ಹೀಗೇ ಮಾತನಾಡುತ್ತಾ ಭೈರಪ್ಪನವರು 'ಅಂಚು ಕೂಡ ದೃಶ್ಯ ಮಾಧ್ಯಕ್ಕೆ ಚೆನ್ನಾಗಿ ಒಗ್ಗುತ್ತೆ ಅಂದಿದ್ದರು. ಗೊತ್ತಿಲ್ಲ, ಮುಂದೆ ಏನಾಗುತ್ತೋ?

ಎರಡು ವರ್ಷಗಳ ಹಿಂದೆ ಡಾ.ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನದವರಿಗಾಗಿ 'ಚಿಂತನ-ಮಂಥನ ಎಂಬ ದೃಶ್ಯಮಾಲಿಕೆಯನ್ನು ಸಿದ್ಧಪಡಿಸಿಕೊಟ್ಟಿದ್ದೇನೆ. ವಿವಿಧ ಕ್ಷೇತ್ರಗಳಿಂದ ಬಂದ ಸುಮಾರು ಹದಿನೈದು ಮಂದಿ ಪ್ರಮುಖರು ಭೈರಪ್ಪನವರೊಂದಿಗೆ ಅವರ ಕಾದಂಬರಿಗಳ ಬಗೆಗೆ, ಅವರ ಬದುಕಿನ ಬಗೆಗೆ, ಅವರ ಚಿಂತನೆಗಳ ಬಗೆಗೆ, ತತ್ವಶಾಸ್ತ್ರದ ಬಗೆಗೆ, ಸಂಗೀತದ ಬಗೆಗೆ, ಸಾಹಿತ್ಯದ ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ. ಈ ವಿಶಿಷ್ಟ ಮಾಲಿಕೆ ಮುಂದಿನ ಪೀಳಿಗೆಗೆ ಒಂದು ಅತ್ಯಮೋಘ ಕೊಡುಗೆ. ಇದಕ್ಕಾಗಿ ವಿಶೇಷ ಆಸಕ್ತಿ ವಹಿಸಿದ ಅವರ ಸುಪುತ್ರ ಉದಯಶಂಕರ್ ಮತ್ತು ಭೈರಪ್ಪನವರ ಅಭಿಮಾನಿ ಶೇಖರ್ ಅವರನ್ನು ನಾನು ಇಲ್ಲಿ ನೆನೆಯಲೇಬೇಕು.

ಇದೆಲ್ಲದರ ಜೊತೆಗೆ ಇದೇ ವರ್ಷ ಕೊರೋನಾ ಜೊತೆ ಜೊತೆಯಲ್ಲೇ ಹೋರಾಡುತ್ತಾ ಭೈರಪ್ಪನವರ ಪ್ರಖ್ಯಾತ ಕಾದಂಬರಿ 'ಆವರಣವನ್ನು ಆಡಿಯೋ ಬುಕ್ (ಕೇಳುವ ಪುಸ್ತಕ) ಆಗಿ ತಯಾರಿಸಿದ್ದೇನೆ. ಇದಕ್ಕಾಗಿ ಮೂರು ತಿಂಗಳು ಹಿಡಿದಿದೆ. ಕೆಲಸ ಮಾಡುತ್ತಾ ಕಾದಂಬರಿಯನ್ನು ಹತ್ತಾರು ಬಾರಿ ಓದಿದ್ದೇನೆ, ರೆಕಾರ್ಡ್ ಆದದ್ದನ್ನು ಪದೇ ಪದೇ ಕೇಳಿದ್ದೇನೆ. ಈ ಪ್ರಕ್ರಿಯೆಯಲ್ಲಿ ಅವರ ವಾಕ್ಯರಚನೆ, ನುಡಿಗಟ್ಟು, ಸನ್ನಿವೇಶಗಳ ನಿರ್ವಹಣೆ, ಕಥನ ಕಲೆ, ತಂತ್ರ ಮತ್ತು ಶೈಲಿಯನ್ನು ಬೆರಗಿನಿಂದ ಗಮನಿಸಿದ್ದೇನೆ. ಸುಮಾರು ಹದಿನೈದು ಗಂಟೆಗಳ ದಾಖಲೀಕರಣ ಸಿದ್ಧವಿದೆ.

ಕೊನೆಯದಾಗಿ, ನಾನು ಭೈರಪ್ಪನವರ ಸಾಕ್ಷ್ಯಚಿತ್ರ ಮಾಡುತ್ತಿರುವಾಗ ಅವರನ್ನು ಒಂದು ಪ್ರಶ್ನೆ ಕೇಳಿದ್ದೆ.

'ನಿಮ್ಮ ಕೃತಿಗಳನ್ನು ಓದುಗ ಹೇಗೆ ಸ್ವೀಕರಿಸಬೇಕು?'

'ನನ್ನ ಕೃತಿಗಳನ್ನು ಓದುಗ ಸಾಹಿತ್ಯ ಅಂತ ಅಷ್ಟೇ ಓದಬೇಕು. ನನ್ನ ಕೃತಿ ಓದಿ ಸಮಾಜ ಉದ್ಧಾರ ಮಾಡ್ತೀನಿ, ರಾಜಕೀಯ ಕ್ರಾಂತಿ ಮಾಡ್ತೀನಿ, ಎಲ್ಲಾ ಬದಲಾಯಿಸಿಬಿಡ್ತೀನಿ ಅನ್ನೋದೆಲ್ಲ ಸುಳ್ಳು. ಅದು ಯಾವ ಕೃತಿಯಿಂದಲೂ ಆಗೋಲ್ಲ. ಆದ್ರೆ ನನ್ನ ಕೃತಿಯನ್ನ ಓದೋದ್ರಿಂದ ನಿಮ್ಮ ಅನುಭವದ ಸೂಕ್ಷ್ಮತೆ ಸಂಸ್ಕಾರಗೊಳ್ಳುತ್ತೆ... ಎಂಬ ಮಾರ್ಮಿಕವಾದ ಉತ್ತರ ಅವರಿಂದ ಬಂದಿತ್ತು.

ನಿಜ. ಹುಟ್ಟು-ಸಾವು ಇಲ್ಲದವರು ಯಾರು? ಭೂಮಿ ಮೇಲಿರುವ ಮನುಷ್ಯ, ಪ್ರಾಣಿ-ಪಕ್ಷಿ, ಮರ-ಗಿಡಗಳನ್ನು ಒಳಗೊಂಡಂತೆ ಎಲ್ಲ ಜೀವಿಗಳಿಗೆ ಹುಟ್ಟುಸಾವು ಇರುವುದು ಸಹಜ. ಆದರೆ ಕಲಾಕೃತಿಗಳಿಗೆ? ಅವೂ ಯಾವುದೋ ಒಂದು ಸಂದರ್ಭದಲ್ಲಿ ಹುಟ್ಟಿವೆ ಎಂದ ಮೇಲೆ ಅವಕ್ಕೂ ಸಾವಿರಬೇಕಲ್ಲವೆ? ಆದರೆ ಲಿಯನಾರ್ಡೋ ಡವಿಂಚಿಯ 'ಮೊನಾಲಿಸಾ ಚಿತ್ರಪಟ ಹುಟ್ಟಿ ಎಷ್ಟು ವರ್ಷವಾಯಿತು! ಅದಕ್ಕೆ ಮುಂದೊಂದು ದಿನ ಸಾವಿರಬಹುದು ಎಂದು ಹೇಗೆ ಊಹಿಸುವುದು? ಪ್ರಳಯವಾಗಿ ಎಲ್ಲವೂ ನಾಶವಾದರೆ ಆಗ ಬೇರೆ ಮಾತು. ಹೀಗೆಯೇ ಎಷ್ಟೋ ಕಲಾಕೃತಿಗಳು, ಗ್ರಂಥಗಳು, ಕಥೆಗಳು, ಚಲನಚಿತ್ರಗಳು ಸಹೃದಯನ ಹೃದಯದಲ್ಲಿ ಶಾಶ್ವತ ಸ್ಥಾನ ಗಳಿಸುತ್ತವೆ. ಒಂದಲ್ಲ ಒಂದು ಕಾರಣಕ್ಕೆ ಆಗಾಗ ನಾವಿದ್ದೇವೆ ಎಂದು ಸದ್ದು ಮಾಡುತ್ತಿರುತ್ತವೆ. ಹೀಗೇ ಭೈರಪ್ಪನವರ ಕೃತಿಗಳೂ ಕುಡ ಚಾಲ್ತಿಯಲ್ಲಿರುತ್ತವೆ ಎಂದೇ ನನ್ನ ನಂಬಿಕೆ.

ವಿಶ್ವವಾಣಿ ನುಡಿ ನಮನ

ಕನ್ನಡದ ಅಕ್ಷರಗಳಿಗೆ ಆದರ್ಶದ ಬೆಳಕು ಭೈರಪ್ಪ

ಕನ್ನಡ ಸಾರಸ್ವತ ಲೋಕಕ್ಕೆ ಈ ನವರಾತ್ರಿಯ ಈ 'ಪರ್ವ' ಕಾಲ ನೋವು ತುಂಬಿದ ಗಳಿಗೆ. ಕನ್ನಡದ ಕಾದಂಬರಿ ಸಾಹಿತ್ಯಕ್ಕೆ ಅಗ್ರಮಾನ್ಯತೆ ತಂದು ಕೊಟ್ಟ ಕಾದಂಬರಿಕಾರ, ಚಿಂತಕ, ಡಾ. ಎಸ್‌ಎಲ್ ಭೈರಪ್ಪ ಅವರು ವಯೋಸಹಜ ಕಾರಣಗಳಿಂದ ನಿರ್ಗಮಿಸಿದ್ದಾರೆ. ತಮ್ಮ ಹಿಂದೆ ಶ್ರೇಷ್ಠ ಸಾಹಿತ್ಯವನ್ನು ಬಿಟ್ಟು ಹೋಗಿದ್ದಾರೆ. ಕನ್ನಡದ ಜನತೆ ಸದಾ ಕಾಲ ಸ್ಮರಿಸಬೇಕಾದ ಕಾದಂಬರಿ ಪಾತ್ರಗಳನ್ನು, ಅವುಗಳ ಮೂಲಕ ಗಹನ ಚಿಂತನೆಯನ್ನು ಅವರು ನೀಡಿದವರು. ಅವರ ಸಾಹಿತ್ಯಕ್ಕೆ ಪರಮೋನ್ನತ ಸ್ಥಾನ ನೀಡಿರುವುದು ಅವರು ಯಾವತ್ತೂ ಅನುಸರಿಸಿಕೊಂಡು ಬಂದ ಸತ್ಯಾನ್ವೇಷಣೆಯ ತಹತಹ, ಕಾಪಾಡಿಕೊಂಡು ಬಂದ ತಾತ್ವಿಕತೆಯ ಭಿತ್ತಿಗಳು. ಭಾರತೀಯ ಸಾಹಿತ್ಯದಲ್ಲಿ ಶ್ರೇಷ್ಠ ಕೃತಿಕಾರರಿಗೆ ನೀಡಲಾಗುವ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಪಡೆದಿರುವ ಅವರು ಪದ್ಮಶ್ರೀ, ಪದ್ಮಭೂಷಣ ಪುರಸ್ಕೃತರು ಸಹ ಆಗಿದ್ದಾರೆ. ಅವರ ಕೃತಿಗಳು ಇತರ ಭಾರತೀಯ ಭಾಷೆಗಳಿಗೆ ಜೊತೆಗೆ ರಷ್ಯನ್, ಜರ್ಮನ್, ಚೈನೀಸ್‌ನಂಥ ಭಾಷೆಗಳಿಗೂ ಅನುವಾದವಾಗಿವೆ. ಅಲ್ಲಿನ ಜನತೆ ಕೂಡ ಅವರನ್ನು ಓದಿ ಮೆಚ್ಚಿಕೊಂಡಿರುವುದು ಭೈರಪ್ಪನವರು ವಿಶ್ವಮಾನ್ಯ ಸಾಹಿತಿಯಾಗಿದ್ದರು ಎಂಬುದಕ್ಕೆ ಸಾಕ್ಷಿ. ಕನ್ನಡದಲ್ಲಿ ಜನಪ್ರಿಯತೆಯಲ್ಲಿ ಅವರನ್ನು ಮೀರಿಸುವವರು ಇರಲಿಲ್ಲ. ಅವರು ತತ್ವಶಾಸ್ತ್ರ ಪ್ರಾಧ್ಯಾಪಕರೂ ಆಗಿದ್ದರಿಂದ ಅದರ ತಳಪಾಯವೂ ಅವರ ಕೃತಿಗಳಲ್ಲಿತ್ತು. ಅವರ ಪ್ರತಿಯೊಂದು ಕೃತಿಯ ಹಿಂದೆಯೂ ಗಾಢ ಅಧ್ಯಯನ, ಪ್ರವಾಸ ಇರುತ್ತಿದ್ದವು.

ಹಾಸನ ಜಿಲ್ಲೆಯ ಪುಟ್ಟಹಳ್ಳಿ ಸಂತೇಶಿವರದಲ್ಲಿ ಜನಿಸಿದ ಭೈರಪ್ಪನವರು ಬಾಲ್ಯದಲ್ಲಿ ಕಂಡುಂಡ ಕಷ್ಟನಷ್ಟ ಅಂತಿಂಥದ್ದಲ್ಲ. ಕಿತ್ತು ತಿನ್ನುವ ಬಡತನ, ಬೇಜವಾಬ್ದಾರಿ ತಂದೆ, ಪ್ಲೇಗ್ ಮಾರಿಯಿಂದ ಉಂಟಾದ ಕುಟುಂಬದ ಸಾವುಗಳು ಇವೆಲ್ಲವೂ ಅವರ ಜೀವನದ ಕುರಿತ ಅವರ ಒಳನೋಟಗಳನ್ನು ರೂಪಿಸಿದವು. ಈ ಎಲ್ಲಾ ಪ್ರತಿಕೂಲತೆಗಳ ನಡುವೆಯೇ ಭಿಕ್ಷಾನ್ನ, ವಾರಾನ್ನ ಮಾಡಿಕೊಂಡು ಶಿಕ್ಷಣ ಮುಂದುವರಿಸಿ ರ‍್ಯಾಂಕ್ ವಿದ್ಯಾರ್ಥಿ ಆಗಿ ತರ್ಕಶಾಸ್ತ್ರ, ಮನಶ್ಶಾಸ್ತ್ರ, ತತ್ವಶಾಸ್ತ್ರಗಳನ್ನು ಕಲಿತು ಪ್ರಾಧ್ಯಾಪಕರಾದದ್ದು, ದೇಶವಿದೇಶಗಳನ್ನು ಸುತ್ತಾಡಿದ್ದು, ರಾಷ್ಟ್ರೀಯ ಶಿಕ್ಷಣ ಪಠ್ಯ ರಚನೆಯಲ್ಲಿ ಕೈಗೂಡಿಸಿದ್ದು ಇವೆಲ್ಲವೂ ನೆನೆಯಬೇಕಾದ ಸಂಗತಿಗಳು. ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಬರುವ ಕಷ್ಟಗಳನ್ನು ಅನುಭವಗಳನ್ನಾಗಿ ಪರಿವರ್ತಿಸಿಕೊಂಡು ಹೇಗೆ ಪರಿಣಾಮಕಾರಿಯಾಗಿ ಅಕ್ಷರರೂಪದಲ್ಲಿ ಮೂಡಿಸಬಹುದು ಎಂಬುದಕ್ಕೆ ಭೈರಪ್ಪನವರು ನಿದರ್ಶನ.

ಭೈರಪ್ಪನವರು 'ಧರ್ಮಶ್ರೀ'ಯಿಂದ ಆರಂಭಿಸಿ 'ಉತ್ತರಕಾಂಡ'ದವರೆಗೆ ಇಪ್ಪತ್ತೂರು ಮಹತ್ವಪೂರ್ಣ ಕಾದಂಬರಿಗಳನ್ನು ಬರೆದಿದ್ದಾರೆ. ಸತ್ಯ ಮತ್ತು ಸೌಂದರ್ಯ ಮೊದಲಾದ ಗಂಭೀತರ ಚಿಂತನಾತ್ಮಕ ಪ್ರಬಂಧಗಳನ್ನೂ ಬರೆದಿದ್ದಾರೆ. ಅವರ ಒಂದೊಂದು ಕಾದಂಬರಿಯೂ ಒಂದೊಂದು ತಾತ್ವಿಕತೆಯ ಹುಡುಕಾಟವೇ ಆಗಿದೆ. 'ಪರ್ವ'ದ ಮೂಲಕ ಭಾರತೀಯ ಪುರಾಣಕ್ಕೆ ವಾಸ್ತವದ ಸ್ಪರ್ಶ ನೀಡಿದರೆ, 'ಗೃಹಭಂಗ'ದ ಮೂಲಕ ಭಾರತೀಯ ಕೆಳಮಧ್ಯಮ ವರ್ಗದ ಜೀವನ ಕಥನವನ್ನು ಮಂಡಿಸಿದರು. 'ವಂಶವೃಕ್ಷ'ದ ಮೂಲಕ ಮನುಷ್ಯನ ಜೀವನದ ಸಾರ್ಥಕತೆಯ ಹುಡುಕಾಟ, ಅನ್ವೇಷಣ' 'ನೆಲೆ' 'ನಿರಾಕರಣ'ಗಳ ಮೂಲಕ ಮನುಷ್ಯನ ಆಧ್ಯಾತ್ಮಿಕ ಶೋಧ, 'ಅಂಚು', ತಂತು' 'ದೂರ ಸರಿದರು' ಮೂಲಕ ಮನುಷ್ಯನ ಮನೋವೈಜ್ಞಾನಿಕ ಗಹನ ನೆಲೆಗಳು, 'ದಾಟು' ಮೂಲಕ ಭಾರತದ ಗ್ರಾಮೀಣ ವ್ಯವಸ್ಥೆಯ ಅಧಃಪತನ, 'ಮಂದ್ರ'ದ ಮೂಲಕ ಕಲೆಯಲ್ಲಿ ಮನುಷ್ಯನ ತೊಡಗುವಿಕೆಯ ಪ್ರವೃತ್ತಿ, 'ಉತ್ತರಕಾಂಡ' ಮೂಲಕ ಸ್ತ್ರೀತ್ವದ ಅನ್ವೇಷಣೆ, 'ಆವರಣ'ದ ಇತಿಹಾಸದ ವಾಸ್ತವಗಳ ಅನಾವರಣ ಮಾಡಿದ್ದಾರೆ. ಎಲ್ಲವೂ ಅಪಾರ ಜನಮೆಚ್ಚುಗೆ ಗಳಿಸಿವೆ. ಭೈರಪ್ಪನವರು ತಮ್ಮ ಪ್ರತಿಯೊಂದೂ ಕಾದಂಬರಿ ಬರೆಯುವುದಕ್ಕೆ ಮಾಡುವ ಪೂರ್ವಭಾವಿ ತಯಾರಿ, ನಡೆಸುವ ಅಧ್ಯಯನ, ವ್ಯಾಪಕ ಸಂಚಾರ, ಕಂಡುಕೊಳ್ಳುವ ಅನುಭವ ಇದೆಲ್ಲವೂ ಬಹಳ ವಿಶಿಷ್ಟವಾದವು.

ಭೈರಪ್ಪನವರು ಅಕ್ಷರಜೀವಿಯಷ್ಟೇ ಅಲ್ಲ, ಅವರು ಬರೆದಂತೆ ನಡೆದೂ ತೋರಿಸಿದವರು. ತಮ್ಮ ಊರಿಗೆ ಅವರು ಸಲ್ಲಿಸಿದ ಕೃತಜ್ಞತೆಯ ಸ್ವರೂಪ ಅವಿಸ್ಮರಣೀಯ. ತಮ್ಮ ಹುಟ್ಟೂರು ಸಂತೇಶಿವರದಲ್ಲಿನ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ಪರಿಹಾರ ಒದಗಿಸಲು, ನೀರು ಪೂರೈಸಲು ಅವರು ಮಾಡಿದ ಪ್ರಯತ್ನ ನೆನಪಿಡಬೇಕಾದ್ದು. ಇವರ ಮೂಲಕ ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆ ಕಟ್ಟೆಗಳಿಗೆ ಸರಕಾರದ ವತಿಯಿಂದ ಏತ ನೀರಾವರಿ ಯೋಜನೆಯಡಿ ನೀರು ಪೂರೈಕೆಯಾಯಿತು. ಸುತ್ತಲ 20ಕ್ಕೂ ಹೆಚ್ಚು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಿಂದಾಗಿ ಸಾವಿರಾರು ಕೊಳವೆ ಬಾವಿಗಳು ಮರುಪೂರಣಗೊಂಡು ರೈತರಿಗೆ ಖುಷಿ ನೆಮ್ಮದಿ ದೊರೆಯಿತು. ಊರಿನಲ್ಲಿ ಲೈಬ್ರರಿ ಸ್ಥಾಪನೆಗೆ ಕಾರಣೀಕರ್ತರಾದರು. ಇದಕ್ಕಾಗಿ ಊರಿನ ಜನರಿಂದ ಸಾರ್ಥಕ ಸನ್ಮಾನ ಪಡೆದರು. ಹೀಗೆ ತಮ್ಮೂರ ಜನರಿಂದ ಶ್ಲಾಘನೆ ಪಡೆಯುವ ಸಾಹಿತಿಗಳ ವಿರಳತೆಯೇ ಭೈರಪ್ಪವರ ಅಮೂಲ್ಯತೆಯನ್ನು ಸಾರುತ್ತದೆ.

ಹಾಗೆಯೇ ತಮ್ಮ ಕೃತಿಗಳಿಗೆ ಬಂದ ಗೌರವಧನವನ್ನೆಲ್ಲ ತಮಗಾಗಿ ವಿನಿಯೋಗಿಸದೆ, ತಮ್ಮಂತೆಯೇ ಜೀವನದಲ್ಲಿ ನೊಂದ ಬಡ ಮಕ್ಕಳ ಶಿಕ್ಷಣಕ್ಕಾಗಿ ಮೀಸಲಿಟ್ಟದ್ದು ಕೂಡ, ಅವರು ಆಡುತ್ತಿದ್ದ ಆದರ್ಶಗಳು ಬರಿಯ ಬಾಯಿಮಾತಾಗಿರಲಿಲ್ಲ ಎಂಬುದರ ದ್ಯೋತಕ. ಅದಕ್ಕಾಗಿಯೇ ಒಂದು ಟ್ರಸ್ಟ್ ರಚಿಸಿದ್ದು, ಅದರ ಮೂಲಕ ಆ ಹಣವನ್ನು ಬಡ, ಪ್ರತಿಭಾವಂತ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ವಿನಿಯೋಗಿಸುವ ಏರ್ಪಾಡು ಮಾಡಿದ್ದು ಅವರ ಉದಾತ್ತ ಆಶಯವನ್ನು ತೋರಿಸುತ್ತದೆ. ತನಗೆ ಬಾಲ್ಯದಲ್ಲಿ ಒದಗಿದ ಕಷ್ಟ ಬೇರೆ ಮಕ್ಕಳಿಗೆ ಬರದಿರಲಿ ಎಂಬುದು ಅವರ ಅಭೀಪ್ಸೆಯಾಗಿತ್ತು. 94 ವರ್ಷಗಳ ತುಂಬು ಬದುಕಿನಲ್ಲಿ ಅವರು ತಮ್ಮ ಕಾದಂಬರಿಗಳ ಜೊತೆಗೆ ಚಿಂತನೆ, ತಾತ್ವಿಕ ದಿಗ್ದರ್ಶನ, ಕಿರಿಯರಿಗೆ ಮಾರ್ಗದರ್ಶನಗಳಿಂದಲೂ ಬೆಳಕಿನ ಸ್ತಂಭವಾಗಿದ್ದರು. ಅವರದು ಇನ್ನೂ ನೂರು ವರ್ಷಗಳ ಕಾಲ ಚಿಂತನೆಯಾಗಿ, ಭಾವನೆಯಾಗಿ ಕನ್ನಡದ ಜನಮಾನಸವನ್ನು ಮುನ್ನಡೆಸಬಲ್ಲ ವ್ಯಕ್ತಿತ್ವವಾಗಿದೆ.

ಭೈರಪ್ಪ ಕನ್ನಡದ ಬಹಳ ದೊಡ್ಡ ವಿದ್ಯಮಾನ. ಕುವೆಂಪು ಅವರ ಹಾಗೆನೇ, ಬೇಂದ್ರೆಯವರ ಹಾಗೆನೇ, ಇವರ ಮಾಧ್ಯಮ ಬೇರೆಯಾದರೂ ಭೈರಪ್ಪ ಕನ್ನಡ ಸಾಹಿತ್ಯದ ಬಹಳ ದೊಡ್ಡ ವಿದ್ಯಮಾನ. ಆದರೆ ನನಗೆ ಈಗ ಹೇಳಲೇಬೇಕಾದ ಒಂದು ಮಾತು ಎಂದರೆ ಭೈರಪ್ಪನವರನ್ನು ವಿರೋಧಿಸುವ ಒಂದು ದೊಡ್ಡ ಪಡೆ ಕನ್ನಡ ಸಾಹಿತ್ಯದಲ್ಲಿತ್ತು. ಆದರೆ ಎಷ್ಟು ಜನ ಎದುರಾದರೂ ಅವರನ್ನು ನಿಶ್ಯಸ್ತ್ರಗೊಳಿಸುವಷ್ಟು ಛಾತಿ, ಧೈರ್ಯ ಭೈರಪ್ಪನವರಿಗಿತ್ತು. ಬಹಳ ಮುಖ್ಯವಾಗಿ ಹೇಳಬೇಕಾದ್ದು ಭೈರಪ್ಪನವರನ್ನು ಇವರಾರೂ ಬಹಳ ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಗಲಿಲ್ಲ. ಯಾಕೆಂದರೆ ಇವರು ಭೈರಪ್ಪನವರ ಬಗ್ಗೆ ಹೀನಾಯವಾಗಿ ಮಾತನಾಡುವುದನ್ನು ಬಿಟ್ಟರೆ, ಬೇಕಾದಷ್ಟು ಸಿದ್ಧತೆಯಿಂದ ಎದುರಿಸಲಿಲ್ಲ. ಅದರಿಂದಾಗಿ ಕೊನೆಯಲ್ಲಿ ಭೈರಪ್ಪನವರೇ ವಿಜೃಂಭಿಸಿ ಬಿಡುತ್ತಿದ್ದರು. ಭೈರಪ್ಪನವರನ್ನು ಒಪ್ಪುವುದು ಬಿಡುವುದು ಬೇರೆ ಮಾತು. ಆದರೆ ಅವರೊಂದಿಗೆ ಸಂವಾದ ನಡೆಸದೆ ಸಂಘರ್ಷ ಶುರು ಮಾಡಿದರು. ಬಹಳ ಕಾಲ ಎಡಪಂಥೀಯರ ಮಾತು ಜೋರಾಗಿ ಕೇಳಿ ಬರುತ್ತಿತ್ತು. ಬೇರೆಯವರೆಲ್ಲರೂ ಅವರಿಗೆ ಹೆದರುತ್ತಾ ಇದ್ದರು. ಅವರನ್ನು ದಿಟ್ಟವಾಗಿ ಎದುರಿಸಿದ್ದು ಭೈರಪ್ಪನವರೊಬ್ಬರೇ. ಭೈರಪ್ಪನವರನ್ನು ಅವರಿಗೆ ಎದುರಿಸಲಿಕ್ಕಾಗಲಿಲ್ಲ ಎನ್ನುವುದು ಸತ್ಯವೇ. ವಿರೋಧ ಹೆಚ್ಚಾದಷ್ಟು ಭೈರಪ್ಪ ಜನಪ್ರಿಯರಾಗುತ್ತಾ ಹೋದರು. ಇದು ಬಹಳ ಮುಖ್ಯ. ಭೈರಪ್ಪನವರು ಇಲ್ಲ ಎನ್ನುವುದು ಕನ್ನಡ ಸಾಹಿತ್ಯಕ್ಕೆ ಬಹಳ ದೊಡ್ಡ ಶೂನ್ಯ. ಆದರೆ ಭೈರಪ್ಪ ಅವರ ದೇಹಾಂತ್ಯದ ಜತೆಗೆ ಅವರು ಸಾಯುವುದಿಲ್ಲ. ಕನ್ನಡ ಸಾಹಿತ್ಯದ ಒಂದು ವಿದ್ಯಮಾನವಾಗಿ ಅವರು ಉಳಿದೇ ಉಳಿಯುತ್ತಾರೆ.

- ಪ್ರೊಫೆಸರ್ ಕೃಷ್ಣೇಗೌಡ



ನಮ್ಮ ಕಾಲದ ಕಥೆಗಾರರ ಪಿತಾಮಹ ಎಸ್. ಎಲ್. ಭೈರಪ್ಪ ಅವರು ನಮ್ಮೊಂದಿಗಿದ್ದಾಗಲೇ ಅವರನ್ನು ಸಂಭ್ರಮದಿಂದ ಗೌರವಿಸಿದ್ದೇವೆ ಮತ್ತು ಅವರು ಕೂಡ ಆ ಸಂಭ್ರಮವನ್ನು ಕಣ್ತುಂಬಿಕೊಂಡಿದ್ದಾರೆ. ಅವರ ಕುಟುಂಬ ಮತ್ತು ಅಭಿಮಾನಿಗಳ ಅಸಂಖ್ಯ ಸಮೂಹಕ್ಕೆ ನನ್ನ ಸಂತಾಪಗಳು. ನಮ್ಮ ಕಾಲದ ಶ್ರೇಷ್ಠ ಸಾಹಿತ್ಯಕ ಧ್ವನಿಗಳಲ್ಲಿ ಒಬ್ಬರನ್ನು ಕನ್ನಡಿಗರು ನಮಗೆ ನೀಡಿದ್ದಾರೆ ಮತ್ತು ಈಗ ಅವರ ಅಮರ ಕೃತಿಗಳು ಶ್ರೇಷ್ಠ ಕಥೆಗಾರರ ಜಗತ್ತಿಗೆ ಸೇರಿವೆ. ಮುಂದಿನ ತಲೆಮಾರುಗಳು ಅವರ ಮಾತುಗಳಿಂದ ಜೀವಿತಾವಧಿಯ ಕಲೆಯನ್ನು ಕಲಿಯುತ್ತವೆ. ಅವರ ಪರಂಪರೆಯು ಪರ್ವಗಳನ್ನು ಮೀರಿದ ಪರಂಪರೆಯಾಗಿದೆ. ಪುರಾಣಗಳು ಮತ್ತು ಅವುಗಳ ಪದರಗಳಲ್ಲಿ ಹುದುಗಿರುವ ಇತಿಹಾಸವನ್ನು ಹೇಗೆ ಓದಬೇಕೆಂದು ನಮಗೆ ಕಲಿಸಿದ್ದಕ್ಕಾಗಿ ನಿಮಗೆ ಧನ್ಯವಾದಗಳು ಸರ್ ಎಂದಿರುವ ಕಮಲ್ ಹಾಸನ್ ಅವರು ತಮ್ಮನ್ನು ಭೈರಪ್ಪ ಅವರ ಅಭಿಮಾನಿ ಎಂದು ಕರೆದುಕೊಂಡಿದ್ದಾರೆ.

- ಕಮಲ್ ಹಾಸನ್

1931-2025

ಸರಸ್ವತಿ ಪುತ್ರನ ಪರ್ವಾಂತ್ಯ



ಆಧುನಿಕ ಕನ್ನಡ ಸಾಹಿತ್ಯದ ಮಹಾನ್ ಕಾದಂಬರಿಕಾರರು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರು, ಅಕ್ಷರ ಸಂತ, ಕನ್ನಡ ಸಾಹಿತ್ಯ ಲೋಕದ ಧ್ರುವತಾರೆ, ಪದ್ಮಭೂಷಣ ಡಾ. ಎಸ್.ಎಲ್. ಭೈರಪ್ಪರವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಮೋಘ ಕೊಡುಗೆ ಕನ್ನಡ ಸಾಹಿತ್ಯ ಲೋಕದಲ್ಲಿ ಶಾಶ್ವತವಾಗಿ ಜೀವಂತವಾಗಿಯೇ ಉಳಿಯಲಿದೆ. ಅವರ ಸಾಹಿತ್ಯ ಕೃತಿಗಳು ಸದಾ ನಮಗೆ ದಾರಿ ತೋರಿಸುತ್ತವೆ. ಎಸ್.ಎಲ್ ಭೈರಪ್ಪನವರ ಆತ್ಮಕ್ಕೆ ಶಾಂತಿ ಸಿಗಲಿ.

ಸುಕುಮಾರ ಶೆಟ್ಟಿ, ಮಾಜಿ ಶಾಸಕರು, ಬೈಂದೂರು

ಪದ್ಮಭೂಷಣ ಡಾ.ಎಸ್. ಎಲ್. ಭೈರಪ್ಪ ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ. ಅವರ ಕುಟುಂಬದ ಸದಸ್ಯರಿಗೆ ಈ ಅಗಲಿಕೆಯ ನೋವು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಓಂ ಶಾಂತಿ.

ಅಶ್ವಿನಿ ಪುನೀತ್ ರಾಜಕುಮಾರ್











ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸ್ವಾಮಿ ನಾರಾಯಣ ದೇಗುಲದ ಪ್ರಾಣ ಪ್ರತಿಷ್ಠೆ

ರಾಜಸ್ಥಾನದ ಜೋಧಪುರ್ ಸ್ವಾಮಿ ನಾರಾಯಣ ದೇಗುಲದ ಪ್ರಾಣ ಪ್ರತಿಷ್ಠೆ ಗುರುವಾರ ಬೆಳಗ್ಗೆ ಜರುಗಲಿದೆ. ಮರಳುಗಲ್ಲಿನಲ್ಲಿ ಕೆತ್ತಲಾಗಿರುವ ಹೊಸ ಬಿಎಪಿಎಸ್ ದೇವಾಲಯ ನಾಗರ ಶೈಲಿ ವಾಸ್ತುಶಿಲ್ಪ ಹೊಂದಿದೆ. ಸಿಮೆಂಟ್, ಗಾರೆ ಬಳಸದೆ ಶಿಲೆಗಳನ್ನು ಇಂಟರ್‌ಲಾಕ್ ರೀತಿ ಜೋಡಿಸಲಾಗಿದೆ. ನೀಲಕಂಠ ಬಣ್ಣದ ಭಗವಾನ್ ಸ್ವಾಮಿ ನಾರಾಯಣನ 5 ಲೋಹ ವಿಗ್ರಹಗಳು ದೇಗುಲದಲ್ಲಿರಲಿವೆ. ಮುಖ್ಯ ದೇವಾಲಯ 191 ಅಡಿ ಉದ್ದ, 181 ಅಡಿ ಅಗಲ, 111 ಅಡಿ ಎತ್ತರವಾಗಿದೆ. 1 ಭವ್ಯ ಗುಮ್ಮಟ, 14 ಸಣ್ಣ ಗುಮ್ಮಟ, 5 ಶಿಖರಗಳಿವೆ. ದೇಗುಲ ನಿರ್ಮಾಣಕ್ಕೆ 500ಕ್ಕೂ ಹೆಚ್ಚು ಕುಶಲಕರ್ಮಿಗಳು 7 ವರ್ಷ ಶ್ರಮಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪ್ರಧಾನಿ ಮೋದಿಗೆ ಸಿಕ್ಕ ಉಡುಗೊರೆ ಹರಾಜು



ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿವಿಧ ಕಾರ್ಯಕ್ರಮಗಳಲ್ಲಿ ಬಂದಿರುವ ಉಡುಗೊರೆಗಳನ್ನು ಪ್ರತಿವರ್ಷದಂತೆಯೇ ಹರಾಜಿಗಿಡಲಾಗಿದೆ. 'ಕಳೆದೊಂದು ವರ್ಷದಲ್ಲಿ ವಿವಿಧ ಸಮಾರಂಭ, ಕಾರ್ಯಕ್ರಮಗಳಲ್ಲಿ ಕೊಡಮಾಡಿದ ಉಡುಗೊರೆಗಳನ್ನು ಆನ್‌ಲೈನ್ ಮೂಲಕ ಹರಾಜು ಮಾಡಲಾಗುತ್ತಿದೆ. ಭಾರತದ ಸಂಸ್ಕೃತಿ ಮತ್ತು ಸೃಜನಶೀಲತೆ ನಿರೂಪಿಸುವ ಅದ್ಭುತ ಕಲಾಕೃತಿಗಳು ಮತ್ತು ಕುಸರಿ ಕಲೆ ವಸ್ತುಗಳೂ ಸೇರಿವೆ. ಹರಾಜಿನಿಂದ ಬರುವ ಹಣವನ್ನು 'ನಮಾಮಿ ಗಂಗೆ' ಹೆಸರಿನಲ್ಲಿ ನಡೆಯುತ್ತಿರುವ ಗಂಗಾ ನದಿಯ ಶುದ್ಧೀಕರಣ ಕಾರ್ಯಕ್ಕೆ ನೀಡಲಾಗುವುದು. ಆಸಕ್ತರು ಹರಾಜಿನಲ್ಲಿ ಭಾಗವಹಿಸಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರ 'ಎಕ್ಸ್' ಖಾತೆಯಲ್ಲಿ ಬುಧವಾರ ಪ್ರಕಟಿಸಲಾಗಿದೆ.

ವಾಷಿಂಗ್ಟನ್‌ನಲ್ಲಿ ಇಂದು ಟ್ರಂಪ್-ಶೆಹಬಾಜ್ ಭೇಟಿ

ನ್ಯೂಯಾರ್ಕ್: ವಿಶ್ವಸಂಸ್ಥೆ ಮಹಾಸಭೆಯಲ್ಲಿ ಭಾಗವಹಿಸಲು ನ್ಯೂಯಾರ್ಕ್‌ಗೆ ತೆರಳಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಗುರುವಾರ ವಾಷಿಂಗ್ಟನ್‌ಗೆ ತೆರಳಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಿ, ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಯತ್ನಿಸಲಿದ್ದಾರೆ 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

2019ರಲ್ಲಿ ಪ್ರಧಾನಿಯಾಗಿದ್ದ ಇಮ್ರಾನ್ ಖಾನ್ ಜುಲೈನಲ್ಲಿ ವಾಷಿಂಗ್ಟನ್‌ನಲ್ಲಿ ಅಂದಿನ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಶ್ವೇತಭವನದಲ್ಲಿ ಭೇಟಿಯಾದ ನಂತರ ಅಮೆರಿಕ ಅಧ್ಯಕ್ಷ-ಪಾಕ್ ಪ್ರಧಾನಿಯ ಮೊದಲ ಭೇಟಿ ಇದಾಗಲಿದೆ. ಜೋ ಬೈಡನ್ ಅಧಿಕಾರಾವಧಿಯಲ್ಲಿ ಪಾಕಿಸ್ತಾನವನ್ನು ಪೂರ್ಣ ನಿರ್ಲಕ್ಷಿಸಲಾಗಿತ್ತು. ಪಾಕ್ ಪ್ರಧಾನಿಗಳ ಜತೆ ದೂರವಾಣಿಯಲ್ಲೂ ಬೈಡನ್ ಮಾತನಾಡಿರಲಿಲ್ಲ. ಟ್ರಂಪ್ 2ನೇ ಅವಧಿಯಲ್ಲಿ ಪಾಕ್-ಅಮೆರಿಕ ಸಂಬಂಧದಲ್ಲಿ ನಾಟಕೀಯ ಬದಲಾವಣೆಯಾಗಿದ್ದು, ಟ್ರಂಪ್-ಶೆಹಬಾಜ್ ಸಭೆ ಕುತೂಹಲ ಹೆಚ್ಚಿಸಿದೆ.

ಭಾರತ ನಮ್ಮೊಂದಿಗಿದೆ: ಝೆಲೆನ್‌ಸ್ಕಿ ಹೇಳಿಕೆ

ಕೀವ್: ಉಕ್ರೇನ್ ಮೇಲೆ ಯುದ್ಧ ನಡೆಸುವುದಕ್ಕೆ ರಷ್ಯಾಗೆ ಭಾರತ ಮತ್ತು ಚೀನಾ ಹಣ ಒದಗಿಸುತ್ತಿವೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆರೋಪವನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೇ ಒಪ್ಪಿಲ್ಲ, ಬದಲಾಗಿ, 'ಭಾರತ ಉಕ್ರೇನ್ ಜತೆ ಇದೆ' ಎಂದು ಅವರು ಪ್ರತಿಪಾದಿಸಿದ್ದಾರೆ. 'ಫಾಕ್ಸ್ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ರಷ್ಯಾದಿಂದ ಭಾರತ ಕಚ್ಚಾತೈಲ ಖರೀದಿ ಮಾಡುತ್ತಿರುವುದರಿಂದ ಉಕ್ರೇನ್‌ಗೆ ತೊಡಕಾಗುತ್ತಿರುವುದು ನಿಜ ಎಂದ ಝೆಲೆನ್‌ಸ್ಕಿ, ಭಾರತ ಕೊನೆಗೆ ನಿಲುವು ಬದಲಿಸುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಭಾರತಕ್ಕೆ ಸದ್ಯ ಬೇರೆ ದೇಶಗಳಿಂದ ಇಂಧನ ಖರೀದಿಯ ಅಗತ್ಯವಿದೆ. ಈ ವಿಚಾರವನ್ನು ಯೂರೋಪ್ ದೇಶಗಳು, ಅಮೆರಿಕ ಅಧ್ಯಕ್ಷ ಟ್ರಂಪ್ ನಿರ್ವಹಿಸಬಹುದಾಗಿದೆ. ಆದರೆ ಚೀನಾ ವಿಚಾರದಲ್ಲಿ ಇದೇ ವಿಶ್ವಾಸ ವ್ಯಕ್ತಪಡಿಸಲಾಗದು. ಏಕೆಂದರೆ ರಷ್ಯಾ ಬೆಂಬಲಿಸುವುದನ್ನು ಚೀನಾ ಎಂದಿಗೂ ನಿಲ್ಲಿಸುವುದಿಲ್ಲ ಎಂದಿದ್ದಾರೆ. ರಷ್ಯಾದಿಂದ ಇಂಧನ ಖರೀದಿಸುವ ಮೂಲಕ ರಷ್ಯಾ-ಉಕ್ರೇನ್ ಯುದ್ಧಕ್ಕೆ ಭಾರತ, ಚೀನಾ ಕೊಡುಗೆ ನೀಡುತ್ತಿವೆ ಎಂದು ಟ್ರಂಪ್ ವಿಶ್ವಸಂಸ್ಥೆ ಮಹಾಸಭೆ ಭಾಷಣದಲ್ಲಿ ದೂಷಿಸಿದ್ದರು.

ಅಮೆರಿಕ ಕ್ರಿಕೆಟ್ ಸದಸ್ಯತ್ವ ಅಮಾನತು

ದುಬೈ: ಐಸಿಸಿ ಸದಸ್ಯರಾಗಿ ತನ್ನ ಕಟ್ಟುಪಾಡುಗಳನ್ನು ಪದೇ ಪದೇ ಉಲ್ಲಂಘಿಸಿದ ಕಾರಣ, ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಅಮೆರಿಕ ಕ್ರಿಕೆಟ್‌ನ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿದೆ. ಒಂದು ವರ್ಷದ ಅವಧಿಯ ಪರಿಶೀಲನೆ ಮತ್ತು ಪಾಲುದಾರರೊಂದಿಗೆ ವ್ಯಾಪಕವಾದ ಸಂವಹನದ ನಂತರ ಐಸಿಸಿ ಮಂಡಳಿಯು ಈ ನಿರ್ಧಾರವನ್ನು ತೆಗೆದುಕೊಂಡಿದೆ, ಆದರೆ ತಂಡಗಳ ಆಟ ಮುಂದುವರಿಸಲಿವೆ. ಐಸಿಸಿ ಮಂಡಳಿಯು ಈ ಹಿಂದೆ ತನ್ನ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರವು, ಐಸಿಸಿ ಸಂವಿಧಾನದ ಅಡಿಯಲ್ಲಿ ಐಸಿಸಿ ಸದಸ್ಯನಾಗಿ ತನ್ನ ಬಾಧ್ಯತೆಗಳನ್ನು ಅಮೆರಿಕ ಕ್ರಿಕೆಟ್ ಪದೇ ಪದೇ ಮತ್ತು ನಿರಂತರವಾಗಿ ಉಲ್ಲಂಘಿಸುತ್ತಿರುವುದನ್ನು ಆಧರಿಸಿದೆ ಎಂದು ಐಸಿಸಿ ಹೇಳಿದೆ. ಅಮಾನತುಗೊಳಿಸುವಿಕೆಯ ಹೊರತಾಗಿಯೂ, ಅಮೆರಿಕದ ರಾಷ್ಟ್ರೀಯ ತಂಡಗಳು 2028ರ ಲಾಸ್ ಏಂಜಲೀಸ್ ಒಲಿಂಪಿಕ್‌ಗೆ ಸಿದ್ಧತೆ ಸೇರಿದಂತೆ ಐಸಿಸಿ ಈವೆಂಟ್‌ಗಳಲ್ಲಿ ಸ್ಪರ್ಧಿಸಲು ಅರ್ಹವಾಗಿರುತ್ತವೆ. ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು, ಐಸಿಸಿ ಮತ್ತು ಅದರ ನೇಮಕಗೊಂಡ ಪ್ರತಿನಿಧಿಗಳು ಅಮೆರಿಕದ ರಾಷ್ಟ್ರೀಯ ತಂಡಗಳ ನಿರ್ವಹಣೆಯನ್ನು ತಾತ್ಕಾಲಿಕವಾಗಿ ಮೇಲ್ವಿಚಾರಣೆ ಮಾಡುತ್ತಾರೆ.

ನಿಗಮ ಮಂಡಳಿ ನೇಮಕ ಪೂರ್ಣ

39 ನಿಗಮಗಳಿಗೆ ಅಧ್ಯಕ್ಷರನ್ನು ನೇಮಿಸಿದ ಸರಕಾರ | ಎರಡು ವರ್ಷದ ಅನಿಶ್ಚಿತತೆ ಅಂತ್ಯ

ಬೆಂಗಳೂರು: ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ನಿಗಮ-ಮಂಡಳಿಗೆ ಅಧ್ಯಕ್ಷರ ನೇಮಕವಾಗಿದ್ದು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರು ಸಿಡಬ್ಲ್ಯುಸಿ ಸಭೆಗೆಂದು ಬಿಹಾರ್‌ಗೆ ತೆರಳಿದ ಸಂದರ್ಭದಲ್ಲೇ 39 ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರ ನೇಮಕ ಮಾಡಿ ಹೈಕಮಾಂಡ್ ಆದೇಶ ಹೊರಡಿಸಿದೆ.

ರಾಜ್ಯ ಸರಕಾರದ ವಿವಿಧ 39 ನಿಗಮ, ಮಂಡಳಿ, ಆಯೋಗ ಗಳಿಗೆ ನೂತನ ಅಧ್ಯಕ್ಷರ ನೇಮಕಕ್ಕೆ ಹೈಕಮಾಂಡ್ ಒಪ್ಪಿಗೆ ನೀಡುವ ಮೂಲಕ ಕಾಂಗ್ರೆಸ್ ಕಾರ್ಯಕರ್ತರಿಗೆ ದಸರಾ ಉಡುಗೊರೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಸುದೀರ್ಘ ಚರ್ಚೆಗಳನ್ನು ನಡೆಸಿ ಪಟ್ಟಿಯನ್ನು ಅಂತಿಮಗೊಳಿಸಿದ್ದರು. ನಂತರ, ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಬಳಿಯೂ ನಿಗಮ, ಮಂಡಳಿಗಳಿಗೆ ನೂತನ ಅಧ್ಯಕ್ಷರನ್ನು ನೇಮಕ ಮಾಡುವ ಸಂಬಂಧ ಸಿದ್ಧಪಡಿಸಲಾಗಿದ್ದ ಪಟ್ಟಿ ಕುರಿತು ರಾಜ್ಯ ನಾಯಕರು ಚರ್ಚೆ ನಡೆಸಿದ್ದರು. ಬಳಿಕ ಪಟ್ಟಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವೇಣುಗೋಪಾಲ್ ರವಾನಿಸಿದ್ದರು. ರಾಜ್ಯದಿಂದ ಅಂತಿಮಗೊಳಿಸಿ ಕಳುಹಿಸಿದ್ದ ಪಟ್ಟಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಮಲ್ಲಿಕಾರ್ಜುನ ಖರ್ಗೆ, ಅದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕಳುಹಿಸಿಕೊಟ್ಟಿದ್ದಾರೆ. ಪ್ರಮುಖವಾಗಿ ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರ ಪತ್ನಿ ಶಿವಲೀಲಾ ಅವರಿಗೂ ಮಂಡಳಿ ಅಧ್ಯಕ್ಷ ಸ್ಥಾನ ನೀಡಲಾಗಿದೆ.

ಅಧ್ಯಕ್ಷರು ನಿಗಮ ಮತ್ತು ಮಂಡಳಿ

- **ಶಿವಲೀಲಾ ಕುಲಕರ್ಣಿ:** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
- **ಪಿ. ರಘು:** ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ.
- ಅರುಣ್ ಪಾಟೀಲ್: ವಾಯುವ್ಯ ರಾಜ್ಯ ರಸ್ತೆ ಸಾರಿಗೆ ನಿಗಮ.
- **ಜಗದೀಶ್ ವೊಡ್ನಾಲ್:** ಜೈವಿಕ ವೈವಿಧ್ಯ ಮಂಡಳಿ.
- **ಮುರಳಿ ಅಶೋಕ್:** ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ.
- **ಡಾ. ಮೂರ್ತಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ.
- **ಕರ್ನಲ್ ಮಲ್ಲಿಕಾರ್ಜುನ್:** ಮಾಜಿ ಸೈನಿಕರ ಕಲ್ಯಾಣ ಮಂಡಳಿ.
- **ಡಾ. ಬಿ. ಸಿ. ಮುದ್ದುಗಂಗಾಧರ್:** ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ.
- **ಶಾರ್ಲೆಟ್ ಪಿಂಟೋ:** ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ.
- **ಮರಿಯೋಜಿ ರಾವ್:** ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ.
- **ಎಂ. ಎ. ಗಫೂರ್:** ಕರಾವಳಿ ಅಭಿವೃದ್ಧಿ ಪ್ರಾಧಿಕಾರ.
- ಕೆ. ಹರೀಶ್ ಕುಮಾರ್: ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ.
- **ಎನ್. ಸಂಪಂಗಿ:** ಕರ್ನಾಟಕ ಗೋದಾಮು ನಿಗಮ.
- **ವೈ. ಸಯೀದ್ ಅಹಮದ್:** ದೇವರಾಜ್ ಅರಸ್ ಟ್ರಕ್ ಟರ್ಮಿನಲ್.
- **ಮಹೇಶ್:** ಕಾಡುಗೊಲ್ಲ ಅಭಿವೃದ್ಧಿ ನಿಗಮ.
- **ಮಂಜಪ್ಪ:** ಬಯಲುಸೀಮೆ ಅಭಿವೃದ್ಧಿ ಮಂಡಳಿ.
- **ಧರ್ಮಣ್ಣ ಉಪ್ಪಾರ :** ಉಪ್ಪಾರ ಅಭಿವೃದ್ಧಿ ನಿಗಮ
- **ಅಗಾ ಸುಲ್ತಾನ್ :** ಕೇಂದ್ರ ಪರಿಹಾರ ಸಮಿತಿ
- **ಎಸ್. ಜಿ. ನಂಜಯ್ಯ ಮಠ:** ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ
- **ಆಂಜಪ್ಪ:** ರಾಜ್ಯ ಬಿತ್ತನೆ ಬೀಜ ಅಭಿವೃದ್ಧಿ ನಿಗಮ
- **ನೀಲಕಂಠ ಮುಳ್ಗೆ:** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
- **ಬಾಬು ಹೊನ್ನ ನಾಯ್ಕ್:** ಕಮಾಂಡ್ ಏರಿಯಾ ಭಿವೃದ್ಧಿ ಪ್ರಾಧಿಕಾರ, ಭದ್ರಾ.
- **ಯುವರಾಜ್ ಕದಮ್:** ಮಲಪ್ರಭಾ ಘಟಪ್ರಭಾ ಅಭಿವೃದ್ಧಿ ಪ್ರಾಧಿಕಾರ
- **ಜಮಾದಾರ್ ಅನಿಲ್ ಕುಮಾರ್:** ತೊಗರಿಬೇಳೆ ಅಭಿವೃದ್ಧಿ ನಿಗಮ
- **ಪ್ರವೀಣ್ ಹರ್ವಾಲ್:** ಗುಲ್ಬರ್ಗಾ ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ.
- **ಮಂಜುನಾಥ್ ಪೂಜಾರಿ:** ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ
- **ಸೈಯದ್ ಮೆಹಮೂದ್ ಚಿಸ್ತಿ:** ರಾಜ್ಯ ಬೇಳೆ ಕಾಳು ಅಭಿವೃದ್ಧಿ ಮಂಡಳಿ
- **ಎಂ.ಎಸ್.ಮುತ್ತುರಾಜ್:** ಸವಿತಾ ಸಮಾಜ ಅಭಿವೃದ್ಧಿ ನಿ.
- **ನಂಜಪ್ಪ:** ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ
- **ವಿಶ್ವಾಸ ದಾಸ್:** ಗಾಣಿಗ ಅಭಿವೃದ್ಧಿ ನಿಗಮ
- **ಆರ್. ಸತ್ಯನಾರಾಯಣ:** ಮದ್ಯಪಾನ ಸಂಯಮ ಮಂಡಳಿ.
- **ಗಂಗಾಧರ್:** ರೇಷ್ಮೆ ಮಾರಾಟ ಮಂಡಳಿ
- **ಶಿವಪ್ಪ:** ಹಾಸನ ಅಭಿವೃದ್ಧಿ ನಿಗಮ
- **ಬಿ.ಎಸ್. ಕವಲಗಿ:** ರಾಜ್ಯ ಸುಣ್ಣ ಅಭಿವೃದ್ಧಿ ಮಂಡಳಿ
- **ಶ್ರೀನಿವಾಸ ವೇಲು:** ಕುಂಬಾರ ಅಭಿವೃದ್ಧಿ ನಿಗಮ
- **ಟಿ.ಎಂ. ಶಾಹೀದ್ ತೆಕ್ಕಿಲ್:** ರಾಜ್ಯ ವೇತನ ಮಂಡಳಿ
- **ಚೇತನ್ ಕೆ. ಗೌಡ:** ರಾಜ್ಯ ಕೈಮಗ್ಗ ಮಂಡಳಿ
- **ಶರಣಪ್ಪ ಸಲಾದ್‌ಪುರ್:** ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ಮಂಡಳಿ
- **ಲಾವಣ್ಯ ಬಲ್ಲಾಳ್ ಜೈನ್:** ರಾಜ್ಯ ಬೀಜ ಮತ್ತು ಸಾವಯವ ಪ್ರಾಮಾಣೀಕರಣ ಏಜೆನ್ಸಿ

ಅಧಿಕಾರಿಗಳ ವಿದೇಶ ಪ್ರವಾಸಕ್ಕೆ ನಿರ್ಬಂಧ: ಸಿಎಂ ಸೂಚನೆ

ಬೆಂಗಳೂರು: ಸರಕಾರಿ ಅಧಿಕಾರಿಗಳ ವಿದೇಶ ಪ್ರವಾಸಕ್ಕೆ ನಿರ್ಬಂಧ ವಿಧಿಸಿರುವ ಮುಖ್ಯಮಂತ್ರಿ ಅವರು, ಈ ವರ್ಷಾಂತ್ಯದವರೆಗೆ ವಿದೇಶ ಪ್ರವಾಸಮಾಡುವಂತಿಲ್ಲ ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ವಾರದೊಳಗೆ ಕಲಿಕೆ, ಅಧ್ಯಯನ ವರದಿ ಸಲ್ಲಿಸಲು ಸೂಚನೆ

2024ನೇ ಸಾಲಿನ ಆಗಸ್ಟ್‌ನಿಂದ 2025ರ ಜುಲೈ ತಿಂಗಳವರೆಗೆ ಸರಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಅಧಿಕೃತ ವಿದೇಶ ಪ್ರವಾಸ ಕೈಗೊಂಡಿದ್ದರೂ ಈ ತನಕ ಸರಕಾರಕ್ಕೆ ವರದಿಗಳನ್ನು ಸಲ್ಲಿಸದೇ ಇರುವುದನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಿದ್ದಾರೆ. ಅಧ್ಯಯನ ನಡೆಸಿ, ಕಲಿಕೆ ಹಾಗು

ಶಿಫಾರಸುಗಳೊಂದಿಗೆ ಸರಕಾರಕ್ಕೆ ಅಧ್ಯಯನ ವರದಿಯನ್ನು ಸಲ್ಲಿಸದೆ ಇರುವವರು ಈಕೂಡಲೇ ಒಂದು ವಾರದೊಳಗೆ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಅಧಿಕೃತ ವಿದೇಶ ಪ್ರವಾಸಕ್ಕೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸುವ ಮುನ್ನ ಕಡ್ಡಾಯವಾಗಿ ಈ ಹಿಂದೆ ಕೈಗೊಂಡಿರುವ ಪ್ರವಾಸಗಳ ಕಲಿಕೆ ಹಾಗೂ ಅನುಷ್ಠಾನ ವರದಿ ನೀಡಿದ್ದಲ್ಲಿ ಮಾತ್ರ ಹಾಲಿ ಪ್ರವಾಸದ ಪ್ರಸ್ತಾವನೆಗೆ ಅನುಮತಿ ನೀಡುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಈ ಸಾಲಿನ ಅಂತ್ಯದವರೆಗೂ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಧಿಕೃತ ವಿದೇಶ ಪ್ರವಾಸಗಳನ್ನು ನಿರ್ಬಂಧಿಸಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧೀನ ಕಾರ್ಯದರ್ಶಿ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಯುವ ಏಕದಿನ ಪಂದ್ಯಗಳಲ್ಲಿ ಅತೀ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಆಟಗಾರ

ಹೊಸ ದಾಖಲೆ ಬರೆದ ವೈಭವ್ ಸೂರ್ಯವಂಶಿ

ಸಿಡ್ನಿ: ಭಾರತದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ತಮ್ಮ ವೃತ್ತಿಪರ ವೃತ್ತಿಜೀವನದಲ್ಲಿ ಮತ್ತೊಮ್ಮೆ ಮಿಂಚಿದ್ದಾರೆ. ಭಾರತ ಅಂಡರ್-19 ಮತ್ತು ಆಸ್ಟ್ರೇಲಿಯಾ ಅಂಡರ್-19 ನಡುವಿನ 2ನೇ ಯುವ ಏಕದಿನ ಪಂದ್ಯದಲ್ಲಿ ಉನ್ಮುಕ್ತ್ ಚಂದ್ ಅವರ ದಾಖಲೆಯನ್ನು ಅವರೀಗ ಮುರಿದಿದ್ದಾರೆ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಸೂರ್ಯವಂಶಿ ಭರ್ಜರಿ ಪ್ರದರ್ಶನದೊಂದಿಗೆ ಮೊದಲ ಅರ್ಧಶತಕವನ್ನು ಗಳಿಸುವ ಮೂಲಕ ಗಮನ ಸೆಳೆದಿದ್ದಾರೆ.

14 ವರ್ಷದ ಸೂರ್ಯವಂಶಿ 70 (68) ರನ್ ಗಳಿಸುವ ಮೂಲಕ ಆಕ್ರಮಣಕಾರಿಯಾಗಿ ಅತ್ಯುತ್ತಮ ಪ್ರದರ್ಶನ ತೋರಿಸಿದರು. ಅವರ ಈ ಬ್ಯಾಟಿಂಗ್ ಇನಿಂಗ್ಸ್‌ನಲ್ಲಿ ಐದು ಬೌಂಡರಿ ಮತ್ತು ಆರು ಸಿಕ್ಸರ್‌ಗಳು ಒಳಗೊಂಡಿತ್ತು. ಈ ಮೂಲಕ ಅವರು ಯುವ ಏಕದಿನ ಪಂದ್ಯಗಳಲ್ಲಿ ಅತೀ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇದರೊಂದಿಗೆ ಭಾರತದ ಮಾಜಿ ಕ್ರಿಕೆಟಿಗ ಉನ್ಮುಕ್ತ್ ಚಂದ್ ಅವರ ದಾಖಲೆಯನ್ನು ಮುರಿದರು. ಸೂರ್ಯವಂಶಿ ಈಗ ಏಕದಿನಗಳಲ್ಲಿ 41 ಸಿಕ್ಸರ್‌ಗಳನ್ನು ಗಳಿಸಿದ್ದಾರೆ. ಚಂದ್ 38 ಸಿಕ್ಸರ್‌ಗಳನ್ನು ಬಾರಿಸಿದ್ದರು.

ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧದ 4ನೇ ಏಕದಿನ ಪಂದ್ಯದಲ್ಲಿ ಸಿಡಿಲಬ್ಬ ರದ ಬ್ಯಾಟಿಂಗ್ ನಡೆಸಿದ್ದ ವೈಭವ್, 52 ಎಸೆಗಳಲ್ಲಿ ಶತಕ ಸಿಡಿಸಿ ಸಂಭ್ರಮಿಸಿ ದ್ದರು. ಇದರೊಂದಿಗೆ ಯುವ ಏಕದಿನ ಕ್ರಿಕೆಟ್‌ನಲ್ಲಿ ವೇಗದ ಶತಕ ಸಿಡಿಸಿದ ನಂ. ಒನ್ ಆಟಗಾರ ಎಂದೆನಿಸಿದ್ದರು, ಜತೆಗೆ ಯೂತ್ ಏಕದಿನ ಟೂರ್ನಿ ಯಲ್ಲಿ ವೇಗದ ಶತಕ ಸಿಡಿಸಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು. 10 ಬೌಂಡರಿ, 7 ಸಿಕ್ಸರ್ ಸಹಾಯದಿಂದ 100 ರನ್‌ಗಳ ಗಡಿ ಮುಟ್ಟಿದ್ದರು. ಐಪಿಎಲ್‌ನಲ್ಲಿ ಚೊಚ್ಚಲ ಪ್ರವೇಶ ಪಡೆದಿದ್ದ ಅತ್ಯಂತ ಕಿರಿಯ ಆಟಗಾರ ಸೂರ್ಯವಂಶಿ ಅವರು, ಏಪ್ರಿಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ಪರ 38 ಎಸೆತಗಳಲ್ಲಿ 101 ರನ್ ಗಳಿಸಿ ಹೊಸ ದಾಖಲೆ ನಿರ್ಮಿಸಿದ್ದರು, ಆ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಅತೀ ಕಿರಿಯ ಬ್ಯಾಟರ್ ಎನಿಸಿದ್ದರು.

ಪಾಕ್ ಟೀಕಿಸಿದ ಇರ್ಫಾನ್

ದೆಹಲಿ: ಭಾರತ ಕ್ರಿಕೆಟ್ ತಂಡದ ಐತಿಹಾಸಿಕ ಟಿ20 ವಿಶ್ವಕಪ್ ಗೆಲುವನ್ನು ಸ್ಮರಿಸಿದ ಮಾಜಿ ಆಲ್‌ರೌಂಡರ್ ಇರ್ಫಾನ್ ಪಠಾಣ್, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಟೀಕಿಸಿದ್ದಾರೆ. 2007ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಬಳಿಕ ಭಾರತ ತಂಡ ನಿಯಮಿತವಾಗಿ ಪಾಕಿಸ್ತಾನ ತಂಡವನ್ನು ಮಣಿಸುತ್ತಿದೆ ಎಂದು ಹೇಳಿದ್ದಾರೆ. ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಇರ್ಫಾನ್ ಪಠಾಣ್, ಈ ಹಿಂದೆ 2007ರಲ್ಲಿ ವಿಶ್ವಕಪ್ ಕನಸು ನನಸಾಗಿತ್ತು. ಅಂದಿನಿಂದ ನಾವು ಪಾಕಿಸ್ತಾನ ತಂಡವನ್ನು ಟಿ20 ಕ್ರಿಕೆಟ್‌ನಲ್ಲಿ ನಿಯಮಿತವಾಗಿ ಸೋಲಿಸುತ್ತಾ ಬಂದಿದ್ದೇವೆ ಎಂದು ಹೇಳಿದ್ದಾರೆ. ಏಷ್ಯಾಕಪ್ ಟೂರ್ನಿಯ ಸಂದರ್ಭದಲ್ಲಿ ಕ್ರೀಡಾಂಗಣದಲ್ಲಿನ ಪಾಕಿಸ್ತಾನ ಆಟಗಾರರ ಹೈಡ್ರಾಮಾ ಸಂಬಂಧ ಇರ್ಫಾನ್ ಪಠಾಣ್ ಟೀಕಿಸಿದ್ದಾರೆ. ಭಾರತ ವಿರುದ್ಧದ ಪಂದ್ಯದಲ್ಲಿ ಅರ್ಧಶತಕ ಸಿಡಿಸಿದ ಬಳಿಕ ಸಾಹಿಬ್ಜಾದ್ ಫರ್ಹಾನ್ ಗನ್ ಸೆಲೆಬ್ರೇಷನ್ ಮಾಡಿದ್ದರು ಹಾಗೂ ವೇಗದ ಬೌಲರ್ ಹ್ಯಾರಿಸ್ ರೌಫ್ ಅವರು ಫೈಟರ್ ಜೆಟ್ ರೀತಿಯಲ್ಲಿ ಸನ್ನೆ ಮಾಡಿದ್ದರು. ಈ ಪಂದ್ಯದಲ್ಲಿ ಭಾರತ ತಂಡ ಅತ್ಯುತ್ತಮ ಪ್ರದರ್ಶನವನ್ನು ತೋರಿ, 6 ವಿಕೆಟ್‌ಗಳ ಗೆಲುವು ಪಡೆದಿತ್ತು. ಅಂದ ಹಾಗೆ ಎರಡೂ ಪಂದ್ಯಗಳ ಬಳಿಕವೂ ಟೀಮ್ ಇಂಡಿಯಾ ಆಟಗಾರರು ಪಾಕ್ ಆಟಗಾರರಿಗೆ ಹ್ಯಾಂಡ್‌ಶೇಕ್ ನೀಡಲು ನಿರಾಕರಿಸಿದ್ದರು, ಇದರಿಂದ ಪಾಕಿಸ್ತಾನ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿತ್ತು.

ಮೋದಿ ಸರಕಾರದ ಅಂತ್ಯಕ್ಕೆ ಬಿಹಾರ ಚುನಾವಣೆ ನಾಂದಿ

ಪಟನಾದಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಮಲ್ಲಿಕಾರ್ಜುನ ಖರ್ಗೆ

ಪಟನಾ: 2025ರ ಬಿಹಾರ ವಿಧಾನಸಭಾ ಚುನಾವಣೆ ನರೇಂದ್ರ ಮೋದಿ ಸರಕಾರದ ಭ್ರಷ್ಟ ಮತ್ತು ಅಸಮರ್ಥ ಆಡಳಿತದ ಅಂತ್ಯಕ್ಕೆ ನಾಂದಿ ಹಾಡಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಬಿಹಾರದ ಪಟನಾದಲ್ಲಿ ಬುಧವಾರ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ಮಾತನಾಡಿದ ಖರ್ಗೆ, ಕೇಂದ್ರದ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದಲ್ಲಿ ಬಿರುಕುಗಳು ಮೂಡುತ್ತಿವೆ. ಆಂತರಿಕ ಕಲಹ ಬಹಿರಂಗವಾಗಿದೆ. ಈ ಬಿರುಕಿಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಹೊಣೆಗಾರರನ್ನಾಗಿಸಲು ಬಿಜೆಪಿ ಯತ್ನಿಸುತ್ತಿದೆ. ಬಿಹಾರ ಮತದಾರರು ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸಿ, ಅಭಿವೃದ್ಧಿ ಪರ ಮತ ಹಾಕಲಿದ್ದಾರೆ ಎಂದಿದ್ದಾರೆ.

ಭಾರತ ಹಲವು ಸವಾಲು ಎದುರಿಸುತ್ತಿದೆ. ರಾಜತಾಂತ್ರಿಕ ತಪ್ಪು ನಡೆಗಳು ಮೋದಿ ಆಡಳಿತದ ಪೂರ್ಣ ವೈಫಲ್ಯವನ್ನು ಬಿಂಬಿಸುತ್ತಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ವಿಫಲಗೊಳಿಸಿದ್ದಾರೆ. ಪ್ರಧಾನಿ ಮೋದಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ನನ್ನ ಸ್ನೇಹಿತ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಆದರೆ, ಅದೇ ಸ್ನೇಹಿತ ಸದ್ಯ ಭಾರತಕ್ಕೆ ಹಲವು ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ ಎಂದು ಪ್ರಧಾನಿ ಮೋದಿ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವನ್ನು ಖರ್ಗೆ ಟೀಕಿಸಿದ್ದಾರೆ.

ಪಟನಾದಲ್ಲಿ ಬುಧವಾರ ನಡೆದ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್ ಮಧ್ಯೆ ಚರ್ಚೆ.

ಚುನಾವಣಾ ಆಯೋಗದ ವಿರುದ್ಧ ಗರಂ

ದೇಶದಲ್ಲೀಗ ಚುನಾವಣಾ ಪ್ರಕ್ರಿಯೆ ನ್ಯಾಯಸಮ್ಮತವಾಗಿಲ್ಲ. ಪಾರದರ್ಶಕತೆ ದೂರವಾಗಿದೆ. ಚುನಾವಣಾ ಆಯೋಗದ ನಡವಳಿಕೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ರಾಜಕೀಯ ಪಕ್ಷಗಳು ಎತ್ತಲಾಗುತ್ತಿದೆ. ಹಲವು ರಾಜ್ಯಗಳಿಂದ ಮತ ಕಳವು ಪ್ರಕರಣ ವರದಿಯಾಗುತ್ತಿವೆ. ಆದರೆ, ಆಯೋಗ ಅವಕ್ಕೆ ಪರಿಹಾರ ಸೂಚಿಸುವ ಬದಲು, ನಮ್ಮಿಂದಲೇ ಪ್ರಮಾಣಪತ್ರ ಕೇಳುತ್ತಿದೆ. ಇದು ಪ್ರಶ್ನಿಸುವವರನ್ನು ಮೌನಗೊಳಿಸುವ ಪ್ರಯತ್ನವಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ನಿರುದ್ಯೋಗ, ಸಾಮಾಜಿಕ ಧ್ರುವೀಕರಣ ಮತ್ತು ಸಾಂವಿಧಾನಿಕ ಸಂಸ್ಥೆಗಳ ವ್ಯವಸ್ಥಿತ ದುರ್ಬಲಗೊಳಿಸುವಿಕೆ ಹೆಚ್ಚುತ್ತಿದೆ. ಮೋದಿ ಸರಕಾರ ರಾಜಕೀಯ ಹಿತಾಸಕ್ತಿ ರಕ್ಷಿಸಲು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿದೆ ಎಂದು ಕಿಡಿಕಾರಿದ್ದಾರೆ.

ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ಅಜಯ್ ಮಾಕನ್, ಜೈರಾಮ್ ರಮೇಶ್, ಸಚಿನ್ ಪೈಲಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತಿತರ ನಾಯಕರು ಸಭೆಯಲ್ಲಿದ್ದರು.

ಬಿಜೆಪಿ ಕಚೇರಿಗೆ, ಪೊಲೀಸ್ ವಾಹನಕ್ಕೆ ಬೆಂಕಿ, ಕಲ್ಲೆಸೆತ

ಲಡಾಖ್ 'ರಾಜ್ಯ' ಪ್ರತಿಭಟನೆ: 5 ಸಾವು, 70 ಜನಕ್ಕೆ ಗಾಯ

ಲಡಾಖ್: ಕೇಂದ್ರಾಡಳಿತ ಪ್ರದೇಶವಾಗಿರುವ 'ಲಡಾಖ್'ಗೆ ರಾಜ್ಯದ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿ ಬುಧವಾರ ಲೇಹ್‌ನಲ್ಲಿ ನಡೆದ ಪ್ರತಿಭಟನೆ ಮತ್ತು ಬಂದ್ ಹಿಂಸಾಚಾರಕ್ಕೆ ತಿರುಗಿದ್ದು, ಕಲ್ಲೆಸೆತ, ಪೊಲೀಸ್ ವಾಹನಕ್ಕೆ ಮತ್ತು ಬಿಜೆಪಿ ಕಚೇರಿಗೆ ಬೆಂಕಿ ಹಚ್ಚಲಾಗಿದೆ. ಹಿಂಸಾಚಾರ, ಪ್ರತಿಭಟನಾಕಾರರು-ಪೊಲೀಸರ ನಡುವಿನ ಘರ್ಷಣೆಯಲ್ಲಿ ಐವರು ಜೀವ ಕಳೆದುಕೊಂಡಿದ್ದಾರೆ. 70ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಬುಧವಾರ ಲಡಾಖ್ ಪೂರ್ಣ ಬಂದ್‌ಗೂ ಕರೆ ನೀಡಲಾಗಿತ್ತು. ಲೇಹ್‌ನಲ್ಲಿ ಬೆಳಗ್ಗೆಯೇ ರಸ್ತೆಗಿಳಿದ ಪ್ರತಿಭಟನಾಕಾರರಲ್ಲಿ ಯುವಕರ ಗುಂಪು ಬಿಜೆಪಿ ಮತ್ತು ಹಿಲ್ ಕೌನ್ಸಿಲ್‌ನ ಪ್ರಧಾನ ಕಚೇರಿ ಮೇಲೆ ಕಲ್ಲು ತೂರಾಟ ನಡೆಸಿತು. ಬಳಿಕ ಲೇಹ್‌ನಲ್ಲಿನ ಬಿಜೆಪಿ ಕಚೇರಿ ಬಳಿ ತೆರಳಿ ಕಚೇರಿಗೆ ಬೆಂಕಿ ಹಚ್ಚಿತು. ತಡೆಯಲು ಬಂದ ಪೊಲೀಸ್ ವಾಹನಕ್ಕೂ ಬೆಂಕಿ ಹಾಕಿ ಸುಟ್ಟುಹಾಕಿತು. ಪೊಲೀಸ್ ವಾಹನ ಪೂರ್ಣ ಭಸ್ಮವಾಗಿದೆ.

ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ, ಲಾಠಿ ಪ್ರಹಾರ ನಡೆಸಿದರು. ಈ ಸಂದರ್ಭ ಪ್ರತಿಭಟನಾಕಾರರು ಪೊಲೀಸರ ಜತೆಗೇ ಸಂಘರ್ಷಕ್ಕಿಳಿದರು. ಇದು ಐವರ ಜೀವ ಹಾನಿಗೆ ಕಾರಣವಾಯಿತು. ಹಿಂಸಾಚಾರ ತಡೆಯಲು ಪೊಲೀಸರು ಹರಸಾಹಸಪಟ್ಟರು. ಬಳಿಕ ಲಡಾಖ್‌ನ ವಿವಿಧೆಡೆ ಕರ್ಫ್ಯೂ ವಿಧಿಸಲಾಗಿದೆ. ಲೇಹ್‌ನಲ್ಲಿ ಮೆರವಣಿಗೆ, ರ‍್ಯಾಲಿ, ಮೆರವಣಿಗೆ ನಿಷೇಧಿಸಲಾಗಿದೆ.

ಸೆ.10ರಿಂದ ಉಪವಾಸ

ರಾಜ್ಯ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿ ಸೆ.10ರಿಂದ ಉಪವಾಸ ನಡೆಸುತ್ತಿದ್ದ 15 ಜನರಲ್ಲಿ ಇಬ್ಬರ ಸ್ಥಿತಿ ಮಂಗಳವಾರ ಸಂಜೆ ಹದಗೆಟ್ಟ ನಂತರ ಅವರನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆ ಬಳಿಕ 'ಲಡಾಖ್ ಅಪೆಕ್ಸ್ ಬಾಡಿ'(ಎಲ್‌ಎಬಿ) ಯುವ ವಿಭಾಗ ಪ್ರತಿಭಟನೆಗೆ ಕರೆ ನೀಡಿ ಹಿಂಸಾಚಾರಕ್ಕಿಳಿಯಿತು. ಇತ್ತೀಚೆಗೆ ಲಡಾಖ್‌ನಲ್ಲಿ ತೀವ್ರ ಹಿಂಸಾಚಾರದ ಪ್ರತಿಭಟನೆ ಇದೇ ಮೊದಲು ಎನ್ನಲಾಗಿದೆ.

ಜಾರ್ಖಂಡ್: 3 ನಕ್ಸಲರ ಅಂತ್ಯ

ರಾಂಚಿ: ಜಾರ್ಖಂಡ್ ರಾಜ್ಯದ ಗುಮ್ಲಾ ಜಿಲ್ಲೆಯಲ್ಲಿ ನಕ್ಸಲ್ ನಿಗ್ರಹ ಜಂಟಿ ಭದ್ರತಾ ಪಡೆ ಮತ್ತು ಮಾವೋವಾದಿ ನಕ್ಸಲರ ಗುಂಪಿನ ನಡುವೆ ಬುಧವಾರ ಗುಂಡಿನ ಚಕಮಕಿ ನಡೆದಿದ್ದು, ಮೂವರು ನಕ್ಸಲರು ಹತರಾಗಿದ್ದಾರೆ.

'ಜಾರ್ಖಂಡ್ ಜನ್ ಮುಕ್ತಿ ಪರಿಷದ್' (ಜೆಜೆಎಂಪಿ) ನಕ್ಸಲ್ ಗುಂಪಿನ ಸದಸ್ಯರು ಗುಮ್ಲಾ ಜಿಲ್ಲೆಯಲ್ಲಿದ್ದಾರೆಂಬ ಮಾಹಿತಿ ಸಿಕ್ಕ ಬಳಿಕ ಜಾರ್ಖಂಡ್ ಜಾಗ್ವಾರ್ ಮತ್ತು ಗುಮ್ಲಾ ಜಿಲ್ಲಾ ಪೊಲೀಸರನ್ನು ಒಳಗೊಂಡ ಭದ್ರತಾ ಪಡೆಯು ಬುಧವಾರ ಬೆಳಗ್ಗೆ 8ಕ್ಕೆ ಬಿಷ್ಣುಪುರ ಪೊಲೀಸ್ ಠಾಣೆ ವ್ಯಾಪಿಯ ಕೆಚಕಿ ಗ್ರಾಮ ಬಳಿಯ ಅರಣ್ಯದಲ್ಲಿ ಶೋಧ ನಡೆಸಲಾರಂಭಿಸಿತು. ಈ ವೇಳೆ ಎದುರಾದ ನಕ್ಸಲ್ ಗುಂಪಿನ ಜತೆ ಗುಂಡಿನ ಚಕಮಕಿ ನಡೆಯಿತು.

ಮೃತ ನಕ್ಸಲರನ್ನು ಲೋಹರ್‌ದಗಾ ಜಿಲ್ಲೆ ನಿವಾಸಿಗಳಾದ ಲಾಲು ಲೋಹ್ರಾ, ಸುಜಿತ್ ಒರಾನ್ ಮತ್ತು ಲತೇಹಾರ್ ಮೂಲದ ಚೋಟು ಒರಾನ್ ಎಂದು ಗುರುತಿಸಲಾಗಿದೆ. ಸ್ಥಳದಲ್ಲಿ ಮೂರು ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರೆದಿದೆ ಎಂದು ಜಾರ್ಖಂಡ್ ಐಜಿ ಮೈಕಲ್ ರಾಜ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಛತ್ತೀಸ್‌ಗಢ: 71 ನಕ್ಸಲರು ಶರಣು

ದಾಂತೇವಾಡ: ಛತ್ತೀಸ್‌ಗಢ ರಾಜ್ಯದ ದಾಂತೇವಾಡ ಜಿಲ್ಲೆಯಲ್ಲಿ ಬುಧವಾರ 21 ಮಹಿಳೆಯರೂ ಸೇರಿದಂತೆ 71 ನಕ್ಸಲರು ಪೊಲೀಸ್ ಹಿರಿಯ ಅಧಿಕಾರಿಗಳೆದುರು ಶರಣಾದರು. ಆಘಾತಕಾರಿ ಸಂಗತಿಯೆಂದರೆ, ಶರಣಾಗತರಲ್ಲಿ 17 ವರ್ಷದ ಬಾಲಕ, 16-17 ವರ್ಷದ ಇಬ್ಬರು ಬಾಲಕಿಯರೂ ಸೇರಿದ್ದಾರೆ. ತಲಾ 20 ಲಕ್ಷ ರು. ಇನಾಮು ಘೋಷಣೆಯಾಗಿದ್ದ ಇಬ್ಬರು, ತಲಾ 5 ಲಕ್ಷ ರು. ಇನಾಮಿದ್ದ ನಾಲ್ವರು ಸೇರಿದಂತೆ 30 ನಕ್ಸಲರ ತಲೆಗೆ ಒಟ್ಟು 64 ಲಕ್ಷ ರು.ಗಳ ಇನಾಮು ಘೋಷಣೆಯಾಗಿತ್ತು. ಇವರಲ್ಲಿ ನಾಲ್ವರು ನಕ್ಸಲರ ವಿರುದ್ಧ ಪೊಲೀಸ್ ಮೇಲೆ ದಾಳಿ ನಡೆಸಿದ ಆರೋಪವೂ ಇತ್ತು. ಮಾವೋವಾದಿ ಸಿದ್ಧಾಂತದಿಂದ ಭ್ರಮನಿರಸನಗೊಂಡಿದ್ದರಿಂದಲೇ 71 ನಕ್ಸಲರು ಶರಣಾದರು. ಜತೆಗೆ ಸರಕಾರದ ಪುನರ್ವಸತಿ ನೀತಿಯೂ ಅವರನ್ನು ಆಕರ್ಷಿಸಿದೆ ಎಂದು ದಾಂತೇವಾಡ ಎಸ್‌ಪಿ ಗೌರವ್ ರೈ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.



ನೀಟ್‌ನಲ್ಲಿ ಶೇ.99.99 ಅಂಕ: ವೈದ್ಯನಾಗಲ್ಲ ಎಂದು ಆತ್ಮಹತ್ಯೆ

ಚಂದ್ರಾಪುರ: 'ಕಡಿಮೆ ಅಂಕ' ಅಥವಾ 'ಅನುತ್ತೀರ್ಣ' ಎಂಬ ಕಾರಣಕ್ಕೆ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ಸುದ್ದಿಗಳು ವರದಿಯಾಗುತ್ತಿರುವ ಈ ದಿನಗಳಲ್ಲಿ 'ನೀಟ್-2025' ಪರೀಕ್ಷೆಯಲ್ಲಿ ಶೇ.99.99 ಅಂಕ ಗಳಿಸಿದ್ದ ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಯೊಬ್ಬ 'ನನಗೆ ವೈದ್ಯನಾಗಲು ಆಸಕ್ತಿ ಇಲ್ಲ' ಎಂದು ನೇಣಿನ ಕುಣಿಕೆಗೆ ಕೊರಳೊಡ್ಡಿದ್ದಾನೆ. ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯಲ್ಲಿ ಈ ದುರಂತ ನಡೆದಿದೆ.

19 ವರ್ಷದ ಅನುರಾಗ್ ಅನಿಲ್ ಬೋರ್ಕರ್, ಇತ್ತೀಚೆಗಷ್ಟೇ ನಡೆದಿದ್ದ 'ಎನ್‌ಇಇಟಿ' ಪರೀಕ್ಷೆಯಲ್ಲಿ ಶೇ.99.99 ಅಂಕಗಳನ್ನು ಗಳಿಸಿ 'ಇತರೆ ಹಿಂದುಳಿದ ವರ್ಗಗಳು'(ಒಬಿಸಿ) ಕೋಟಾದಲ್ಲಿ ದೇಶದಲ್ಲೇ 1475ನೇ ರ‍್ಯಾಂಕ್ ಪಡೆದಿದ್ದ. ಆತನಿಗೆ ಕೌನ್ಸಿಲಿಂಗ್‌ನಲ್ಲಿ ಉತ್ತರ ಪ್ರದೇಶದ ಗೋರಖ್‌ಪುರದಲ್ಲಿನ ವೈದ್ಯಕೀಯ ಕಾಲೇಜಿನಲ್ಲಿ 'ಎಂಬಿಬಿಎಸ್'ಗೆ ಸೀಟು ಸಿಕ್ಕಿತ್ತು. ಕಾಲೇಜು ಸೇರುವುದಕ್ಕೆ ಚಂದ್ರಾ ಪುರದಿಂದ ಹೊರಡಬೇಕಿದ್ದ ದಿನವೇ ಅನುರಾಗ್ ಅನಿಲ್ ಬೋರ್ಕರ್, ಸ್ಯೂಸೈಡ್ ನೋಟ್ ಬರೆದಿಟ್ಟು ಮನೆಯಲ್ಲಿನ ತನ್ನ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದಾನೆ. ಅನುರಾಗ್ ಮರಣ ಪೂರ್ವ ಬರೆದಿರುವ ಪತ್ರವನ್ನು ಪೊಲೀಸರು ಸಾರ್ವಜನಿಕಗೊಳಿಸಿಲ್ಲ. ಆದರೆ, ಮೂಲಗಳು ಪ್ರಕಾರ, 'ನಾನು ವೈದ್ಯಕೀಯ ವ್ಯಾಸಂಗ ಮಾಡಲಾರೆ. ನನಗೆ ವೈದ್ಯನಾಗಲು ಇಷ್ಟವಿಲ್ಲ' ಎಂದು ಬರೆದಿದ್ದ ಎನ್ನಲಾಗಿದೆ. ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಮಾಚಾರ ಸಣ್ಣದಲ್ಲ

ಶ್ರೀದುರ್ಗಾಮಾತಾ ದೌಡ್ ಕಾರ್ಯಕ್ರಮ

ಬೈಲಹೊಂಗಲ: ಪಟ್ಟಣದಲ್ಲಿ ವಿಶ್ವಹಿಂದೂ ಪರಿಷತ್ ಹಾಗೂ ಬಜರಂಗದಳದ ವತಿಯಿಂದ 11ನೇ ವರ್ಷದ ಶ್ರೀದುರ್ಗಾಮಾತಾ ದೌಡ್ ಕಾರ್ಯಕ್ರಮ ಮಂಗಳವಾರ ವಿಜೃಂಭಣೆಯಿಂದ ನಡೆಯಿತು. ಗ್ರಾಮದೇವಿ ದೇವಸ್ಥಾನದಲ್ಲಿ ಪ್ರಭು ನೀಲಕಂಠ ಮಹಾಸ್ವಾಮಿಗಳ ಸಾನಿಧ್ಯದಲ್ಲಿ, ಶಾಸಕ ಮಹಾಂತೇಶ ಕೌಜಲಗಿ ದೇವಿಗೆ ಮಹಾ ಮಂಗಳಾರತಿ ಹಾಗೂ ಶಸ್ತ್ರ ಪೂಜೆ ಸಲ್ಲಿಸಿ ದೌಡ್‌ಗೆ ಚಾಲನೆ ನೀಡಲಾಯಿತು. ದೌಡ್‌ವು ನಗರದ ಗ್ರಾಮದೇವಿ ದೇವಸ್ಥಾನ ದಿಂದ ಪ್ರಾರಂಭವಾಗಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಅಂಬೇಡ್ಕರ್ ನಗರದ ಗಾಳಿ ದುರ್ಗಾದೇವಿ ದೇವಸ್ಥಾನದಲ್ಲಿ ಮುಕ್ತಾಯ ಕಂಡಿತು. ಸಂಚರಿಸುವ ಮಾರ್ಗದಲ್ಲಿ ಮನೆಮಂದಿ ರಂಗೋಲಿ, ತಳಿರು ತೋರಣಗಳಿಂದ ಮನೆ ಬಾಗಿಲುಗಳನ್ನು ಅಲಂಕರಿಸಿದ್ದು, ದೌಡ್ ಬರುವಾಗ ಮಾತೆಯರು ಭಗವಾಧ್ವಜಕ್ಕೆ ಆರತಿ ಬೆಳಗಿ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ವಿಶ್ವಹಿಂದೂ ಪರಿಷತ್, ಬಜರಂಗದಳ ಪ್ರಮುಖರು, ಮಾತೆಯರು, ಕಾರ್ಯಕರ್ತರು, ನಗರದ ಪ್ರಮುಖರು, ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ಸರ್ವಾರ್ಥಸೇನ ಮುನಿ ರಾಜರು ಸಮಾಧಿ ಮರಣ

ಕಾಗವಾಡ: ತಾಲೂಕಿನ ಶೇಡಬಾಳ ಪಟ್ಟಣದ ಶಾಂತಿಸಾಗರ ಜೈನ ಆಶ್ರಮದಲ್ಲಿ ಪ.ಪೂ. ಸರ್ವಾರ್ಥಸೇನ ಮುನಿ ಮಹಾರಾಜರು ಮಂಗಳವಾರ ದಿ. 23 ರಂದು ಸಂಜೆ ಸಮಾಧಿ ಪೂರ್ವಕ ಮರಣ ಹೊಂದಿರುತ್ತಾರೆ.ಮೂಲತಃ ಮುಂಬೈ ನಿವಾಸಿ, ಗೃಹಸ್ಥಾಶ್ರಮದ ಸುದರ್ಶನ ಡ್ಯೂಟಿಯ ಸೋಮವಾರ ದಿ. 22 ರಂದು ಪಟ್ಟಣದ ಶಾಂತಿಸಾಗರ ಜೈನ ಆಶ್ರಮದಲ್ಲಿ ಆಚಾರ್ಯ ಧರ್ಮಸೇನ ಮುನಿ ಮಹಾರಾಜರರಿಂದ ನಿರ್ವಹಣಾ ದೀಕ್ಷೆ ಪಡೆದುಕೊಂಡು, ಸರ್ವಾರ್ಥಸೇನ ಮುನಿ ಮಹಾರಾಜರಾಗಿದ್ದು, 12 ವರ್ಷ ಪೂರ್ವದಲ್ಲಿ ನಿಯಮ ಸಲ್ಲೇಖನ ವ್ರತ ಧಾರಣೆ ಮಾಡಿದ್ದರು. ಆ ವ್ರತದ ಅವಧಿ ಮುಗಿಯುತ್ತಿದ್ದಂತೆ ಸೋಮವಾರ ಮುನಿ ದೀಕ್ಷೆ ಪಡೆದ ಕೊಂಡಿದ್ದರು. ಇಂದು ಬೆಳಿಗ್ಗೆ ಯಮ ಸಲ್ಲೇಖನ ಧಾರಣೆ ಮಾಡಿದ ಅವರು ಸಂಜೆ 4.50 ನಿಮಿಷಕ್ಕೆ ಸಮಾಧಿಯನ್ನು ಸಾಧಿಸಿಕೊಂಡಿದ್ದಾರೆ. ಬುಧವಾರ ದಿ. 24 ರಂದು ಬೆಳಗ್ಗೆ 8 ಗಂಟೆಗೆ ಶಾಂತಿಸಾಗರ ಆಶ್ರಮದಲ್ಲಿ ಅಗ್ನಿ ಸಂಸ್ಕಾರ ವಿಧಿ ನೆರವೇರಲಿದೆ.ಅಂತ್ಯ ಸಂಸ್ಕಾರದಲ್ಲಿ ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಿಂದ ಸಾವಿರಾರು ಸಂಖ್ಯೆಯಲ್ಲಿ ಶ್ರಾವಕ ಶ್ರಾವಕಿಯರು ಪಾಲ್ಗೊಳ್ಳಲಿದ್ದಾರೆ. ಇಂದು ಸಂಜೆ ಧರ್ಮಸೇನ ಮುನಿ ಮಹಾರಾಜರು ಹಾಗೂ ಆಚಾರ್ಯರು, ಹಾಗೂ ಸಂಘದ ಮಾತಾಜಿ ತ್ಯಾಗಿಗಳು, ಸರ್ವಾರ್ಥಸೇನ ಮುನಿ ಮಹಾರಾಜರಿಗೆ ವಿನಯಾಂಜಲಿ ಅರ್ಪಿಸಿದರು. ಈ ವೇಳೆ ಪ್ರತಿಷ್ಠಾಚಾರ್ಯ ಆನಂದ್ ಉಪಾಧ್ಯ, ವ್ಯವಸ್ಥಾಪಕ ರಾಜು ನಾಂದ್ರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಮಿಕರ ಕಚೇರಿ ಎದುರು ಪ್ರತಿಭಟನೆ

ರಾಮದುರ್ಗ: ಕಾರ್ಮಿಕ ಕಲ್ಯಾಣ ಮಂಡಳಿಯ ವಿವಿಧ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸುತ್ತಿಲ್ಲ. ಭ್ರಷ್ಟಾಚಾರ ತಾಂಡವಾಡುತ್ತಿದೆ ಎಂದು ಆರೋಪಿಸಿ, ಸ್ಥಳೀಯ ಕಟ್ಟಡ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕ ಕಛೇರಿ ರಾಮದುರ್ಗ ಕಾರ್ಮಿಕ ಕಛೇರಿ ಎದುರು ಪ್ರತಿಭಟನೆ ನಡೆಸಿ, ಕಾರ್ಮಿಕ ನಿರೀಕ್ಷಕರಾದ ನಾಗರಾಜ ಮೂಲಕ ರಾಜ್ಯ ಸರ್ಕಾರಕ್ಕೆ ಮತ್ತು ಉಪ ಕಾರ್ಮಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು.ಕಟ್ಟಡ ಕಾರ್ಮಿಕರ ಟೂಲ್ ಕಿಟ್‌ಗಳ ಹೆಸರಿನಲ್ಲಿ ಮಂಡಳಿಯಲ್ಲಿ ಹಣದ ದುರ್ಬಳಿಕೆ ನಡಿದಿದೆ. ಇದು ಖಂಡನೀಯ. ವೈದ್ಯಕೀಯ ತಪಾಸಣಾ ಕಾರ್ಯಕ್ಕೆ ರೂ.258 ಕೋಟಿ ಹಣ ದುರ್ಬಳಿಕೆ ಆಗಿದೆ. ಸಿಎಜಿ ವರದಿ ಮಾಡಿರುವುದು ಮಾಧ್ಯಮದಲ್ಲಿ ಸುದ್ದಿಯಾಗಿದೆ. ಮಂಡಳಿಯಲ್ಲಿನ ಭ್ರಷ್ಟಾಚಾರ ಕೂಡಲೇ ನಿಲ್ಲಬೇಕು ಕಾರ್ಮಿಕ ಮುಖಂಡ ಗೈಬು ಜೈನೆಖಾನ, ಕಟ್ಟಡ ಕಾರ್ಮಿಕ ಸಂಘಟನೆಯ ತಾಲೂಕಾಧ್ಯಕ್ಷ ನಾಗಪ್ಪ ಸಂಗೊಳ್ಳಿ, ಕಾರ್ಯದರ್ಶಿ ಮಾರುತಿ ಮುದಗುರಿ, ಶಿದ್ಲಿಂಗಪ್ಪ ಸಿಂಗಾರಗೊಪ್ಪ, ಮಹಾದೇವ ಕೊಪ್ಪದ, ಗುಡುಸಾಬ ಕೌಜಲಗಿ, ಮೆಹಬೂಬ ಬಡೇಖಾನ್, ಬಸವ್ವ ಬೆಳ್ಳಿವರಿ, ದೀಪಾ ಇಡಗಲ್ ಮತ್ತು ಗಿರಿಜವ್ವ ಕುರಿ ಸೇರಿದಂತೆ ಮತ್ತಿತರರಿದ್ದರು.

ಸಹಕಾರ ಸಂಘಕ್ಕೆ 24 ಲಕ್ಷ ರು.ನಿವ್ವಳ ಲಾಭ

ಗೋಕಾಕ: ಪ್ರಸಕ್ತ ಸಾಲಿನಲ್ಲಿ ಗೋಕಾಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಗೋಕಾಕ 23.61 ಕೋಟಿ ವಹಿವಾಟು ನಡೆಸಿ 24ಲಕ್ಷ ಲಾಭಗಳಿಸಿ ಪ್ರಗತಿ ಪತದತ್ತ ಸಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಬಸವರಾಜ ಭಂಡಾರಿ ಹೇಳಿದರು. ಸೋಮವಾರದಂದು ನಗರದ ಗೋಕಾಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯಾಲಯದಲ್ಲಿ 97ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಸಂಘದ ಪ್ರಗತಿಗೆ ಸದಸ್ಯರು ಸಹರಿಸುವಂತೆ ಕೋರಿದರು.ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯೂಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಸತ್ಕರಿಸಲಾಯಿತು.ಉಪಾಧ್ಯಕ್ಷೆ ಸರೋಜಿನಿ ಹೆಗ್ಗನ್ನವರ, ನಿರ್ದೇಶಕರುಗಳಾದ ಮಾರುತಿ ಜಡೇನ್ನವರ, ಗಜಾನನ ತಟ್ಟಿಮನಿ ಇದ್ದರು.

{ಪ್ರಿಯಾಂಕ್ ಖರ್ಗೆ} ಐಟಿಬಿಟಿ ಸಚಿವ

ಮಂಗಳೂರಿನಲ್ಲಿ ಟೆಕ್ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿದೆ. 3,500 ಕೋಟಿ ರು.ಗಳ ಕಾರ್ಯಕಾರಿ ಬಂಡವಾಳದೊಂದಿಗೆ ಟೆಕ್ ಪಾರ್ಕ್ ಅಸ್ತಿತ್ವಕ್ಕೆ ಬರಲಿದ್ದು, ಮುಂದಿನ ಐದು ವರ್ಷದೊಳಗೆ ಮಂಗಳೂರನ್ನು ಐಟಿ ಕ್ಷೇತ್ರದಲ್ಲಿ ಮತ್ತೊಂದು ಬೆಂಗಳೂರು ಆಗಿ ರೂಪಿಸಲು ಪ್ರಯತ್ನವಾಗಲಿದೆ. ಕೇಂದ್ರ ಸರಕಾರದ ವಿಕ್ಷಿತ್ ಭಾರತ್, ಯೋಜನೆಗಳಿಗೆ ರಾಜ್ಯ ಸರಕಾರವೂ ಅಗತ್ಯ ಸೌಲಭ್ಯ ಕಲ್ಪಿಸಲು ಸಿದ್ಧವಿದೆ.

ಉಮೇಶ ಕತ್ತಿ ಉತ್ತರ ಕರ್ನಾಟಕದ ಕನಸುಗಾರ ಗ್ರಂಥ ಲೋಕಾರ್ಪಣೆ, ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಹೇಳಿಕೆ

ಪಕ್ಷ ರಹಿತ ಜನಮನ್ನಣೆ ಗಳಿಸಿದ್ದ ಉಮೇಶ ಕತ್ತಿ: ಸಂಸದ

ಹುಕ್ಕೇರಿ: ರಾಜ್ಯದಲ್ಲಿ ಪಕ್ಷ ರಹಿತವಾಗಿ ಜನಮನ್ನಣೆ ಗಳಿಸಿದ ಏಕೈಕ ಜನನಾಯಕ ದಿ.ಉಮೇಶ ಕತ್ತಿ. ಜನಪರ ಅಭಿವೃದ್ಧಿ ಕಾರ್ಯಗಳಲ್ಲಿ ಯಾರ ಮುಲಾಜಿಗೆ ಒಳಗಾಗದ ಅವರು ಎಲ್ಲ ಪಕ್ಷದ ನಾಯಕರ ಗೆಳೆತನ ಹೊಂದಿದ್ದರು. ತಮ್ಮದೇ ಆದ ವ್ಯಕ್ತಿತ್ವದಿಂದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡ ಅವರಲ್ಲಿ ಜನಪರ ಕಾಳಜಿ ಇತ್ತುಎಂದು ಬೆಳಗಾವಿ ಸಂಸದರು, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ ಹೇಳಿದರು.

ಬುಧವಾರದಂದು ತಾಲೂಕಿನ ಬೆಲ್ಲದ ಬಾಗೇವಾಡಿಯ ವಿಶ್ವರಾಜ ಶುಗರ್ಸನಲ್ಲಿ ಹಮ್ಮಿಕೊಂಡ''ಉಮೇಶ ಕತ್ತಿ ಉತ್ತರ ಕರ್ನಾಟಕದ 'ಕನಸುಗಾರ''ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಅವರು ನೇರ ನಡೆ ನುಡಿಯ ವ್ಯಕ್ತಿಗಳಾಗಿದ್ದರು. ಅವರು ಕನಸುಗಳಿಗಿಂತ ನೈಜತೆಗೆ ಆದ್ಯತೆ ಕೊಟ್ಟವರು. ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರಕಾರ ವಿಫಲವಾಗಿದೆ ಎಂಬ ಕೊರಗು ಅವರನ್ನು ಸದಾಕಾಡುತ್ತಿತ್ತು ಎಂದರು.

ದಿ.ಉಮೇಶ ಕತ್ತಿ ಅವರ ಸ್ಮರಣೆಯ ಸಾಕ್ಷಿಚಿತ್ರವನ್ನು ಬಿಡುಗಡೆಗೊಳಿಸಿ ಮಾತನಾಡಿದ ಶಾಸಕ ಬಸನಗೌಡ ಯತ್ನಾಳ ಅವರು ನೇರ ದಿಟ್ಟ ನಿರಂತರ ವ್ಯಕ್ತಿತ್ವಕ್ಕೆ

ಉಮೇಶ ಕತ್ತಿ ಉತ್ತರ ಕರ್ನಾಟಕದ ಕನಸುಗಾರ ಗ್ರಂಥ ಲೋಕಾರ್ಪಣೆ ಸಮಾರಂಭವನ್ನು ಶ್ರೀಗಳು, ಜನಪ್ರತಿನಿಧಿಗಳು ಉದ್ಘಾಟಿಸಿದರು.

ಉಮೇಶ ಕತ್ತಿ ನಿದರ್ಶನ. ಬೇರೆಯಾರನ್ನು ಮೆಚ್ಚಿಸುವುದಕ್ಕಿಂತ ಕ್ಷೇತ್ರದ ಜನರಿಗೆ ಮನ್ನಿಸಿ ಅವರಿಗೆ ಲೆಕ್ಕ ಕೊಡಬೇಕು ಎಂಬ ತತ್ವ ಉಮೇಶ ಕತ್ತಿಅವರದ್ದಾಗಿತ್ತು. ಬೆಳಗಾವಿ ಜಿಲ್ಲೆಯ ರಾಜಕೀಯ ವಿಘಟನೆಯತ್ತ ಸಾಗಿದ್ದು, ಅದನ್ನು ಎದುರಿಸಿ ಅಭಿವೃದ್ಧಿ ಪರ್ವದತ್ತ ತೆಗೆದುಕೊಂಡು ಹೋಗಲು ಕತ್ತಿ ಕುಟುಂಬದ ಜತೆಗೆ ನಾವೆಲ್ಲ ಇದ್ದೇವೆ ಎಂಬ ಭರವಸೆಯಿತ್ತರು.

ರಾಜ್ಯಸಭಾ ಸದಸ್ಯಈರಣ್ಣ ಕಡಾಡಿ ಮಾತನಾಡಿ ಜಿಲ್ಲೆಯ ಹಲವಾರು ನಾಯಕರನ್ನು ಬೆಳೆಸಿದ ಗರಿಮೆ ಉಮೇಶ ಕತ್ತಿಅವರಿಗೆ ಸಲ್ಲುತ್ತದೆ.ಅವರ ಅವಧಿಯಲ್ಲಿಜಿಲ್ಲೆ ಸಾಕಷ್ಟು ಅಭಿವೃದ್ಧಿ ಕಂಡಿತ್ತು. ಉತ್ತರಕರ್ನಾಟಕ ಭಾಗದ ವ್ಯಕ್ತಿ ಅವರು ಎನ್ನುವುದಕ್ಕಿಂತ ಈ ಭಾಗದ ಶಕ್ತಿ ಆಗಿದ್ದರು. ರಾಜಕೀಯಕ್ಕಿಂತ ಕೃಷಿ ಪ್ರೇಮಿಯಾಗಿದ್ದ ಅವರು ಕೃಷಿ ಸಚಿವರಾಗಿ ರೈತರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ್ದ ರಾಜ್ಯದ ಮೊದಲ ಸಚಿವರೆಂಬ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ ಎಂದರು. ವಿವಿಧ ಪಕ್ಷಗಳಿಂದ ಸ್ಪರ್ಧಿಸಿ ಆಯ್ಕೆಯಾಗುತ್ತಿದ್ದ ಅವರು ಪಕ್ಷ, ಜಾತಿ ಆಧಾರಿತ ನಾಯಕರಾಗದೇ ಜನರ ಮನದ ನಾಯಕರಾಗಿದ್ದರೆಂದರು.

ಸಮಾರಂಭದ'ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಸದಸ್ಯರು, ದೆಹಲಿ ವಿಶೇಷ ಪ್ರತಿನಿಧಿಯಾದ ಪ್ರಕಾಶ ಹುಕ್ಕೇರಿ ಮತ್ತು ಶಾಸಕ ಅಭಯ ಪಾಟೀಲ, ಮಾಜಿ ಸಂಸದ ಶಿವಕುಮಾರ ಉದಾಶಿ ಮಾತನಾಡಿ ಉಮೇಶ ಕತ್ತಿರಾಜಕೀಯ ಮೊಗಸಾಲೆಯ ಧ್ರುವತಾರೆ. ಅವರ ಜನಪ್ರಿಯತೆಗೆ ಸೇರಿದ ಸಹಸ್ರಾರು ಜನರೇ ಸಾಕ್ಷಿಯಾಗಿದ್ದಾರೆ. ಜಿಲ್ಲೆಯ ರಾಜಕಾರಣದಲ್ಲಿ ಕತ್ತಿ ಕುಟುಂಬ ಯಾವುದೇ ನಿರ್ಣಯತೆಗೆದುಕೊಂಡರೆ ಅವರ ಜೊತೆಗೆ ನಾವಿದ್ದೇವೆಂದರು. ನಿಡಸೋಶಿಯ ಜಗದ್ಗುರು ಡಾ.ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ ಉಮೇಶ ಕತ್ತಿಅವರ ಮೊಮ್ಮಕ್ಕಳಾದ ಆರ್ಯಾನ್,ಆರುಷ್, ಶಾಂಭವಿ ಅವರುಅಜ್ಜನಕುರಿತುಮಾತನಾಡಿದರು. ಪ್ರಾರಂಭದಲ್ಲಿ ಶಾಸಕ ನಿಖಿಲ ಕತ್ತಿ ಪ್ರಾಸ್ತಾವಿಕವಾಗಿ ಮಾತನಾಡಿ ಸರ್ವರನ್ನು ಸ್ವಾಗತಿಸಿದರು. ಹುಕ್ಕೇರಿ ವಿರಕ್ತಮಠದ ಶಿವಬಸವ ಮಹಾಸ್ವಾಮಿಗಳು, ಬೆಲ್ಲದ ಬಾಗೇವಾಡಿ ವಿರಕ್ತಮಠದ ಶಿವಾನಂದ ಮಹಾಸ್ವಾಮಿಗಳು, ಕ್ಯಾರಗುಡ್ಡಅವಜೀಕ 'ರಆಶ್ರಮದಅಭಿನವ ಮಂಜುನಾಥ ಶ್ರೀಗಳು, ಶಾಸಕರಾದ ಅಶೋಕ ಪಟ್ಟಣ, ವಿಠ್ಠಲ ಹಲಗೇಕರ, ಗಣೇಶ ಹುಕ್ಕೇರಿ, ದುರ್ಯೋಧನ ಐಹೊಳೆ, ವಿಧಾನ ಪರಿಷತ್ ಸದಸ್ಯ ಹಣುಮಂತ ನಿರಾಣಿ, ಮಾಜಿ ಶಾಸಕ ಅನೀಲ ಬೆನಕೆ ಮತ್ತಿತರರಿದ್ದರು.

ಉತ್ತರ ಕರ್ನಾಟಕದ ಧ್ವನಿ ಆಗಿದ್ದರು

ಉತ್ತರ'ಕರ್ನಾಟಕ ಸಮಸ್ಯೆಗಳಿಗೆ ಧ್ವನಿಯಾಗಿದ್ದ ನನ್ನಅಣ್ಣ ಜಾತ್ಯಾತೀತ, ಪಕ್ಷಾತೀತ ವ್ಯಕ್ತಿ ಅಗಿದ್ದರು.ಅವರಿಲ್ಲದ'ಕೊರಗು ಒಂದೆಡೆಯಾದರೆ, ಅದರ ದುರುಪಯೋಗ ಮಾಡಿಕೊಳ್ಳಲು ಮುಂದಾಗಿರುವ ಕೆಲವರ ಕೃತ್ಯ ಮನಸ್ಸಿಗೆ ನೋವು ತಂದಿದೆಎಂದು ಭಾವುಕರಾದರು. ಆದರೆ ಕತ್ತಿ ಹಾಗೂ ಎ.ಬಿ.ಪಾಟೀಲ ಅವರ ಕುಟುಂಬ ಒಂದಾಗಿ ಸುಂಟರಗಾಳಿಯಂತೆ ಅವರನ್ನುಎದುರಿಸುತ್ತೇವೆಂದರು.

ಮಲಪ್ರಭಾ ಸಕ್ಕರೆ ಕಾರ್ಖಾನೆ ಚುನಾವಣೆಗೆ ಸಿದ್ಧತೆ: ಪ್ರಭಾವತಿ

ಚನ್ನಮ್ಮನ ಕಿತ್ತೂರು: ದಿ. 28 ರಂದು ನಡೆಯುವ ಎಂ ಕೆ ಹುಬ್ಬಳ್ಳಿಯ ಮಲಪ್ರಭಾ ಸಕ್ಕರೆ ಕಾರ್ಖಾನೆಯ ಚುನಾವಣೆಗೆ ಎಲ್ಲ ಸಿದ್ದತೆಗಳನ್ನು ಅಚ್ಚುಕಟ್ಟಾಗಿ ಮಾಡಲಾಗುತ್ತಿದೆ ಎಂದು ಚುನಾವಣಾಧಿಕಾರಿ ಪ್ರಭಾವತಿ ಫಕ್ಕೀರಪೂರ ತಿಳಿಸಿದರು.

ತಾಲೂಕಿನ ಎಂ ಕೆ ಹುಬ್ಬಳ್ಳಿಯ ಮಲಪ್ರಭಾ ಸಕ್ಕರೆ ಕಾರ್ಖಾನೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 16903 ಸದಸ್ಯರು ಮತದಾನದ ಹಕ್ಕು ಪಡೆದಿದ್ದಾರೆ. ಮತದಾನ ಮಾಡಲು 34 ಮತಗಟ್ಟೆಗಳನ್ನು ನಿರ್ಮಿಸಲಾಗಿದೆ. ಪ್ರತಿ ಮತಗಟ್ಟೆಗೆ ಒರ್ವ ಪೊಲೀಸ್ ಸೇರಿ 6 ಜನ ಸಿಬ್ಬಂದಿಗಳನ್ನು ನೇಮಿಸಲಾಗಿದೆ ಎಂದರು.

ಅಂಚೆ ಮೂಲಕ ಮತದಾನ ಮಾಡುವ ಮತದಾರರಿಗೆ ಚುನಾವಣೆಯ ನೋಟೀಸು ಹಾಗೂ ವೇಳಾಪಟ್ಟಿಯನ್ನು ಮುಂಚಿತವಾಗಿ ಕಳಿಸಲಾಗಿದೆ. ಮತಗಟ್ಟೆಯ ಗುರುತಿನ ಸಲುವಾಗಿ ಸ್ಲಿಪ್ ಕೌಂಟರ್‌ಗಳನ್ನು ನಿರ್ಮಿಸಲಾಗಿದೆ. ಮತ ಏಣಿಕೆಗೆ ಪ್ರತ್ಯೇಕ ಇಲಾಖೆಯ ಸಿಬ್ಬಂದಿಗಳು ಹಾಗೂ 7 ಜನ ತಾಲೂಕಾ ಮಟ್ಟದ ಅಧಿಕಾರಿಗಳನ್ನು ನೇಮಿಸಿ ತರಬೇತಿ ನೀಡಲಾಗಿದೆ. ಚುನಾವಣೆಗೆ ಸಂಬಂಧಪಟ್ಟ ಮಾಹಿತಿಗಾಗಿ ವಾಟ್ಸಾಪ್ ಗ್ರೂಪ್ ರಚಿಸಲಾಗಿದೆ.ದಿ. 28 ರಂದು ಜರುಗುವ ಕಾರ್ಖಾನೆಯ ಚುನಾವಣೆಯಲ್ಲಿ ಒಟ್ಟು 44 ಅಭ್ಯರ್ಥಿಗಳು ಚುನಾವಣೆಯ ಕಣದಲ್ಲಿದ್ದಾರೆ. ಸಾಮಾನ್ಯ ವರ್ಗದಿಂದ 27, ಪ್ರವರ್ಗ ಎ 03, ಪ್ರವರ್ಗ ಬ 02, ಪರಿಶಿಷ್ಟ ಜಾತಿ 4, ಪರಿಶಿಷ್ಟ ಪಂಗಡ 3 ಹಾಗೂ ಮಹಿಳಾ ಕ್ಷೇತ್ರದಿಂದ 5 ಅಭ್ಯರ್ಥಿಗಳು ಚುನಾವಣೆಯಲ್ಲಿ ಭಾಗವಹಿಸಿದ್ದಾರೆ. ಸಾಮಾನ್ಯ ಕ್ಷೇತ್ರಕ್ಕೆ ಬಿಳಿ ಬಣ್ಣ, ಪ್ರವರ್ಗ-ಎ ಕ್ಷೇತ್ರಕ್ಕೆ ತಿಳಿ ಆಕಾಶ ನೀಲಿ, ಪ್ರವರ್ಗ-ಬ ಕ್ಷೇತ್ರಕ್ಕೆ ತಿಳಿ ಹಳದಿ, ಪರಿಶಿಷ್ಟ ಜಾತಿ ಕ್ಷೇತ್ರಕ್ಕೆ ತಿಳಿ ನೀಲಿ, ಪರಿಶಿಷ್ಟ ಪಂಗಡ ಕ್ಷೇತ್ರಕ್ಕೆ ತಿಳಿ ಹಸಿರು ಹಾಗೂ ಮಹಿಳಾ ಕ್ಷೇತ್ರಕ್ಕೆ ತಿಳಿ ಗುಲಾಬಿ ಬಣ್ಣದ ಪ್ರತ್ಯೇಕ ಬ್ಯಾಲೆಟ್ ಪೇಪರ್‌ಗಳನ್ನು ಮಾಡಿಸಲಾಗಿದೆ.

ಕಾರ್ಖಾನೆ ಆವರಣದಲ್ಲಿ ಮಳೆ ಹಾಗೂ ಬಿಸಿಲಿನಿಂದ ಮತದಾರರಿಗೆ ತೊಂದರೆಯಾಗದಂತೆ ವಾಟರ್ ಪ್ರೂಫ್ ಪೆಂಡಾಲ್ ವ್ಯವಸ್ಥೆ ಮಾಡಿಸಲಾಗಿದೆ. ಸುಮಾರು 1 ಸಾವಿರ ವಾಹನಗಳಿಗೆ ಪಾರ್ಕಿಂಗ್, ಕುಡಿಯುವ ನೀರು, ವಯಸ್ಸಾದ ಮತದಾರರಿಗೆ ಮಾರ್ಗ ದರ್ಶನ ಮಾಡಲು ಪ್ರತ್ಯೇಕವಾದ ತಂಡ ರಚಿಸಲಾಗಿದೆ.ಮತದಾನ ಮಾಡಲು ಬರುವ ಮತದಾರರು ಕಾರ್ಖಾನೆಯಿಂದ ನೀಡಿ ರುವ ಗುರುತಿನ ಚೀಟಿ, ಆಧಾರಕಾರ್ಡ, ವೋಟರ ಕಾರ್ಡ, ಪ್ಯಾನಕಾರ್ಡ, ಪಾಸಪೋರ್ಟ ಅಥವಾ ಡ್ರೈವಿಂಗ್ ಲೈಸನ್ಸ ಇದರಲ್ಲಿ ಯಾವುದೆ ಒಂದು ಗುರುತಿನ ಚೀಟಿ ತೋರಿಸಿ ಕೌಂಟರ್‌ನಲ್ಲಿ ಸ್ಲಿಪ್ ಪಡೆದು ಮತದಾನ ಮಾಡಬೇಕು ಎಂದರು. ಸಾಯಂಕಾಲ 6 ಗಂಟೆಗೆ ಮತ ಎಣಿಕೆ :ಮತದಾನ ಪ್ರಕ್ರಿಯೆ ಮುಗಿದ ಮೇಲೆ ಸಾಯಂಕಾಲ 6 ಗಂಟೆಗೆ ಮತ ಎಣಿಕೆ ಪ್ರಾರಂಭವಾಗಲಿದೆ. ಮತ ಎಣಿಕೆಗೆ ಒಟ್ಟು 45 ಟೇಬಲ್‌ಗಳನ್ನು ನಿರ್ಮಿಸಲಾಗಿದ್ದು, ಪ್ರತಿಯೊಂದು ಟೇಬಲ್‌ಗೆ 5 ಜನ ಸಿಬ್ಬಂದಿಗಳನ್ನು ನೇಮಿಸಲಾಗಿದೆ. 198 ಪೊಲೀಸರನ್ನು ಚುನಾವಣೆ ಬಂದೋಬಸ್ತ್ ಗೆ ನೇಮಿಸಲಾಗುತ್ತದೆ ಎಂದು ತಿಳಿಸಿದರು. ನಿರ್ದೇಶಕ ಮೋಹನ ಹಿರೇಮಠ ಇದ್ದರು.

ಟೀಕೆಗಳಿಗೆ ಉತ್ತರಿಸಲ್ಲ: ಶಾಸಕ ಬಾಲಚಂದ್ರ

ಹುಕ್ಕೇರಿ : ನಮ್ಮ ವಿರೋಧಿಗಳು ಸಾವಿರ ಸಲ ಟೀಕಿಸಲಿ, ಬೈಯಲಿ. ಅಂತಹ ಯಾವುದೇ ಟೀಕೆ- ಟಿಪ್ಪಣಿಗಳಿಗೆ ಉತ್ತರಿಸುವ ಗೋಜಿಗೆ ಹೋಗುವುದಿಲ್ಲ. ಅವುಗಳ ಬಗ್ಗೆಯೂ ತಲೆ ಕೆಡಿಸಿಕೊಳ್ಳುವುದಿಲ್ಲ. ನಾವು ಯಾರನ್ನೂ ಟೀಕಿಸುವುದಿಲ್ಲ. ಮತ್ತೊಬ್ಬರನ್ನು ಬೈಯುವಂತಹ ಸಂಸ್ಕೃತಿಯೂ ನಮ್ಮದಲ್ಲ ಎಂದು ಅರಭಾವಿ ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.

ಮಂಗಳವಾರ ರಾತ್ರಿ ಹುಕ್ಕೇರಿ ತಾಲ್ಲೂಕಿನ ಘೋಡಗೇರಿ ಗ್ರಾಮದ ಹೊರವಲಯದಲ್ಲಿ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಂಘದ ಚುನಾವಣಾ ನಿಮಿತ್ತ ನಡೆದ ಘೋಡಗೇರಿ ಜಿಲ್ಲಾ ಪಂಚಾಯತ ವ್ಯಾಪ್ತಿಯ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ವಿರೋಧಿಗಳು ಎಷ್ಟೇ ಅಪಪ್ರಚಾರ, ಸುಳ್ಳು ವದಂತಿಗಳನ್ನು ಹಬ್ಬಿಸುತ್ತಿದ್ದರೂ ಅವುಗಳಿಗೆ ಕಿವಿಗೊಡದಂತೆ ಅವರು ಮನವಿ ಮಾಡಿಕೊಂಡರು.

ಈ ಚುನಾವಣೆಯಲ್ಲಿ ರೈತರ ಹಿತಕ್ಕಾಗಿ ಯಾವ ಯೋಜನೆಗಳನ್ನು ಹಾಕಿಕೊಳ್ಳದೇ ಪ್ರತಿ ಸಂದರ್ಭದಲ್ಲೂ ನಮ್ಮನ್ನು ಬೈಯುವ ಒಂದಂಶದ ಕಾರ್ಯಕ್ರಮವನ್ನು ಅವರು ಹಾಕಿಕೊಂಡಂತಿದೆ. ಸಮಯ-ಸಂದರ್ಭಗಳನ್ನು ಲೆಕ್ಕಿಸದೇ ಎಲ್ಲ ಕಡೆಯೂ ಬೈಯುತ್ತ ಹೋಗುತ್ತಿದ್ದಾರೆ. ನಾವು ಮಾತ್ರ ರೈತರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ಯಾರ ಅಂಜಿಕೆಯೂ ನಮಗಿಲ್ಲ. ಅಚಲ ವಿಶ್ವಾಸ, ಧೈರ್ಯದಿಂದ ಈ ಚುನಾವಣೆಯನ್ನು ಎದುರಿಸುತ್ತಿದ್ದೇವೆ ಎಂದು ಅವರು ತಿಳಿಸಿದರು.

ಈ ಸಲ ದೇವರು ದೊಡ್ಡ ಅವಕಾಶವನ್ನು ಕೊಟ್ಟಿದ್ದಾನೆ. ಬದಲಾವಣೆ ಕಾಲ ಬಂದಿದೆ. ವಿರೋಧಿಗಳ ಸರ್ವಾಧಿಕಾರತ್ವವನ್ನು ಧಿಕ್ಕರಿಸಿ ವಿದ್ಯುತ್ ಸಂಘದ ಅಭಿವೃದ್ಧಿಗೆ ನಮ್ಮ ಪ್ಯಾನಲ್ ನ್ನು ಬೆಂಬಲಿಸುವಂತೆ ಅವರು ಮನವಿ ಮಾಡಿಕೊಂಡರು.

ಶಾಸಕ ಬಾಲಚಂದ್ರ ಜಾರಕಿಹೊಳಿಯವರಿಗೆ ಕಾರ್ಯಕರ್ತರು ಬೃಹತ್ ಹಾರವನ್ನು ಹಾಕಿ ಗೌರವಿಸಿದರು. ವೇದಿಕೆಯಲ್ಲಿ ಮಾಜಿ ಸಚಿವ ಶಶಿಕಾಂತ ನಾಯಿಕ, ಹೀರಾ ಶುಗರ್ಸ್ ಅಧ್ಯಕ್ಷ ಅಜ್ಜಪ್ಪ ಕಲ್ಲಟ್ಟಿ, ದಿ. ಅಪ್ಪಣ್ಣಗೌಡ ಪಾಟೀಲ ಸಹಕಾರಿ ಪ್ಯಾನಲ್ ಅಭ್ಯರ್ಥಿಗಳಾದ ಶಿವಕುಮಾರ ಮಟಗಾರ, ಅಮರ ನಲವಡೆ ಸೇರಿ ಅನೇಕರು ಉಪಸ್ಥಿತರಿದ್ದರು.

ಶೇರುದಾರರ, ರೈತರ ಪರವಾಗಿ ಕೆಲಸ ಮಾಡುತ್ತೇನೆ: ಬಸವರಾಜ ಹಿರೇರಡ್ಡಿ

ಪತ್ರಿಕಾಗೋಷ್ಠಿಯಲ್ಲಿ ದಿ.ಬಿ.ಬಿ ಹಿರೇರಡ್ಡಿ ಪೆನ್‌ಲ್‌ನಿಂದ ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆಗೆ ಆಯ್ಕೆಯಾದ ಬಸವರಾಜ ಹಿರೇರಡ್ಡಿ ಮಾತನಾಡಿದರು.

ರಾಮದುರ್ಗ: ಖಾನಪೇಠ ಶ್ರೀ ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆಗೆ ಶೇರುದಾರರು ಇತ್ತಿಚೆಗೆ ದಿ. ಬಿ.ಬಿ ಹಿರೇರಡ್ಡಿ ಅವರ ಪೆನಲ್‌ನಿಂದ ಸುಮಾರು 7 ನಿರ್ದೇಶಕರನ್ನು ಮತ ನೀಡಿ ಆಯ್ಕೆ ಮಾಡಿದ್ದು, ಸರ್ವರು ಶೇರುದಾರರ ಹಾಗೂ ರೈತರ ಪರವಾಗಿ ಕೆಲಸ ಮಾಡುತ್ತೇವೆ ಎಂದು ದಿ.ಬಿ.ಬಿ ಹಿರೇರಡ್ಡಿ ಪೆನಲ್‌ನ ನಿರ್ದೇಶಕ ಬಸವರಾಜ ಹಿರೇರಡ್ಡಿ ಹೇಳಿದರು.

ಪಟ್ಟಣದ ಪ್ರೆಸ್‌ಕ್ಲಬನಲ್ಲಿ ದಿ.ಬಿ.ಬಿ. ಹಿರೇರಡ್ಡಿ ರೈತ ಹಿತರಕ್ಷಣಾ ಪೆನಲ್ ನೇತೃತ್ವದಲ್ಲಿ ಮಂಗಳವಾರ ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ರೈತರಿಗೆ ಬಿಲ್ ಪಾವತಿ ಮಾಡುವಲ್ಲಿ ವ್ಯತ್ಯಾಸ ಉಂಟಾಗಿದೆ. ಶೇರುದಾರರ ಹಾಗೂ ತಾಲೂಕಿನ ಜನತೆಯ ಹಿತ ಕಾಯುವದಲ್ಲಿ ಕಾರ್ಖಾನೆಯಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವುದರಲ್ಲಿ ಲೀಜ್ ಪಡೆದ ಕಂಪನಿಯೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ತಾಲೂಕಿನ ರೈತರ ಕಬ್ಬುಗಳನ್ನು ಮೊದಲು ಕಾರ್ಖಾನೆಗೆ ತೆಗೆದುಕೊಳ್ಳುವಂತೆ ಮಾಡಲು ಹೋರಾಟ ಮಾಡುತ್ತೇವೆ.

ನಮ್ಮ ಪೆನಲ್‌ಗೆ ಮತದಾನ ಮಾಡಿದ ರೈತರಿಗೆ ನಾವು ಚಿರಋಣಿಯಾಗಿ ಅವರಿಗೆ ಕೃತಜ್ಞೆ ಸಲ್ಲಿಸುತ್ತಾ, ರೈತರ ಶೇರುದಾರರ ಹಿತ ಕಾಯುವ ನಿಟ್ಟಿನಲ್ಲಿ ಸರ್ವ ನಿರ್ದೇಶಕರು ಕೆಲಸ ಮಾಡುತ್ತೇವೆ.

ನಮ್ಮ ಪೆನಲ್‌ಗೆ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಅಗತ್ಯ ಬಹುಮತ ಇಲ್ಲದಿದ್ದರೂ ವಿರೋಧ ಪಕ್ಷದ ಸ್ಥಾನದಲ್ಲಿದ್ದುಕೊಂಡು ಕಾರ್ಖಾನೆಯ ಅಭಿವೃದ್ಧಿಗೆ ಬೆಂಬಲವಾಗಿ ಒಳಗೂ ಹಾಗೂ ಹೊರಗೂ ಹೋರಾಟ ಮಾಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾರ್ಖಾನೆಯ ನಿರ್ದೇಶಕರಾಗಿ ಆಯ್ಕೆಯಾದ ಪರುತಗೌಡ ಪಾಟೀಲ, ಗೋಪಾಲರಡ್ಡಿ ಸಂಶಿ, ಈರಣ್ಣ ಕಾಮನ್ನವರ, ಬಿ.ಎಸ್. ಸಿದರಡ್ಡಿ, ಮುಖಂಡರಾದ ಬಿ.ಎಫ. ಬಸಿಡೋಣಿ, ಬಾಳಪ್ಪ ಹಂಜಿ ಸೇರಿದಂತೆ ಇತರರಿದ್ದರು.

ಸೊಸೈಟಿ ಪ್ರಥಮ ವರ್ಷದ ಸರ್ವಸಾಧಾರಣ ಸಭೆ

ರಾಯಬಾಗ: ಪ್ರಧಾನಿ ಕೆಎಲ್‌ಇ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆ ರಾಷ್ಟ್ರೀಯ ಸಕ್ಕರೆ ಕಾರ್ಖಾನೆಯ ಮಹಾಮಂಡಳ ದೆಹಲಿಯ ನಿರ್ದೇಶಕರಾದ ಅಮಿತ್ ಕೋರೆ ಹಾಗೂ ಕೆಎಲ್‌ಇ ಸಂಸ್ಥೆಯ ಅಜೀವ ಸದಸ್ಯರಾದ ಡಾ.ಪ್ರೀತಿ ದೊಡ್ಡವಾಡ ಮಾರ್ಗದರ್ಶನದಲ್ಲಿ ಸ್ಥಾಪನೆಗೊಂಡಿರುವ ಅಂಕಲಿ ಗ್ರಾಮದ ಶ್ರೀ ಕೋರೆ ಪ್ರಭಾಕರ ಸಾಹುಕಾರ್ ಕ್ರೆಡಿಟ್ ಸೊಸಾಯಿಟಿಯು ಒಂದೇ ವರ್ಷದಲ್ಲಿ 7.33.25.172 ರೂಪಾಯಿ ಠೇವಣಿ ಸಂಗ್ರಹಿಸಿ ರೂ.1.75747 ನಿವ್ವಳ ಲಾಭ ಗಳಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ರಾಜಕುಮಾರ ನಷ್ಟೇ ಹೇಳಿದರು.

ಇಲ್ಲಿಗೆ ಸಮೀಪದ ಅಂಕಲಿ ಗ್ರಾಮದ ಶಿವಾಲಯದಲ್ಲಿ ಆಯೋಜಿಸಲಾದ ಶ್ರೀಕೋರೆ ಪ್ರಭಾಕರ್ ಸಾಹುಕಾರ್ ಕೋಅಪ್‌ಕ್ರೆಡಿಟ್ ಸೊಸೈಟಿಯ ಪ್ರಥಮ ವರ್ಷದ ಸರ್ವಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಂಸ್ಥೆಯ ವಾರ್ಷಿಕ ವರದಿಯನ್ನು

ಶ್ರೀಕೋರೆ ಪ್ರಭಾಕರ್ ಸಾಹುಕಾರಕೋ.ಅಪ್.ಕ್ರೆಡಿಟ್ ಸೊಸೈಟಿಯ ಪ್ರಥಮ ವಾರ್ಷಿಕ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷ ರಾಜಕುಮಾರ ನಷ್ಟೇ ಮಾತನಾಡಿದರು.

ಮುಖ್ಯಕಾರ್ಯನಿರ್ವಾಹಕರಾದ ಅಮರೇಶ್ ಪಾಂಡರೆ ಮಾತನಾಡಿ ಸಂಸ್ಥೆಯ ಪ್ರಥಮ ವರ್ಷದ ಶೇರು ಬಂಡವಾಳ ರೂ.12.80.500 ಹೊಂದಿದೆ. ಸದರಿ ಸಂಘವು ರೂ 7 ಕೋಟಿ 35 ಲಕ್ಷ 5 ಸಾವಿರಗುಂತಾವನೆ ಮಾಡಿದೆಎಂದು ಹೇಳಿದರು.

ಸದರಿ ಸಭೆಗೆ ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಸಕ್ಕರೆ ಕಾರ್ಖಾನೆಯ ಮಹಾಮಂಡಳ ಹೊಸದೆಹಲಿಯ ನಿರ್ದೇಶಕರಾದ ಅಮಿತ್ ಕೋರೆ ಕೆಎಲ್‌ಇ ಸಂಸ್ಥೆಯ ಅಜೀವ ಸದಸ್ಯರಾದ ಡಾ.ಪ್ರೀತಿ ದೊಡ್ಡವಾಡ ಆಗಮಿಸಿದ್ದರು.

ಮಹಾಂತೇಶ್ ಪಾಟೀಲ, ಉಪಾಧ್ಯಕ್ಷರಾದ ರಾಜೇಂದ್ರ ಹಿರೇಕು ರಬರ, ಅಪ್ಪಯ್ಯ ಹಿರೇಮಠ, ಮಹದೇವ ಪೋಳ, ದಾದಾಸಾಹೇಬ ಸಾಂಗಲೆ. ವೀರೇಶ್ ಕೋರೆಚಿ ದಾನಂದ ತೋರಸೆ, ಭರಮಾ ಬೆಕ್ಕೇರಿ, ಜ್ಯೋತಿ ಕೋರೆ, ಅಮೃತ ಕುಂಬಾರ, ಕೀರ್ತಿಘಟ್ಟೆ, ಗಂಗೂ ನಾಯಕ, ಕಲ್ಲಪ್ಪ ನಿಂಗನೂರೆ, ಲಾಹೀರ ಮಕಾನದಾರ ಹಾಗೂ ಉಪಸ್ಥಿತರಿದ್ದರು.

ಪ್ಲಾಟಿನಂ ಪ್ರಶಸ್ತಿಗೆ ಅಥಣಿ ಡಿಸ್ಟಿಲರಿ ಭಾಜನ

ಕಾಗವಾಡ: ತಾಲೂಕಿನ ಕೆಂಪವಾಡದ ಅಥಣಿ ಶುಗರ್ಸ್ ಲಿಮಿಟೆಡ್‌ನ ಡಿಸ್ಟಲರಿ ಯುನಿಟಗೆ ಕರ್ನಾಟಕದ ಅತ್ಯುತ್ತಮ ಪ್ಲಾಟಿನಂ ಪ್ರಶಸ್ತಿ ಲಭಿಸಿದೆ.

ಸೆಪ್ಟೆಂಬರ್ 19 ರಂದು ಆಂಧ್ರಪ್ರದೇಶದ ತಿರುಪತಿಯಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ದಕ್ಷಿಣ ಭಾರತ ಕಬ್ಬು ಹಾಗೂ ಸಕ್ಕರೆ ತಂತ್ರಜ್ಞಾನ ಸಂಸ್ಥೆ ಅವರು ಅಥಣಿ ಶುಗರ್ಸ್ ಲಿಮಿಟೆಡ್ ಕಾರ್ಖಾನೆಯ ಡಿಸ್ಟಿಲರಿಗೆ ಕರ್ನಾಟಕ ಪ್ರದೇಶದ ಅತ್ಯುತ್ತಮ ಡಿಸ್ಟಿಲರಿ ಪ್ಲಾಟಿನಂ ಪ್ರಶಸ್ತಿ ಯನ್ನು ಕಾರ್ಖಾನೆಯ ಅಧ್ಯಕ್ಷರು ಹಾಗೂ ಮಾಜಿ ಸಚಿವ ಶ್ರೀಮಂತ ಪಾಟೀಲ ಅವರು, ಸ್ವೀಕರಿಸಿದ್ದಾರೆ.

ಮಂಗಳವಾರ ದಿ. 23 ರಂದು ಕಾರ್ಖಾನೆಯ ಕಚೇರಿಯಲ್ಲಿ ಮಾತನಾಡಿದ ಶ್ರೀಮಂತ ಪಾಟೀಲ ಅವರು, ನಮ್ಮ ಕಾರ್ಖಾನೆಯ ಡಿಸ್ಟಿಲರಿಗೆ ಸತತ 8 ನೇ ಬಾರಿಗೆ ಬೆಸ್ಟ್ ಡಿಸ್ಟಿಲರಿ ಪ್ರಶಸ್ತಿ ದೊರಕಿದ್ದು, ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. ಈ ಪ್ರಶಸ್ತಿ ದೊರೆಯಲು ಕಾರಣಿಭೂತರಾದ ನಮ್ಮ ಡಿಸ್ಟಿಲರಿ ಮ್ಯಾನೆಜರ್ ಹಾಗೂ ಎಲ್ಲ ಅಧಿಕಾರಿಗಳಿಗೆ, ಕಾರ್ಮಿಕ ಬಂಧುಗಳಿಗೆ ಅಭಿನಂದನ ಗಳನ್ನು ತಿಳಿಸುತ್ತೇನೆ ಎಂದರು. ಈ ಸಮಯದಲ್ಲಿ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಯುವ ನಾಯಕ ಶ್ರೀನಿವಾಸ ಪಾಟೀಲ, ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಸಿಸ್ಮಾ-ಕೆ ದ ಅಧ್ಯಕ್ಷ ಯೋಗೇಶ ಪಾಟೀಲ, ಡಿಸ್ಟಿಲರಿ ವಿಭಾಗದ ಜನರಲ್ ಮ್ಯಾನೇಜರ ಕಿರಣ ಮುದಾಳೆ ಸೇರಿದಂತೆ ಕಾರ್ಖಾನೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಅತ್ಯುತ್ತಮ ಡಿಸ್ಟಲರಿ ಯುನಿಟ್‌ಗೆ ಪ್ಲಾಟಿನಂ ಪ್ರಶಸ್ತಿಯೊಂದಿಗೆ ಶ್ರೀಮಂತ ಪಾಟೀಲ ಅವರ ಚಿತ್ರ.

ಅಧ್ಯಕ್ಷರಾಗಿ ಶಂಕರಗೌಡ ಪಾಟೀಲ, ಉಪಾಧ್ಯಕ್ಷರಾಗಿ ಗಜಾನನ ಕಾಗಣೀಕರ ಆಯ್ಕೆ

ಶಂಕರಗೌಡ ಪಾಟೀಲ

ಗಜಾನನ ಕಾಗಣೀಕರ

ಬೆಳಗಾವಿ : ಬೆಳಗಾವಿ ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ (ಖಲಕಇಖಖ)ದ ನೂತನ ಅಧ್ಯಕ್ಷರಾಗಿ ಶಂಕರಗೌಡ ಪಾಟೀಲ ಮತ್ತು ಉಪಾಧ್ಯಕ್ಷರಾಗಿ ಗಜಾನನ ಕಾಗಣೀಕರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಂಗಳವಾರ ಸಂಘದ ಕಚೇರಿಯಲ್ಲಿ ಜರುಗಿದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಎರಡೂ ಸ್ಥಾನಗಳಿಗೆ ತಲಾ ಒಂದೊಂದು ನಾಮಪತ್ರಗಳು ಸಲ್ಲಿಕೆಯಾಗಿದ್ದರಿಂದ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ನಡೆಯಿತು ಎಂದು ಚುನಾವಣಾಧಿಕಾರಿಯಾಗಿದ್ದ ಡಿಆರ್‌ಸಿಎಸ್ ಕಚೇರಿಯ ಹಿರಿಯ ನಿರೀಕ್ಷಕ ಗೋವಿಂದಗೌಡ ಪಾಟೀಲ ಅವರು ಪ್ರಕಟಿಸಿದರು.

ಸಹಕಾರಿಯ ಬಹು ಚರ್ಚಿತ ತುರುಸಿನ ಚುನಾವಣೆ ಎಂದೇ ಸಾರ್ವಜನಿಕ ವಲಯದಲ್ಲಿ ಬಿಂಬಿತವಾಗಿದ್ದ ಈ ಚುನಾವಣೆಯು ಲೋಕೋಪಯೋಗಿ ಮತ್ತು

ಸಂಘದ ಅಧ್ಯಕ್ಷರಾಗಿ ಶಂಕರಗೌಡ ಪಾಟೀಲ, ಉಪಾಧ್ಯಕ್ಷರಾಗಿ ಗಜಾನನ ಕಾಗಣೀಕರ ಆಯ್ಕೆಯಾದರು. ಶಾಸಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಸನ್ಮಾನಿಸಲಾಯಿತು.

> ಬೆಳಗಾವಿ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಪ್ರಗತಿಯಲ್ಲಿ ಸಚಿವರಾದ ಸತೀಶ್ ಜಾರಕಿಹೊಳಿ ಮತ್ತು ಲಕ್ಷ್ಮೀ ಹೆಬ್ಬಾಳಕರ ಅವರ ಪಾತ್ರ ಅಮೂಲ್ಯವಾಗಿದೆ.
> -ಚನ್ನರಾಜ ಹಟ್ಟಿಹೊಳಿ, ವಿಧಾನ ಪರಿಷತ್ ಸದಸ್ಯ

ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ನೇತೃತ್ವದಲ್ಲಿ ಸೆ. 8 ರಂದು ನಡೆಯಬೇಕಿದ್ದ ಈ ಚುನಾವಣೆಯ ಎಲ್ಲ ಸ್ಥಾನಗಳಿಗೂ ಅವಿರೋಧವಾಗಿ ಆಯ್ಕೆ ನಡೆಯಿತು. ಈ ಮೂಲಕ ಸಹಕಾರಿ ವಲಯದಲ್ಲಿ ಹೊಸ ಸಂಚಲನಕ್ಕೆ ಈ ಚುನಾವಣೆಯು ಕಾರಣವಾಯಿತು.

ಸೆ. 23 ರಂದು ಸಹಕಾರ ಸಂಘದ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯು ನಿಗದಿಯಾಗಿದ್ದರಿಂದ ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಮತ್ತು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿಯವರ ನೇತೃತ್ವದಲ್ಲಿ ಸಂಘದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಚಿವರ ಸೂಚನೆಯಂತೆ ಎರಡೂ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ಮಾಡಲು ತೀರ್ಮಾನಕ್ಕೆ ಬರಲಾಯಿತು.

ಸಂಘದ ಅಭಿವೃದ್ಧಿಗೆ ಆದ್ಯತೆ-ಬಾಲಚಂದ್ರ ಜಾರಕಿಹೊಳಿ:

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಇವರು. ಬೆಳಗಾವಿ ಟಿಎಪಿಸಿಎಂಎಸ್ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆಯನ್ನು ನೀಡಿದರು. ರೈತರ ಆಶಯದಂತೆ ಸಂಘಕ್ಕೆ ಜಿಲ್ಲೆಯ ಸಚಿವರ ಮಾರ್ಗದರ್ಶನದಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಸಹಕಾರ ರಂಗದಲ್ಲಿ ರಾಜಕಾರಣ ಮಾಡಬಾರದು. ರಾಜಕಾರಣ ಮಾಡಿದ್ರೆ ಸಂಘಗಳು ಉಳಿಯುವುದಿಲ್ಲ. ಸಹಕಾರ ಸಂಘಗಳು ಪ್ರಗತಿಪಥದತ್ತ ಸಾಗಬೇಕಾದರೆ ಎಲ್ಲರೂ ಸೇರಿ ಪಕ್ಷಾತೀತವಾಗಿ ಪರಸ್ಪರ ಸಹಕಾರ ಮನೋಭಾವನೆಯಿಂದ ನಡೆಯಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಾತನಾಡಿ, ಬೆಳಗಾವಿ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಪ್ರಗತಿಯಲ್ಲಿ ಸಚಿವರಾದ ಸತೀಶ್ ಜಾರಕಿಹೊಳಿ ಮತ್ತು ಲಕ್ಷ್ಮೀ ಹೆಬ್ಬಾಳಕರ ಅವರ ಪಾತ್ರ ಅಮೂಲ್ಯವಾಗಿದೆ. ಜಿಲ್ಲೆಯ ಹಾಗೂ ಸಹಕಾರ ಸಂಘದ ಭವಿಷ್ಯದ ದೃಷ್ಟಿಯಿಂದ ಅವಿರೋಧ ಆಯ್ಕೆ ನಡೆಸುವ ಮೂಲಕ ಸಹಕಾರ ಮನೋಭಾವನೆಗಳಿಗೆ ಸಾಕ್ಷಿಯಾಗಿದ್ದಾರೆ.

ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಸಹ ಸಹಕಾರ ರಂಗದಲ್ಲಿರುವ ಸಂಸ್ಥೆಗಳನ್ನು ಉಳಿಸಿ, ಬೆಳೆಸುವ ಮಹತ್ಕಾರ್ಯಗಳನ್ನು ಮಾಡುತ್ತ ಸಹಕಾರಿಗಳ ಆಪದ್ಬಾಂಧವರಂತೆ ಕರ್ತವ್ಯಗಳನ್ನು ನಿರ್ವಹಿಸುತ್ತಿರುವುದು ಸಂತಸವನ್ನುಂಟು ಮಾಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಾಜೇಂದ್ರ ಪಾಟೀಲ, ಮಾಜಿ ಶಾಸಕ ಅರವಿಂದ ಪಾಟೀಲ, ಸಂಘದ ಆಡಳಿತ ಮಂಡಳಿಯ ಸದಸ್ಯರಾದ ಕಲ್ಲಪ್ಪ ಪಾಟೀಲ, ಬಸನಗೌಡ ಪಾಟೀಲ, ಭೀಮಪ್ಪ ಮಳಗಲಿ, ಮಹಾಂತೇಶ ಅಲಾಬದಿ, ಮಹಾಂತೇಶ ಉಳ್ಳೆಗಡ್ಡಿ, ರಮೇಶ ಕಾಳೋಜಿ, ಸುರೇಶ ಸಾವಂತ್, ಲಕ್ಷ್ಮೀ ಸೋನಾಜಿ, ಸಾವಿತ್ರಿ ಪಾಟೀಲ, ಆಸಿಫ್ ಮುಲ್ಲಾ, ಪ್ರದೀಪ ದೇಸಾಯಿ, ಚೇತನ ಕಾಂಬಳೆ, ಸುಕ್ಕಪ್ಪ ಪಕಾಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ದೇಶದ ಸಾಹಿತ್ಯಕ್ಕೆ ದೊಡ್ಡ ನಷ್ಟ

ಬಾಗಲಕೋಟೆ: ಪದ್ಮಭೂಷಣ ಪುರಸ್ಕೃತರಾದ ಡಾ. ಎಸ್.ಎಲ್.ಭೈರಪ್ಪ ಅವರ ನಿಧನದಿಂದ ಮನಸ್ಸಿಗೆ

ನೋವಾಗಿದೆ. ಅವರ ಕೃತಿಗಳು ಪೀಳಿಗೆಯನ್ನು ರೂಪಿಸಿದವು ಹಾಗೂ ಚಿಂತನೆಗೆ ದಿಕ್ಕು ತೋರಿಸಿದವು. ಸಾಹಿತ್ಯ ಲೋಕದಲ್ಲಿ ಅವರ ಸ್ಥಾನ ಅಪ್ರತಿಮ. ಡಾ. ಭೈರಪ್ಪ ಅವರು ಬರಹದಲ್ಲಿ ತತ್ತ್ವ ಇತಿಹಾಸ ಹಾಗೂ ಸಂಶೋಧನಾ ದೃಷ್ಟಿಕೋನಗಳನ್ನು ಬೆರೆಸುವ ಮೂಲಕ ಕನ್ನಡ ಕಾದಂಬರಿಗೆ ಹೊಸ ಆಯಾಮವನ್ನು ನೀಡಿದ್ದರು. ಅವರ ಅಗಲಿಕೆ ಕನ್ನಡ ಮಾತ್ರವಲ್ಲ, ದೇಶದ ಸಾಹಿತ್ಯ ವಲಯಕ್ಕೂ ದೊಡ್ಡ ನಷ್ಟವಾಗಿದೆ ಎಂದು ಮಾಜಿ ಸಚಿವ ಎಸ್.ಆರ್ .ಪಾಟೀಲ ಪ್ರಕಟಣೆ ಮೂಲಕ ಕಂಬನಿ ಮಿಡಿದಿದ್ದಾರೆ.

ಡಾ.ಭೈರಪ್ಪ ನಿಧನದಿಂದ ಬಡವಾದ ಸಾಹಿತ್ಯ ಲೋಕ

ಬಾಗಲಕೋಟೆ: ಪದ್ಮಶ್ರೀ ಹಾಗೂ ಪದ್ಮವಿಭೂಷಣ ಗಳಂತಹ ದೇಶದ ಉನ್ನತ ಪ್ರಶಸ್ತಿಗಳ ಪುರಸ್ಕೃತ ಡಾ.

ಎಸ್.ಎಲ್.ಭೈರಪ್ಪ ಅವರ ಅಗಲಿಕೆಯಿಂದ ನಾಡು ಹಾಗೂ ದೇಶದ ಸಾಹಿತ್ಯ ಲೋಕ ಬಡವಾಗಿದೆ. ಕನ್ನಡ ಸಾರಸ್ವತ ಲೋಕದ ಹಿರಿಯ ಬರಗಹಾರ ಡಾ. ಭೈರಪ್ಪ ಅವರು ತಮ್ಮ ಕಾದಂಬರಿಗಳ ಮೂಲಕ ಕೋಟ್ಯಾಂತರ ಜನರ ಹೃದಯಲ್ಲಿ ನೆಲೆಸಿದ್ದಾರೆ. ಅವರ ಅಸಂಖ್ಯಾತ ಅಭಿಮಾನಿಗಳಿಗೆ ಹಾಗೂ ಕುಟುಂಬಕ್ಕೆ ಡಾ. ಭೈರಪ್ಪನವರ ಅಗಲಿಕೆ ಭರಿಸುವ ಶಕ್ತಿ ನೀಡಲಿ. ಡಾ. ಭೈರಪ್ಪ ಅವರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ನೀಡಲಿ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ ಪ್ರಾರ್ಥಿಸಿದ್ದಾರೆ.

ಕಾರ್ಮಿಕರಿಗೆ ಸನ್ಮಾನ, ಪ್ರಶಸ್ತಿ ವಿತರಣೆ

ಮಹಾಲಿಂಗಪುರ: ಪೌರಕಾರ್ಮಿಕರು ಜನರು ಕಣ್ಣು ಬಿಡುವ ಮುನ್ನ ತಮ್ಮ ಸ್ವಚ್ಛತೆಯ ಕೆಲಸ ಮುಗಿಸುವ ತರಾತುರಿಯಲ್ಲಿರುತ್ತಾರೆ. ಪೌರ ಕಾರ್ಮಿಕರಿಗೆ ಇನ್ನೂ ಹೆಚ್ಚಿನ ಸವಲತ್ತು ಮತ್ತು ಸೌಕರ್ಯಗಳು ಸಿಗಬೇಕು. ಅವರು ಸಲ್ಲಿಸುವ ಸೇವೆಗೆ ಬೆಲೆ ಕಟ್ಟಲಾಗದು ಎಂದು ಪುರಸಭೆ ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ ಹೇಳಿದರು. ಸ್ಥಳೀಯ ಪುರಸಭೆ ಸಭಾಭವನದಲ್ಲಿ ನಡೆದ ಪೌರಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮಾಜದ ಸ್ವಾಸ್ಥ್ಯ ಕಾಪಾಡುವ ಪೌರ ಕಾರ್ಮಿಕರನ್ನು ಗೌರವದಿಂದ ಕರೆಯಬೇಕು, ಅವರ ಸೇವೆ ಅತ್ಯಮೂಲ್ಯವಾಗಿದೆ. ಸ್ವಚ್ಛ ಸುಂದರ ನಗರವನ್ನಾಗಿಸಲು ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಆರೋಗ್ಯ ರಕ್ಷಣೆ ಬಹಳ ಮುಖ್ಯ ಎಂದರು. ಸಂಘಟನಾಧಿಕಾರಿ ಸಿ ಎಸ್ ಮಠಪತಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಸಮುದಾಯ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ವಜ್ರಮಟ್ಟಿ, ಲಯನ್ಸ್ ಕ್ಲಬ್ ಅಧ್ಯಕ್ಷ ಸಿದ್ದು ನಕಾತಿ, ಕಾನಿಪ ಸಂಘದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಮಾತನಾಡಿ ಪೌರಕಾರ್ಮಿಕರು ವೈಯಕ್ತಿಕ ಆರೋಗ್ಯದ ಕಡೆ ಗಮನ ಹರಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು, ಪೌರ ಕಾರ್ಮಿಕರ ಮಕ್ಕಳ ಕಲ್ಯಾಣ ನಿಧಿಯಲ್ಲಿ ವಿದ್ಯಾರ್ಥಿ ವೇತನ, ಲ್ಯಾಪ ಟ್ಯಾಪ ಹಾಗೂ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ, ಆರೋಗ್ಯ, ತಪಾಸನೆ ಸೇರಿದಂತೆ ಹಲವು ಯೋಜನೆಗಳಿದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕು. ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು ಮಕ್ಕಳಿಗೆ ಉನ್ನತ ಶಿಕ್ಷಣ ಒದಗಿಸುವ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ವಿಶ್ವ ಛಾಯಾಗ್ರಹಣ ದಿನಾಚರಣೆ

ಇಳಕಲ್ಲ,:ಸ.20 ಇಂದಿನ ಮೋಬೈಲ್ ಬಳಕೆಯಿಂದಾಗಿ ಪೋಟೊ ಛಾಯಾಗ್ರಾಹಕರು ಈಗ ಕೆಲವೇ ಕೆಲವು ಕಾರ್ಯಕ್ರಮಗಳಿಗೆ ಸೀಮಿತವಾಗಿರುವದರಿಂದ ಕೌಟುಂಬಿಕ ಜೀವನ ನಡೆಸುವುದು ಕಷ್ಟಕರವಾಗಿದೆ ಎಂದು ಇಳಕಲ್ಲ-ಚಿತ್ತರಗಿ ಸಂಸ್ಥಾನಮಠದ ಪೂಜ್ಯ ಗುರು ಮಹಾಂತಶ್ರೀಗಳು ಹೇಳಿದರು. ಇಲ್ಲಿಯ ಗುಬ್ಬಿಪೇಟೆಯ ಶ್ರೀಶಂಕರಿ ರಾಮಲಿಂಗ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಇಳಕಲ್ಲ ತಾಲೂಕಾ ಛಾಯಾಚಿತ್ರ ಸಮೂಹ ಸಂಸ್ಥೆಯು 186ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಹಾಗೂ 24ನೇ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಛಾಯಾ ಹಬ್ಬ ಕಾರ್ಯಕ್ರಮದಲ್ಲಿ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ದಿವ್ಯಸಾನಿಧ್ಯ ವಹಿಸಿ ಅವರು ಮಾತನಾಡಿದರು. ಛಾಯಾಗ್ರಾಹಕರಿಗೆ ಸರಕಾರದಿಂದ ಯಾವುದೇ ರೀತಿ ಸಹಾಯವಿಲ್ಲದೇ ತಮ್ಮ ಸ್ವಂತ ದುಡಿಮೆಯನ್ನು ಅವಲಂಬಿಸಿ ತಮ್ಮ ವೃತ್ತಿ ಜೀವನ ನಡೆಸುತ್ತಿದ್ದಾರೆ. ಮೋಬೈಲಗಳಲ್ಲಿ ಸೇರೆಹಿಡಿಯುವ ಚಿತ್ರಗಳಿಗಿಂತ ಇವರುಗಳ ಕ್ಯಾಮರಾದಿಂದ ಸೇರೆಹಿಡಿದ ಪೋಟೊಗಳು ಅಚ್ಚುಕಟ್ಟಾಗಿ ಹಾಗೂ ಸುಂದರವಾಗಿ ಮೂಡಿಬರುವುದರಿಂದ ಇವರುಗಳಿಗೆ ಸಾರ್ವಜನಿಕರ ಪ್ರೋತ್ಸಾಹ ಅತ್ಯಗತ್ಯವಾಗಿದೆ. ಛಾಯಾಗ್ರಾಹಕರಿಗೆ ಸಮಾಜದಲ್ಲಿ ನಿಮಗೆ ಉತ್ತಮವಾದ ಸ್ಥಾನಮಾನವಿದ್ದು ಅದನ್ನು ನೀವುಗಳು ಉಳಿಸಿಕೊಳ್ಳಬೇಕು. ಸಾಮಾಜಿಕ ಕಾರ್ಯಗಳ ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರೊಂದಿಗೆ ಉತ್ತಮ ಒಡನಾಟ ಬೆಳೆಸಿಕೊಳ್ಳಬೇಕು. ಎಂದು ಹೇಳಿದರು.

{ ಡಾ.ಜಿ.ಪರಮೇಶ್ವರ್ } ಗೃಹ ಸಚಿವ

ನಮ್ಮ ಜಾನಪದ ಕಲೆ ಉಳಿದು ಮುಂದಿನ ಪೀಳಿಗೆಗೆ ರವಾನೆಯಾಗಬೇಕು. ನಮ್ಮ ಪೂರ್ವಿಕರು ಮೌಲ್ಯಗಳನ್ನು ಕಲಿಸಿದ್ದಾರೆ. ಜನಪದ ಹಾಡುಗಳ ಮೂಲಕ ಜನರನ್ನು ತಲುಪುವ ಕೆಲಸ ಬಹಳ ಸುಂದರವಾಗಿ ಅನಾವರಣ ಆಗುತ್ತಿತ್ತು. ಇಂದಿನ ಟಿ.ವಿ, ಚಲನಚಿತ್ರ, ಸಾಮಾಜಿಕ ಮಾಧ್ಯಮಗಳ ಹಾವಳಿಗಳ ನಡುವೆಯೂ ಜಾನಪದ ಜೀವಂತವಾಗಿದೆ ಎಂದರೆ ಅದು ಜಾನಪದ ಕಲಾವಿದರಿಂದ ಉಳಿದಿದೆ.

ಜಿಲ್ಲೆಯೊಂದಿಗೆ ನಂಟು ಹೊಂದಿದ್ದ ಡಾ.ಎಸ್.ಎಲ್.ಭೈರಪ್ಪ

ಬಿವಿವಿ ಸಂಘದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಎರಡು ದಿನ ಭಾಗಿ | ನೆನಪಿನ ಬುತ್ತಿ ಬಿಚ್ಚಿಟ್ಟ ಅಶೋಕ ಶೆಟ್ಟರ

ಅಭಿಷೇಕ ಪಾಟೀಲ, ಬಾಗಲಕೋಟೆ

ಬಾಗಲಕೋಟೆ: ನಾಡೋಜ, ಪದ್ಮಶ್ರೀ, ಪದ್ಮ ವಿಭೂಷಣ ಸೇರಿದಂತೆ ದೇಶದ ಉನ್ನತ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಎಲ್.ಭೈರಪ್ಪ ಬುಧವಾರ ಇಹಲೋಕ ತ್ಯಜಿಸಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲಿ ಇದ್ದ ನಂಟಿನಂತೆ ಜಿಲ್ಲೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು.

ನಗರದ ಬಿವಿವಿ ಸಂಘದ ವತಿಯಿಂದ 2017ರ ಜನವರಿ 27 ಹಾಗೂ 28 ರಂದು ಡಾ. ಎಸ್.ಎಲ್. ಭೈರಪ್ಪ ಅವರ ಸಾಹಿತ್ಯದ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿತ್ತು. ಎರಡು ದಿನ ಎಲ್ಲ ಕಾರ್ಯಕ್ರಮಗಳಲ್ಲೂ ಭೈರಪ್ಪನವರು ಅತೀ ಉತ್ಸಾಹದಿಂದ ಪಾಲ್ಗೊಂಡಿದ್ದರು. ಅವರು ಕಾರ್ಯಕ್ರಮದ ಆಗಮಿಸಿದ ಸಂದರ್ಭದಲ್ಲಿ ಕ್ಷಣಗಳನ್ನು ಬಿಚ್ಚಿಡುವ ಪ್ರಯತ್ನ ಈ ಲೇಖನ.

ಸತತ 5 ವರ್ಷ ಅವರನ್ನು ಬಿವಿವಿ ಸಂಘಕ್ಕೆ ಕರೆಸಲು ದುಂಬಾಲು ಬಿದ್ದಿದ್ದ ಬಿವಿವಿ ಸಂಘದ ಶಾಲಾ-ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ) ಅವರು ಕೊನೆಗೂ 2017ರಲ್ಲಿ ಡಾ. ಎಸ್. ಎಲ್.ಭೈರಪ್ಪ ಅವರ ಸಾಹಿತ್ಯದ ಮೇಲೆ ವಿಚಾರಣ ಸಂಕಿರಣ ಆಯೋಜಿಸಿ ಅವರನ್ನು ಕರೆತರುವಲ್ಲಿ ಯಶಸ್ವಿಯಾದರೂ.

ಡಾ. ಎಸ್.ಎಲ್.ಭೈರಪ್ಪ ಅವರು ಸಮಯಕ್ಕೆ ಕೊಡುತ್ತಿದ್ದ ಮಹತ್ವ, ಉತ್ಸಾಹದ ಬಗ್ಗೆ ಬಿವಿವಿ ಸಂಘದ ಶಾಲಾ, ಕಾಲೇಜು ಆಡಳಿತ ಮಂಡಳಿಯ ಅಂದಿನ ಕಾರ್ಯಾಧ್ಯಕ್ಷರಾಗಿದ್ದ ಅಶೋಕ ಸಜ್ಜನ (ಬೇವೂರ) ನೆನಪಿನ ಬುತ್ತಿಯನ್ನು ಬಿಚ್ಚಿಡುತ್ತಾರೆ.

ಸಮಯಕ್ಕೆ ತುಂಬಾ ಮಹತ್ವ: ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಡಾ. ಭೈರಪ್ಪ ಅವರ ಸಾಹಿತ್ಯದ ಮೇಲಿನ ವಿಚಾರ ಸಂಕಿರಣಕ್ಕೆ ಸಂಘದ ಗೆಸ್ಟ್ ಹೌಸ್‌ನಿಂದ ಬರುವುದು ಕೇವಲ ಒಂದು ನಿಮಿಷ ತಡವಾಗಿದ್ದರಿಂದ ಭೈರಪ್ಪನವರು ನಾವು ಮೊದಲು ಕಾರ್ಯಕ್ರಮದತ್ತ ತೆರಳೋಣ ಜನರು ಕಾಯುತ್ತಿರುತ್ತಾರೆ. ನಂತರ ಬೇರೆ ಕಡೆಗೆ ತೆರಳೋಣ ಎಂದು ಹೇಳಿದನ್ನು ನೆನಪಿಸಿಕೊಂಡಿರುವ ಅಶೋಕ ಸಜ್ಜನ ಅವರು ಸಮಯಕ್ಕೆ ಕೊಡುತ್ತಿದ್ದ ಮಹತ್ವವನ್ನು ನಾವು ರೂಢಿಸಿಕೊಳ್ಳಬೇಕಿದೆ ಎಂದರು.

ಬಾಗಲಕೋಟೆಯ ಬಿವಿವಿ ಸಂಘದಲ್ಲಿ 2017ರ ಜನವರಿ 27 ಹಾಗೂ 28 ರಂದು ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಡಾ. ಎಸ್.ಎಲ್.ಭೈರಪ್ಪ ಅವರನ್ನು ಸತ್ಕರಿಸಲಾಯಿತು. ಅಂದು ಸಚಿವರಾಗಿದ್ದ ಗೋವಿಂದ ಕಾರಜೋಳ, ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಅಶೋಕ ಸಜ್ಜನ ಹಾಗೂ ಮಹೇಶ ಅಥಣಿ ಇದ್ದರು.

> **ವಿಶ್ವದ ಶ್ರೇಷ್ಠ ಕಾದಂಬರಿಕಾರರ ಸಾಲಿನಲ್ಲಿ ನಿಲ್ಲುವ ಡಾ. ಎಸ್. ಎಲ್.ಭೈರಪ್ಪ ಅವರಿಗೆ ಜ್ಞಾನಪೀಠ ಸಿಗಬೇಕಿತ್ತು ಎನ್ನುವುದು ಕೋಟ್ಯಾಂತರ ಹೃದಯಗಳ ಆಶಯವಾಗಿತ್ತು. ಆದರೆ, ಆ ಆಶಯ ಕೊನೆಗೂ ಫಲಿಸಲಿಲ್ಲ.**
> **-ಅಶೋಕ ಸಜ್ಜನ (ಬೇವೂರ),** ಬಿವಿವಿ ಸಂಘದ ವೈದ್ಯಕೀಯ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷರು

1,000ಕ್ಕೂ ಹೆಚ್ಚು ಕಾದಂಬರಿಗಳಿಗೆ ಸಹಿ: ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಡಾ. ಎಸ್.ಎಲ್.ಭೈರಪ್ಪ ಅವರು ಬರೆದ ಉತ್ತರಕಾಂಡ ಕಾದಂಬರಿಯನ್ನು ಇಲ್ಲಿ ಬಿಡುಗಡೆ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಉತ್ತರಕಾಂಡ ಸೇರಿದಂತೆ ಅವರ ಹಲವು ಕೃತಿಗಳ 1,000ಕ್ಕೂ ಹೆಚ್ಚಿನ ಪ್ರತಿಗಳಿಗೆ ಸಹಿ ಹಾಕಿದ್ದನ್ನು ಅಶೋಕ ಸಜ್ಜನ ಅವರು ಇನ್ನೂ ಮರೆತಿಲ್ಲ.

3.5 ಲಕ್ಷ ರು. ಪುಸ್ತಕಗಳ ಮಾರಾಟ: ಈ ವಿಚಾರ ಸಂಕಿರಣದ ಒಂದು ತಿಂಗಳ ಮೊದಲು ರಾಯಚೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿತ್ತು. 3 ದಿನದ ಸಮ್ಮೇಳನದಲ್ಲಿ 1.25 ಲಕ್ಷ ರು. ಮೌಲ್ಯದ ಪುಸ್ತಕಗಳು ಮಾರಾಟವಾಗಿದ್ದವು. ಆದರೆ, ಎರಡು ದಿನ ಬಾಗಲಕೋಟೆಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಒಟ್ಟು 3.5 ಲಕ್ಷ ರು. ಮೌಲ್ಯದ ಕಾದಂಬರಿ ಹಾಗೂ ಕೃತಿಗಳು ಮಾರಾಟವಾಗಿದ್ದವು. ಇದು ಬಾಗಲಕೋಟೆ ಜನರಿಗೆ ಸಾಹಿತ್ಯದ ಮೇಲೆ ಹೊಂದಿದ್ದ ಅಭಿರುಚಿಗೆ ಹಿಡಿದಿರುವ ಕನ್ನಡಿಯಾಗಿದೆ.

ಉತ್ತರ ಇಲ್ಲದ ಪ್ರಶ್ನೆಗೆ ಉತ್ತರ ಹುಡುಕುವುದು ಬೇಡ: ಎರಡು ದಿನಗಳ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ಡಾ. ಭೈರಪ್ಪನವರು ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಅವರ ಮನೆಯಲ್ಲಿ ಉಪಹಾರ ಸೇವಿಸಿ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಸಂಘದ ಎಸ್ .ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿನ ಶಿವಾಲಯಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ದೇವರ ಬಗ್ಗೆ ನಿಮ್ಮ ಪರಿಕಲ್ಪನೆ ಏನೆಂದು ಕೇಳಿದ್ದಕ್ಕೆ ಉತ್ತರಿಸಿದ್ದ, ಎಸ್. ಎಲ್.ಭೈರಪ್ಪನವರು ಈ ಪ್ರಶ್ನೆ ಸಾವಿರಾರೂ ವರ್ಷಗಳಿಂದ ಕೇಳಲಾಗುತ್ತಿದೆ. ಉತ್ತರ ಇಲ್ಲದ ಪ್ರಶ್ನೆಗಳಿಗೆ ಉತ್ತರ ಹುಡುಕುವುದನ್ನು ಬಿಟ್ಟು, ನಮ್ಮ ಕೆಲಸಗಳನ್ನು ನಾವು ಮಾಡೋಣ ಎಂದು ಹೇಳಿರುವುದನ್ನು ನೆನಪಿಸಿಕೊಂಡರು.

ಬಿವಿವಿ ಸಂಘಕ್ಕೆ ಬಂದಿದ್ದ ಸರಸ್ವತಿ ಪುತ್ರ ಭೈರಪ್ಪ

ಬಾಗಲಕೋಟೆ: ಕನ್ನಡ ಕಾದಂಬರಿಕಾರಿ, ಶ್ರೇಷ್ಠ ತತ್ವಜ್ಞಾನಿ, ಪದ್ಮಶ್ರೀ, ಪದ್ಮಭೂಷಣ, ಸರಸ್ವತಿ ಸಮ್ಮಾನ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಎಲ್.ಭೈರಪಪ್ಪನವರು ನಮ್ಮಗಲಿದ್ದು ದೇಶದ ಜ್ಞಾನ ಸಂಪತ್ತಿಗೆ ತುಂಬಲಾಗದ ನಷ್ಟವಾಗಿದೆ. ಕನ್ನಡಕಕ್ಕೆ ಸಲ್ಲಬೇಕಾಗಿದ್ದ ಇನ್ನೊಂದು ಜ್ಞಾನಪೀಠ ತಪ್ಪಿದಂತಾಗಿದೆ. ಬಾಗಲಕೋಟೆಯಲ್ಲಿ ಬಿವಿವಿ ಸಂಘದಿಂದ 2017 ಜನವರಿಯಲ್ಲಿ 27-28 ರಂದು ಜರುಗಿದ ಅವರ ಬದುಕು ಬರಹದ ಸಂವಾದ ಕಾರ್ಯಕ್ರಮದಲ್ಲಿ ಬಿವಿವಿ ಸಂಘದಿಂದ ಗೌರವಾಭಿನಂದನೆ ಸಲ್ಲಿಸಲಾಗಿತ್ತು. ಆ ಅನುಭವ ಇನ್ನು ಹಸಿರಾಗಿರುವಾಗಲೇ ಅವರು ನಮ್ಮನ್ನು ಅಗಲಿರುವುದು ಕನ್ನಡಿಗರಿಗೆ ಆಗಿರುವ ಆಘಾತ ಊಹಿಸಲಾರದ್ದು. ಬಿವಿವಿ ಸಂಘಕ್ಕೆ ಒಳ್ಳೆಯ ಮಾರ್ಗದರ್ಶಕರಾಗಿ ಅವರು ಅವಿನಾಭಾವ ಸಂಬಂಧ ಹೊಂದಿದ್ದರು. ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ದಯಪಾಲಿಸಲಿ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಪ್ರಕಟಣೆ ಮೂಲಕ ಪ್ರಾರ್ಥಿಸಿದ್ದಾರೆ.

ಬಾಗಲಕೋಟೆಯ ಬಿವಿವಿ ಸಂಘದಲ್ಲಿ 2017ರ ಜನವರಿ 27 ಹಾಗೂ 28 ರಂದು ಹಮ್ಮಿಕೊಂಡಿದ್ದ ಡಾ. ಭೈರಪ್ಪ ಅವರ ಸಾಹಿತ್ಯದ ಕುರಿತ ವಿಚಾರ ಸಂಕಿರಣಕ್ಕೆ ಡಾ. ಎಸ್.ಎಲ್.ಭೈರಪ್ಪ ಅವರನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲಾಗಿತ್ತು. ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಅಶೋಕ ಸಜ್ಜನ, ಮಹೇಶ ಅಥಣಿ ಹಾಗೂ ಅಂದಿನ ಕಸಾಪ ರಾಜ್ಯಾಧ್ಯಕ್ಷ ಡಾ. ಮನು ಬಳಿಗಾರ ಸೇರಿ ಇತರರಿದ್ದರು.

ಕುಟುಂಬಗಳನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಿ: ಶಾಸಕ

ಇಂಡಿ: ಮಹಾರಾಷ್ಟ್ರದ ಸೀನಾ ನದಿಯಿಂದ ನೀರಿನ ಸುಮಾರು 2 ಲಕ್ಷಕ್ಕೂ ಅಧಿಕ ಕ್ಯೂಸೆಕ್ ನೀರು ಭೀಮಾನದಿಗೆ ಬಂದಿದೆ, ಹಾಗೂ ಮಳೆಯ ಅವಾಂತರ ದಿಂದ ಹಳ್ಳಕೊಳ್ಳ ತುಂಬಿ ಹರಿದು ಅಪಾರ ಪ್ರಮಾಣದಲ್ಲಿ ರೈತರ ಬೆಳೆ, ಮನೆ, ರಸ್ತೆ ಸೇರಿದಂತೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿದ್ದು ನೋವಿನ ಸಂಗತಿಯಾಗಿದೆ, ಸರಕಾರ ಪರಿಹಾರ ಧನ ನೀಡುವುದು ಮುಖ್ಯವಲ್ಲ ಮಳೆಯಿಂದ ಹಾನಿಯಾದ ಪ್ರದೇಶಕ್ಕೆ ಅಧಿಕಾರಿಗಳು ಭೇಟಿ ನೀಡಿ ಬಿದ್ದಿರುವ ಮನೆಗಳು ಹಾನಿ ಆಗಿದ್ದರೆ ಅಂತಹ ಕುಟುಂಬಗಳನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಬೇಕು ಎಂದು ಶಾಸಕ ಯಶವಂತರಾಯಗೌಡ ವ್ಹಿ ಪಾಟೀಲ ಹೇಳಿದರು.

ನಗರದ ತಾಲೂಕಾ ಪಂಚಾಯತ ಸಭಾ ಭವನದಲ್ಲಿ ಮಳೆಯಿಂದ ಹಾನಿಯಾದ ಪರಸ್ಥಿತಿ ನಿರ್ವಹಣೆ ಕುರಿತು ನಡೆದ ಜಿಲ್ಲಾ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು ಸಾಮಾಜಿಕ ಜಾಲತಾಣಗಳಲ್ಲಿ ನೈಜ್ಯತೆ ಉಳಿದಿಲ್ಲ ವಿನಾಕಾರಣ ಸುಳ್ಳು ಸಷ್ಟೃಷ್ಠಿಸುತ್ತಿವೆ ಅಧಿಕಾರಿಗಳು ಇವರಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಪ್ರಮಾಣಿಕತೆ ಸ್ಪಷ್ಠತೆ ,ನಿಖರತೆ ವಸ್ತುನಿಷ್ಠತೆ ಹಾಗೂ ಪಾರದರ್ಶಕವಾಗಿ ಹಾನಿಯಾದ ಬೆಳೆಗಳ ಬಗ್ಗೆ ,ರಸ್ತೆಗಳು, ಮನೆಗಳು ಇತರೆ ಹಾನಿಯಾದ ಬಗ್ಗೆ ಸರಕಾರಕ್ಕೆ ವರದಿ ನೀಡಿ ನಾನು ಸರಕಾರದ ಮಟ್ಟದಲ್ಲಿ ಹಾಗೂ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಪರಿಹಾರ ಒದಗಿಸುವಲ್ಲಿ ಪ್ರಮಾಣಿ ಪ್ರಯತ್ನ ಮಾಡುತ್ತೇನೆ ಎಂದು ಸೂಚನೆ ನೀಡಿದರು.

ಶಾಸಕ ಯಶವಂತರಾಯಗೌಡ ವ್ಹಿ ಪಾಟೀಲ ರವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.

> **ಪ್ರವಾಹ ಪರಸ್ಥಿತಿ ಎದುರಿಸಲು ಹಾಗೂ ಮಳೆಯಿಂದ ಹಾನಿಯಾದ ಬಗ್ಗೆ ನಿಖರ ಮಾಹಿತಿ ಒದಗಿಸಬೇಕು. ಪ್ರವಾಹದಿಂದ ನದಿ ಪಾತ್ರದಲ್ಲಿರುವ ಜನರ ಬಗ್ಗೆ ತಾಲೂಕಾಮಟ್ಟದ ಅಧಿಕಾರಿಗಳು ಕಾಳಜಿವಹಿಸಬೇಕು, ಜನರಿಗೆ ತೊಂದರೆಯಾದರೆ ಪ್ರವಾಹ ಪರಸ್ಥಿತಿ ನಿಭಾಯಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ಕಂಡು ಬಂದರೆ ನಿದ್ರಾಕ್ಷಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು.**
> **-ಕೆ.ಆನಂದ, ಜಿಲ್ಲಾಧಿಕಾರಿ**

ತಾಲೂಕಿನಾದ್ಯಂತ ಮಳೆಯಿಂದಾಗಿ ರೈತರ ಜಮೀನುಗಳಿಗೆ ಹೋಗುವ ರಸ್ತೆಗಳು ಹಾಗೂ ಪ್ರಮುಖ ರಸ್ತೆಗಳು ತೇಂವಾಶದಿಂದ ಡಾಂಬರೀಕರಣ ಕಿತ್ತುಹೋಗಿವೆ. ನಗರದ ಒಳರಸ್ತೆಗಳು ಸಂಪೂರ್ಣ ಕೆಸರು ಗದ್ದೆಯಂತಾಗಿ ಹಾಳಾಗಿವೆ ಕೂಡಲೆ ಜಿಲ್ಲಾಧಿಕಾರಿಗಳ ಮುಖಾಂತರ ವರದಿ ನೀಡಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಗ್ರಾಮೀಣ ರಸ್ತೆಗಳು ಮಳೆಯಿಂದ ಪಿ.ಆರ್.ಈ.ಡಿ ಸುಮಾರು 133 ರಸ್ತೆಗಳು ಹಾನಿಯಾಗಿವೆ,11 ಸಿ.ಡಿ ,ವಸತಿ ಪ್ರದೇಶದ ರಸ್ತೆಗಳು ಸಂಪೂರ್ಣ ಹಾನಿಯಾಗಿದ್ದು ಜಿಲ್ಲಾಧಿಕಾರಿಗಳಿಗೆ ಹಾಗೂ ಸರಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಪಿ.ಆರ್.ಈ.ಡಿ ಅಧಿಕಾರಿ ಶಿವಾಜಿ ಬನಸೊಡೆ ಸಭೆಯ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಅನುರಾಧಾ ವಸ್ತ್ರದ , ತಹಶೀಲ್ದಾರ ಬಿ.ಎಸ್ ಕಡಕಭಾವಿ, ಡಿವೈಎಸ್ಪಿ ಜಗದೀಶ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಭೀಮಾಶಂಕರ ಕನ್ನೂರ ಸೇರಿದಂತೆ ವಿವಿಧ ಇಲಾಖೆಯ ತಾಲೂಕಾ ಮಟ್ಟದ ಅಧಿಕಾರಿಗಳು ಇದ್ದರು.

ವಕ್ಫ್ ಹೆಸರು ತೆಗೆದು ಹಾಕಿ

ಬೀಳಗಿ: ಪಟ್ಟಣದ ಕಂಬಾರ ಓಣಿಯಲ್ಲಿರುವ ಹುಸೇನ ಪೀರ ದರ್ಗಾ ವಕ್ಫ ಆಸ್ತಿಯಲ್ಲ ಹಿಂದೂಗಳ ಶ್ರದ್ಧಾ ಕೇಂದ್ರ ಇದ್ದು ಶಿವಲಿಂಗ ಮತ್ತು ಬಸವಣ್ಣನ ಮೂರ್ತಿ ಪ್ರತಿಷ್ಟಾಪಿಸಿದರೆಂದು ಹಿರಿಯರು ಹೇಳುತ್ತಾರೆ. ಆದರೂ ಮೋಹರಂ ಸಂದರ್ಭದಲ್ಲಿ 5 ದಿನ ಹುಸೇನ ಪೀರ ಪ್ರತಿಷ್ಟಾಪನೆ ಮಾಡವದರಿಂದ ಹುಸೇನ ಪೀರ್ ಗುಡಿ ಎಂದು ಕರೆಯಲಾಗುತ್ತಿದೆ ಅದನ್ನೆ ಮುಸ್ಲಿಂ ಸಮಾಜ ವ್ಯಕ್ತಿಯೊಬ್ಬ

ದುರುಪಯೋಗ ಪಡಿಸಿಕೊಂಡು ವಕ್ಫ ಬೋರ್ಡ ನಲ್ಲಿ ವಕ್ಫ ಆಸ್ತಿ ಎಂದು ಪಹಣಿ ಉತಾರೆಯ ಕಾಲಂ ನಲ್ಲಿ ನಮೂದಿಸಿಕೊಂಡು ಹಿಂದೂಗಳ ಔದಾರ್ಯತೆಯನ್ನು ದುರುಪಯೋಗ ಪಡಿಸಿಕೊಂಡಿದ್ದು ತಕ್ಷಣ ವಕ್ಫ ಬೋರ್ಡಿನವರು ತಮ್ಮ ವಕ್ಫ ಹೆಸರನ್ನು ತೆಗೆದು ಹಾಕಬೇಕು ಎಂದು ವಿಶ್ವ ಹಿಂದು ಪರಿಷತ್ ಬಜರಂಗ ದಳದ ರಾಜ್ಯ ಸಂಯೋಜಕ ಪುಂಡಲೀಕ ದಳವಾಯಿ ತಿಳಿಸಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಗಳ ತಾಳ್ಮೆಯ ಗುಣವನ್ನು ಹುಸೇನ ಪೀರ್ ದರ್ಗಾದ ಮೌಲ್ವಿ ವಕ್ಫಗೆ ಅರ್ಜಿ ಸಲ್ಲಿಸಿ ಈ ಆಸ್ತಿ ವಕ್ಫಗೆ ಸೇರಿಸಲು ಹೇಳಿ ತಲೆಮರೆಸಿಕೊಂಡಿದ್ದಾಗಿ ತಿಳಿದಿದೆ. ಆದರೆ ಈ ದೇವಸ್ಥಾನವು ಬೀಳಗಿ ಪಟ್ಟಣದ ಕಂಬಾರ ಗಲ್ಲಿಯ ಹಿರಿಯರಿಗೆ ಸೇರಿದೆ ಎಂದು ಹೇಳಿದರು.

ಈ ದೇವಸ್ಥಾನಕ್ಕೆ ಹಿಂದು ಸಮಾಜದ ಚಲವಾದಿ ಮನೆತನದವರು 4 ಎಕರೆ ಜಮೀನನ್ನು ಕೂಡಾ ದಾನವಾಗಿ ನೀಡಿರುತ್ತಾರೆ. ಈ ಎಲ್ಲ ಆಸ್ತಿಪಾಸ್ತಿಗಳ ಕಾಗದ ಪತ್ರಗಳ ಮೇಲೆ ವಕ್ಫ ತನ್ನ ಹೆಸರನ್ನು ನಮೂದು ಮಾಡುವ ಸಂಚನ್ನು ರೂಪಿಸಿದ್ದಾರೆ, ಇದು ಹಿಂದುಗಳ ಭಾವೈಕ್ಯತೆ ಭಾವನೆಯನ್ನು ಕದಡುತ್ತಿದೆ ಎಂದ ಅವರು, ಆಸ್ತಿಯ ಹಳೆಯ ಉತಾರಿನಲ್ಲಿ ಪಟ್ಟಣದ ನಾಲ್ಕೈದು ಜನ ಹಿರಿಯರ ಹೆಸರುಗಳನ್ನು ಸೇರಿಸಿ ಸಮಿತಿ ರಚನೆ ಮಾಡಲಾಗಿತ್ತು , ಆದರೆ ಇದು ವಕ್ಸ್ ಆಸ್ತಿ ಹೇಗಾಗುತ್ತದೆ ಎಂದು ಪ್ರಶ್ನಿಸಿದರು. ವಿಶ್ವ ಹಿಂದು ಪರಿಷತ್ ಘಟಕ ಮಹಿಳಾ ಪ್ರಮುಖರಾದ ಮಂಜುಳಾ ಮೇರಾಕಾರ, ಬಜರಂಗ ದಳದ ಪ್ರಮುಖರಾದ ರಾಮಚಂದ್ರ ನಲವಡೆ, ಮಹಾಂತೇಶ ಚವ್ಹಾಣ ಮತ್ತಿತರಿದ್ದರು.

ವಾಲ್ಮೀಕಿ ಮಹಾಸಭಾದಿಂದ ಪ್ರತಿಭಟನೆ

ಗುಳೇದಗುಡ್ಡ: ಪ್ರಬಲ ಸಮಾಜವನ್ನು ಎಸ್‌ಟಿ ವರ್ಗಕ್ಕೆ ಸೇರಿಸುವ ಹೂನ್ನಾರ ರಾಜ್ಯದಲ್ಲಿ ನಡೆದಿರುವುದನ್ನು ಖಂಡಿಸಿ ಹಾಗೂ ತಾಲೂಕಿನಲ್ಲಿ 140ಕ್ಕೂ ಹೆಚ್ಚು ಜನರು ಖೊಟ್ಟಿ ಎಸ್‌ಟಿ ಜಾತಿ ಪ್ರಮಾಣಪತ್ರ ಪಡೆದವರ ಹಾಗೂ ನೀಡಿದವರ ಮೇಲೆ ಯಾವುದೇ ಕ್ರಮಕೈಗೊಳ್ಳದೇ ಇರುವುದನ್ನು ಖಂಡಿಸಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ವತಿಯಿಂದ ಸೆ. 25ರಂದು ಬೆಳಿಗ್ಗೆ 10.30 ಗಂಟೆಗೆ ಪಟ್ಟಣದ ಅಂಬೇಡ್ಕರ್ ಭವನದಿಂದ ಪ್ರತಿಭಟನಾ ಮೆರವಣಿಗೆ ಕೈಗೊಂಡು ತಹಶೀಲ್ದಾರ ಕಚೇರಿಗೆ ತೆರಳಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಗುವುದು ಎಂದು ವಾಲ್ಮೀಕಿ ಮಹಾಸಭಾದ ತಾಲೂಕು ಅಧ್ಯಕ್ಷ ಫಕೀರಪ್ಪ ತಳವಾರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಾಲ್ಮೀಕಿ ಮಹಾಸಭಾದ ತಾಲೂಕು ಅಧ್ಯಕ್ಷ ಫಕೀರಪ್ಪ ತಳವಾರ ಮಾತನಾಡಿದರು.

ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸೆ. 30ರ ಒಳಗಾಗಿ ಸರಕಾರ ಖೊಟ್ಟಿ ಜಾತಿ ಪ್ರಮಾಣಪತ್ರ ನೀಡಿದವರ ಹಾಗೂ ಪಡೆದವರ ಮೇಲೆ ಕ್ರಮಕೈಗೊಳ್ಳದೇ ಇದ್ದರೆ ಸಮುದಾಯದ ವತಿಯಿಂದ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

ಸಮಾಜದ ಮುಖಂಡ ಶಿವು ವಾಲೀಕಾರ ಮಾತನಾಡಿ, ವಾಲ್ಮೀಕಿ ಸಮಾಜದ ಮೇಲೆ ನಡೆಯುತ್ತಿರುವ ಅನ್ಯಾಯ ಖಂಡಿಸಿ ನಡೆಯಲಿರುವ ಪ್ರತಿಭಟನಾ ಮೆರವಣಿಗೆಯಲ್ಲಿ ತಾಲೂಕಿನ ಹೆಚ್ಚಿನ ಸಮಾಜಬಾಂಧವರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ವಾಲ್ಮೀಕಿ ಜಯಂತಿಯ ಅಂಗವಾಗಿ ವಾಲ್ಮೀಕಿ ಪ್ರೋ ಕಬಡ್ಡಿ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದ್ದು, ಈ ಬಾರಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ರಾಮಣ್ಣ ಚಂದರಗಿ, ಕಲ್ಲನಗೌಡ ಗೌಡ್ರ, ಹನಮಂತ ಎತ್ತಿನಮನಿ, ಹೇಮಂತ ಮಲ್ಹಾರ, ಯಮನಪ್ಪ ಗೌಡರ, ಲಾಯಪ್ಪ ಗುಡಸಲಮನಿ, ಹನಮಂತಪ್ಪ ತಳವಾರ, ಪ್ರಕಾಶ ಬೀಳಗಿ, ದ್ಯಾಮಣ್ಣ ಗೌಡರ, ಶಿವು ಗೋತಗಿ, ಪರಶುರಾಮ ತಳವಾರ, ಭರಮಪ್ಪ ಪೂಜಾರಿ, ಲಕ್ಷ್ಮಣ ಗದ್ದನಕೇರಿ, ಭೀಮಪ್ಪ ಗೌಡರ, ಲಕ್ಷ್ಮಣ ಸಂಗೊಂದಿ, ಸುಭಾಷ ಹೊಸಮನಿ, ಶಿವಪ್ಪ ಮನ್ನಿಕಟ್ಟಿ, ಯಮನೂರ ಗುಡಸಲಮನಿ ಮತ್ತಿತರರು ಇದ್ದರು.

ಪೌರಕಾರ್ಮಿಕರ ಸೇವೆ ಶ್ಲಾಘನೀಯ: ಪುರಸಭೆ ಅಧ್ಯಕ್ಷೆ

ಬಸವನಬಾಗೇವಾಡಿ: ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಪೌರಕಾರ್ಮಿಕರ ದಿನಾಚರಣೆಯನ್ನ ಆಚರಿಸಲಾಯಿತು ಇನ್ನೂ ಇದೇ ವೇಳೆ ಸರಕಾರದಿಂದ ನೀಡುವ ಪ್ರೋತ್ಸಾಹ ಧನ ಚೆಕ್ ನೀಡಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಜಗದೇವಿ ಗುಂಡಳ್ಳಿ, ಉಪಾಧ್ಯಕ್ಷ ಅಶೋಕ ಹಾರಿವಾಳ ಮಾತನಾಡಿ ಪಟ್ಟಣದ ಎಲ್ಲ ಜನರ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರು ಮಹತ್ವದ ಪಾತ್ರ ವಹಿಸಿದ್ದಾರೆ. ಇವರ ಸೇವೆ ಅನುಪಮವಾಗಿದೆ ಪೌರಕಾರ್ಮಿಕರ ಪರಿಶ್ರಮದ ಫಲವಾಗಿ ಪಟ್ಟಣವು ಸ್ವಚ್ಛವಾಗಿರುತ್ತದೆ. ಪಟ್ಟಣದ ಸ್ವಚ್ಛತೆಗೆ ಪೌರಕಾರ್ಮಿಕರ ಕೊಡುಗೆ ವಿಶೇಷವಾಗಿದೆ. ಪೌರಕಾರ್ಮಿಕರ ದಿನಾಚರಣೆಯ ಮೂಲಕ ಅವರನ್ನು ಗೌರವಿಸುವ ಕಾರ್ಯ ಮಾಡಬೇಕು. ಇವರ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ

ಪುರಸಭೆ ಪೌರಕಾರ್ಮಿಕರ ಸೇವೆ ಅನನ್ಯ. ಅವರನ್ನು ನಾವು ಅತ್ಯಂತ ಗೌರವದಿಂದ ಕಾಣುವಂತಾಗಬೇಕು. ಅವರ ಅಗತ್ಯಗಳ ಕುರಿತಾಗಿ ನಾವು ಚಿಂತನೆ ಮಾಡಬೇಕಿದೆ. ಇಲ್ಲಿನ ಕೆಲ ಪೌರಕಾರ್ಮಿಕರಿಗೆ ಮಾತ್ರ ಆರೋಗ್ಯ ಕಾರ್ಡ್ ಇವೆ. ಉಳಿದ ಪೌರಕಾರ್ಮಿಕರಿಗೂ ಆರೋಗ್ಯ ಕಾರ್ಡ್ ಸಿಗುವಂತೆ ಅಧಿಕಾರಿಗಳು ಗಮನಹರಿಸಬೇಕು. ಅವರ ಕುಟುಂಬ ಸದಸ್ಯರಿಗೂ ಉಚಿತ ಆರೋಗ್ಯ ತಪಾಸಣೆಗೆ ಕಾರ್ಡ್ ನೀಡಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಕವಿತಾ ದೊಡಮನಿ, ಪೌರಕಾರ್ಮಿಕರ ಸಂಘದ ಅಧ್ಯಕ್ಷ ಪ್ರಕಾಶ ಮ್ಯಾಗೇರಿ ಮಾತನಾಡಿದರು. ಕಾರ್ಯಕ್ರಮಯಲ್ಲಿ ಪುರಸಭೆ ಸದಸ್ಯರಾದ ರವಿ ಪಡಶೆಟ್ಟಿ, ಅಶೋಕ ಗುಳೇದ, ವಿಜಯ ನಾಯಕ, ಪ್ರವೀಣ ಪವಾರ, ಪುರಸಭೆಮುಖ್ಯಾಧಿಕಾರಿ ವಿದ್ಯಾಧರ ಕಲಾದಗಿ, ಪೌರ ಕಾರ್ಮಿಕರಾದ ರಾವುತ ಮ್ಯಾಗೇರಿ, ಪರಮಾನಂದ ಕಂಠಿಗೊಂಡ, ಅಶೋಕ ನರಸಲಗಿ, ಪ್ರಕಾಶ ಮ್ಯಾಗೇರಿ, ಸುಭಾಸ ಕಲ್ಯಾಣಿ, ಮಹಾಂತೇಶ ಕೊಂಡಗೊಳಿ, ಸೇರಿದಂತೆ ಮುಂತಾದವರು ಇದ್ದರು. ಪುರಸಭೆ ಆರೋಗ್ಯ ನಿರೀಕ್ಷಕ ಮಹೇಶ ಹಿರೇಮಠ ಸ್ವಾಗತಿಸಿ, ನಿರೂಪಿಸಿದರು.



ಪೌರಕಾರ್ಮಿಕರ ದಿನಾಚರಣೆಯನ್ನ ಆಚರಿಸಲಾಯಿತು. ಸರಕಾರದಿಂದ ನೀಡುವ ಪ್ರೋತ್ಸಾಹ ಧನ ಚೆಕ್ ನೀಡಿ ಸನ್ಮಾನಿಸಿ ಗೌರವಿಸಿದರು.

ಯೋಜನಾ ಸಂತ್ರಸ್ತರು ಏರ್ಪಡಿಸಿದ್ದ ಅಭಿನಂದನೆ ಸಮಾರಂಭ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿಕೆ

ಆಲಮಟ್ಟಿ ಜಲಾಶಯ ಎತ್ತರ ಹೆಚ್ಚಳದಿಂದ ಅನುಕೂಲ: ಎಂಬಿಪಿ

ವಿಜಯಪುರ: ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಸಂತ್ರಸ್ತರಿಗೆ ಸರಕಾರ ಒಪ್ಪಿಗೆ ಸೂತ್ರದಡಿ ಸಮರ್ಪಕ ಪರಿಹಾರ ಘೋಷಣೆ ಮಾಡಿದ್ದು, ಇದರಿಂದ ಆಲಮಟ್ಟಿ ಜಲಾಶಯದ ಎತ್ತರವನ್ನು ಹೆಚ್ಚಿಸಿ ವಿಜಯಪುರ, ಬಾಗಲಕೋಟೆ, ಕೊಪ್ಪಳ ಮತ್ತಿತರ ಜಿಲ್ಲೆಗಳ ಬಾಕಿ ಭೂಮಿಗೆ ನೀರಾವರಿ ಕಲ್ಪಿಸಲು ಅನುಕೂಲವಾಗಲಿದೆ ಎಂದು ಕೈಗಾರಿಕೆ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಬಬಲೇಶ್ವರ ತಾಲೂಕಿನ ದೇವರ ಗಣ್ಣೂರಿನಲ್ಲಿ ಕೃಷ್ಣ ಮೇಲ್ದಂಡೆ ಹಂತ-3ರ ಯೋಜನಾ ಸಂತ್ರಸ್ತರಿಗೆ ಯೋಗ್ಯ ದರ ನಿಗದಿ ಪಡಿಸಿದ ಅಂಗವಾಗಿ ಯೋಜನಾ ಸಂತ್ರಸ್ತರು ಏರ್ಪಡಿಸಿದ್ದ ಅಭಿನಂದನೆ ಸಮಾರಂಭದಲ್ಲಿ ಮಾತನಾಡಿದ ಅವರು,

ಹಿಂದೆ ಬೊಮ್ಮಾಯಿ ನೇತೃತ್ವದ ಸರಕಾರ ಅಧಿಕಾರದಲ್ಲಿದ್ದಾಗ ಭೂಸ್ವಾಧೀನದಡಿ ಭೂಮಿ ಕಳೆದುಕೊಳ್ಳುವ ರೈತರಿಗೆ ಹಕ್ಕಿನಂತೆ ಸಿಗಬೇಕಾದ ಪರಿಹಾರವನ್ನು ಕನ್ಸೆಂಟ್(ಒಪ್ಪಿಗೆ) ಅನ್ವಯ ನೀಡುವುದಾಗಿ ರೈತರನ್ನು ದಾರಿ ತಪ್ಪಿಸಲಾಗಿತ್ತು. ಆದರೇ, ಅಂದೇ ನಾನು ರೈತರಿಗೆ ಹಕ್ಕಿನಂತೆ ದೊರೆಯುವ ಪರಿಹಾರ ಮತ್ತು ಒಪ್ಪಂದದಂತೆ ಸಿಗುವ ಪರಿಹಾರದ ಮೊತ್ತದ ನಡುವಿನ ವ್ಯತ್ಯಾಸವನ್ನು ಬಿಡಿಸಿ ಹೇಳಿದ್ದೆ. ಈ ಅನ್ಯಾಯ ಸರಿಪಡಿಸುವುದಾಗಿ ನಾನು ಭರವಸೆ ನೀಡಿದ್ದೆ. ಇಂದು ನುಡಿದಂತೆ ನಡೆಯುತ್ತಿದ್ದೇವೆ ಎಂದರು.



ದೇವರ ಗಣ್ಣೂರಿನಲ್ಲಿ ಏರ್ಪಡಿಸಿದ್ದ ಅಭಿನಂದನೆ ಸಮಾರಂಭವನ್ನು ಕೈಗಾರಿಕೆ ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಿದರು.

> **ಈಗ ಮೂರು ಹಂತಗಳಲ್ಲಿ ಪ್ರತಿ ಎಕರೆ ನೀರಾವರಿ ಜಮೀನಿಗ ರೂ. 40 ಲಕ್ಷ ಮತ್ತು ಒಣಬೇಸಾಯ ಜಮೀನಿಗೆ ರು. 30 ಲಕ್ಷ ದರ ಪರಿಹಾರ ನಿಗದಿ ಪಡಿಸಲಾಗಿದೆ. ಈ ಯೋಜನೆ ಒಂದು ಹಂತಕ್ಕೆ ಬಂದಿದ್ದು, ಎಲ್ಲ ರೈತರೂ ಇದಕ್ಕೆ ಸಂಪೂರ್ಣ ಬೆಂಬಲ ನೀಡಬೇಕು. ಇದೊಂದು ಐತಿಹಾಸಿಕ ನಿರ್ಣಯವಾಗಿದೆ.**
> **-ಎಂ.ಬಿ.ಪಾಟೀಲ,** ಸಚಿವ

ಈ ಯೋಜನೆಗೆ ಒಟ್ಟು ರೂ. 2 ಲಕ್ಷ ಕೋ. ಹಣ ಬೇಕು ಎಂದು ಕೆಲವರು ಬಿಂಬಿಸಿದ್ದರು. ಆದರೆ, ನಾನು ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಎಳೆಎಳೆಯಾಗಿ ಹೇಳಿದ್ದೆ. ಇದನ್ನು ಮುಂದೆ ಹಾಕಿದರೆ ಭವಿಷ್ಯದಲ್ಲಿ ಈ ಯೋಜನೆ ಮತ್ತೆ ನನೆಗುದಿಗೆ ಬೀಳಲಿದೆ ಎಂದು ಸಿಎಂ ಮತ್ತು ಡಿಸಿಎಂ ಅವರಿಗೆ ಇತ್ತೀಚೆಗೆ ಮನವರಿಕೆ ಮಾಡಿದ್ದೆ. ಇದನ್ನು ಬಾಗಲಕೋಟೆ ಮತ್ತು ಗದಗ ಜಿಲ್ಲೆಗಳ ಸಚಿವರೂ ಬೆಂಬಲಿಸಿದ್ದರು. ಈಗ ಮೂರು ಹಂತಗಳಲ್ಲಿ ಪ್ರತಿ ಎಕರೆ ನೀರಾವರಿ ಜಮೀನಿಗ ರೂ. 40 ಲಕ್ಷ ಮತ್ತು ಒಣಬೇಸಾಯ ಜಮೀನಿಗೆ ರು. 30 ಲಕ್ಷ ದರ ಪರಿಹಾರ ನಿಗದಿ ಪಡಿಸಲಾಗಿದೆ. ಈ ಯೋಜನೆ ಒಂದು ಹಂತಕ್ಕೆ ಬಂದಿದ್ದು, ಎಲ್ಲ ರೈತರೂ ಇದಕ್ಕೆ ಸಂಪೂರ್ಣ ಬೆಂಬಲ ನೀಡಬೇಕು. ಇದೊಂದು ಐತಿಹಾಸಿಕ ನಿರ್ಣಯವಾಗಿದೆ ಎಂದರು.

ರೈತರು ಮಾಡುವ ತ್ಯಾಗದಿಂದ ಆಲಮಟ್ಟಿ ಜಲಾಷಯದ ಎತ್ತರವನ್ನು 519.60 ಮೀ. ನಿಂದ 524.256 ಮೀ. ಹೆಚ್ಚಿಸಲು ಸಾಧ್ಯವಾಗಲಿದೆ. ಇದೇ ವೇಳೆ ಯೋಜನಾ ಸಂತ್ರಸ್ತ ನಾನಾ ಗ್ರಾಮಗಳ ರೈತರು ಸಚಿವ ಎಂ. ಬಿ. ಪಾಟೀಲ ಅವರನ್ನು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಬಬಲಾದಿಯ ಅಪ್ಪಯ್ಯ ಹಿರೇಮಠ, ಅದೃಷ್ಯಪ್ಪ ವಾಸಣ್ಣ ದೇಸಾಯಿ, ವಿ. ವಿ. ಅರಕೇರಿ, ಕುಮಾರ ದೇಸಾಯಿ, ಬಸವರಾಜ ದೇಸಾಯಿ, ಡಾ. ಕೆ. ಎಚ್. ಮುಂಬಾತಡ್ಡಿ, ಉಮೇಶ ಮಲ್ಲಣ್ಣವರ, ಬಿ. ಡಿ. ಪಾಟೀಲ, ಎಚ್. ಬಿ. ಹರನಟ್ಟಿ, ರಮೇಶ ಯರಗಟ್ಟಿ, ಅಪ್ಪುಗೌಡ ಪಾಟೀಲ ಶೇಗುಣಸಿ, ಅಶೋಕ ಕಬಾಡೆ, ನಾಗಪ್ಪ ದೇಸಾಯಿ, ವಾಲಿಕಾರ ಮುಂತಾದವರು ಉಪಸ್ಥಿತರಿದ್ದರು.

ಶಿಕ್ಷಕರನ್ನು ಸಮೀಕ್ಷೆಗೆ ನಿಯೋಜಿಸಿ: ಲಕ್ಷ್ಮೀಪುತ್ರ

ಆಲಮೇಲ: ತಹಶಿಲ್ದಾರ ರವರಿಗೆ ಮನವಿ ಪತ್ರ ನೀಡಿ ಮಾತನಾಡಿದ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಲಕ್ಷ್ಮೀಪುತ್ರ ಕಿರನಳ್ಳಿ ಕರ್ನಾಟಕ ರಾಜ್ಯ ಹಿಂದೂಳಿದ ವರ್ಗಗಳ ಆಯೋಗ ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪ್ರಾರಂಭಿಸಿದೆ .ಅದರಂತೆ ಆಲಮೇಲ ತಾಲ್ಲೂಕಿನಲ್ಲಿ ಸಮೀಕ್ಷೆ ಆರಂಭಿಸಿದ್ದು , ಸದರಿ ಸಮೀಕ್ಷೆ ಕಾರ್ಯದಲ್ಲಿ ಕಳೆದ ವಾರದಲ್ಲಿ ಗಣತಿಗೆ ಬೇಕಾಗುವಷ್ಟು ಶಿಕ್ಷಕರಿಗೆ ತರಬೇತಿ ನೀಡಿ ನಿಯೋಜನೆ ಮಾಡಿರುತ್ತಾರೆ.ಆದರೆ ಅವರಲ್ಲಿನ ತರಬೇತಿ ಪಡೆದ ಬಹಳಷ್ಟು ಶಿಕ್ಷಕರನ್ನು ಕೈ ಬಿಟ್ಟು ಸಮೀಕ್ಷೆ ಪ್ರಾರಂಭವಾಗಿ ಎರಡು ದಿನಗಳ ನಂತರ ಮತ್ತೆ ಹಲವಾರು ಶಿಕ್ಷಕರನ್ನು ಯಾವುದೇ ತರಹದ ತರಬೇತಿ ನೀಡದೆ ಸಮೀಕ್ಷೆಗೆ ತೆರಳುವಂತೆ ಆದೇಶ ಮಾಡಿರುತ್ತಾರೆ .ಇದು ಸಂಪೂರ್ಣವಾಗಿ ಗೊಂದಲಮಯವಾಗಿದ್ದು ಕೂಡಲೇ ಸಂಬಂಧ ಪಟ್ಟ ಅಧೀಕಾರಿಗಳ ಗಮನಕ್ಕೆ ತಂದು ಪೂರ್ವದಲ್ಲಿ ತರಬೇತಿ ಪಡೆದ ಶಿಕ್ಷಕರನ್ನು ಸಮೀಕ್ಷೆಗೆ ನಿಯೋಜನೆ ಮಾಡಬೇಕು ಒಂದು ವೇಳೆ ಶಿಕ್ಷಕರು ಕಡಿಮೆ ಬಿದ್ದರೆ ಉಳಿದ ಶಿಕ್ಷಕರನ್ನು ಸೂಕ್ತ ತರಬೇತಿ ನೀಡಿ ಸಮೀಕ್ಷೆಗೆ ನಿಯೋಜಿಸಬೇಕು ಎಂದು ಒತ್ತಾಯಿಸಿದರು. ತಮ್ಮ ಬೇಡಿಕೆಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ತರಬೇತಿ ನೀಡಿಯೇ ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಲಾಗುವುದು ಎಂದರು. ಈ ವೇಳೆ ತರಬೇತಿಗೆ ನಿಯೋಜಿತ ಶಿಕ್ಷಕರಾದ ಸಿಧ್ಧಾರಾಮ ಮಳ್ಳಿ, ಎಸ್.ಎಮ್. ಜಮಾದಾರ, ಕವಿತಾ ಪಶುಪತಿಮಠ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ತಿಮರೋಡಿಗೆ ಮಂಜೂರಾಗದ ನಿರೀಕ್ಷಣಾ ಜಾಮೀನು

ಮಂಗಳೂರು: ಮನೆಯಲ್ಲಿ ಅಕ್ರಮವಾಗಿ ಶಸ್ತ್ರಾಸ್ತ್ರ ಕೂಡಿಟ್ಟ ಪ್ರಕರಣದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ನಡೆದಿದ್ದು, ಸರಕಾರಿ ಅಭಿಯೋಜಕರು ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ಕೇಳಿದ್ದಾರೆ .ಸೆ.27ರಂದು ವಿಚಾರಣೆಗೆ ಬರಲಿದೆ. ಆಕ್ಷೇಪಣೆ ಸಲ್ಲಿಸುವ ಕುರಿತು ಪೊಲೀಸರಿಂದ ವರದಿ ತೀರಿಸಿಕೊಳ್ಳಬೇಕು. ಇದಕ್ಕೆ ಸಮಯಾವಕಾಶ ಬೇಕು ಎಂದು ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು. ಸೆ. 27ರವರೆಗೆ ನ್ಯಾಯಾಧೀಶರು ವಿಚಾರಣೆ ಮುಂದೂಡಿದರು. ಅಕ್ರಮ ಹೊಂದಿದ್ದ ಆರೋಪದಲ್ಲಿ ವಿಚಾರಣೆಗೆ ಹಾಜರಾಗುವಂತೆ ಎಸ್ಐಟಿ 2 ಬಾರಿ ನೋಟಿಸ್ ನೀಡಿದೆ. ಎರಡನೇ ನೋಟಿಸ್ ಪ್ರಕಾರ ಸೆ.25ಕ್ಕೆ ವಿಚಾರಣೆಗೆ ಹಾಜರಾಗಬೇಕು. ಆದರೆ ನಿರೀಕ್ಷಣಾ ಜಾಮೀನು ಮಂಜೂರಾಗದ ಹಿನ್ನೆಲೆಯಲ್ಲಿ ಹಾಜರಾಗುವುದು ಬಹುತೇಕ ಸಂಶಯ.

ವಿಶ್ವವಾಣಿ ಕ್ಲಬ್ ಹೌಸ್
25.09.2025
ಸಂಜೆ: 06.55 ರಿಂದ 08.05 ರವರೆಗೆ
ಗುರುವಾರದ ಅತಿಥಿ

ಶ್ರೀ ಹರೀಶ್ ಕೇರ
ವಿಷಯ
ತೇಜಸ್ವಿ ಕಾಡು, ಕಾದಂಬರಿ
vishwavani.news

ನೋಡುಗರ ಕಣ್ಮನ ಸೆಳೆಯುತಿರುವ ದಶಾವತಾರ, ನವ ದುರ್ಗೆಯರು, ಕೃಷ್ಣಲೀಲೆ, ಕಲ್ಪವೃಕ್ಷ, ಗೊಂಬೆಗಳು

ದಸರಾ: ಬೃಂದಾವನದಲ್ಲಿ ಬೊಂಬೆಗಳ ಲೋಕ

ಮೈಸೂರು: ಬೃಂದಾವನದಲ್ಲಿ ಬೆಣ್ಣೆ ಕದ್ದು ಮೆಲ್ಲುತ್ತಿರುವ ಬಾಲ ಕೃಷ್ಣ...ಪಕ್ಕದಲ್ಲೇ ಧ್ಯಾನಸ್ಥರಾಗಿರುವ ಋಷಿಮುನಿಗಳು...ಕಳ್ಳ ಕೃಷ್ಣನ ಲೀಲೆ ನೋಡುತ್ತಾ ನಿಂತಿರುವ ಸೀತಾ ರಾಮರು, ದೇವಾನ್ ದೇವತೆಗಳು...

> ನನಗೆ ನಮ್ಮ ಸಂಸ್ಕೃತಿ, ಸಂಪ್ರದಾಯಗಳಲ್ಲಿ ಹೆಚ್ಚು ನಂಬಿಕೆ. ನಾನು ಕಾರ್ಯನಿರ್ವಹಿಸುವ ಶಾಲೆಯಲ್ಲಿ ನಮ್ಮ ಧರ್ಮದ ಹಬ್ಬಗಳನ್ನು ಅದ್ದೂರಿಯಾಗಿ ಆಚರಣೆ ಮಾಡುವುದರಿಂದ ನವರಾತ್ರಿ ಸಂದರ್ಭದಲ್ಲಿ ಬೊಂಬೆ ಕೂರಿಸುವ ಆಸಕ್ತಿ ಮೂಡಿತು. ನನ್ನ ಕುಟುಂಬವರು, ಸ್ನೇಹಿತರೂ ಪ್ರೇರೇಪಣೆ ನೀಡಿದರು. ಇದರಿಂದಾಗಿ ಕಳೆದ 20 ವರ್ಷದಿಂದ ಬೊಂಬೆ ಕೂರಿಸುತ್ತಿದ್ದೇನೆ.
> -ಸವಿತಾ, ಶಿಕ್ಷಕಿ

ಮೈಸೂರಿನ ಶ್ರೀರಾಂಪುರದ ಕಂದಾಯ ಬಡಾವಣೆ ನಿವಾಸಿ ಸವಿತಾ ಅವರು ತಮ್ಮ ಮನೆಯಲ್ಲಿ ಸೃಷ್ಟಿಸಿರುವ ಬೊಂಬೆಗಳ ಲೋಕ.

ಇದು ಮೈಸೂರಿನ ಶ್ರೀರಾಂಪುರದ ಕಂದಾಯ ಬಡಾವಣೆ ನಿವಾಸಿ ಸವಿತಾ ಅವರು ತಮ್ಮ ಮನೆಯಲ್ಲಿ ಸೃಷ್ಟಿಸಿರುವ ಬೊಂಬೆಗಳ ಲೋಕ.

ದಸರಾ ಎಂದರೆ ಕೇವಲ ಕಲೆ, ಸಂಸ್ಕೃತಿ ಬಿಂಬಿಸುವ ಜಂಬೂಸವಾರಿ ಮಾತ್ರವಲ್ಲ, ಬೊಂಬೆಗಳ ಹಬ್ಬವೂ ಹೌದು. ಮೈಸೂರು ಮಾತ್ರವಲ್ಲದೆ ರಾಜ್ಯದೆಲ್ಲೆಡೆ ನವರಾತ್ರಿಯಲ್ಲಿ ಮನೆ ಮನೆಗಳಲ್ಲಿ ಬೊಂಬೆಗಳನ್ನು ಪ್ರತಿಷ್ಠಾಪಿಸಿ ನಾಡಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ಅಂತೆಯೇ ಸವಿತಾ ಅವರು ತಮ್ಮ ಮನೆಯಲ್ಲಿ ಬೊಂಬೆಗಳ ಲೋಕವನ್ನೇ ಸೃಷ್ಟಿಸಿದ್ದಾರೆ. ವಿಭಿನ್ನ ಹಾಗೂ ವಿಶಿಷ್ಟ ಬೊಂಬೆಗಳು ನೋಡುಗರ ಕಣ್ಮನ ಸೆಳೆಯುತ್ತಿವೆ. ಮತ್ತೆ ಮತ್ತೆ ನೋಡಬೇಕು ಅನ್ನಿಸುವಷ್ಟು ಸುಂದರವಾಗಿವೆ.

ನಗರದ ವಿಜಯವಿಠಲ ಶಾಲೆಯಲ್ಲಿ ಹಿಂದಿ ಶಿಕ್ಷಕಿಯಾಗಿರುವ ಸವಿತಾ ಅವರಿಗೆ ಸಂಪ್ರದಾಯ, ಸಂಸ್ಕೃತಿಯ ಆಚರಣೆಗಳಲ್ಲಿ ಅಪಾರ ಪ್ರೀತಿ. ಹೀಗಾಗಿಯೇ ಕಳೆದ 20 ವರ್ಷಗಳಿಂದ ನವರಾತ್ರಿ ಸಂದರ್ಭದಲ್ಲಿ ಬೊಂಬೆ ಕೂರಿಸುತ್ತಿದ್ದಾರೆ. ಕೆಲ ಬೊಂಬೆಗಳಿಂದ ಆರಂಭವಾದ ಇವರ ಬೊಂಬೆ ಪ್ರೀತಿ ಇಂದು 500ಕ್ಕೂ ಹೆಚ್ಚು ಬೊಂಬೆಗಳಿಗೆ ಏರಿಕೆಯಾಗಿದೆ. ನಗರ ಸೇರಿದಂತೆ ಬೇರೆ ಕಡೆ ಬೊಂಬೆ ಪ್ರದರ್ಶನಕ್ಕೆ ಹೋದ ಸಂದರ್ಭದಲ್ಲಿ ಯಾವುದಾದರೊಂದು ಬೊಂಬೆ ತರುತ್ತಾರೆ. ಸ್ನೇಹಿತರು ಇವರ ಬೊಂಬೆಗಳ ಪ್ರೀತಿ ನೋಡಿ ಅವರೂ ಸಹ ಹಲವು ಬೊಂಬೆಗಳನ್ನು ತಂದು ಕೊಟ್ಟಿದ್ದಾರೆ. ಇದರಿಂದಾಗಿ ಇವರ ಬೊಂಬೆಗಳ ಸಾಲಿಗೆ ಪ್ರತಿವರ್ಷವೂ ಹೊಸ ಹೊಸ ಬೊಂಬೆಗಳು ಸೇರ್ಪಡೆಯಾಗುತ್ತಲೇ ಇದ್ದು, ಈ ಬಾರಿ ಪುರಿ ಜಗನ್ನಾಥನ ಸೇರ್ಪಡೆಯಾಗಿದೆ.

ಸವಿತಾ ಅವರು ಪ್ರತಿ ವರ್ಷವೂ ಒಂದಲ್ಲಾ ಒಂದು ವಿಭಿನ್ನ ಥೀಮ್‌ನಡಿ ಬೊಂಬೆಗಳನ್ನು ಪ್ರತಿಷ್ಠಾಪಿಸುತ್ತಾರೆ. ಈ ಬಾರಿ ಬೃಂದಾವನ ಥೀಮ್ ನಡಿಯಲ್ಲಿ ಬೊಂಬೆಗಳ ಪ್ರತಿಷ್ಠಾಪನೆ ಮಾಡಿದ್ದು, ಬಾಲ ಕೃಷ್ಣನ ಲೀಲೆಯನ್ನು ಕಟ್ಟಿಕೊಟ್ಟಿದ್ದಾರೆ. ತಾಯಿ ಯಶೋಧರ ಗೋವುಗಳನ್ನು ನೋಡಿಕೊಳ್ಳುತ್ತಿದ್ದರೆ, ಬಾಲ ಕೃಷ್ಣ ಮೊಸರು ಗಡಿಗೆಯಲ್ಲಿ ಅಮ್ಮ ಇಟ್ಟಿರುವ ಬೆಣ್ಣೆಯನ್ನು ಕದ್ದು ತಿನ್ನುತ್ತಿದ್ದಾರೆ. ಸೈನಿಕರು ಕುದುರೆಗಳನ್ನೇರಿ ಬೃಂದಾವನದ ಕಾವಲು ಕಾಯುತ್ತಿದ್ದಾರೆ. ಈ ದೃಶ್ಯ ನೋಡುಗರನ್ನು ಆಕರ್ಷಿಸುತ್ತದೆ.

ಯಾವ್ಯಾವ ಬೊಂಬೆಗಳಿವೆ?

ಬೊಂಬೆ ಪ್ರದರ್ಶನದಲ್ಲಿರುವ ಒಂದೊಂದು ಬೊಂಬೆಗಳೂ ವಿಭಿನ್ನವಾಗಿವೆ. ದಶಾವತಾರ, ನವ ದುರ್ಗೆಯರು, ಪಾಂಡುರಂಗ ವಿಠಲ, ಕೃಷ್ಣಲೀಲೆ, ಕಲ್ಪವೃಕ್ಷ, ಪಟ್ಟದ ಗೊಂಬೆಗಳು ಸೇರಿದಂತೆ ಹಲವು ಕಥನಗಳು ಬೊಂಬೆ ರೂಪದಲ್ಲಿ ತೆರೆದುಕೊಂಡಿವೆ. ರಾಮಾಯಣ, ಮಹಾಭಾರತದಂತಹ ಪುರಾಣ ಕಥೆಗಳನ್ನು ದೃಶ್ಯ ರೂಪದಲ್ಲಿ ಪ್ರಸ್ತುತಪಡಿಸಲಾಗಿದೆ. ಶ್ರೀನಿವಾಸ ಕಲ್ಯಾಣ, ಆಂಜನೇಯ, ರಾಘವೇಂದ್ರ ಸ್ವಾಮಿ, ಮಧುರೈ ಮೀನಾಕ್ಷಿ, ರಾಮ ಲಕ್ಷ್ಮಣ, ಸೀತೆ, ಲಕ್ಷ್ಮೀ, ಸರಸ್ವತಿ, ಚಾಮುಂಡೇಶ್ವರಿ, ಆಂಜನೇಯ ಸೇರಿದಂತೆ ದೇವಾನ್ ದೇವತೆಗಳ ಸಮಾಗಮವೇ ಇದೆ. ಜಯಚಾಮ ರಾಜೇಂದ್ರ ಒಡೆಯರ್ ಅವರ ಬೊಂಬೆ ರಾಜಾಳ್ವಿಕೆಯನ್ನು ನೆನಪಿಸುವಂತಿದೆ. ಅಲ್ಲದೆ ಪರಿಸರ ಸಂರಕ್ಷಣೆ, ಮಹಿಳಾ ಸಬಲೀಕರಣ ಸೇರಿದಂತೆ ಸಾಮಾಜಿಕ ವಿಷಯಗಳ ಮೇಲೆ ಆಧಾರಿತವಾದ ಬೊಂಬೆಗಳೂ ಇದ್ದು, ಪ್ರದರ್ಶನಕ್ಕೆ ಹೊಸ ಮೆರುಗು ನೀಡಿವೆ.

ಸಮೀಕ್ಷೆಗೆ ಭಾಗವಹಿಸುವುದು ಕಡ್ಡಾಯವಲ್ಲ: ಹೈಕೋರ್ಟ್‌ಗೆ ಸರಕಾರ ಹೇಳಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾಮಾಜಿಕ-ಆರ್ಥಿಕ ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗವಹಿಸುವುದು ಹಾಗೂ ಮಾಹಿತಿ ನೀಡುವುದು ಕಡ್ಡಾಯವಲ್ಲ ಎಂದು ಸರಕಾರ ಹೇಳಿದ್ದು, ಆಯೋಗವು ಸಮೀಕ್ಷೆ ಕೈಪಿಡಿಯಲ್ಲಿ ಸೇರಿಸಿರುವ 1,561 ಜಾತಿಗಳ ವರ್ಗೀಕರಣಕ್ಕೆ ಆಧಾರವೇನು ಎಂದು ಹೈಕೋರ್ಟ್ ಪ್ರಶ್ನಿಸಿದ್ದು ಅರ್ಜಿ ವಿಚಾರಣೆ ಗುರುವಾರಕ್ಕೆ ಮುಂದೂಡಿದೆ.

ಸಮೀಕ್ಷೆ ನಡೆಸಲು ಆಯೋಗಕ್ಕೆ ನಿರ್ದೇಶಿಸಿ ಸೆ.12ರಂದು ರಾಜ್ಯ ಸರಕಾರ ಹೊರಡಿಸಿರುವ ಆದೇಶ ರದ್ದು ಕೋರಿ ರಾಜ್ಯ ಒಕ್ಕಲಿಗರ ಸಂಘ, ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ರಘುನಾಥ್ ಮತ್ತು ಹಿರಿಯ ವಕೀಲ ಕೆ.ಎನ್. ಸುಬ್ಬಾರೆಡ್ಡಿ ಸೇರಿದಂತೆ ಮತ್ತಿತರರು ಐದು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು (ಪಿಐಎಲ್) ಸಲ್ಲಿಸಿದ್ದರು. ಸಮೀಕ್ಷೆಗೆ ತಡೆಯಾಜ್ಞೆ ನೀಡಬೇಕೆಂಬ ಅರ್ಜಿದಾರರ ಮಧ್ಯಂತರ ಮನವಿ ಕುರಿತು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರ ನೇತೃತ್ವದ ವಿಭಾಗೀಯ ಪೀಠ ಮಂಗಳವಾರ ಒಂದು ಗಂಟೆಗೂ ಅಧಿಕ ಸಮಯ ವಿಚಾರಣೆ ನಡೆಸಿತು. ವಾದ-ಪ್ರತಿವಾದ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ನ್ಯಾಯಪೀಠ ಗುರುವಾರಕ್ಕೆ ವಿಚಾರಣೆ ಮುಂದೂಡಿದೆ.

ರಾಜ್ಯ ಸರಕಾರದ ಪರ ವಾದ ಮುಂದುವರಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಸಮೀಕ್ಷೆಯಲ್ಲಿ ಯಾವ ತಪ್ಪಿದೆ ಎಂಬುದು ಕಾಣಿಸಿಲ್ಲ. ಹೀಗಾಗಿ, ಸಮೀಕ್ಷೆಗೆ ಮಧ್ಯಂತರ ತಡೆ ನೀಡಬಾರದು. ಜಾತಿಗಳ ಅಂಕಿ ಅಂಶ ಸಂಗ್ರಹಿಸದೇ ಯೋಜನೆಗಳನ್ನು ರೂಪಿಸಲು ಸಾಧ್ಯವಿಲ್ಲ. ಅಂಕಿ ಅಂಶಗಳನ್ನು ಸಂಗ್ರಹಿಸುವ ಮುನ್ನವೇ ತಪ್ಪು ಹುಡುಕಲಾಗದು. ಇದಕ್ಕಾಗಿ ಮಾಹಿತಿ ಸಂಗ್ರಹಿಸುವುದು ಹಕ್ಕಿನ ಉಲ್ಲಂಘನೆಯಾಗುವುದಿಲ್ಲ ಎಂದು ಪ್ರತಿಪಾದಿಸಿದರು. ಆಯೋಗದ ಪರ ಹಿರಿಯ ವಕೀಲ ರವಿವರ್ಮ ಕುಮಾರ್, ವ್ಯಕ್ತಿಯ ಗುರುತಿಗಾಗಿ ಮಾತ್ರವೇ ಆಧಾರ್ ನಂಬರ್ ಪಡೆಯಲಾಗುತ್ತಿದೆ. ಬೇರೆ ರಾಜ್ಯದವರನ್ನು ಪರಿಗಣಿಸದೇ ಇರಲು ಈ ಆಧಾರ್ ಸಂಖ್ಯೆ ಸಹಾಯವಾಗುತ್ತದೆ. ಸಮೀಕ್ಷೆಯ ಅನುಕೂಲಕ್ಕಾಗಿ ಮಾತ್ರವೇ 1,561 ಜಾತಿ ಗುರುತಿಸಲಾಗಿದೆ. ನಮ್ಮ ಜಾತಿ ಸೇರಿಸಿಲ್ಲವೆಂಬ ಕೆಲವರ ಮನವಿ ಮೇರೆಗೆ ಹೊಸ ಜಾತಿ ಸೇರ್ಪಡೆ ಮಾಡಲಾಗಿದೆ. ಸಮಾಲೋಚನೆ ನಡೆಸಿ ಈ ಮನವಿ ಪರಿಗಣಿಸಲಾಗಿದೆ. ಸಮೀಕ್ಷೆಯಲ್ಲಿ ಜನರು ಹೇಳುವ ಜಾತಿಗಳನ್ನು ನಮೂದಿಸಿಕೊಳ್ಳುತ್ತೇವೆ ಎಂದರು. 60 ಪ್ರಶ್ನೆಗಳಿಗೆ ಉತ್ತರಿಸುವಂತೆ ಒತ್ತಾಯ ಮಾಡುವುದಿಲ್ಲ. ಮಾಹಿತಿ ನಿರಾಕರಿಸಲಾಗಿದೆ ಎಂಬುದನ್ನು ನಮೂದಿಸಲು ಕಾಲಂ 10ರಲ್ಲಿ ಅವಕಾಶ ಮಾಡಿಕೊಡಲಾಗಿದೆ. ನೀಡುವ ಉತ್ತರವನ್ನಷ್ಟೇ ಬರೆದುಕೊಳ್ಳಲು ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್, ಕೇಂದ್ರ ಸರಕಾರವೇ 2027ರಲ್ಲಿ ಜಾತಿಗಣತಿ ಆರಂಭಿಸಲಿದೆ. ಜನಗಣತಿ ಜೊತೆಗೆ ಜಾತಿ ಗಣತಿಯನ್ನೂ ನಡೆಸಲಾಗುವುದು. ಕೇಂದ್ರ, ರಾಜ್ಯದ ಸಮೀಕ್ಷೆಗಳಲ್ಲಿ ವಿರೋಧಾಭಾಸ ಇರಬಾರದು. ಎಲ್ಲ ರಾಜ್ಯಗಳೂ ಪ್ರತ್ಯೇಕ ಸಮೀಕ್ಷೆಗೆ ಮುಂದಾದರೆ ಸಮಸ್ಯೆ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.ಹಿಂದುಳಿದ ವರ್ಗಗಳ ಆಯೋಗ ಪ್ರತಿನಿಧಿಸಿದ್ದ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್, ಸಮೀಕ್ಷೆಯ ಅನುಕೂಲಕ್ಕಾಗಿ ಮಾತ್ರವೇ 1,561 ಜಾತಿಗಳನ್ನು ಗುರುತಿಸಲಾಗಿದೆ. ನಮ್ಮ ಜಾತಿ ಸೇರಿಸಿಲ್ಲವೆಂಬ ಕೆಲವರ ಮನವಿ ಮೇರೆಗೆ ಹೊಸ ಜಾತಿಗಳನ್ನು ಸೇರ್ಪಡೆ ಮಾಡಲಾಗಿದೆ. ಸಮಾಲೋಚನೆ ನಡೆಸಿ ಈ ಮನವಿಗಳನ್ನು ಪರಿಗಣಿಸಲಾಗಿದೆ. ಸಮೀಕ್ಷೆಯಲ್ಲಿ ಜನರು ಹೇಳುವ ಜಾತಿಗಳನ್ನು ನಮೂದಿಸಿಕೊಳ್ಳುತ್ತೇವೆ. ವ್ಯಕ್ತಿಯ ಗುರುತಿಗಾಗಿ ಮಾತ್ರವೇ ಆಧಾರ್ ನಂಬರ್ ಪಡೆಯಲಾಗುತ್ತಿದೆ. ಬೇರೆ ರಾಜ್ಯದವರನ್ನು ಪರಿಗಣಿಸದೇ ಇರಲು ಈ ಆಧಾರ್ ಸಂಖ್ಯೆ ಸಹಾಯವಾಗುತ್ತದೆ. 60 ಪ್ರಶ್ನೆಗಳಿಗೆ ಉತ್ತರಿಸುವಂತೆ ಒತ್ತಾಯ ಮಾಡುವುದಿಲ್ಲ. ಮಾಹಿತಿ ನಿರಾಕರಿಸಲಾಗಿದೆ ಎಂಬುದನ್ನು ನಮೂದಿಸಲು ಕಲಂ 10ರಲ್ಲಿ ಅವಕಾಶ ಮಾಡಿಕೊಡಲಾಗಿದೆ. ನೀಡುವ ಉತ್ತರವನ್ನಷ್ಟೇ ಬರೆದುಕೊಳ್ಳಲು ಸೂಚಿಸಲಾಗಿದೆ ಎಂದರು.

ಈ ಹಂತದಲ್ಲಿ ಪೀಠವು ಸಮೀಕ್ಷೆಯು ಕಡ್ಡಾಯವಲ್ಲ, ಆಧಾರ್ ನೀಡಬೇಕಿಲ್ಲ ಎಂದು ದತ್ತಾಂಶ ಸಂಗ್ರಹಿಸುವ ಸಮೀಕ್ಷೆದಾರರಿಗೆ ಸೂಚನೆ ನೀಡಲಾಗಿದೆಯೇ? ಅದನ್ನು ತೋರಿಸಿ. ಸಮೀಕ್ಷೆಯಲ್ಲಿ ಭಾಗಿಯಾಗಿರುವ 1.61 ಲಕ್ಷ ಮಂದಿಗೆ ಮಾಹಿತಿ ಪಡೆಯುವುದು ಕಡ್ಡಾಯವಲ್ಲ ಎಂದು ತಿಳಿಸಲಾಗಿದೆಯೇ? ಸಮೀಕ್ಷೆಗೆ ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕ ಪ್ರಕಟಣೆ ನೀಡಿ ಎಷ್ಟು ದಿನ ಕಾಯಲಾಗಿದೆ? 2015ರಲ್ಲಿ ಸರ್ಕಾರ ನಡೆಸಿರುವ ಸಮೀಕ್ಷೆಯನ್ನು ಬಹಿರಂಗಪಡಿಸಿಲ್ಲವಾದರೂ ಅದನ್ನು ಆಧರಿಸುವುದು ಹೇಗೆ ಎಂದು ಪೀಠ ಪ್ರಶ್ನಿಸಿತು.

ಈ ಸಂಬಂಧ ಖಚಿತ ಮಾಹಿತಿ ಪೀಠಕ್ಕೆ ಪ್ರೊ. ರವಿವರ್ಮಕುಮಾರ್ ನೀಡಲಾಗಲಿಲ್ಲ. ಅಂತಿಮವಾಗಿ ಜನರು ಮಾಹಿತಿ ನೀಡುವುದು ಕಡ್ಡಾಯವಲ್ಲ. ಹಿಂದಿನ ಸಮೀಕ್ಷೆಯ ಆಧಾರದಲ್ಲಿ 1,561 ಜಾತಿಗಳನ್ನು ಸೇರ್ಪಡೆ ಮಾಡಲಾಗಿದೆಯಷ್ಟೆ. ಜಾತಿ, ಧರ್ಮದ ಮಾಹಿತಿ ನೀಡುವುದು ಸಮೀಕ್ಷೆಯಲ್ಲಿ ಭಾಗವಹಿಸುವ ಜನರ ವಿವೇಚನೆಗೆ ಬಿಟ್ಟ ವಿಚಾರ ಎಂದು ಸಮಜಾಯಿಷಿ ನೀಡಲು ಪ್ರಯತ್ನಿಸಿದರು.

ಈ ಹಂತದಲ್ಲಿ ಪೀಠವು ಸಮೀಕ್ಷೆಗೆ ಎಷ್ಟು ಖರ್ಚು ಮಾಡಲಾಗಿದೆ ಎಂದು ಪ್ರಶ್ನಿಸಿತು. ಅದಕ್ಕೆ ಪ್ರೊ.ಕುಮಾರ್ ಅವರು 20.31 ಕೋಟಿ ಖರ್ಚು ಮಾಡಲಾಗಿದೆ ಎಂದರು. ಆಗ ಪೀಠವು ಸಮೀಕ್ಷೆಗೆ ತಡೆ ನೀಡಿದರೆ ಬಾಕಿ ಹಣ ಸರ್ಕಾರಕ್ಕೆ ಉಳಿತಾಯವಾಗುತ್ತದೆಲ್ಲವೇ ಎಂದು ಪ್ರಶ್ನಿಸಿತು. ಒಂದು ಹಂತದಲ್ಲಿ ಪೀಠವು ಸೈಬರ್ ಅಪರಾಧ ಹೆಚ್ಚುತ್ತಿರುವ ಈ ದಿನಗಳಲ್ಲಿ ಎಲ್ಲರ ಆಧಾರ್ ಸಂಖ್ಯೆ ಪಡೆಯುವುದು ಜನರ ಖಾಸಗಿತನ ಉಲ್ಲಂಘನೆಯ ಭೀತಿಯನ್ನು ತರುವುದಿಲ್ಲವೇ? ಎಂದು ಸರಕಾರವನ್ನು ಪ್ರಶ್ನಿಸಿತು.

ಈ ಮಧ್ಯೆಯೇ ವಾದ ಮುಂದುವರಿಸಿದ ಆಯೋಗದ ಪರ ವಕೀಲರು, 1918 ರಿಂದಲೂ ಸಾಮಾಜಿಕ, ಆರ್ಥಿಕ ಸರ್ವೆಗಳನ್ನು ನಡೆಸಲಾಗಿದೆ. ಬ್ರಿಟಿಷರ ಕಾಲದಲ್ಲೂ ಮಿಲ್ಲರ್ ಸಮಿತಿ ವರದಿ ನೀಡಿದೆ. ಈಗ 2 ಕೋಟಿ ಮನೆಗಳ ವಿದ್ಯುತ್ ಮೀಟರ್‌ಗಳಿಗೆ ಜಿಯೋ ಟ್ಯಾಗ್ ಮಾಡಲಾಗಿದೆ. ಇದಕ್ಕಾಗಿ ಮಾತ್ರವೇ ಮೀಟರ್ ರೀಡರ್‌ಗಳನ್ನು ಬಳಸಿಕೊಳ್ಳಲಾಗಿದೆ. ಸ್ಟಿಕರ್ ಅಂಟಿಸಿ ಕ್ಯೂಆರ್ ಕೋಡ್ ನಮೂದಿಸಲಾಗಿದೆ. ಸಮೀಕ್ಷೆಯ ನಂತರವೇ ಈ ಸ್ಟಿಕರ್ ಭರ್ತಿ ಮಾಡಲಾಗುತ್ತದೆ. ಸ್ಟಿಕ್ಕರ್ ತೆಗೆಯಬಾರದು ಎಂದು ಬಲವಂತ ಏನಿಲ್ಲ. ಅದೇನಿದ್ದರೂ ಕೇವಲ ಮನವಿಯಷ್ಟೇ. ದೇಶದಲ್ಲೇ ಮೊದಲ ಬಾರಿಗೆ ಹೌಸ್ ಲಿಸ್ಟಿಂಗ್ ಮಾಡಲಾಗಿದೆ ಎಂದರು.

ಜನಗಣತಿಗೂ, ಸಾಮಾಜಿಕ ಆರ್ಥಿಕ ಸಮೀಕ್ಷೆಗೂ ವ್ಯತ್ಯಾಸವಿದೆ. ಜನಗಣತಿಗಿಂತ ಸಮೀಕ್ಷೆಯಲ್ಲಿ ವಿವರಗಳ ಮಾಹಿತಿ ಪಡೆಯಲಾಗುತ್ತದೆ. ಸಮೀಕ್ಷೆಯಲ್ಲಿ ಸ್ವಯಂ ಪ್ರೇರಣೆಯಿಂದ ಉತ್ತರ ನೀಡಬಹುದು. ಜನಗಣತಿ ವೇಳೆ ವಿವರ ನೀಡುವುದು ಕಡ್ಡಾಯವಾಗಿದೆ. ಸಂಗ್ರಹಿಸುವ ದತ್ತಾಂಶ ನ್ಯಾಯಾಂಗ ಪರಾಮರ್ಶೆಗೆ ಒಳಪಡಬಹುದು. ಜನಗಣತಿಯ ದತ್ತಾಂಶ ನ್ಯಾಯಾಂಗದ ಪರಾಮರ್ಶೆ ವ್ಯಾಪ್ತಿಗೆ ಬರುವುದಿಲ್ಲ ಎಂದರು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com ದೂ.ಸಂ./ಫ್ಯಾ.ನಂ: 0821-2420810
ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:15/2025-26
ದಿನಾಂಕ: 22.09.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಲೆಕ್ಕ ಶೀರ್ಷಿಕೆ:8443-ಠೇವಣಿವಂತಿಕೆ ಅಡಿಯಲ್ಲಿ ಅನುಮೋದನೆಗೊಂಡ ಮೈಸೂರು ನಗರದ ಭಾರತೀಯ ರಿಸರ್ವ್ ಬ್ಯಾಂಕ್ ಆವರಣದ ಗೇಟ್ ನಂ.1 (ಕೃಷ್ಣಾ ಗೇಟ್)ರ ಬಳಿ ಪ್ರವೇಶ ದ್ವಾರದ ಗೇಟ್ ಸಂಕೀರ್ಣ ನಿರ್ಮಾಣ ಕಾಮಗಾರಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-3ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿರುವ 3ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರು ಕೆಪಿಪಿಪೋರ್ಟಲ್‌ನಲ್ಲಿ (viz https://kppp.karnataka.gov.in/) 22.09.2025 ರಿಂದ 06.10.2025ರ ಸಂಜೆ 17:00ರ ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ.60.35 ಲಕ್ಷಗಳು ಹಾಗೂ ಇ.ಎಂ.ಡಿ ರೂ.1,20,700/-ಗಳಾಗಿರುತ್ತದೆ. ಮುಂದುವರೆದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಕಾಲಮಿತಿ 05 ತಿಂಗಳು. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ, ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
DIPR/DDMYS/1003/KSMCA/540/2025-26

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ ಬೆಂಗಳೂರು 560079
ದೂರವಾಣಿ ಸಂಖ್ಯೆ: +91-80-29619801 ಮಿಂಚ್ ಅಂಚೆ: md.ksmscl@gmail.com
No: HFW/KSMSCL/SCM/09/2024-25 Dated: 24.09.2025
ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : HFW/KSMSCL/SCM/09/2024-25 SE-0024 Dated: 24/09/2025

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.

ಅವಧಿ ಮೀರಿದ / ಪ್ರಮಾಣಿತ ಗುಣಮಟ್ಟವಲ್ಲದ (NSQ) ಔಷಧಿಗಳು ಮತ್ತು ಬಳಕೆ ವಸ್ತುಗಳ ನಾಶಪಡಿಸುವುದಕ್ಕಾಗಿ ಪ್ರಾದೇಶಿಕ ಸೇವಾ ಪೂರೈಕೆದಾರರನ್ನು ನೇಮಿಸುವ ಕುರಿತು- CALL02 (SE 0024)

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ : 24.09.2025 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/-
ವ್ಯವಸ್ಥಾಪಕರು (ಸರಬರಾಜು ಸರಪಳಿ)
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು
ವಾಸಾಸಂಇ/ವಾ.ಪ್ರ/2953/ಅಡ್6/2025-26

ಕಲಬುರಗಿ ಮಹಾನಗರ ಪಾಲಿಕೆ
ಇ-ಮೇಲ್: itstaff_ulb_gulbarga@yahoo.com
ಸಂಖ್ಯೆ: ಕೆಎಂಪಿ/ಟಿ-ಎಸ್-01/Dismantling office building CF/03/2025-26 ದಿನಾಂಕ:24-09-2025
ಆಸಕ್ತಿ ವ್ಯಕ್ತಪಡಿಸುವಿಕೆ ಮತ್ತು ಹರಾಜು ಪ್ರಕಟಣೆ

ಕಾಮಗಾರಿಯ ಹೆಸರು: "Dismantling of Existing Old Corporation office building of Kalaburagi Mahangar Palike, Kalaburagi" DMA/2025-26/AUCTION4443

ಕಲಬುರಗಿ ಮಹಾನಗರ ಪಾಲಿಕೆ ವತಿಯಿಂದ ಹೆಸರಾಂತ ಅರ್ಹ ಏಜನ್ಸಿಗಳಿಂದ ಈ ಮೇಲಿನ ಕಾಮಗಾರಿಯಲ್ಲಿ ಅಳವಡಿಸಲು ವಿವಿಧ ಅಂಶ/ಪಾದಾರ್ಥ/ವಸ್ತುಗಳ ದರಗಳ ದರಪಟ್ಟಿಯಲ್ಲಿ ಇಲ್ಲದ ಕಾರಣ ಅಂದಾಜು ಪಟ್ಟಿಯಲ್ಲಿ ಅಳವಡಿಸಲು ಪೋರ್ಟಲ್ ಮೂಲಕ ಈ ಸಿಂಗಲ್ ಕವರನ್ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಕರೆಯಲಾಗಿದೆ. ಇಚ್ಛೆ ಉಳ್ಳವರು/ಅರ್ಹರು ತಮ್ಮ ದರಗಳನ್ನು ಆಸಕ್ತಿ ವ್ಯಕ್ತಪಡಿಸಬಹುದು ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ನೋಡಬಹುದಾಗಿದೆ. ನಿಗದಿತ ದಿನಾಂಕಗಳು ಈ ಕೆಳಕಂಡಂತಿದೆ.

ಟೆಂಡರ್ ವೇಳಾಪಟ್ಟಿ

1) ಹರಾಜು ಪ್ರಕಟಿಸಿದ ದಿನಾಂಕ: **25.09.2025**, 2) ಹರಾಜುನಲ್ಲಿ ಆಸಕ್ತಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಲು ದಿನಾಂಕ ಮತ್ತು ಸಮಯ: **09.10.2025 17:00 ಗಂಟೆಯವರೆಗೆ,** 3) ಅರ್ಹತಾ ಮಾನದಂಡಗಳ ಮೌಲ್ಯಮಾಪನಕ್ಕಾಗಿ ಪ್ರಾರಂಭ ದಿನಾಂಕ ಮತ್ತು ಸಮಯ: **13.10.2025 17:05 ಗಂಟೆಯವರೆಗೆ,** 5) ಹರಾಜಿನ ದಿನಾಂಕ ಮತ್ತು ಸಮಯ: **15.10.2025 ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 04:00 ಗಂಟೆಯವರೆಗೆ**

ಭರ್ತಿ ಮಾಡಿದ ಆಸಕ್ತಿ ವ್ಯಕ್ತಪಡಿಸುವಿಕೆ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ-ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ಗೆ ಅಪ್‌ಲೋಡ್ ಮಾಡಬೇಕು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/551/ಕೆ.ಎಸ್.ಎಂ.ಸಿ.&ಎ/2025-26

ಟ್ರಸ್ಟಿಗೂ, ಪೀಠಕ್ಕೂ ಯಾವುದೇ ಸಂಬಂಧವಿಲ್ಲ: ಸ್ವಾಮೀಜಿ ಸ್ಪಷ್ಟನೆ

ವಿಜಯಪುರ: ಟ್ರಸ್ಟಿಗೂ ಹಾಗೂ ಕೂಡಲಸಂಗಮ ಪಂಚಮಸಾಲಿ ಪೀಠಕ್ಕೂ ಸಂಬಂಧವೇ ಇಲ್ಲ, ಪೀಠ ಸ್ಥಾಪನೆ ಮಾಡಿದ್ದು ಭಕ್ತರು, ಹೀಗಾಗಿ ಉಚ್ಚಾಟನೆ ಮಾಡುವ ಅಧಿಕಾರ ಟ್ರಸ್ಟಿಗೆ ಇಲ್ಲ, ಈ ರೀತಿ ನೂರಾರು ಟ್ರಸ್ಟ್‌ಗಳಿವೆ ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೂಡಲಸಂಗಮ ಪಂಚಮಸಾಲಿ ಪೀಠ ರಚನೆ ಮಾಡಿದ್ದು ಸಮಸ್ತ ಭಕ್ತರು, ಲಿಂಗಾಯತ ಮಠಾಧೀಶರ ಒಕ್ಕೂಟ, ಸಹೃದಯಿ ಸಂತರ ಒಕ್ಕೂಟ ಸೇರಿದಂತೆ ಸಕಲ ಪೂಜ್ಯರ ಸಮಕ್ಷಮದಲ್ಲಿ ಪೀಠ ರಚನೆ ಮಾಡಲಾಗಿದೆ. ಪೀಠ ಸ್ವತಂತ್ರವಾಗಿದೆ. ಈ ಮೊದಲು ಟ್ರಸ್ಟ್ ಪದಾಧಿಕಾರಿಗಳು ಮಠಕ್ಕೆ ಜಾಗ ನೀಡುವುದಾಗಿ ವಾಗ್ದಾನ ಮಾಡಿದ್ದರು. ನಂತರ ನನ್ನನ್ನು ಟ್ರಸ್ಟ್ ಅಧ್ಯಕ್ಷರನ್ನಾಗಿ ಮಾಡುವುದಾಗಿ ಹೇಳಿದ್ದರೂ ಇದುವರೆಗೂ ಮಾಡಲಿಲ್ಲ. ಇದು ವೈಯುಕ್ತಿಕವಾಗಿ ರಚನೆಯಾಗಿರುವ ಟ್ರಸ್ಟ್, ಪೀಠಕ್ಕೆ ಭೂಮಿ ಕೊಡುವುದಾಗಿ ಹೇಳಿ ಸ್ವಂತಕ್ಕೆ ಜಮೀನು ಮಾಡಿಕೊಂಡರು, ಹೀಗಾಗಿ ಸಮಾಜ ಶಾಶ್ವತ ಎಂದು ಸಮಾಜ ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವೆ ಎಂದರು.

ಕೂಡಲಸಂಗಮವನ್ನು ಮೂಲಪೀಠವಾಗಿಸಿಕೊಂಡು ಭಕ್ತರ ಸಭೆ ನಡೆಸಿ ಶಾಖಾ ಮಠಗಳನ್ನು ಮಾಡಲಾಗುವುದು, ಒಂದು ಗುಡಿಸಲಿನಲ್ಲಿಯೂ ಸಮಾಜ ಸಂಘಟನೆ ಕಾರ್ಯ ನೆರವೇರಿಸಲು ಬದ್ಧ, ಭಕ್ತರ ನಿರ್ಧಾರವೇ ಅಂತಿಮ ಎಂದರು.

> ಲಿಂಗಾಯತ ಧರ್ಮಕ್ಕೆ ಇನ್ನೂ ಕೋಡ್ ದೊರಕಿಲ್ಲ, ಇನ್ನೊಂದೆಡೆ ಪಂಚಮಸಾಲಿ ಸಮಾಜದ ಮೀಸಲಾತಿಗೆ ಹಿನ್ನಡೆಯಾಗಬಾರದು ಎಂದು ಧರ್ಮ ಕಾಲಂನಲ್ಲಿ ಹಿಂದೂ ಎಂದು, ಜಾತಿ ಕಾಲಂನಲ್ಲಿ ಲಿಂಗಾಯತ ಪಂಚಮಸಾಲಿ ಎಂದು ಬರೆಯಿಸುವ ನಿರ್ಣಯ ಸ್ವೀಕರಿಸಲಾಗಿದೆ.
> -ಬಸವ ಜಯಮೃತ್ಯುಂಜಯ ಸ್ವಾಮೀಜಿ

ಸಾಹಿತಿ ಭೈರಪ್ಪ ಅಗಲಿಕೆ: ಸಚಿವರಿಂದ ಸಂತಾಪ
ಹೆಮ್ಮೆಯ ಪುತ್ರನ ಕಳೆದುಕೊಂಡ ಸರಸ್ವತಿ

ಚಿಕ್ಕಬಳ್ಳಾಪುರ: ಸರಸ್ವತಿ ಸಮ್ಮಾನ್ ಸೇರಿ ಹತ್ತುಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದ ಹಿರಿಯ ಸಾಹಿತಿ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರ ನಿಧನ ಸಾಹಿತ್ಯ ಸಂಸ್ಕೃತಿಗೆ ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬ, ಅಭಿಮಾನಿಗಳು ಹಾಗೂ ಸಾಹಿತ್ಯ ಲೋಕಕ್ಕೆ ಹೃತ್ಪೂರ್ವಕ ಸಂತಾಪಗಳು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ವಿಷಾದ ವ್ಯಕ್ತಪಡಿಸಿದ್ದಾರೆ.

ಶ್ರೇಷ್ಠ ಸಾಹಿತಿಗಳು, ನಾಡಿನ ಅತ್ಯಂತ ಜನಪ್ರಿಯ ಕಾದಂಬರಿಕಾರರು, ಪದ್ಮಭೂಷಣ ಪುರಸ್ಕೃತರಾದ ಎಸ್.ಎಲ್ .ಭೈರಪ್ಪ ಅವರ ನಿಧನದಿಂದ ತಾಯಿ ಕನ್ನಡಾಂಬೆ ತನ್ನ ಹೆಮ್ಮೆಯ ಸರಸ್ವತಿ ಪುತ್ರನನ್ನು ಕಳೆದುಕೊಂಡಿದ್ದಾಳೆ.

ಎಲ್ಲ ವಯಸ್ಸಿನ ಓದುಗರನ್ನು ಸೆಳೆಯುವಂತಹ ಕಾದಂಬರಿಗಳನ್ನು ರಚಿಸುವ ಕಲೆಯನ್ನು ಕರಗತಗೊಳಿಸಿಕೊಂಡಿದ್ದ ಭೈರಪ್ಪನವರು, ತಮ್ಮ ಕಾದಂಬರಿಗಳಿಗೆ ಆರಿಸಿಕೊಳ್ಳುತ್ತಿದ್ದ ಕಥಾವಸ್ತು ಆಗಿರಲಿ, ಅದಕ್ಕೆ ಬೇಕಾದ ಆಳವಾದ ಸಂಶೋಧನೆ ಆಗಿರಲಿ, ಅವರ ಬರವಣಿಗೆಯ ಶೈಲಿಯಾಗಲಿ ಇವೆಲ್ಲದರ ಮೂಲಕ ಕನ್ನಡದ ಅಕ್ಷರ ಲೋಕದಲ್ಲಿ ಒಂದು ಅಚ್ಚಳಿಯದ ಛಾಪು ಬಿಟ್ಟು ಹೋಗಿದ್ದಾರೆ ಎಂದು ಕಂಬನಿ ಮಿಡಿದಿದ್ದಾರೆ.

ಹೊಸ ಸಾಹಿತಿಗಳಿಗೆ ದಾರಿದೀಪ : ಸಂಸದರಿಂದ ಸಂತಾಪ

ಚಿಕ್ಕಬಳ್ಳಾಪುರ: ಡಾ.ಭೈರಪ್ಪ ಸೃಷ್ಟಿಸಿರುವ ಓದುಗ ಸಂಸ್ಕೃತಿ ಹೀಗೆ ಮುಂದುವರೆಯಲಿ, ಅವರ ಪ್ರೇರಣೆ ಇನ್ನಷ್ಟು ಹೊಸ ಸಾಹಿತಿಗಳಿಗೆ ದಾರಿದೀಪವಾಗಲಿ ಎಂದು ಆಶಿಸುತ್ತಾ, ಭೈರಪ್ಪನವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ಅವರ ಅಪಾರ ಓದುಗ ಬಳಗಕ್ಕೆ ನನ್ನ ಸಂತಾಪಗಳನ್ನು ತಿಳಿಸುತ್ತೇನೆ.ಹೋಗಿ ಬನ್ನಿ ಭೈರಪ್ಪನವರೇ, ಕನ್ನಡ ನಾಡಿನಲ್ಲೇ ಮತ್ತೆ ಹುಟ್ಟು ಬನ್ನಿ ಎಂದು ಸಂಸದ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಜಿಲ್ಲಾ ಸಾಹಿತ್ಯ ಪರಿಷತ್ತು:
ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಸ್.ಎಲ್.ಭೈರಪ್ಪ ಅವರ ನಿಧನರಾದ ಸಮಾಚಾರ ತಿಳಿದು ಮನಸ್ಸಿಗೆ ಬಹಳ ಬೇಸರವಾಯಿತು. ಕಾದಂಬರಿ ಪ್ರಕಾರದ ಮೂಲಕ ಕನ್ನಡದ ಮನಸ್ಸುಗಳನ್ನು ಹಲವು ದಶಕಗಳ ಕಾಲ ಓದಿಗೆ ಹಚ್ಚಿದ್ದ ಹಿರಿಯ ಸಾಹಿತಿಯಾಗಿದ್ದರು.ಇವರ ಅಗಲಿಕೆ ಕನ್ನಡ ಸಾಹಿತ್ಯಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಕೋಡಿರಂಗಪ್ಪ ತಿಳಿಸಿದ್ದಾರೆ.

ಕೃಷಿಹೊಂಡಕ್ಕೆ ಬಿದ್ದು ಇಬ್ಬರು ಸಾವು

ಚಾಮರಾಜನಗರ: ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಮಕ್ಕಳು ಸಾವನ್ನಪ್ಪಿರುವ ಘಟನೆ ಜರುಗಿದೆ ಹನೂರು ತಾಲೂಕಿನ ಕುರುಬರ ದೊಡ್ಡಿ ಗ್ರಾಮದಲ್ಲಿ ನಡೆದಿದೆ.

ಹನೂರು ಪಟ್ಟಣದ ಆರ್ ಎಸ್ ದೊಡ್ಡಿ ಬಡಾವಣೆಯ ಕುಮಾರಸ್ವಾಮಿ ಎಂಬವರ ಮಕ್ಕಳಾದ ಯೋಗೀಶ್(9) ಸಂಜಯ್ (7) ಮೃತರು. ಕುರುಬರದೊಡ್ಡಿ ಗ್ರಾಮದ ಮುಖ್ಯ ರಸ್ತೆಯ ನರ್ಸರಿ ಸಮೀಪದಲ್ಲಿರುವ ಕೃಷಿ ಕೃಷಿ ಹೊಂಡದ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ದಸರಾ ರಜೆ ಇದ್ದ ಕಾರಣ ಹನೂರು ಪಟ್ಟಣದ ಆರ್ ಎಸ್ ದೊಡ್ಡಿ ಇಂದ ಅಜ್ಜಿ ಮನೆಯಾದ ಕುರುಬರ ದೊಡ್ಡಿ ಗ್ರಾಮಕ್ಕೆ ಮಕ್ಕಳಿಬ್ಬರು ಬಂದಿದ್ದರು. ಗ್ರಾಮದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿರುವ ನರ್ಸರಿ ಸಮೀಪದ ಕೃಷಿ ಹೊಂಡದತ್ತ ತೆರಳಿದಾಗ ಮಕ್ಕಳಿಬ್ಬರು ಆಯತಪ್ಪಿ ಬಿದ್ದು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಆರ್ ಎಸ್ ದೊಡ್ಡಿ ಕುಮಾರಸ್ವಾಮಿ ಪಟ್ಟಣದ ಖಾಸಗಿ ಜವಳಿ ಅಂಗಡಿಯಲ್ಲಿ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಕ್ಕಳ ಶವಗಳ ಮುಂದೆ ಕುಟುಂಬಸ್ಥರ ರೋದನೆ ಮುಗಿಲು ಮುಟ್ಟುತ್ತಿತ್ತು. ಬಾಲಕರು ಮೃತಪಟ್ಟ ಮಾಹಿತಿ ತಿಳಿದು ಸ್ಥಳಕ್ಕೆ ರಾಮಪುರ ಠಾಣೆ ಇನ್ಸ್ಪೆಕ್ಟರ್ ಚಿಕ್ಕರಾಜ ಶೆಟ್ಟಿ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಾಂಗ್ರೆಸ್ ಸತ್ಯದ ಪರ: ಸಚಿವ ಖರ್ಗೆ

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಹತ್ಯೆಗಳ ಆರೋಪದ ಕುರಿತು ತನಿಖೆ ಮಾಡಲೆಂದು ನಾವೇ ಎಸ್ಐಟಿ ರಚನೆ ಮಾಡಿದ್ದು. ನಾವು ಅವರ ಪರ, ಇವರ ಪರ ಇಲ್ಲ. ನಾವು ಸತ್ಯದ ಪರ ಇದ್ದೇವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಐಟಿಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪ್ರಕರಣವನ್ನು ತನಿಖೆ ಮಾಡಲು ಎಸ್ಐಟಿ ಮಾಡಿದ್ದು ನಾವೇ ಅಲ್ಲವೇ. ಹಿಂದಿನ ಸರಕಾರ ಇತ್ತಲ್ಲ ಅವರು ಯಾಕೆ ಮಾಡಿಲ್ಲ. ಬಿಜೆಪಿಯವರು ಧರ್ಮಸ್ಥಳ ಚಲೋ ಮಾಡಿದ್ದು ಧರ್ಮಾಧಿಕಾರಿಯವರ ಮರ್ಯಾದೆ ಉಳಿಸಲೆಂದು ತಾನೇ? ವೇದಿಕೆ ಹತ್ತಿ ಧರ್ಮಾಧಿಕಾರಿ ಪರ ವಹಿಸಿದ್ದರು. ವೇದಿಕೆ ಇಳಿದು ಸೌಜನ್ಯ ಮನೆಗೆ ಹೋಗಿದ್ದರಲ್ಲ. ಆಗ ಯಾರ ಪರವಾಗಿ ಹೋಗಿದ್ದು? ಅಲ್ಲಿ ಸೌಜನ್ಯ ಸಂಬಂಧಿಕರು ಯಾರ ಹೆಸರು ಉಲ್ಲೇಖಿಸಿದ್ದು? ಅದೇ ಬಿಜೆಪಿ ನಾಯಕರು ಮಾಧ್ಯಮ ಎದುರು ಬಂದು ಸೌಜನ್ಯ ಹೋರಾಟದಲ್ಲಿ ಮತ್ತೆ ಸುಪ್ರೀಂ ಕೋರ್ಟ್ ಹೋಗಬೇಕಾದರೆ ಅವರ ಬೆನ್ನೆಲುಬಾಗಿ ನಿಲ್ಲುತ್ತೇವೆ ಅನ್ನುತ್ತಾರೆ. ಈ ರೀತಿಯಾಗಿ ವೇದಿಕೆ ಇಳಿದಾಗ ವಿರುದ್ಧ, ಹತ್ತಿದಾಗ ಧರ್ಮಾಧಿಕಾರಿ ಪರ ಏನು ನಾಟಕ ಮಾಡುತ್ತಿದ್ದಾರೆ ಬಿಜೆಪಿಯವರು. ಎರಡೆರಡು ದೋಣಿಯಲ್ಲಿ ಕಾಲಿಟ್ಟು ಹೋಗುವ ಬಿಜೆಪಿಯವರನ್ನು ಬಿಟ್ಟು ನಮ್ಮಲ್ಲಿ ಪ್ರಶ್ನೆ ಕೇಳಿದರೇನು ಪ್ರಯೋಜನ ಎಂದು ಪ್ರಶ್ನೆ ಮಾಡಿದರು.

ಯಾರನ್ನಾದರೂ ಗಡಿಪಾರು ಮಾಡಬೇಕೆಂದರೆ ಸರಕಾರದ ಮನಸ್ಸಿಗೆ ಬಂದಂತೆ ಮಾಡಲು ಆಗುವುದಿಲ್ಲ. ಕೆಲವೊಂದು ಮಾನದಂಡಗಳಿರುತ್ತವೆ. ಕೋರ್ಟ್‌ಗೆ ಹೋಗಿ, ಅಲ್ಲಿಯೂ ಚರ್ಚೆ ಆಗಿ ಮಾಡಲಾಗುತ್ತದೆ. ಕಾರಣವಿಲ್ಲದೆ ಮಾಡಲು ಆಗುವುದಿಲ್ಲ ಎಂದರು.

ಮಂಗಳೂರಲ್ಲಿ ಶೀಘ್ರ ಟೆಕ್ ಪಾರ್ಕ್: ಸಚಿವ ಪ್ರಿಯಾಂಕ್ ಖರ್ಗೆ

ಮಂಗಳೂರು: ಮಂಗಳೂರಿನಲ್ಲಿ ಅತಿ ದೊಡ್ಡ ಟೆಕ್ ಪಾರ್ಕ್ ನಿರ್ಮಾಣದ ಪ್ರಸ್ತಾವ ಗುರುವಾರ ಅಥವಾ ಮುಂದಿನ ವಾರ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಬರಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಟಿಎಂಎ ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ಬುಧವಾರ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ)ನ ಐದನೇ ಆವೃತ್ತಿಯ 'ಟೆಕ್ನೋವಾಂಜಾ-2025' ಕಾರ್ಯಕ್ರಮದಲ್ಲಿ ಮಾತನಾಡಿದರು.

3,500 ಕೋಟಿ ರು.ಗಳ ಕಾರ್ಯಕಾರಿ ಬಂಡವಾಳದೊಂದಿಗೆ ಮಂಗಳೂರಿನಲ್ಲಿ 3.25 ಎಕರೆ ಭೂಮಿಯಲ್ಲಿ ಟೆಕ್ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿದೆ. ಮುಂದಿನ ಐದು ವರ್ಷದೊಳಗೆ ಮಂಗಳೂರನ್ನು ಐಟಿ ಕ್ಷೇತ್ರದಲ್ಲಿ ಮತ್ತೊಂದು ಬೆಂಗಳೂರು ಆಗಿ ರೂಪಿಸಲು ಪ್ರಯತ್ನವಾಗಲಿದೆ ಎಂದರು.